ದೃಶ್ಯಕಲಾ ವಿಭಾಗ
ಲಲಿತಕಲಾ ನಿಕಾಯ
ಕನ್ನಡ ವಿಶ್ವವಿದ್ಯಾಲಯ, ಹಂಪಿ ವಿದ್ಯಾರಣ್ಯ ೫೮೩೨೭೬
೨೦೦೮



ಬಾಗಲಕೋಟ ಜಿಲ್ಲೆಯ ಚಿತ್ರಕಲೆ



ಎಂ.ಫಿಲ್. ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಾದರ ಪಡಿಸಿದ ಸಂಪ್ರಬಂಧ



ಸಂಶೋಧಕ
ಬಸಯ್ಯ ಕೊಟ್ರಯ್ಯ ಗವಿಮಠ

ಮಾರ್ಗದರ್ಶಕರು
ಡಾ. ವಿಶ್ವೇಶ್ವರಿ ತಿವಾರಿ











ಬಾಗಲಕೋಟೆ ಜಿಲ್ಲೆಯ ಚಿತ್ರಕಲೆ

ಎಂ.ಫಿಲ್. ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಾದರಪಡಿಸಿದ ಸಂಪ್ರಬಂಧ

ಸಂಶೋಧಕ

ಬಸಯ್ಯ ಕೊಟ್ರಯ್ಯ ಗವಿಮಠ

ಮಾರ್ಗದರ್ಶಕರು

ಡಾ. ವಿಶ್ವೇಶ್ವರಿ ತಿವಾರಿ

ಸಹಮಾರ್ಗದರ್ಶಕರು

ಡಾ. ಎಸ್.ಸಿ. ಪಾಟೀಲ

ಲಲಿತಕಲಾ ನಿಕಾಯ

ದೃಶ್ಯಕಲಾ ವಿಭಾಗ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿದ್ಯಾರಣ್ಯ ೫೮೩ ೨೭೬

೨೦೦೮

ದೃಢೀಕರಣ ಪತ್ರ

"ಬಾಗಲಕೋಟೆ ಜಿಲ್ಲೆಯ ಚಿತ್ರಕಲೆ" ಎಂಬ ಶೀರ್ಷಿಕೆಯ ಸಂಪ್ರಬಂಧವನ್ನು **ಬಸಯ್ಯ ಕೊಟ್ರಯ್ಯ ಗವಿಮಠ** ಇವರು ನನ್ನ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿರುತ್ತಾರೆ. ಎಂ.ಫಿಲ್ ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸುತ್ತಿರುವ ಪ್ರಸ್ತುತ ಸಂಪ್ರಬಂಧದ ಯಾವುದೇ ಭಾಗವನ್ನು ಈ ಮೊದಲು ಬೇರೆ ಯಾವುದೇ ಉದ್ದೇಶ ಅಥವಾ ಪದವಿಗಳಗಾಗಿ ಸಲ್ಲಿಸಿರುವುದಿಲ್ಲವೆಂದು ದೃಢೀಕರಿಸುತ್ತೇನೆ.

ದಿನಾಂಕ : 29/10/08
ಸ್ಥಳ : ಗುಲ್ಬರ್ಗ

(ಡಾ. ವಿಶ್ವೇಶ್ವರಿ ತಿವಾರಿ)
ಮಾರ್ಗದರ್ಶಕರು
ಗುಲಬರ್ಗಾ

ಪ್ರಮಾಣ ಪತ್ರ

"ಬಾಗಲಕೋಟೆ ಜಿಲ್ಲೆಯ ಚಿತ್ರಕಲೆ" ಎಂಬ ಶೀರ್ಷಿಕೆಯ ಸಂಪ್ರಬಂಧವನ್ನು ಎಂ.ಫಿಲ್ ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ **ಡಾ. ವಿಶ್ವೇಶ್ವರಿ ತಿವಾರಿ** ಅವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಲಾಗಿದೆ. ಪ್ರಸ್ತುತ ಸಂಪ್ರಬಂಧದ ಯಾವುದೇ ಭಾಗವನ್ನು ಈ ಮೊದಲು ಬೇರೆ ಯಾವುದೇ ಉದ್ದೇಶ ಅಥವಾ ಪದವಿಗಳಗಾಗಿ ಸಲ್ಲಿಸಿರುವುದಿಲ್ಲವೆಂದು ಪ್ರಮಾಣೀಕರಿಸುತ್ತೇನೆ.

ದಿನಾಂಕ : 30/10/08
ಸ್ಥಳ : ವಿದ್ಯಾರಣ್ಯ

(ಬಸಯ್ಯ ಕೊಟ್ರಯ್ಯ ಗವಿಮಠ)
ಸಂಶೋಧಕರು
ದೃಶ್ಯಕಲೆ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ – ೫೮೩ ೨೭೬

ಪರಿವಿಡಿ

ಅನುಬಂಧಗಳು

ಅಧ್ಯಾಯ – ೧

ಅಧ್ಯಯನದ ಉದ್ದೇಶ, ಸ್ವರೂಪ, ವ್ಯಾಪ್ತಿ ಮತ್ತು ವೈಧಾನಿಕತೆ

* ಪ್ರಸ್ತುತ ವಿಷಯಕ್ಕೆ ಸಂಬಂಧಿಸಿ ನಡೆಸಿದ ಅಧ್ಯಯನಗಳು
* ಅಧ್ಯಯನದ ಸ್ವರೂಪ
* ಅಧ್ಯಯನದ ವ್ಯಾಪ್ತಿ
* ಅಧ್ಯಯನದ ವೈಧಾನಿಕತೆ

ಅಧ್ಯಯನದ ಉದ್ದೇಶ, ಸ್ವರೂಪ, ವ್ಯಾಪ್ತಿ ಮತ್ತು ವೈಧಾನಿಕತೆ

ಆದಿಮಾನವನ ರೇಖಾಚಿತ್ರಗಳಿಂದ ಆಧುನಿಕ ಪರಂಪರೆಯ ಸಮಕಾಲೀನ ಚಿತ್ರಗಳವರೆಗೆ ಚಿತ್ರಕಲೆಯ ಕುರಿತು ಹಲವು ವಿಮರ್ಶೆ, ಸಂಶೋಧನೆ, ಬಳಕೆ, ವ್ಯಾಪಾರ, ಚಂದಕ್ಕಾಗಿ ಚಿತ್ರ, ಮನೋಲ್ಲಾಸಕ್ಕಾಗಿ ಹೀಗೆ ಚಿತ್ರಕಲೆ ಇಂದಿಗೂ ಮಾನವ ತನ್ನ ಬದುಕಿನ ಅವಿಭಾಜ್ಯ ಅಂಗವಾಗಿ ಈ ಕಲಾಪರಂಪರೆಯನ್ನು ಉಳಿಸಿಕೊಂಡಿದ್ದಾನೆ. ಪಾಶ್ಚಿಮಾತ್ಯ ಕಲಾವಿದರಲ್ಲಿ ಅತೀ ಪ್ರಮುಖನಾದ ಜಗತ್ಪ್ರಸಿದ್ಧ ಮೊನಾಲಿಸಾ ಕೃತಿಕಾರ ಲಿಲೋನಾರ್ಡೋ ವಿಂಚಿ ಜಗತ್ತಿನಲ್ಲಿ "ಕಲೆಯೊಂದೇ ಈಶ್ವರ, ಉಳಿದದೆಲ್ಲ ನಶ್ವರ" ಎಂಬ ಮಾತು ಹೇಳಬೇಕಾದರೆ ಅವನು ಕಲೆಯ ಬಗೆಗಿನ ತನ್ನ ಆದರಣೀಯ ಭಾವನೆ ಜಗತ್ತಿಗೆ ನೀಡುವ ಸಂದೇಶ ತುಂಬ ಅದ್ಭುತವೆನಿಸುತ್ತದೆ. ದೇವರನ್ನು ನಂಬದವರ ದೇಶದಲ್ಲಿ ಕಲೆ ಈಶ್ವರ ಆಗಬೇಕಾದರೆ ಅದು ಅವರವರ ಭಾವನೆಗಳಿಗೆ ದೈವಿ ಸ್ವರೂಪದಾಗಿದ್ದು, ಇತರರಿಗೂ ಕೃತಿ ವೀಕ್ಷಿಸುವ ಸಹೃದಯರಿಗೂ ಸಂತೋಷ ನೀಡಬಲ್ಲದ್ದಾಗಿದ್ದರೆ ಮಾತ್ರ ಅದು ಕಲೆ ಅನಿಸಿಕೊಳ್ಳುತ್ತದೆ. ಹೀಗೆ ಭಾರತೀಯ ಚಿತ್ರಪರಂಪರೆ ಬಗ್ಗೆ ಹೇಳುವದಾದರೆ ಸಾಂಪ್ರದಾಯಿಕ ರಂಗೋಲಿಯಿಂದ, ರಾತ್ರಿ ಹೊದ್ದು ಮಲಗುವ ಹಾಸಿಗೆಗಳಲ್ಲಿಯೂ ಚಿತ್ತಾರಗಳು ತುಂಬಿ ಕನಸುಗಳಿಗೆ ಕಾರಣವಾಗುತ್ತವೆ. ಹೀಗೆ ಪ್ರತಿನಿತ್ಯ ಬದುಕಿನ ಬಟ್ಟೆಗಳ ವಿನ್ಯಾಸದಿಂದ ಅಲಂಕಾರಿಕ ವಸ್ತುಗಳು, ವಾಸಿಸುವ ಮನೆ, ಪೂಜಿಸುವ ದೇವರು ಮತ್ತು ದೇವಸ್ಥಾನ, ವ್ಯಾಪಾರ ವಹಿವಾಟು, ಶಿಕ್ಷಣ, ಕಲೆ, ವಿಜ್ಞಾನ, ಸಾಮಾಜಿಕ, ಸಾಂಸ್ಕೃತಿಕ ಹೀಗೆ ಎಲ್ಲ ವಿದ್ಯಮಾನ ಗಳಲ್ಲಿಯೂ ಚಿತ್ರಕಲೆ ಹಾಸುಹೊಕ್ಕಾಗಿದೆ.

ಹಬ್ಬ ಹರಿದಿನ ಚಿತ್ರಗಳು ಮದುವೆ ಮೆರವಣಿಗೆ ಚಿತ್ರಗಳು, ಬೇಟೆ ಹಾಗೂ ರಾಜರ ದರ್ಬಾರು ಚಿತ್ರಗಳು, ಮುಸ್ಲಿಂ ಅರಸರ ಸುಳುವು ಅಲಂಕಾರಿಕ ಚಿತ್ರಗಳು ತಂಜಾವೂರು, ಮೈಸೂರು ರಾಗಮಾಲಾ ಮುಂತಾದ ಮನೋಲ್ಲಾಸಕ್ಕಾಗಿ ನಿರ್ಮಿಸಿದ ಬೃಹತ್ ಹಾಗೂ ಚಿಕ್ಕ ಚಿಕ್ಕ ಚಿತ್ರಗಳು ಇಂದು ಜಗತ್ತಿನ

ಮೂಲೆ ಮೂಲೆಗಳಲ್ಲಿ, ಗ್ಯಾಲರಿಗಳಲ್ಲಿ, ಕೋಟ್ಯಾಂತರ ರೂಪಾಯಿ ಬೆಲೆಬಾಳುವ ಹಾಗೂ ಕಲಾಕೃತಿಗಳನ್ನು ಬಿಟ್ಟುಕೊಡದ ದೇಶಗಳು ಕಲಾಕೃತಿಗಳಿಗಾಗಿ ದೇಶದಿಂದ ದೇಶಕ್ಕೆ ಯುದ್ಧಗಳಾದ ಉದಾಹರಣೆಗಳು, ಇವೆಲ್ಲ ಅನಾದಿ ಕಾಲದಿಂದ ಪ್ರಸ್ತುತ ಚಿತ್ರಕಲೆಯ ಬಗೆಗಿನ ಆದರಾಭಿಮಾನವನ್ನು ಸೂಚಿಸುವ ಮೂಲಗಳಾಗಿವೆ. ಸಾವಿರಾರು ವರ್ಷಗಳ ಚಿತ್ರದ ಇತಿಹಾಸಕ್ಕೆ ಸಾಕ್ಷಿಯಾಗಿ ನಿಂತಿದ್ದು ಸಹಜವಾದರೂ ಅಲ್ಲಲ್ಲಿ ಹೋರಾಟಗಳಿಂದ ನಶಿಸಿ ಹೋಗುತ್ತಿರುವ ಕೃತಿಗಳನ್ನು ಉಳಿಸಿಕೊಂಡು ಬಂದವರನ್ನು ದಾಖಲಿಸುವುದು, ಸ್ಮರಿಸುವುದು ಇಂದು ತೀರಾ ಅಗತ್ಯವಾಗಿದೆ. ಮೂಲತಃ ಕಲೆ ಅದು ಹೃದಯದಿಂದ ಹುಟ್ಟುವುದೆಂದರೂ ಅದಕ್ಕೆ ಸಹಜವಾದ ದೈವಿ ಶಕ್ತಿ ಹಾಗೂ ಆನುವಂಶಿಕ ಗುಣಗಳು ಅಲ್ಲಲ್ಲಿ ನಂಬಿಕೆಯಾಗಿರುವುದನ್ನು ಅಲ್ಲಗಳೆಯುವಂತಿಲ್ಲ. ಭಾರತೀಯ ಚಿತ್ರಕಲೆಯ ಬಗೆಗೆ ಹೇಳುವುದಾದರೆ ಚಿತ್ರ ಬರೆಯಬೇಕೆಂದೆನಿಸಿದ ಮೊದಲ ಕಲಾವಿದ ದೇವರ ಚಿತ್ರವನ್ನು ರಚಿಸಿರಬೇಕು ಹಾಗೂ ದೈವಲೀಲೆಗಳ ಕಲ್ಪನಾ ಲೋಕದಲ್ಲಿ ವಿಹರಿಸುತ್ತ ದೇವರನ್ನು ಕಾಣುವಲ್ಲಿ ಚಿತ್ರಗಳ ಸಹಾಯವನ್ನು ಪಡೆಯುವುದು ಒಂದು ಪರಿಯಾಗಿತ್ತು. ಅದಕ್ಕೆ ಈಶ್ವರ, ವಿಷ್ಣು, ಗಣಪತಿ, ನಂದಿ, ಮೊದಲಾದ ವಿಗ್ರಹ ಹಾಗೂ ಚಿತ್ರಗಳಲ್ಲಿ ಒಂದೇ ಹೋಲಿಕೆ ಹಾಗೂ ಭಂಗಿಗಳನ್ನು ಕಾಣಬಹುದಾಗಿದೆ. ಪಶ್ಚಿಮ ಬಂಗಾಳದ ಶಿವನಿಗೂ, ಕರ್ನಾಟಕದ ಶಿವನಿಗೂ ಅಷ್ಟೊಂದು ವ್ಯತ್ಯಾಸವಿಲ್ಲದ ಚಿತ್ರಗಳನ್ನು ಕಾಣಬಹುದು. ಇಡೀ ದೇಶಾದ್ಯಾಂತ ಸಾರಿಗೆ ಹಾಗೂ ಮುದ್ರಣ ವ್ಯವಸ್ಥೆ ಇಲ್ಲದಾಗಲೂ ಚಿತ್ರದ ಸಾಮಾನ್ಯ ಹೋಲಿಕೆಗಳು ಬೆಳೆದದ್ದು ಒಂದು ವಿಸ್ಮಯಕಾರಿ ಸಂಗತಿಯಾಗಿದೆ.

ಕರ್ನಾಟಕದ ಮಟ್ಟಿಗೆ ಹೇಳುವುದಾದರೆ ಚಿತ್ರಗಳು ಒಂದು ವ್ಯವಸ್ಥಿತ ಉದ್ದೇಶಕ್ಕಾಗಿ ರಚನೆಗೊಳ್ಳಲು ಆರಂಭವಾದಾಗ ಮೈಸೂರು ನಾಡಿನ ರವಿವರ್ಮ ಹಾಗೂ ಆತನ ಸಹಚರರು ಆಚರಣೆ, ಮೆರವಣಿಗೆ, ರಾಜದರ್ಬಾರುಗಳ ಜೊತೆಗೆ ಸಂಗೀತ ನಾಟ್ಯ, ರಾಮಾಯಣ, ಮಹಾಭಾರತ, ಕೃಷ್ಣ ಜೊತೆಗೆ ಹಲವಾರು ದೇವರುಗಳ ಚಿತ್ರರಚನೆಗೆ ಮುಂದಾದರು. ಅವರಂತೆ ಹೈದರಾಬಾದ್ ಕರ್ನಾಟಕದ ಚಿತ್ರಬ್ರಹ್ಮ ಎಸ್.ಎಂ. ಪಂಡಿತ ಮುಂಬೈಯ ಸಿನೀಮಾ ರಂಗಕ್ಕೆ ಒಗ್ಗಿಕೊಂಡವರಾದರೂ ನೈಜವಾದ ದೈವಿ ಕಲ್ಪನೆಗಳ ಕ್ಯಾಲೆಂಡರ್ ಚಿತ್ರಗಳು ವಿಶ್ವಾಮಿತ್ರದಂತಹ ಚಿತ್ರಗಳಿಂದ ಶಿವಾಜಿ, ಗಾಂಧಿ, ಕೃತಿಗಳನ್ನು ನೈಜವಾಗಿ ಚಿತ್ರಿಸಿ ದೇಶಾದ್ಯಂತ ಆದರಣೀಯವಾದರು. ಮಧ್ಯ ಕರ್ನಾಟಕದಲ್ಲಿನ ಗದುಗಿನ ಎಂ.ಎ. ಚೆಟ್ಟಿ, ಬಸವಣ್ಣ, ಅಕ್ಕಮಹಾದೇವಿ, ಎಡೆಯೂರು ಸಿದ್ಧಲಿಂಗೇಶ್ವರರಂತಹ ದೈವ ಪ್ರಜ್ಞಾ ಚಿತ್ರಗಳನ್ನು ಹೆಚ್ಚಾಗಿ ರಚಿಸಿ ಮುದ್ರಣಕ್ಕೊಳಪಡಿಸಿದರು. ಮುಂದಿನ ಪೀಳಿಗೆಯಾಗಿ ಬಾಗಲಕೋಟೆ ಜಿಲ್ಲೆಯ ಬಾದಾಮಿಯಲ್ಲಿ ಜನಿಸಿದ ಆರ್.ಎಂ. ಹಡಪದ ಬೆಂಗಳೂರಿನಲ್ಲಿ ಕೆನ್ ಕಲಾಶಾಲೆಯನ್ನು ಸಂಸ್ಥಾಪಿಸಿ ನಾವು ನಾಲ್ವರು (ವೀ ಫೋರ್) ತಂಡಕಟ್ಟಿ

ಕಂಟ್ರೆಂಪರಿ ನವ್ಯಚಿತ್ರಕಲಾ ಸೊಬಗನ್ನು ನೀಡಿ ಕಲಾಭಿಮಾನಿಗಳನ್ನು ಜನಸಾಮಾನ್ಯರನ್ನುಚಿಂತನೆ ವಿಮರ್ಶೆಗೆ ಹಚ್ಚಿದರು.

ಈ ನಡುವೆ ಅಲ್ಲಲ್ಲಿ ಕಲಾಶಾಲೆಗಳು ಹುಟ್ಟಿ ಚಿತ್ರಕಲೆಯ ಬೆಳವಣಿಗೆಗೆ ಕಾರಣವಾದವು. ಉದಾಹರಣೆಗೆ ಜೆ.ಜೆ. ಕಲಾಶಾಲೆ ಮುಂಬೈನಿಂದ ಚಿತ್ರಕಲೆಯಲ್ಲಿ ಪದವಿ ಪಡೆದ ದಿವಂಗತ ಡಿ.ವಿ. ಹಾಲಭಾವಿಯವರು ಸಾಂಸ್ಕೃತಿಕ ನಗರ ಧಾರವಾಡದಲ್ಲಿ ಸ್ಕೂಲ್ ಆಫ್ ಆರ್ಟನ್ನು ಪ್ರಪ್ರಥಮವಾಗಿ ಸಂಸ್ಥಾಪಿಸಿದರು. ನಂತರ ರಾಜ್ಯದ ಬೆಂಗಳೂರು, ಮೈಸೂರು, ಗುಲಬರ್ಗಾ, ಗದಗ, ವಿಜಾಪುರ, ಬೆಳಗಾವಿ, ಹಾಸನ, ಚಿತ್ರದುರ್ಗ, ತುಮಕೂರು, ಅಲ್ಲದೆ ತಾಲ್ಲೂಕು, ಹೊಬಳಿಗಳಾದ ರಾಯಬಾಗ, ಬಾಗಲಕೋಟೆ, ಬಾದಾಮಿ, ಇಲಕಲ್ಲಗಳಂತಹ ಸ್ಥಳಗಳಲ್ಲಿಯೂ ಚಿತ್ರಕಲಾ ಶಾಲೆಗಳು ಇಂದಿಗೂ ತನ್ನ ಅಸ್ತಿತ್ವವನ್ನು ಉಳಿಸಿಕೊಂಡು ಬಂದಿವೆ.

ಇತ್ತೀಚಿಗೆ ೨೦೦೩-೦೪ನೇ ಸಾಲಿನಿಂದ ಕನ್ನಡಿಗರ ಸಾಂಸ್ಕೃತಿಕ ವಿಶ್ವವಿದ್ಯಾಲಯವಾದ ಕನ್ನಡ ವಿಶ್ವವಿದ್ಯಾಲಯ ಹಂಪಿ, ರಾಜ್ಯದ ಎಲ್ಲಾ ಕಲಾಶಾಲೆಗಳನ್ನು ಆಡಳಿತಾತ್ಮಕವಾಗಿ ತನ್ನ ತೆಕ್ಕೆಗೆ ತೆಗೆದುಕೊಂಡು ಅಧ್ಯಾಪಕರುಗಳಿಗೆ ಸ್ನಾತಕೋತ್ತರ ಪದವಿ ಎಂ.ಫಿಲ್ ಹಾಗೂ ಪಿ.ಎಚ್.ಡಿ. ಪದವಿಗಳನ್ನು ನೀಡುವ ಮಹತ್ಕಾರ್ಯ ಕೈಗೊಂಡು ನಾಡಿನ ಚಿತ್ರಕಲಾ ಖ್ಯಾತಿಯನ್ನು ಶೈಕ್ಷಣಿಕವಾಗಿ ಜಾಗತಿಕ ಮಟ್ಟಕ್ಕೆ ಕೊಂಡೊಯ್ಯಲು ಯೋಜನೆಗಳನ್ನು ಹಾಕಿಕೊಂಡಿದೆ. ಅದರ ಫಲವಾಗಿ ಇಂದು ಎಂ.ಫಿಲ್ ಅಧ್ಯಯನಕ್ಕೋಸ್ಕರ ಬಾಗಲಕೋಟೆ ಜಿಲ್ಲೆಯ ಚಿತ್ರಕಲೆ ಪ್ರಾಗೈತಿಹಾಸಿಕ ನೆಲೆಗಳು, ಭಿತ್ತಿಚಿತ್ರಗಳು, ಹಸ್ತಪ್ರತಿಗಳು, ಜಾನಪದ ಮೊದಲಾದ ಅಂಶಗಳ ಸಮಗ್ರ ಅಧ್ಯಯನ ಐತಿಹಾಸಿಕವಾಗಿ ದಾಖಲಿಸುವ ಉದ್ದೇಶದಿಂದ ಈ ಪ್ರಬಂಧವನ್ನು ರಚಿಸುವ ಗುರಿಯನ್ನು ಹೊಂದಲಾಗಿದೆ. ಅಗಸ್ಟ್ ೧೯೯೭ ಜಿಲ್ಲಾ ಪುನರ್ ವಿಂಗಡಣೆ ಸಂದರ್ಭದಲ್ಲಿ ಅಖಂಡ ವಿಜಾಪುರ ಜಿಲ್ಲೆಯಿಂದ ಬೇರ್ಪಟ್ಟು ಬಾಗಲಕೋಟೆ ಜಿಲ್ಲಾ ಜಮಖಂಡಿ, ಮುಧೋಳ, ಬೀಳಗಿ, ಬಾದಾಮಿ, ಹುನಗುಂದ ಹಾಗೂ ಬಾಗಲಕೋಟೆ ೬ ತಾಲ್ಲೂಕುಗಳಿಂದ ಜಿಲ್ಲೆಯಾಯಿತು. ಪ್ರಸಕ್ತ ಬಾಗಲಕೋಟೆ ಭೌಗೋಳಿಕವಾಗಿ ಬರದ ನಾಡೆಂದು ಅಂದುಕೊಂಡರೂ ಪ್ರಾಚೀನ ನೆಲೆಗಳಿಂದ ಹಾಗೂ ಚಾಲುಕ್ಯರ ಶಿಲ್ಪಕಲಾ ವೈಭವದಿಂದ ಹಲವಾರು ಅಧ್ಯಯನಗಳಿಗೆ ದಾರಿಯಾಗಿದೆ.

ಐಹೊಳೆ ಶಿಲ್ಪಕಲೆಯ ತೊಟ್ಟಿಲು ಹಾಗೂ ಪಟ್ಟದಕಲ್ಲಿನ ದೇವಾಲಯಗಳ ಸಮುಚ್ಛಯ, ಬಾದಾಮಿಯ ಮೇಣಬಸದಿ ಮೊದಲಾದವು ಜಿಲ್ಲೆಯ ಶಿಲ್ಪ ಪರಂಪರೆಯನ್ನು ಜಗದೆತ್ತರಕ್ಕೆ

ಕೊಂಡೊಯ್ದಿವೆ. ಬಾದಾಮಿಯ ಪ್ರದೇಶದಲ್ಲಿ ಸಿಡಿಲಪಡಿಯ ಚಿತ್ರಗಳು, ಜಮಖಂಡಿ ತಾಲ್ಲೂಕಿನ ಕುಲ್ಲಳ್ಳಿಯ ಗೊಂಬಿ ಗುಡ್ಡದಲ್ಲಿನ ಆದಿಮಾನವ ರೇಖಾಚಿತ್ರಗಳು ಪ್ರಾಚೀನತೆಯನ್ನೂ ಮಹಾಲಿಂಗಪುರ, ಗುಳೇದಗುಡ್ಡ, ಅಮೀನಗಡಗಳಲ್ಲಿರುವ ಭಿತ್ತಿ ಹಾಗೂ ಗಾಜಿನ ಚಿತ್ರಗಳು ಹಾಗೆಯೇ ಜಿಲ್ಲೆಯ ಶಿವಯೋಗ ಮಂದಿರದಂತಹ ಧಾರ್ಮಿಕ ಸ್ಥಳಗಳಲ್ಲಿ ಸಂಗ್ರಹವಾಗಿರುವ ಹಸ್ತಪ್ರತಿ ಚಿತ್ರಗಳು ಗ್ರಾಮೀಣ ಸೊಗಡಿನಲ್ಲಿ ಅಸ್ತಿತ್ವ ಉಳಿಸಿಕೊಂಡು ಬಂದಿರುವ ಜಾನಪದ ಕಲೆಗಳಾದ ಇಳಕಲ್ಲ ಸೀರೆ ಅದರ ಮೇಲೆ ಕಸೂತಿ, ಗುಳೇದಗುಡ್ಡದ ಕುಬಸದ ಖಣ, ರಂಗೋಲಿ ಹಾಗೂ ಹಚ್ಚೆ ಮುಂತಾದ ಪರಂಪರೆ ಗಳನ್ನು ದಾಖಲಿಸುವುದ ಹಾಗೂ ಒರೆಗೆ ಹಚ್ಚುವುದು ಈ ಅಧ್ಯಯನದ ಮೂಲ ಸ್ವರೂಪವಾಗಿದೆ. ಬಾಗಲಕೋಟೆ ಜಿಲ್ಲೆಯ ಹಲವಾರು ಮಗ್ಗಲುಗಳ ಅದ್ಯಯನಗಳು ನಡೆದಿದ್ದರೂ ಸಮಗ್ರವಾಗಿ ಪ್ರತ್ಯೇಕ ಚಿತ್ರಕಲೆಗೆ ಜಿಲ್ಲೆಯ ಕೊಡುಗೆಯನ್ನು ಅದ್ಯಯನ ಮಾಡುವುದು ಇಂದಿನ ತೀರಾ ಅಗತ್ಯವೆನಿಸುತ್ತದೆ.

ಅಲ್ಲಲ್ಲಿ ಇತಿಹಾಸಾಧ್ಯಯನದಲ್ಲಿ ಕಂಡುಬರುವ ಪ್ರಾಚೀನ ಚಿತ್ರಗಳು ರೇಖಾಚಿತ್ರಗಳು ಪ್ರಾಗೈತಿ ಹಾಸಿಕ ಚಿತ್ರಗಳಿಂದ ಇಂದಿನ ಜಾಗತಿಕ ಮಟ್ಟದ ನವ್ಯ ಪರಂಪರೆಯ ಬಗೆಗೆ ಬಣ್ಣದ ಚಿತ್ರ ಸಮೇತ ಅಧ್ಯಯನ ನಡೆಸುವುದು ಮುಖ್ಯ ಗುರಿಯಾಗಿದೆ. ಮಾತಿಗೆ ಮುಂಚೆ ಸಂಜ್ಞೆ ಭಾಷೆಗೆ ಮೂಲ ಚಿತ್ರ ಮಾನವ ಸಂಪರ್ಕ ಸಾಧನವಾಗಿತ್ತು. ಆ ಕಾರಣಕ್ಕಾಗಿ ಜಿಲ್ಲೆಯ ಚಿತ್ರಕಲೆಯನ್ನು ಪರಂಪರಾಗತವಾಗಿ ಹಿಡಿದಿಡುವ ಪ್ರಯತ್ನ ಒಂದು ಬಗೆಯಲ್ಲಿ ಮಾನವ ಅಭಿವ್ಯಕ್ತಿಯಿಂದ ಅವು ಬೆಳೆಯುತ್ತ ಬಂದಿವೆ. ಅಂದರೆ ಮಾನವನ ಸಂಸ್ಕೃತಿ ಇತಿಹಾಸದಲ್ಲಿ ಒಂದೇ ಉದ್ದೇಶಕ್ಕೆ ಕಲೆಯು ಹುಟ್ಟಿಕೊಂಡಿರದೇ ವಿವಿಧ ಕಾರಣಗಳಿಗಾಗಿ ಅದು ರೂಪಗೊಂಡು ವಿವಿಧ ಕಲೆಗಳು ತಮ್ಮ ದಿಗಂತವನ್ನು ವಿಸ್ತರಿಸಿಕೊಂಡಿವೆ. ಹೀಗೆ ಹಲವು ಕುತೂಹಲವನ್ನು ಹುಟ್ಟಿಸುವ ಹಲವು ದೃಶ್ಯಕಲೆಗಳು ಈ ಅಧ್ಯಯನಕ್ಕೆ ಪ್ರಧಾನ ಆಕರಗಳಾಗಿವೆ.

ಕರ್ನಾಟಕದ ಇತಿಹಾಸ ಅದರ ಭವ್ಯತೆ, ಸೌಂದರ್ಯ ಮತ್ತು ವೈವಿಧ್ಯತೆಗಳು ಎಂಥವರನ್ನು ಬೆರಗುಗೊಳಿಸುತ್ತವೆ. ಈ ರೀತಿಯ ಪ್ರಾದೇಶಿಕ ಅಂಶಗಳನ್ನು ತುಂಬಿಕೊಂಡಿರುವ ಬಾಗಲಕೋಟೆ ಜಿಲ್ಲೆಯ ಚಿತ್ರಕಲೆ ವಿಶ್ಲೇಷಣಾತ್ಮಕವಾಗಿ ಅಧ್ಯಯನ ಮಾಡುವ ಹಾಗೂ ಸಾವಿರಾರು ವರ್ಷಗಳಿಂದ ಮನುಕುಲ ವಿಕಸನ ಹಲವು ಮಜಲುಗಳನ್ನು ಕಂಡಿರುವ ಈ ಪ್ರದೇಶವು ಐತಿಹಾಸಿಕವಾಗಿ ಹಾಗೂ ಸಾಂಸ್ಕೃತಿಕವಾಗಿ ಭವ್ಯತೆ ಪಡೆದುಕೊಂಡಿದೆ. ಈ ಪ್ರದೇಶ ಚಿತ್ರಕಲೆಯು ಜನ ಸಮುದಾಯದ ಆಶೋತ್ತರಗಳನ್ನು ಬಿಂಬಿಸಿವೆ. ಇಂಥ ಪ್ರಮುಖ ಅಂಶಗಳನ್ನು ಅಧ್ಯಯನವೊಂದರ ಅಗತ್ಯತೆಯನ್ನು ಮನಗಂಡು ಪ್ರಸ್ತುತ ಅಧ್ಯಯನಕ್ಕೆಗೊಳ್ಳಲಾಗಿದೆ. ಚಿತ್ರಕಲಾ ಕ್ಷೇತ್ರದಲ್ಲಿ ಇದುವರೆಗೂ ಸಾಕಷ್ಟು ಸಂಶೋಧನಾ ಕಾರ್ಯಗಳು

ನಡೆದರೂ ಸಾಹಿತ್ಯ ಹಾಗೂ ಇತರ ಕ್ಷೇತ್ರಗಳಲ್ಲಿ ನಡೆದಂತೆ ಚಿತ್ರಕಲೆಯ ಮಟ್ಟಿಗೆ ತೀರ ಕಡಿಮೆ ಎಂದೇ ಹೇಳಬಹುದು.

ಜಿಲ್ಲೆಯ ಬನಶಂಕರಿ, ಬಾದಮಿಯ ಕನ್ನಡ ವಿಶ್ವವಿದ್ಯಾಲಯ ಹಂಪಿಯ ಶಿಲ್ಪ ಮತ್ತು ವರ್ಣ ಚಿತ್ರಕಲಾ ವಿಭಾಗದ ಮುಖ್ಯಸ್ಥರಾದ ಡಾ. ಎಸ್.ಸಿ. ಪಾಟೀಲರು ಮಾಧ್ಯಮಿಕ ಶಾಲಾ ಶಿಕ್ಷಣದಲ್ಲಿ ಚಿತ್ರಕಲಾ ಶಿಕ್ಷಣ ಒಂದು ಅಧ್ಯಯನ ಎಂಬ ಕಿರು ಸಂಶೋಧನಾ ಪ್ರಬಂಧ ಕರ್ನಾಟಕ ವಿಶ್ವವಿದ್ಯಾಲಯದ ಸ್ನಾತಕೋತ್ತರ ಶಿಕ್ಷಣ ವಿಭಾಗಕ್ಕೆ ಮಂಡಿಸಿದ್ದು ಮೊದಲ ಚಿಂತನೆಯಾಗಿದೆ. ಅವರೇ ಕನ್ನಡ ವಿಶ್ವ ವಿದ್ಯಾಲಯಕ್ಕೆ ಕರ್ನಾಟಕದ ಜನಪದ ಚಿತ್ರಕಲೆ ಪಿಎಚ್.ಡಿ. ಮಹಾಪ್ರಬಂಧ ಕರ್ನಾಟಕದ ಮೊದಲ ಸಂಶೋಧನಾ ಕೃತಿ ಎಂಬ ಹೆಗ್ಗಳಿಕೆಗೆ ಪಾತ್ರವಾಯಿತು. ಈ ನಡುವೆ ಡಾ. ಬಿ.ಕೆ. ಹಿರೇಮಠರು ಕನ್ನಡ ಹಸ್ತಪ್ರತಿಗಳ ಒಂದು ಅಧ್ಯಯನ ತಮ್ಮ ಮಹಾಪ್ರಬಂಧದಲ್ಲಿ ಹಸ್ತಪ್ರತಿಗಳಲ್ಲಿರುವ ಚಿತ್ರಗಳನ್ನು ಕುರಿತು ಕೆಲವು ಅಧ್ಯಾಯಗಲ್ಲಿ ಪ್ರಾಸ್ತಿಪಿಸಿದ್ದು ಹಾಗೂ ಡಾ. ಅ.ಲ. ನರಸಿಂಹನ್ ಅವರು ಬೆಂಗಳೂರು ವಿಶ್ವವಿದ್ಯಾಲಯಕ್ಕೆ ಮಂಡಿಸಿದ ಪಿಎಚ್.ಡಿ. ಮಹಾಪ್ರಬಂಧ ಕರ್ನಾಟಕದ ಚಿತ್ರಕಲೆಯಲ್ಲಿ ಸಾಂಸ್ಕೃತಿಕ ಅಂಶಗಳು, ಡಾ. ಸಂಪದಾಭಟ್‌ರ ಹಿಂದೂಸ್ಥಾನಿ ಸಂಗೀತ ಮತ್ತು ರಾಗಮಾಲಾ ಚಿತ್ರಗಳು, ಡಾ. ಪುಷ್ಪ ದ್ರಾವಿಡರ ಅನಿವಾಸಿ ಭಾರತೀಯ ಕಲಾವಿದ ದಿ. ನಿಕೋಲಸ್ ರೊರಿಕ್ ಜೀವನ ಮತ್ತು ಕಲಾಕೃತಿಗಳು, ಡಾ. ಯಾದಪ್ಪ ಪರದೇಶಿಯವರ ಉತ್ತರ ಕರ್ನಾಟಕದ ಭಿತ್ತಿಚಿತ್ರಗಳು, ಡಾ. ಶಿವಾನಂದ ಬಂಟನೂರರ ಕರ್ನಾಟಕ ಜನಪದ ಶಿಲ್ಪಕಲೆ ಒಂದು ಅಧ್ಯಯನ, ಡಾ. ಲಕ್ಷ್ಮಿದೇವಿ ಗವಾಯಿಯವರ ಎಂ.ಎ. ಚಟ್ಟಿ ಯವರ ಜೀವನ ಕಲಾಕೃತಿಗಳ ಒಂದು ಅಧ್ಯಯನ, ಡಾ. ಸಿದ್ಧಲಿಂಗಸ್ವಾಮಿ ಹಿರೇಮಠರ ಕಲಾವಿದ ಆರ್.ಎಂ. ಹಡಪದ ಒಂದು ಅಧ್ಯಯನ, ಡಾ. ಮಲ್ಲಿಕಾರ್ಜುನ ಬಾಗೋಡಿಯವರ ಸುರಪೂರ ಅರಸರ ಕಾಲದ ಚಿತ್ರಕಲೆ ಒಂದು ಅಧ್ಯಯನ, ಇತ್ತೀಚಿಗೆ ಡಾ. ಮೋಹನ್ ಪಂಚಾಳರು ಗುಲ್ಬರ್ಗಾ ವಿಶ್ವ ವಿದ್ಯಾಲಯಕ್ಕೆ ಮಂಡಿಸಿದ ಎಸ್.ಎಂ. ಪಂಡಿತರ ಬದುಕು ಮತ್ತು ಚಿತ್ರಕಲೆ, ಎ.ಎಸ್. ವಿಶ್ವನಾಥ ಯಕ್ಷಗಾನ ದೃಶ್ಯಕಲೆಯ ಮುಖವರ್ಣಿಕೆ ಮತ್ತು ವೇಷಭೂಷಣ, ಇನ್ನು ಅನೇಕ ಪಿಎಚ್.ಡಿ. ಮಹಾಪ್ರಬಂಧಗಳು ರಚನೆಗೊಂಡಂತೆ ಎಂ.ಫಿಲ್. ಪದವಿಗಾಗಿ ಶಂಕರ ಕುಂದಗೋಳ ಅವರ ಚಿತ್ರಕಲಾವಿದ ಡಿ.ವಿ. ಹಾಲಬಾವಿಯವರ ಬದುಕು ಮತ್ತು ಕಲಾಕೃತಿಗಳು, ಸಿ.ಡಿ. ಜಟ್ಟೆಣ್ಣವರ ಅವರ ಚಿತ್ರಕಲಾವಿದ ಎಂ.ವಿ.ಮಿಣಜಗಿ ಅವರ ಬದುಕು ಮತ್ತು ಕಲಾಕೃತಿಗಳು, ಕರ್ನಾಟಕ ದೃಶ್ಯಕಲೆಯ ಕುರಿತಾಗಿ ಬಂದ ಸಂಶೋಧನಾ ಅಧ್ಯಯನಗಳಾಗಿದ್ದು ಈಗ ಗುಲ್ಬರ್ಗಾ, ಬೆಂಗಳೂರು, ಧಾರವಾಡ ವಿಶ್ವವಿದ್ಯಾಲಯಗಳಲ್ಲಿ ಪಿಎಚ್.ಡಿ. ಅಧ್ಯಯನಕ್ಕೆ ಹಲವಾರು ವಿದ್ಯಾರ್ಥಿಗಳು ಸೇರ್ಪಡೆಯಾಗಿ ನೂರಾರು ಸಂಶೋಧನೆಗಳು ಚಿತ್ರಕಲಾ ಕ್ಷೇತ್ರಕ್ಕೆ ದಾಖಲೆ ಕೊಡುಗೆಯಾಗಿವೆ.

ಪ್ರಸ್ತುತ ವಿಷಯಕ್ಕೆ ಸಂಬಂಧಿಸಿ ನಡೆಸಿದ ಅಧ್ಯಯನಗಳು

ಬಾಗಲಕೋಟೆ ಜಿಲ್ಲೆ ಚಿತ್ರಕಲೆ ಪ್ರಸ್ತುತ ಈ ಅದ್ಯಯನವನ್ನು ಕುರಿತು ಈಗಾಗಲೇ ನಡೆದಿರುವ ಸಂಶೋಧನಾಗಳು, ಲೇಖನಗಳು, ಕಿರು ಹೊತ್ತಿಗೆಗಳು.

ಬಾಗಲಕೋಟೆ ಜಿಲ್ಲೆಯ ನೆಲೆ ಐತಿಹಾಸಿಕ ಹಿನ್ನೆಲೆ ಭಾರತದ ಗೆಜಿಟೇರ್ ಕರ್ನಾಟಕ ರಾಜ್ಯ ೧೯೯೯ರಲ್ಲಿನ ಸಂಪಾದಿತ ಅಖಂಡ ವಿಜಾಪುರ ಜಿಲ್ಲಾ ಗ್ಯಾಜಿಟೇರ್ ಸಂಪಾದಕರು ಡಾ. ಆರ್. ಮುನಿ ಸ್ವಾಮಿ. "ಕರ್ನಾಟಕ ರಾಜ್ಯ ಸರ್ಕಾರದ ಪ್ರಕಟಣೆ ಬಾಗಲಕೋಟೆ ಜಿಲ್ಲೆಯೂ ಸೇರಿದಂತೆ" ಎಂಬ ಶೀರ್ಷಿಕೆಯ ಹೊತ್ತಿಗೆಯಲ್ಲಿರುವ ಅಂಕಿ-ಅಂಶಗಳನ್ನು ಐತಿಹಾಸಿಕ ತಾಣಗಳ ಮಹತ್ವವು ದಾಖಲೆಗಳಿರುವ ಮಹಾನ್ ಗ್ರಂಥ. ಡಾ. ಯಾದಪ್ಪ ಪರದೇಶಿಯವರು ೨೦೦೧ರಲ್ಲಿ ಕನ್ನಡ ವಿಶ್ವ ವಿದ್ಯಾಲಯ, ಹಂಪಿಗೆ ಸಲ್ಲಿಸಿದ ಪಿಎಚ್.ಡಿ. ಮಹಾಪ್ರಬಂಧ "ಉತ್ತರ ಕರ್ನಾಟಕದ ಭಿತ್ತಿ ಚಿತ್ರಕಲೆ" ಅಪ್ರಕಟಿತ ಪುಸ್ತಕ. ವೀರಶೈವ ಅಧ್ಯಯನ ಸಂಸ್ಥೆ, ಗದಗರವರು ೧೯೯೩ರಲ್ಲಿ ಪ್ರಕಟಿಸಿದ ಡಾ. ಎಸ್.ಸಿ. ಪಾಟೀಲರ ಪಿಎಚ್.ಡಿ. ಮಹಾಪ್ರಬಂಧ "ಕರ್ನಾಟಕ ಜನಪದ ಚಿತ್ರಕಲೆ" ಪ್ರಕಟಿತ ಪುಸ್ತಕ ಕನ್ನಡ ವಿಶ್ವವಿದ್ಯಾಲಯ, ಹಂಪಿ ಪ್ರಕಟಿಸಿದ ಡಾ. ಶಿಲಾಕಾಂತ ಪತ್ತಾರ ರಚಿಸಿದ ಬಾದಾಮಿ ಸಾಂಸ್ಕೃತಿಕ ಅಧ್ಯಯನ ಹಾಗೂ ೧೯೯೭ರಲ್ಲಿ ಕನ್ನಡ ವಿಶ್ವವಿದ್ಯಾಲಯ, ಹಂಪಿ ಪ್ರಕಟಿಸಿದ "ಕರ್ನಾಟಕ ಚರಿತ್ರೆಮಾಲೆ ಸಂಪುಗಳು" ಪುಸ್ತಕ. ೧೯೮೩ರಲ್ಲಿ ಡಾ. ಅ. ಸುಂದರ ರಚಿಸಿದ "ವಿಶಿಷ್ಟ ವರ್ಣ ಚಿತ್ರಗಳ ಆಗರ ಬಾದಾಮಿ" ಪುಸ್ತಕ ಹಾಗೂ ೨೦೦೦ದಲ್ಲಿ ಶಾಂಭಾವಿ ಪ್ರಕಾಶನ ಬಾದಾಮಿ ಪ್ರಕಟಿಸಿದ ಆನಂದ ಕೆ. ಪೂಜಾರ ರಚಿಸಿದ "ಐತಿಹಾಸಿಕ ಬಾದಮಿ ಪರಿಚಯ" ಪುಸ್ತಕ ವಿಜಯ ಚಿತ್ರಕಲಾ ಮಹಾವಿದ್ಯಾಲಯ ಇಲಕಲ್ ರವರು ಪ್ರಕಟಿಸಿದ ಡಾ. ಎಸ್.ಸಿ. ಪಾಟೀಲರು ರಚಿಸಿದ "ವರ್ಣ ಸಂಚಯ" ಕೃತಿ. ಜಮಖಂಡಿಯ ಖ್ಯಾತ ಹೃದಯತಜ್ಞ ಡಾ. ಎಚ್.ಜಿ. ದಡ್ಡಿಯವರ ಸಂಶೋಧನಾ ಲೇಖನಗಳು ಹಾಗೂ ಪತ್ರಿಕಾ ಲೇಖನಗಳು ಪ್ರಾಗೈತಿಹಾಸಿಕ ನೆಲೆಗಳ ರಕ್ಷಣೆಗೆ ಸರ್ಕಾರಕ್ಕೆ ಮಾಡಿಕೊಂಡ ಮನವಿ ಪತ್ರಗಳು. ೧೯೯೫ರಲ್ಲಿ ಶ್ರೀ ಡಿ.ವ್ಹಿ. ಹಾಲಬಾವಿ ಸ್ಕೂಲ್ ಆಫ್ ಆರ್ಟ್, ಧಾರವಾಡ ವಜ್ರಮಹೋತ್ಸವದ ಸ್ಮರಣ ಸಂಚಿಕೆಯಾದ ಚಿತ್ರಾಕ್ಷಿ ಪುಸ್ತಕದಲ್ಲಿ ಡಾ. ಎಸ್.ಸಿ. ಪಾಟೀಲರು ಬರೆದ "ಜನಪದ ಚಿತ್ರಕಲೆಯ ಪ್ರಾಚೀನತೆ" ಎಂಬ ಲೇಖನ, ಕರ್ನಾಟಕ ಲಲಿತಕಲಾ ಅಕಾಡೆಮಿ ಪ್ರಕಟಿಸಿದ ಮಹಾದೇವ ಜಗತಾಪ ರಚಿಸಿದ 'ಕಸೂತಿ' ಪುಸ್ತಕ, ಕನ್ನಡ ವಿಶ್ವವಿದ್ಯಾಲಯ, ಹಂಪಿ ೨೦೦೦ದಲ್ಲಿ ಪ್ರಕಟಿಸಿದ ಪ್ರೊ. ಮಹೇಶ ತಿಪ್ಪಶೆಟ್ಟಿಯವರು ಬರೆದ "ಇಲಕಲ್ಲ ಸೀರೆ" ಕೃತಿ. ವೀರಶೈವ ಅಧ್ಯಯನ ಸಂಸ್ಥೆ, ಗದಗರವರು ೧೯೯೩ರಲ್ಲಿ ಪ್ರಕಟಿಸಿದ ಡಾ. ಎಸ್.ಸಿ. ಪಾಟೀಲರ ಪಿಎಚ್.ಡಿ. ಮಹಾಪ್ರಬಂಧ ಕರ್ನಾಟಕ "ಜನಪದ

ಚಿತ್ರಕಲೆ" ಕೃತಿ. ರೇಣುಕಾ ಮ. ರಾಯನಗೌಡ್ರು ರಚಿಸಿದ "ಗ್ರಾಮೀಣ ಮಹಿಳೆಯರ ಕಲಾಪ್ರಜ್ಞೆ" ಐದನೇ ವರ್ಷ ವಿಶೇಷ ಪರಿಣಿತಿ ಪದವಿಯ ಅವಶ್ಯಕತೆಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ೨೦೦೮ರಲ್ಲಿ ಸಲ್ಲಿಸಿದ ಕಿರು ಯೋಜನಾವರದಿ. ಕನ್ನಡ ಸಾಹಿತ್ಯ ಪರಿಷತ್ತಿನ ಅಡಿಯಲ್ಲಿ ಆದಿಚುಂಚನಗಿರಿ ಮಠದ ದತ್ತಿ ಪ್ರಕಟಣೆಯಲ್ಲಿ ಪ್ರಕಟಿಸಿದ ಮಹಾದೇವ ಜಗತಾಪರವರು ರಚಿಸಿದ "ಕರ್ನಾಟಕ ಜನಪದ ಚಿತ್ತಾರಗಳು ಹಾಗೂ ಶಿಲ್ಪಗಳು" ಕೃತಿ. ಡಾ. ಎಸ್.ಸಿ. ಪಾಟೀಲರು ರಚಿಸಿದ "ರಂಗೋಲಿ ಚಿತ್ರಕಲೆ" ಕೃತಿ ಮೊದಲಾದವುಗಳು ಪ್ರಮುಖವಾದವುಗಳು.

ಡಾ. ಅ.ಲ. ನರಸಿಂಹನ್ ಸಾದರಪಡಿಸಿದ ಲಲಿತಕಲಾ ಅಕಾಡೆಮಿ ಬೆಂಗಳೂರು ಪ್ರಕಟಿಸಿದ "ಕರ್ನಾಟಕದ ಭಿತ್ತಿಚಿತ್ರ ಪರಂಪರೆ" ಕೃತಿ. ೨೦೦೦ರಲ್ಲಿ ಡಾ. ಅ.ಲ. ನರಸಿಂಹನ ರಚಿಸಿದ 'ಅಲೇಖ್ಯ' ಕೃತಿ ೧೯೫೩ರಲ್ಲಿ ಕರ್ನಾಟಕ ಲಲಿತಕಲಾ ಅಕಾಡೆಮಿಯವರು ಪ್ರಕಟಿಸಿದ ಬಿ.ವಿ.ಕೆ. ಶಾಸ್ತ್ರಿ ರಚಿಸಿದ "ಕರ್ನಾಟಕದ ಭಿತ್ತಿಚಿತ್ರಗಳು" ಕೃತಿಗಳು.

ಡಾ. ಬಿ.ಕೆ. ಹಿರೇಮಠರು ರಚಿಸಿದ ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡಕ್ಕೆ ಸಲ್ಲಿಸಿದ "ಕರ್ನಾಟಕ ಹಸ್ತಪ್ರತಿಗಳು : ಒಂದು ಅಧ್ಯಯನ" ಮಹಾಪ್ರಬಂಧ, ಕನ್ನಡ ವಿಶ್ವವಿದ್ಯಾಲಯ ಹಂಪಿ. ಪ್ರಕಟಿಸಿದ ಪ್ರೊ. ಎ.ವಿ. ನಾವಡ ಹಾಗೂ ಡಾ. ಎಸ್.ಎಸ್. ಅಂಗಡಿ ಅವರು ಸಂಪಾದಿಸಿದ "ಹಸ್ತಪ್ರತಿ ವ್ಯಾಸಂಗ" ಕೃತಿ.

ಡಾ. ಬಿ.ಕೆ. ಹಿರೇಮಠರ ಅಭಿನಂದನಾ ಗ್ರಂಥ "ನಿಜದ ನೆಲೆ" ಪ್ರಕಟಣೆ ಪ್ರಧಾನ ಸಂಪಾದಕರು ಡಾ. ಬಿ.ಆರ್. ಹಿರೇಮಠ ಹಾಗೂ ಸಂಪಾದಕರು ಡಾ. ಎಸ್.ಸಿ. ಪಾಟೀಲ. ಹಾಗೆಯೇ ಲೇಖಕ ಪ್ರವೀಣ ರಾಜು ಸೊನ್ನದರವರು ರಚಿಸಿದ "ಅಪರೂಪದ ಅಪೂರ್ವ ಚಿತ್ರ ಕಲಾಕೃತಿಗಳು" ಗ್ರಂಥ ಲೇಖಕ ಮಹಾದೇವ ಮ. ಜಗತಾಪರವರ ೨೮.೧೧.೨೦೦೪ರಲ್ಲಿ ಸಂಯುಕ್ತ ಕರ್ನಾಟಕ ಪತ್ರಿಕೆಯಲ್ಲಿ ಪ್ರಕಟವಾದ ಅಚ್ಚರಿ ಮೂಡಿಸುವ 'ಗಾಜಿನ ಚಿತ್ತಾರ' ಲೇಖನ ಪ್ರವೀಣರಾಜು ಸೊನ್ನದರವರ ೨.೬.೨೦೦೪ರಲ್ಲಿ ಡೆಕ್ಕನ್ ಹೆರಾಲ್ಡ್ ಪತ್ರಿಕೆಯಲ್ಲಿ ಪ್ರಕಟವಾದ "Glass Paintings Continue to attract Visitor to Guledgudda" ಲೇಖನ.

೧೯೮೨ರಲ್ಲಿ ಎ.ವಿ. ಪಾಟೀಲರು ಕರ್ನಾಟಕ ವಿಶ್ವವಿದ್ಯಾಲಯ, ಧಾರವಡಕ್ಕೆ ಸಲ್ಲಿಸಿದ "ಉತ್ತರ ಕರ್ನಾಟಕದ ಜನಪದ ಕಲೆ ಮತ್ತು ವಿಧಿಕ್ರಿಯೆ" ಮಹಾಪ್ರಬಂಧ, ಮೈಸೂರು ವಿಶ್ವವಿದ್ಯಾಲಯ, ಮೈಸೂರು ಪ್ರಕಟಿಸಿದ ಶಿವರಾಮ ಕಾರಂತರು ರಚಿಸಿದ "ಕರ್ನಾಟಕದಲ್ಲಿ ಚಿತ್ರಕಲೆ" ಗ್ರಂಥ. ಕೆ.ವಿ. ಕಾಳೆ

ಯವರು ರಚಿಸಿದ "ಕರ್ನಾಟಕ ಚಿತ್ರಕಲೆಯಲ್ಲಿ ಬಣ್ಣದ ಬಳಕೆ" ಕೃತಿ. ಹೀಗೆ ಮೊದಲಾದವುಗಳಲ್ಲಿ ಪ್ರಸ್ತುತ ಅಧ್ಯಯನಕ್ಕೆ ಸಂಬಂಧಿಸಿದಂತೆ ಬಾಗಲಕೋಟೆ ಜಿಲ್ಲೆ ಚಿತ್ರ ನೆಲೆಗಳು, ಸಂಬಂಧಗಳು, ಬಣ್ಣಗಳು, ರೇಖೆಗಳು, ಐತಿಹಾಸಿಕ ದಾಖಲೆಗಳು, ಸಾಕ್ಷಿ ಎಂಬ ಚಿತ್ರಗಳು ಮೊದಲಾದವು ಜಿಲ್ಲೆಯನ್ನು ಸಮೃದ್ಧ ವರ್ಣಚಿತ್ರಗಳ ಆಗರ ಎಂಬಂತೆ ಮೇಲಿನ ಎಲ್ಲಾ ಸಂಶೋಧನಾ ಪ್ರಬಂಧಗಳು, ಕಿರು ಹೊತ್ತಿಗೆಗಳು, ಪತ್ರಿಕಾ ಲೇಖನಗಳು ಸಾಕ್ಷಿಯಾಗಿ ನಿಲ್ಲುತ್ತವೆ.

ಅಧ್ಯಯನದ ಸ್ವರೂಪ

ಅಧ್ಯಾಯ ಒಂದು: ಈ ಅಧ್ಯಯನವು ಎಂಟು ಅಧ್ಯಾಯಗಳಾಗಿ ಹರಡಿಕೊಂಡಿದೆ. ಮೊದಲನೆಯ ಅಧ್ಯಾಯವು ಅಧ್ಯಯನದ ಸ್ವರೂಪ ಮತ್ತು ಉದ್ದೇಶ, ವ್ಯಾಪ್ತಿ ಮತ್ತು ವೈಧಾನಿಕತೆಯನ್ನು ಹೊಂದಿದೆ.

ಅಧ್ಯಾಯ ಎರಡು: ಬಾಗಲಕೋಟೆ ಜಿಲ್ಲೆಯ ಅಖಂಡ ವಿಜಾಪುರ ಜಿಲ್ಲೆಯಿಂದ ಬೇರ್ಪಟ್ಟ ಕಾಲಕ್ಕಾದ ಬದಲಾವಣೆ, ಭೌಗೋಳಿಕ ವಿಂಗಡಣೆ, ಪ್ರಾಚೀನ ಶಾಸನಗಳು, ಗೆಜಿಟೇರ್ ಮೂಲಕ ಕಂಡುಬರುವ ದಾಖಲೆಗಳು ಅಂಕಿ ಅಂಶಗಳು, ಬಾಗಲಕೋಟೆ ಜಿಲ್ಲೆಗೆ ಬಂದ ಹೆಸರು ಜಿಲ್ಲೆಯ ಐತಿಹಾಸಿಕ ತಾಣಗಳಲ್ಲಿರುವ ಚಿತ್ರಕಲೆಯ ಹುಡುಕಾಟ, ಮೊದಲಾದವುಗಳ ವಿವರಣೆ ಹೊಂದಿರುತ್ತದೆ.

ಅಧ್ಯಾಯ ಮೂರು: ಜಿಲ್ಲೆಯ ಪ್ರಾಗೈತಿಹಾಸಿಕ ಚಿತ್ರಕಲೆಯ ನೆಲೆಗಳು ಹಾಗೂ ಆದಿಮಾನವನ ಕಾಲದ ಗುಹಾ ಚಿತ್ರಗಳು ಬಾದಾಮಿಯ ಪರಿಸರ ಸಿಡಿಲ ಪಡಿ, ಜಮಖಂಡಿ ತಾಲ್ಲೂಕಿನ ಕುಲ್ಹೋಳ್ಳಿಯ ಗೊಂಬಿಗುಡ್ಡ, ಮೊದಲಾದ ಕಡೆ ಸಾವಿರಾರು ವರ್ಷಗಳಿಂದ ಉಳಿದು ಬಂದ ಪಳೆಯುಳಿಕೆಗಳನ್ನು ಅಧ್ಯಯನ ವ್ಯಾಪ್ತಿಗೆ ಒಳಪಡಿಸಿದೆ.

ಅಧ್ಯಾಯ ನಾಲ್ಕು: ಜಿಲ್ಲೆಯ ಗ್ರಾಮೀಣ ಸೊಗಡು, ರಂಗೋಲಿ, ಇಳಕಲ್ಲ ಸೀರೆ ಮತ್ತದರ ಮೇಲೆ ಜಾನಪದ ಕಸೂತಿ ಚಿತ್ತಾರಗಳು, ಹಚ್ಚೆ, ಮದರಂಗಿ, ಕೌದಿ, ಬೆಳದಿಂಗಳ ಚಿತ್ರ, ಹಬ್ಬಹರಿದಿನ ಗಳಲ್ಲಿ ಚಿತ್ರ ಮದುವೆ ಸಮಾರಂಭಗಳು, ಕಾರಹುಣ್ಣಿಮೆ ಮಣ್ಣೆತ್ತು, ಗುಳ್ಳವ್ವ, ಶೀಗವ್ವ ಅಲಂಕಾರ ಇತ್ಯಾದಿ ಅಧ್ಯಾಯನ್ನೊಳಗೊಂಡಿರುತ್ತದೆ.

ಅಧ್ಯಾಯ ಐದು: ಜಿಲ್ಲೆಯ ಪಾರಂಪರಿಕ ಸಂಸ್ಕೃತಿಯಿಂದ ಹುಟ್ಟಿಕೊಂಡ ಭಿತ್ತಿಚಿತ್ರಗಳು ಕಲಾವಿದರ ಹಾಗೂ ಕಲಾ ಪೋಷಕರ ಸೃಜನಶೀಲ ಮನಸ್ಸುಗಳಿಂದ ಇಂದಿಗೂ ಕಾಣಸಿಗುವ ಗುಳೇದಗುಡ್ಡದವಾಡೆ ಚಿತ್ರಗಳು, ಮಹಾಲಿಂಗಪುರ ಮಹಾಲಿಂಗೇಶ್ವರ ಮಠದಲ್ಲಿನ ಚಿತ್ರಗಳು ಈ ಭಿತ್ತಿಚಿತ್ರಗಳಿಗಾಗಿ ಇರುವ ಅಧ್ಯಾಯದಲ್ಲಿ ವಿಸ್ತರಗೊಂಡಿವೆ.

ಅಧ್ಯಾಯ ಆರು: ಜಿಲ್ಲೆಯಲ್ಲಿ ಲಭ್ಯವಿರುವ ಹಸ್ತಪ್ರತಿ, ಚಿತ್ರಕಲೆ, ಶಿವಯೋಗ ಮಂದಿರದ ಸಂಗ್ರಹದಲ್ಲಿ ಇದ್ದು ಅಪರೂಪದ ಚಿತ್ರಗಳನ್ನು ಸಂಗ್ರಹಿಸಿ ಛಾಯಾಚಿತ್ರ ತೆಗೆದು ಕಾಲಮಾನ ಹಾಗೂ ಚಿತ್ರರಚನಾಕಾರರ ಕುರಿತು ಅಧ್ಯಯನ ಹಾಗೂ ಡಾ. ಬಿ.ಕೆ. ಹಿರೇಮಠರ ಕನ್ನಡ ಹಸ್ತಪ್ರತಿಗಳ ಒಂದು ಅಧ್ಯಯನ ಮಹಾಪ್ರಬಂಧದಲ್ಲಿರುವ ಹಸ್ತಪ್ರತಿಗಳ ಚಿತ್ರಗಳನ್ನು ಪ್ರತ್ಯೇಕಿಸಿ ಅಧ್ಯನ ಮಾಡಲಾಗಿದೆ.

ಅಧ್ಯಾಯ ಏಳು: ಜಿಲ್ಲೆಯ ಅಪರೂಪದ ಸಂಗ್ರಹದಲ್ಲಿರುವ ಗುಳೆದಗುಡ್ಡ ಹಾಗೂ ಅಮೀನಗಡದ ವ್ಯಾಪಾರಸ್ಥರ ಮನೆ ಹಾಗೂ ಅಂಗಡಿಗಳಲ್ಲಿ ಶೋಭಾಯಮಾನವಾಗಿರುವ ಗಾಜಿನ ಮೇಲಿನ ಚಿತ್ರಗಳನ್ನು ಆಯ್ದು ವಿಷಯವಾರು ಪ್ರತ್ಯೇಕಿಸಿ ಅಧ್ಯಯನ ನಡೆಸಲಾಗಿದೆ.

ಅಧ್ಯಾಯ ಎಂಟು: ಮಠ, ದೇವಸ್ಥಾನ ಹಾಗೂ ವಸ್ತುಸಂಗ್ರಹಾಲಯುಗಳಲ್ಲಿಯ ಚಿತ್ರಕಲೆ. ಜಿಲ್ಲೆಯ ಬಾಗಲಕೋಟೆ ಊರು, ಕೂಡಲಸಂಗಮ, ಹಲವಾರು ಮಠಗಳಲ್ಲಿ ದೇವಾಲಯಗಳಲ್ಲಿ ವರ್ಣ ಚಿತ್ರಗಳು ಸಂಕ್ಷಿಪ್ತ ನಿವಾರಣೆ ಹಾಗೂ ಛಾಯಾಂಕಣವನ್ನು ಹೊಂದಿರುತ್ತದೆ.

ಅಧ್ಯಾಯ ಒಂಭತ್ತು: ಮೆಲಿನ ಏಳು ಅಧ್ಯಾಯಗಳಲ್ಲಿ ಸಂಗ್ರಹಿಸಿದ, ಸಂಶೋಧಿಸಿದ, ವಿಷಯ ಗಳನ್ನು ಕ್ರೂಢೀಕರಿಸಿ ಸಮಾರೋಪಾರ್ಥವಾಗಿ ವಿವರಣೆ ನೀಡುವುದು ಹಾಗೂ ಕೊನೆಯಲ್ಲಿ ಆಕರ ಸಾಮಾಗ್ರಿಗಳಾಗಿ ಬಳಸಿಕೊಂಡ ಹೊತ್ತಿಗೆಗಳ ಪಟ್ಟಿ ಹಾಗೂ ಮೌಖಿಕವಾಗಿ ದಾಖಲೆಗಳ್ನು ನೀಡಿದವರಿಗೆ ಕೃತಜ್ಞತೆಗಳನ್ನು ಸಲ್ಲಿಸುವುದು. ಹೀಗೆ ಎಂಟೂ ಅಧ್ಯಾಯಗಳನ್ನು ಅವಶ್ಯವಿರುವ ಸಚಿತ್ರ ದಾಖಲೆ ಗಳೊಂದಿಗೆ ವಿವರ ನೀಡಲಾಗಿದೆ ಹಾಗೂ ಏಳು ಅಧ್ಯಾಯಗಳ ಫಲಿತವನ್ನು ಒಳಗೊಂಡಿರುತ್ತದೆ.

ಅಧ್ಯಯನದ ವ್ಯಾಪ್ತಿ

ಪ್ರಸ್ತುತ ಅಧ್ಯಯನವು ಬಾಗಲಕೋಟೆ ಜಿಲ್ಲೆಗೆ ಸೀಮಿತವಾದ್ದರಿಂದ ಜಿಲ್ಲೆಯ ಆರು ತಾಲೂಕು ಗಳಲ್ಲಿ ಒದಗುವ ಪ್ರಾಗೈತಿಹಾಸಿಕ ನೆಲೆಗಳು, ಭಿತ್ತಿಚಿತ್ರಣದ ತಾಣಗಳು ಜನಪದ ಕಲೆಗಳು, ಹಸ್ತಪ್ರತಿ ಲಭ್ಯವಿರುವ ಹಾಗೂ ಸಂಗ್ರಹಿಸಿಟ್ಟಿರುವ ಸಂಸ್ಥೆಗಳು, ಜಿಲ್ಲೆಯ ಐತಿಹಾಸಿಕ ಹಿನ್ನೆಲೆ ಮೊದಲಾದ ಅಂಶಗಳನ್ನು ಬಾಗಲಕೋಟೆ ಜಿಲ್ಲೆಯ ವ್ಯಾಪ್ತಿಯನ್ನು ಅನುಸರಿಸಿ ಅಧ್ಯಯನ ನಡೆಸಲಾಗಿದೆ.

ಪ್ರಮುಖ ತಾಣಗಳನ್ನು ಅಪರೂಪದ ಚಿತ್ರಗಳನ್ನು ಹಾಗೂ ಹಸ್ತಪ್ರತಿ ಜಿಲ್ಲೆಯ ಮಾಚಕನೂರಿನಲ್ಲಿ ದೊರೆತು ದಾನಿಗಳು ಅವುಗಳನ್ನು ಬಸವೇಶ್ವರ ವೀರಶೈವ ವಿದ್ಯಾವರ್ಧಕ ಸಂಘ ಬಾಗಲಕೋಟೆಗೆ ದಾನವಾಗಿ ನೀಡಿದ್ದರಿಂದ ಅಲ್ಲಿನ ಬಸವೇಶ್ವರ ಕಲಾ ಮಹಾವಿದ್ಯಾಲಯ, ಶಿವಯೋಗಮಂದಿರದ ಹಸ್ತಪ್ರತಿಗಳಲ್ಲಿ ಈ ಸಂಶೋಧನಾ ಪ್ರಬಂಧದಲ್ಲಿ ಅಪರೂಪದ ರೇಖಾಚಿತ್ರಗಳನ್ನು ಅಳವಡಿಸಲಾಗಿದೆ.

ಗುಳೇದಗುಡ್ಡದ ಗಾಜಿನ ಚಿತ್ರಗಳು ಗೊಂಬಿಗುಡ್ಡದ ಆದಿಮಾನವನ ಕೊರೆದ ರೇಖಾಚಿತ್ರಗಳು ಅಪರೂಪದ ಛಾಯಾಚಿತ್ರಗನ್ನು ಸಂಗ್ರಹಿಸಿ ಬಳಸಲಾಗಿದೆ.

ಒಟ್ಟಾರೆ ಬಾಗಲಕೋಟೆ ಜಿಲ್ಲೆಯ ಪ್ರಾಗೈತಿಹಾಸಿಕ ನೆಲೆಗಳಿಂದ ಇಂದು ಆಧುನಿಕ ವರ್ಣಚಿತ್ರಗಳ ಸಂಗ್ರಹಿಸಿರುವ ಪ್ರತಿಷ್ಠಿತ ಮಠಗಳು ದೇವಸ್ಥಾನ ಹಾಗೂ ಜಿಲ್ಲೆಯ ಸಾಂಸ್ಕೃತಿಕ ಸಮುಚ್ಚಯ ಮುಳುಗಡೆ ಜಾನಪದ ವಸ್ತುಸಂಗ್ರಹಾಲಯ, ಸುಕ್ಷೇತ್ರ ಕೂಡಲಸಂಗಮದ ಮಾತೆ ಮಾಹದೇವಿಯವರ ಬಸವಧರ್ಮ ಪೀಠದ ಸಂಗ್ರಹದಲ್ಲಿನ ಶರಣರ ಭಾವಚಿತ್ರಗಳು ತೊಗಲುಗೊಂಬೆ ಕಾಕನೂರಿನ ವೈಶಿಷ್ಟ್ಯತೆಗಳು, ಜಮಖಂಡಿ ಅರಮನೆ ಇಳಕಲ್ಲ ಪರದೆ ಚಿತ್ರಗಳು ಮೊದಲಾದ ಸಮಗ್ರ ಜಿಲ್ಲೆಯ ಅಪರೂಪದ ಚಿತ್ರಗಳನ್ನು ಸಂಗ್ರಹಿಸಿ ಅಧ್ಯಯನ ನಡೆಸಲಾಗಿದೆ.

ಅಧ್ಯಯನದ ವೈಧಾನಿಕತೆ

ಪ್ರಸ್ತುತ ಈ ಮಹಾಪ್ರಬಂಧಕ್ಕೆ ಮುಖ್ಯವಾಗಿ ಎರಡು ರೀತಿಯ ಆಕರಗಳನ್ನು ಬಳಸಿಕೊಳ್ಳಲಾಗಿದೆ. ಅವುಗಳನ್ನು ಈ ಕೆಳಗಿನಂತೆ ಹೆಸರಿಸಿ ವಿವರಿಸಲಾಗಿದೆ.

೧. ಮೂಲ ಆಕರ ಸಾಮಗ್ರಿ (ಪ್ರೈಮರಿ ಸೋರ್ಸ್ಸ್)

೨. ಆನುಷಂಗಿಕ ಆಕರ ಸಾಮಾಗ್ರಿ (ಸೆಂಕಡರಿ ಸೋರ್ಸ್ಸ್)

೧. ಮೂಲ ಆಕರ ಸಾಮಗ್ರಿ

ಮೂಲ ಆಕರ ಸಾಮಗ್ರಿಗಳಲ್ಲಿ ಬಹು ಪ್ರಾಮುಖ್ಯವಾದ ಅಂಶ ಕ್ಷೇತ್ರಕಾರ್ಯ. ಪ್ರಸ್ತುತ ಅದ್ಯಯನ ದಲ್ಲಿ ಕ್ಷೇತ್ರಕಾರ್ಯ ಅತ್ಯಂತ ಮಹತ್ವ ಪೂರ್ಣವಾದದ್ದಾಗಿದೆ. ಕ್ಷೇತ್ರಕಾರ್ಯವಿಲ್ಲದ ಚಿತ್ರಕಲೆ ಅಥವಾ ದೃಶ್ಯಕಲೆಯ ಯಾವುದೇ ಒಂದು ಪ್ರಕಾರವನ್ನು ಅಧ್ಯಯನ ಮಾಡುವುದು ಸಾಧ್ಯವಿಲ್ಲ. ಇಡೀ ಜಿಲ್ಲೆಯ ಭೌಗೋಳಿಕ ಅಧ್ಯಯನ ಸಾರವನ್ನೂ, ಇತಿಹಾಸವನ್ನೂ, ಚಿತ್ರಗಳಿರುವ ನೆಲೆಗಳನ್ನು ಗುರುತಿಸುವುದು ಕ್ಷೇತ್ರಕಾರ್ಯದಿಂದಲೇ ಮಾತ್ರ ಸಾಧ್ಯ. ಆದಕಾರಣ ಇಡೀ ಕ್ಷೆತ್ರದಲ್ಲೆಲ್ಲ ಖುದ್ದಾಗಿ ಸಂಚರಿಸಿ ಮಾಹಿತಿ ಗಳನ್ನು ಕಲೆಹಾಕಿ ಪ್ರಸ್ತುತಪಡಿಸಿದೆ.

೧. ಸಂದರ್ಶನ, ೨. ಛಾಯಾಚಿತ್ರಣ, ೩. ಸಂಗ್ರಹಿತ ವಿಷಯಗಳ ಪಟ್ಟಿ ತಯಾರಿಸುವುದು ಹೀಗೆ ವಿವಿಧ ಸ್ವರೂಪದಲ್ಲಿ ಇರುತ್ತದೆ. ಸಮಕಾಲಿನ ಕ್ಷೆತ್ರದ ಮುಖಾಂತರ ದೊರಕುವ ಮೂಲ ಆಕರ ಸಾಮಗ್ರಿಯಿಂದ ವಿಷಯ ಸಂಗ್ರಹಣೆ ಮಾಡಿಕೊಂಡು ಅನುಷಂಗಿಕ ಆಕರ ಸಾಮಾಗ್ರಿಗಳಿಂದ ದೊರೆತ ಮಾಹಿತಿಗಳೊಡನೆ ತೌಲನಿಕವಾಗಿ ವಿಶ್ಲೇಷಣೆಗೆ ಒಳಪಡಿಸಿ ಪ್ರಸ್ತುತ ಪ್ರಬಂಧವನ್ನು ರಚಿಸಲಾಗಿದೆ.

೧. **ಸಂದರ್ಶನ :** ಪ್ರಾಗೈತಿಹಾಸಿಕ ನೆಲೆಗಳಿಗಾಗಿ ಇತಿಹಾಸ ತಜ್ಞರು ಹಾಗೂ ಇತಿಹಾಸಕಾರರು ಅಧ್ಯಾಪಕರು ಹಾಗೂ ಹಳೆಯ ತಲೆಮಾರಿನ ಆ ಪ್ರದೇಶದ ಆ ಚಿತ್ರ ತಾಣದ ಸಮೀಪ ವಾಸಿಸುವ ಜನರೊಂದಿಗೆ ತಾತ್ವಿಕ ಮಾಹಿತಿ ಸಂಗ್ರಹಿಸುವುದು ಹಾಗೂ ಹಿರಿಯ ಮತ್ತು ಕಿರಿಯರೊಂದಿಗೆ ಚರ್ಚಿಸುವುದು ಹೌದು. ಅಲ್ಲಗಳನ್ನು ಸ್ಪಷ್ಟ ಪಡಿಸಿಕೊಳ್ಳುವುದು. ಹೀಗೆ ಮಾಡುವುದರಿಂದ ಅಧ್ಯಯನಕ್ಕೆ ಸಂದರ್ಶನ ಅತ್ಯಂತ ಅಗತ್ಯವೆನಿಸುತ್ತದೆ. ಆ ಕಾಲದ ಜನರ ಬಾಯಿಂದ ಬಾಯಿಗೆ ಕಾಲ ಗರ್ಭದಲ್ಲಿರುವ ವಿಷಯ ಮಾಹಿತಿಗಳು ಅವರ ಮುಂದಿನ ಪೀಳಿಗೆಯನ್ನು ಸಂದರ್ಶಿದರೆ ಅಧ್ಯಯನಕ್ಕೆ ಸೂಕ್ತ ಮಾಹಿತಿಗಳು, ಕಾಲಘಟ್ಟದಲ್ಲಿ ಬದಲಾವಣೆ ಪಡೆದ ಅಂಶಗಳು ಬಯಲಾಗುವ ಸಾಧ್ಯತೆಗಳಿರುವುದರಿಂದ ಸಂದರ್ಶನ ಅತೀ ಮುಖ್ಯವೆನಿಸುತ್ತದೆ.

೨. **ಛಾಯಾಚಿತ್ರಣ :** ವಿಶಾಲವಾದ ದೃಶ್ಯಕಲಾ ಪ್ರಪಂಚಕ್ಕೆ ಛಾಯಾಗ್ರಹಣವೆಂಬ ಸಾಕ್ಷಿ ಹೇಳುವ ಯಥಾವತ್ತಾದ ಇಂದು ಬಣ್ಣದ ಸಮೇತ ಚಿತ್ರದ ಅರಿವು ನೀಡುವ ಅಂಶವಾದ್ದರಿಂದ ದಾಖಲೆ ನಿರ್ಮಿಸುವಾಗ ಹಾಗೂ ಅಧ್ಯಯನದ ನಿಖರತೆ ಹಾಗೂ ಖಚಿತತೆಗಾಗಿ ಛಾಯಾಚಿತ್ರ ಸಂಪೂರ್ಣ ಸಹಕಾರ ನೀಡಬಲ್ಲದಾಗಿದೆ. ಕ್ಯಾಮರಾ ಎಂದರೇನು ಎಂದು ಗೊತ್ತಾಗುವ ಕಾಲಕ್ಕಿಂತ ಮೊದಲಿನ ಚಿತ್ರಗಳು, ಚಿತ್ರಕಾರರು ನಂತರ ಕ್ಯಾಮರಾ ಸೃಷ್ಟಿಯಾದ ದಿನದಿಂದ ಅವೆಲ್ಲ ಛಾಯಾಚಿತ್ರದಲ್ಲಿ ಹಿಡಿದಿಡುವ ಕಾರ್ಯ ಇಂದಿಗೂ ನಿರಂತರವಾಗಿ ನಡೆದೇ ಇದೆ. ಕಾರಣ ಅದ್ಯಯನಕ್ಕೆ ಬಣ್ಣದ ಅವಶ್ಯಕ ಚಿತ್ರಗಳನ್ನು ಒಂದು ತಂತ್ರಜ್ಞಾನದ ಪೆಟ್ಟಿಗೆಯಿಂದ ಸಾವಿರಾರು ಶಬ್ದಗಳಲ್ಲಿ ಹೇಳಬೇಕಾದುದನ್ನು ಒಂದು ಚಿತ್ರ ಹೇಳುತ್ತದೆ ಎಂಬುದಕ್ಕೆ ಛಾಯಾಚಿತ್ರಣ ಅಧ್ಯಯನಕ್ಕೆ ಅವಶ್ಯವಾಗಿದೆ.

೩. **ಸಂಗ್ರಹಿತ ವಿಷಯಗಳ ಪಟ್ಟಿ ತಯಾರಿಸುವುದು :** ಈ ಹಿಂದೆ ನಡೆದ ಸಂಶೋಧನೆಗಳಲ್ಲಿ ಬಾಗಲಕೋಟ ಜಿಲ್ಲೆಯ ಚಿತ್ರಕಲೆ ಕುರಿತು ಒಡಮೂಡಿದ ಅಂಶಗಳನ್ನು ಸಂಗ್ರಹಿಸಿ ಶತಮಾನಕ್ಕೊಮ್ಮೆ ಸೃಷ್ಟಿಯಾಗುವ ಜಿಲ್ಲೆಯ ಗ್ಯಾಜಿಟಿಯರ್‌ಗಳಲ್ಲಿ ಉಲ್ಲೇಖವಾದ ಅಂಶಗಳನ್ನು ಗ್ರಂಥಾಲಯದ ಹಳೆಯ ಪುಸ್ತಕಗಳಲ್ಲಿ ದಾಖಲೆಗೊಂಡ ಶಾಸನಗಳು ಹಸ್ತಪ್ರತಿಗಳು ಪುರಾಣಕಾಲದ ಕತೆಗಳು ಜಿಲ್ಲೆಯ ಸಮಗ್ರ ಐತಿಹಾಸಿಕ ಅಂಶಗಳನ್ನು ಪಟ್ಟಿಮಾಡಿ ಇಡೀ ಅಧ್ಯಯನಕ್ಕೆ ಅನುಕೂಲವಾಗುವಂತೆ ಜೋಡಿಸಿಕೊಳ್ಳುವುದು. ಹೀಗೆ ಬಾಗಲಕೋಟೆ ಜಿಲ್ಲೆಯು ಚಿತ್ರಕಲೆಗೆ ನೀಡಿದ ಕೊಡುಗೆ ಅದು ಆದಿಮಾನವನ ಸಂಜ್ಞಾಭಾಷೆ ಆಗಿರಬಹುದು, ಅಕ್ಷರಭ್ಯಾಸದ ನಂತರ ಬರವಣಿಗೆಯಲ್ಲಿನ ಇತಿಹಾಸವಿರಬಹುದು. ಶಾಸನ ಹಾಗೂ ಬಾಯಿ ಮಾತುಗಳು ಆಗಿರಬಹುದು. ಅಂದಿನಿಂದ ಇಂದಿನವರೆಗೆ ಬಾಗಲಕೋಟೆ ಜಿಲ್ಲೆಯ ಚಿತ್ರಕಲೆಯ ವಿವಿಧ ಮಗ್ಗಲುಗಳನ್ನು ಖಚಿತವಾಗಿ ಅಧ್ಯಯನ ನಡೆಸಿ ಅವುಗಳ ಕುರಿತು ದಾಖಲೀಕರಣ ಮತ್ತು ವ್ಯವಸ್ಥಿತ ಅಧ್ಯಯನ ನಡೆಸುವುದು ಒಟ್ಟಾರೆ ಉದ್ದೇಶವಾಗಿದೆ.

ಅಧ್ಯಾಯ - ೨

ಬಾಗಲಕೋಟೆ ಜಿಲ್ಲೆಯ ಐತಿಹಾಸಿಕ ನೆಲೆ, ಹಿನ್ನೆಲೆ

* ಜಿಲ್ಲೆಯ ಇತಿಹಾಸ
* ಶಾಸನಗಳು
* ನಾಣ್ಯಗಳು
* ವಾಸ್ತುಶಿಲ್ಪ
* ವರ್ಣಚಿತ್ರ
* ಇತಿಹಾಸ ಪೂರ್ವಕಾಲ
* ಬಾಗಲಕೋಟೆಯ ಪ್ರಾಕೃತಿಕ ನೋಟ
* ಸಾಂಸ್ಕೃತಿಕ ನೋಟ

೨. ಬಾಗಲಕೋಟೆ ಐತಿಹಾಸಿಕ ನೆಲೆ, ಹಿನ್ನೆಲೆ

ನಾಡಲ್ಲ! ನಾಡಲ್ಲ! ನಾಡಲ್ಲವೊ!
ಉದ್ದಗಲ ಕ್ಷೇತ್ರ ಪರಿಮಿತಿ ಮಾತ್ರ ನಾಡಲ್ಲವೊ!
ನಾಡಘನತೆಗೆ ಸಾಕ್ಷಿ
ನಾಡಿನಂತಸ್ಸತ್ವ.....

ಪೌರಾಣಿಕ ಕಾಲದಲ್ಲಿ ಬಾಗಲಕೋಟೆಗೆ ಯಾವ ರೀತಿಯ ಅಸ್ತಿತ್ವವಿತ್ತೆಂಬುದು ಗೊತ್ತಿಲ್ಲ. ಅಥವಾ ಅದರ ಹೆಸರು ಯಾವುದಿತ್ತು ಎಂಬುದರ ಪರಿಚಯವೂ ದೊರೆತಿಲ್ಲ. ಆದರೆ ಒಂದು ಅಖ್ಯಾಯಿಕ ಕಾಲಪ್ರವಾಹದಲ್ಲಿ ಜನವಾಣಿಯಿಂದ ತೇಲಿಬಂದಿದೆ. ರಾಮಾಯಣ ಕಾಲದಲ್ಲಿ ರಾವಣೇಶ್ವರನನ್ನು ಸಂಗೀತ ಗಾರರಿಗೆ ಬಾಗಲಕೋಟೆಯನ್ನು ಬಳುವಳಿಯಾಗಿತ್ತಿದ್ದನೆಂದು ಒಂದು ಐತಿಹ್ಯವಿದೆ. ರಾವಣೇಶ್ವರನು ದೊಡ್ಡ ಪಂಡಿತನಿದ್ದನು. ಅವನಿಗೆ ಸಂಗೀತ ಕಲೆಯಲ್ಲಿ ಆಸಕ್ತಿಯಿತ್ತು. ಅಂದಿನ ಬಾಗಲಕೋಟೆಯ ಸಂಗೀತಗಾರರು ಅವನ ಕಲಾಭಿಜ್ಞತೆಗೆ ತಟ್ಟುವಂತೆ ತಮ್ಮ ಕಲೆಯನ್ನು ಪ್ರದರ್ಶಿಸಿರಬಹುದು. ಅವನಿಗೆ ಹರ್ಷಾತಿರೇಕ ವಾದಾಗ ಅಂದಿನ ಈ ನಗರವನ್ನು ಬಳುವಳಿಯಾಗಿ ಕೊಟ್ಟಿರಬಹುದು. ಈ ಊಹೆಯ ಸಂಕೀರ್ಣತೆಯ ಹಿನ್ನೆಲೆಯಲ್ಲಿ ನಾವು ಕಾಣುವುದು ಅಂದಿನ ಸಂಗೀತ ಕಲಾವಿದರ ಕಲಾ ಮಾಧುರ್ಯ, ಲಂಕಾಧಿಪತಿಯ ಮನಸ್ಸನ್ನು ಗೆದ್ದ ಭಾಗ್ಯದ ಬೀಡಿನವರು ಈ ಬಾಗಲಕೋಟೆಯ ಕಲಾವಿದರು. ಅಂದಿನಿಂದಲೇ ಭಾಗ್ಯದ ಪಥದಲ್ಲಿ ಬಾಗಲಕೋಟೆ ಪ್ರಗತಿ ಹೆಜ್ಜೆಯನ್ನು ಇಡಹತ್ತಿದೆ. ಇದರ ಬಗ್ಗೆ ಉಲ್ಲೇಖ ದೊರೆಯದಿದ್ದರೂ ದೀರ್ಘಕಾಲಿನ ಪಥದಲ್ಲಿ ಚಿರಂಜೀವಿಯಾಗಿ ಅಖ್ಯಾನ ಇಲ್ಲಿಯವರೆಗೆ ಹರಿದು ಬಂದಿದೆ. "ರಾವಣೇಶ್ವರನ ಕಾಲದಲ್ಲಿಯೇ ಕಲಾರಂಗದಲ್ಲಿ ಭಾಗ್ಯನಗರವಾಗಿ ವಿರಾಜಿಸಿದ ನಗರ ಇಂದಿನ ಬಾಗಲಕೋಟೆ"[೧].

೧. ಎಸ್.ಟಿ. ಪುರಾಣಿಕ., 'ಕೃಷ್ಣಪ್ರಭೆ', ಅಖಿಲ ಭಾರತ ೬೮ನೇ ಕನ್ನಡ ಸಾಹಿತ್ಯ ಸಮ್ಮೇಳನ, ಬಾಗಲಕೋಟೆ.

ಬಾಗಲಕೋಟೆ

ಊರ ರಕ್ಷಣೆಗೆ ಬಲವಾದ ಕೋಟೆ. ಅದಕ್ಕೆ ಸಂಪರ್ಕ ಕಲ್ಪಿಸಲು ಅಗಸಿಬಾಗಿಲುಗಳಿಂದಾಗಿ ಬಾಗಿಲು ಕೋಟೆ ಯಾಗಿರಬಹುದೆ! ಐತಿಹಾಸಿಕ ದಾಖಲೆಗಳಲ್ಲಿ ಬದಲಾವಣೆಗೊಂಡ ಆಧಾರಗಳಿವೆ ನಗರಸಭೆಯ ದಾಖಲೆಗಳಲ್ಲಿ ಅಂದಿನ ಬ್ರಿಟೀಷ್ ಮೇಲಾಧಿಕಾರಿಗೆ ಸಲ್ಲಿಸಿದ ರಿಪೋರ್ಟ್‌ನಲ್ಲಿ ಹುಲಿಕೊಂದ ಪ್ರಯುಕ್ತ ಭಾಗನೂರು ಆಗಿದೆ ಎಂದಿದೆ. ಕಲ್ಯಾಣ ಚಾಲುಕ್ಯರ ಆಳ್ವಿಕೆಯಲ್ಲಿ ಬಾಗಡೆಗೆ ಬಗ್ಗಡಗೆ, ತರ್ದವಾಡಿಯ ಬಾಗಡಗೆ ೨೦ ಆದಿಲಶಾಹಿ ಸಾಮ್ರಾಜ್ಯದಲ್ಲಿ ಬಾಗಡಗೆ, ಬಾಂಗಡಕೋಟ ಆಗಿತ್ತು. ನಂತರದಲ್ಲಿಯ ಬಾಗಲಕೋಟೆ. ಈ ಹೆಸರುಗಳಲ್ಲಿ ಅಡಕವಿರುವ ಶಬ್ದಗಳನ್ನು ಪರಿಶೀಲಿಸಿದಾಗ, ಹೆಸರಿನಲ್ಲಾದ ಪರಿವರ್ತನೆ ಕಾಣುತ್ತವೆ. ಪರ್ಶಿಯನ್ ಶಬ್ದ ಬಂಗಾರ, ಮಹಾಪೂರ ಬಂದರೂ ಮುಳುಗದ ಭೂಮಿ ಘಟಪ್ರಭೆಯ ದಡದ ಊರು, ಮಳೆಗಾಲದ ಮಹಾಪೂರ ಊರಿಗೆ ಭಾದಕವಿಲ್ಲ. ಬಾಂಕು = ಒಂದು ವಾದ್ಯ ವಿಶೇಷ. ಬಗ್ಗಡ = ಕೆಸರು ಕೊಚ್ಚೆ. ನದಿದಡ ಎರೆಭೂಮಿ ಸಹಜವಾಗಿ ಅದೇ ಬಾಗಡಗೆಯಾಗಿರಬಹುದು. ಬಾಂ = ಆಕಾಶ, ಗಡ = ಸಣ್ಣ ಕೋಟೆ; ದುರ್ಗ, ಬಗ್ಗ = ಹುಲಿ, ಬ್ರಿಟೀಷ್ ಅಧಿಕಾರಿಯ ವರದಿಯಂತೆ ಹುಲಿ ಕೊಂದದ್ದಕ್ಕೆ ಭಾಗನೂರು. ಬಾಂಗಡ = ಬಳೆ. ಹಿಂದೆ ಬಳೆ ತಯಾರಿಸುವ ಕುಲುಮೆಗಳಿದ್ದವು. ಒಂದು ಹೇಳಿಕೆಯಂತೆ ಆದಿಲಶಾಹಿ ತನ್ನ ಮಗಳಿಗೆ ಬಳೆಗಾಗಿ ಬಿಟ್ಟ ಊರು ಬಾಂಗಡಕೋಟೆ ಎಂದು ಹೇಳಲಾಗುತ್ತದೆ. ಹೀಗೆ ಪರಿವರ್ತನೆಯಾಗುತ್ತ ಬಾಗಲಕೋಟೆ ಆಗಿ ಉಳಿದಿದೆ.

ಇದನ್ನು ವಿಜಯನಗರ ಆದಿಲಶಾಹಿ, ಮರಾಠರು, ಪೇಶವೆಗಳು, ಸವಣೂರಿನ ನವಾಬರು ಹೈದರಲಿ ಟಿಪ್ಪು ಹಾಗೂ ಬ್ರಿಟೀಷರು ತಮ್ಮ ಅಧಿಪತ್ಯದಲ್ಲಿಟ್ಟು ಕೊಂಡಿದ್ದರೆಂದು ಇತಿಹಾಸ ಹೇಳುತ್ತದೆ.

ಇಂದಿನ ಕಿಲ್ಲಾ ಭಾಗವೇ ಮೂಲದ ಬಾಗಲಕೋಟೆ. ಉತ್ತರಕ್ಕೆ ಹರಿಯುತ್ತಿರುವ ಘಟಪ್ರಭೆ ಅದರಾಚೆಯ ಗುಡ್ಡ, ಹಸಿರು ಭೂಮಿ, ಅಂಚುಗುಂಟ ಕೋಟೆಗೋಡೆ, ಬುರುಜುಗಳ ಕಂದಕ, ಪೂರ್ವ ಹಾಗೂ ದಕ್ಷಿಣಾಭಿಮುಖವಾಗಿ ನಿಂತ ಎತ್ತರದ ಅಗಸೆ ಬಾಗಿಲುಗಳು ಇದರ ಹತ್ತಿರದ ಬುರುಜಲ್ಲೇ ಕೊತ್ತಲೇಶನ ಪುರಾತನ ಮಂದಿರ. ಇದಕ್ಕೆ ವಿಜಯನಗರ ಪೇಶವೆ ನವಾಬರು ಕವಚ ಕೊರಳ ಸರ ದಾನವಿತ್ತಿದ್ದಾರೆ. ಪೇಶವೆಗಳ ಆಡಳಿತಾವಧಿಯಲ್ಲಿ ಆನಂದರಾವ ಭಿಕಾಜಿ ನಿರ್ಮಿಸಿದ ಪಾಣಿಮಹಲು, ಖಜಾನೆ, ಟಂಕಶಾಲೆ, ಕುದುರೆಪಾಗಾ, ಆನೆಪಾಗ, ಠಾಣಾ, ಅಮಲ್ದಾರ ಕಾರ್ಯಾಲಯಗಳು ಈ ಅವಶೇಷಗಳಾಗಿವೆ. ಇಲ್ಲಿ ಟಂಕಸಾಲೆ ಓಣಿಯೂ ಇದ್ದು ಟಂಕಸಾಲೆ ಅಡ್ಡ ಹೆಸರುಗಳಿವೆ. ಬ್ರಿಟೀಷರು ನದಿಗುಂಟ ನಿರ್ಮಿಸಿದ್ದ ಪಬ್ಲಿಕ್ ಘಾಟ ಕೂಡಾ ಇದೆ.

ಪ್ರಾಚೀನ ದೇವಾಲಯಗಳಾದ ಬದರಿನಾರಾಯಣ, ಯೋಗ ನಾರಾಯಣ, ದತ್ತಾತ್ರೇಯರ ಸುಂದರ ಮೂರ್ತಿಗಳಿವೆ. ಶ್ರೀ ವೆಂಕಟೇಶ, ಈಶ್ವರ, ಯಮನೂರಪ್ಪ, ದ್ಯಾಮವ್ವ, ದುರುಗವ್ವ, ರೇಣುಕಾ, ಆನಂದೇಶ್ವರ ಹೀಗೆ ಹಳೆಯ ಗುಡಿಗಳೂ ಇವೆ. ಕೂಡಲಸಂಗಮನಾಥನ ಕಳಸ ಇದೇ. ಬದರಿನಾರಾಯಣ ಮಂದಿರದಲ್ಲಿದ್ದು ಇಲ್ಲಿಂದಲೇ ಪ್ರತಿವರ್ಷದ ಕೂಡಲಸಂಗಮ ಉತ್ಸವದ ಮೆರವಣಿಗೆ ಹೊರಡುತ್ತದೆ. ಅಡತಿಸಾಲಂಗಡಿಯಲ್ಲಿ ಅಲಂಕರಿಸಿ ಊರ ಭಕ್ತರೆಲ್ಲ ಪೂಜಿಸಿ ಪುನೀತರಾಗುತ್ತಾರೆ.

ಕೋಟೆ ಬುರುಜಗಳು ಬಿದ್ದಂತೆ, ಜನವಸತಿ ಬೆಳೆದಂತೆ, ಅವುಗಳ ಮೇಲೆ ಮನೆಗಳಾಗುತ್ತ ಗ್ರಾಮ ಬೆಳೆಯತೊಡಗಿತು. ಹಳೆಪೇಟೆ, ಕೌಲಪೇಟೆ, ಹೊಸಪೇಟೆ, ವೆಂಕಟರಾವ ದೇಸಾಯಿ ನಿರ್ಮಿಸಿದ ವೆಂಕಟ ಪೇಟೆ ಓಣಿಗಳೆಲ್ಲ ಬೆಳೆದು ಬಾಗಲಕೋಟೆ ಪಟ್ಟಣವನ್ನಾಗಿಸಿದವು. ಜಿಲ್ಲೆಯ ಸ್ಥಾನಪಡೆದ ನಗರ ಈಗ ಆಲಮಟ್ಟಿ ಹಿನ್ನೀರಿನಲ್ಲಿ ಕೃಷ್ಣಾರ್ಪಣೆಗೊಳ್ಳುತ್ತಲಿದೆ. ಜೊತೆಗೆ ಮೈಗೂಡಿಸಿಕೊಂಡಿರುವ ಸಾಂಘಿಕ ಜೀವನ ಸಾಂಸ್ಕೃತಿಕ ಪರಂಪರೆ ಸಂಸ್ಕೃತಿಗಳೂ ಮುಳುಗಲಿವೆ. ಇಲ್ಲಿಯ ವೈಶಿಷ್ಟ್ಯಪೂರ್ಣ ಕಾಮದಹನ ಹಲಿಗೆವಾದನ ಬಣ್ಣದೋಕುಳಿ ಸೋಗಿನ ಬಂಡಿಗಳು ರಾಷ್ಟ್ರಮಟ್ಟದಲ್ಲಿ ಖ್ಯಾತಿ ಪಡೆದಿವೆ. ಇತರೇ ಜಾನಪದ ಕಲೆಗಳೆಲ್ಲ ಈಗ ಹಾಳಾಗುತ್ತಲಿವೆ.

ವಿಶಿಷ್ಟ ರುಚಿ ಹೊಂದಿದ ಜೋಳದ ಬಾನ, ಕೊಟ್ರಿಹುಗ್ಗಿ, ಹುಳ್ಳಾನುಚ್ಚು, ಪಂಚಮಿಯಲ್ಲಿ ತಿರುಗಿಸುವ ಕೊಬ್ಬರಿ ಬುಗುರಿ ಜೋಕಾಲಿ ಪಗಡಿ ಬುಗುಡಿ ಕುಸ್ತಿ ಮುಂತಾದ ಸಾಹಸದಾಟಗಳೆಲ್ಲ ಮೂಲೆ ಸೇರಿವೆ. ಬನ್ನಿ ಮುಡಿಯುವ ಉತ್ಸವ ವಿಜಯನಗರ ಅರಸರ ಕಾಲದಂತೆಯೇ ವಿಜೃಂಭಣೆಯಿಂದ ಜರುಗುತ್ತಿತ್ತು. ಈ ದಿನಗಳಲ್ಲೆ ನಡೆವ ರಾಷ್ಟ್ರೀಯ ಸ್ವಯಂ ಸೇವಕ ಸಂಘದ ದೇಶಭಕ್ತಿ ವೀರೋತ್ಸಾಹದ ಪ್ರತೀಕವಾದ ರೂಟಮಾರ್ಚ್ ಮೆರವಣಿಗೆ ಶಿಸ್ತು ಬದ್ಧವಾಗಿದ್ದು ನೋಡಲು ಸಾವಿರಾರು ಜನ ಸೇರಿರುತ್ತಾರೆ. ಊರೆಲ್ಲ ನವ ವಧುವಿನಂತೆ ಶೃಂಗಾರಗೊಂಡಿರುತ್ತದೆ. ಕಿಲ್ಲೆಯ ಓಣಿಗಳದ್ದೇ ಒಂದು ವಿಶಿಷ್ಟತೆ ಅರವತ್ತೋಣಿ, ಎಪ್ಪತ್ತೋಣಿ, ಹನ್ನೊಂದೋಣಿ ಇವೆಲ್ಲ ಓಣಿ ಹೆಸರುಗಳು. ಆಯಾ ಓಣಿಗಳಲ್ಲಿ ಅಷ್ಟು ಜನ ವೇದಾಧ್ಯಯನಗೈದ ಪಂಡಿತರುಗಳು ಇದ್ದರಂತೆ ಬಾಗಲಕೋಟೆ ಪಂಡಿತರು ಗಳೆಂದರೆ ಉತ್ತರ ಭಾಗದ ಪಂಡಿತರೂ ನಡುಗಿ ವಾಕ್ಯಾರ್ಥಕ್ಕೆ ಬರುತ್ತಿದ್ದಿಲ್ಲವಂತೆ. ಪಾಂಡಿತ್ಯದಲ್ಲಿ ಕಾಶಿಪಂಡಿತರನ್ನೂ ಇಲ್ಲಿಯ ಪಂಡಿತರು ಸೋಲಿಸಿದ್ದು ಹೆಮ್ಮೆಯ ಚಿನ್ನದಗರಿ. ಅಂದಿನ ಈ ಓಣಿಗಳಲ್ಲಿ ವೇದಾಂತಾದಿ ಷಟ್‌ಶಾಸ್ತ್ರ ಪಾರಂಗತರಾದ ಪಂಡಿತರೂ, ಪದಕ್ರಮ ಜಟಘನಾಂತವಾಗಿ ಅಸ್ಖಲಿತವಾದ ವಾಣಿಯಿಂದ ವೇದ ಪಠಣವನ್ನು ಮಾಡುವ ವಿಪ್ರೋತ್ತಮರೂ, ಕಾವ್ಯ ನಾಟಕ ಅಲಂಕಾರಾದಿಗಳಲ್ಲಿ ಒಳ್ಳೆ ಮಾರ್ಮಿಕರಾದ ರಸಿಕರೂ ಅಗ್ನಿ ಹೋತ್ರಾದಿಗಳಲ್ಲಿ ನಿರತ ದೀಕ್ಷಿತರೂ ವಾಸವಾಗಿದ್ದರು. ಇವರಿಗೆ

ತಕ್ಕ ಶಿಷ್ಯರೂ ವೃಕ್ಷಗಳ ನೆರಳಲ್ಲಿ ಕುಳಿತು ನ್ಯಾಯ ವ್ಯಾಕರಣ ಶಾಸ್ತ್ರಗಳನ್ನು ಕಲಿಯುವ ಮನನ ಮಾಡುವ ವಿದ್ಯಾರ್ಥಿಗಳು ಹೀಗೆ ಕರ್ನಾಟಕದಲ್ಲಿ ವಿದ್ವಾಂಸರಿಗೆ ಗಂಡು ಮೆಟ್ಟಾಗಿತ್ತು ಈ ಬಾಗಲಕೋಟೆ.

ಜಿಲ್ಲೆಯ ಇತಿಹಾಸ

"ಪ್ರಾಕೃತಿಕವಾಗಿ ಭಾರತದ ದಕ್ಷಿಣ ಭಾಗದಲ್ಲಿ ಫಲವತ್ತಾದ ದಖನ್ ಪ್ರಸ್ಥಭೂಮಿಯ ಮೇಲಿರುವ ಕರ್ನಾಟಕವು ಶ್ರೀಮಂತ ಸಾಂಸ್ಕೃತಿಕ ಪರಂಪರೆಗೆ ಹೆಸರಾಗಿದೆ. ಕರ್ನಾಟಕದ ಉತ್ತರ ಭಾಗದಲ್ಲಿರುವ ಜಿಲ್ಲಾ ಭೂಪ್ರದೇಶವು ಕ್ರಿಟೇಸಿಯನ್ ಇಯೋಸಿನ್ ಯುಗದಲ್ಲಿ ರೂಪಿತಗೊಂಡಿದ್ದು, ಕೃಷ್ಣಾ ಮತ್ತದರ ಉಪನದಿಗಳನ್ನು ಒಳಗೊಂಡ ಪಂಚನದಿಗಳಿಂದ ಅನೇಕ ಹಳ್ಳಕೊಳ್ಳಗಳಿಂದ ಸಮೃದ್ಧವಾಗಿದ್ದರೂ, ಅನಾವೃಷ್ಟಿಯಿಂದಾಗಿ ಬರಗಾಲ ಪೀಡಿತ ಪ್ರದೇಶವೆಂದೇ ಇಂದು ಗುರುತಿಸಲ್ಪಟ್ಟಿದೆ. ಆದರೂ ಮಾನವ ವಿಕಾಸದ ವಿವಿಧ ಹಂತಗಳನ್ನು ಗುರುತಿಸುವಲ್ಲಿ ಸಾಂಸ್ಕೃತಿಕ ಬೆಳವಣಿಗೆಗಳನ್ನು ಅರಿಯುವಲ್ಲಿ ಬಾಗಲಕೋಟೆ ಜಿಲ್ಲೆಯ ವೈವಿಧ್ಯಮಯ ಇತಿಹಾಸ ನೆರವಾಗುತ್ತದೆ".[೨]

ಬಾಗಲಕೋಟೆ ಜಿಲ್ಲೆ ಹಲವಾರು ವೈಶಿಷ್ಟ್ಯಗಳಿಂದಾಗಿ ಮಹತ್ವಪಡೆದಿದೆ. ಬಾದಾಮಿ ಚಾಲುಕ್ಯ ರಾಜಮನೆತನದ ತವರು ಈ ಜಿಲ್ಲೆ. ಭಾರತೀಯ ಶಿಲ್ಪಕಲೆಯ ತೊಟ್ಟಿಲು. ಪ್ರಯೋಗಾಲಯ ಎಂಬ ಹೆಗ್ಗಳಿಕೆಗೆ ಪಾತ್ರವಾಗಿರುವ ಅಂತರಾಷ್ಟ್ರೀಯ ಖ್ಯಾತಿ ಪಡೆದಿರುವ ವಿಶ್ವ ಪರಂಪರೆ ಯೋಜನೆಗೆ ಒಳಪಟ್ಟಿರುವ ಪಟ್ಟದಕಲ್ಲು. ಸುಂದರವಾದ ಗುಹಾಲಯಗಳಿರುವ ಬಾದಾಮಿ ಮಹಾಕೂಟ, ಬನಶಂಕರಿ ಮೊದಲಾದವನ್ನು ಹೆಸರಿಸಬಹುದು. ಈ ಜಿಲ್ಲೆಯವರಾದ ಬಿ.ಡಿ. ಜತ್ತಿ ಹಾಗೂ ಎಸ್.ಆರ್. ಕಂಠಿಯವ ರಂತಹ ಧೀಮಂತ ಮುಖ್ಯಮಂತ್ರಿಗಳನ್ನು ನೀಡಿದ ಕೀರ್ತಿಯೂ ಇದಕ್ಕೆ ಸಲ್ಲುತ್ತದೆ. ಅದರಲ್ಲೂ ಬಿ.ಡಿ. ಜತ್ತಿಯವರು ಪುದುಚೇರಿ, ಗುಜರಾತ್ ರಾಜ್ಯಗಳಿಗೆ ರಾಜ್ಯಪಾಲರಾಗಿ ಸೇವೆಸಲ್ಲಿಸಿರುವರಷ್ಟೇ ಅಲ್ಲದೆ ನಮ್ಮ ದೇಶದ ಉಪರಾಷ್ಟ್ರಪತಿಗಳಾಗಿದ್ದು, ಸ್ವಲ್ಪ ಕಾಲ ಹಂಗಾಮಿ ರಾಷ್ಟ್ರಪತಿಗಳಾಗಿಯೂ ಸೇವೆ ಸಲ್ಲಿಸಿರುವುದು ಉಲ್ಲೇಖಾರ್ಹ. ಹೀಗೆ ವೈವಿಧ್ಯತೆಗೆ ಹೆಸರಾಗಿರುವ ಜಿಲ್ಲೆಯು ಚಾರಿತ್ರಿಕವಾಗಿ ಸಾಂಸ್ಕೃತಿಕವಾಗಿ ಶ್ರೀಮಂತವಾಗಿದೆ.

ಹಾಗೆಯೇ ಚಿತ್ರಕಲೆಯ ಖ್ಯಾತಿಯಲ್ಲೂ ಜಿಲ್ಲೆ ಹಿಂದುಳಿದಿಲ್ಲ. ಜಿಲ್ಲೆಯ ಹಿರಿಯ ಕಲಾವಿದರೂ ಕರ್ನಾಟಕ ಲಲಿತಕಲಾ ಅಕಾಡೆಮಿ ಅಧ್ಯಕ್ಷರಾಗಿಯೂ ಪ್ರಸ್ತುತ ಚಿತ್ರಕಲಾ ಪರಿಷತ್‌ನ ಉಪಧ್ಯಾಕ್ಷ ರಾಗಿರುವ ಶ್ರೀ ಸೋಮಶೇಖರ ಸಾಲಿಯವರು ಇನ್ನೊರ್ವ ಕಲಾವಿದ ಹಾಗೂ ಕರ್ನಾಟಕ ಲಲಿತಕಲಾ

---

೨. ಆರ್. ಮುನಿಸ್ವಾಮಿ ಮು.ಸಂ. ವಿಜಾಪುರ ಜಿಲ್ಲಾ ಗ್ಯಾಸೆಟಿಯರ್, ಕರ್ನಾಟಕ ರಾಜ್ಯ ಸರ್ಕಾರ, ೧೯೬೬

ಅಕಾಡೆಮಿ ಅಧ್ಯಕ್ಷರಾಗಿದ್ದ ಕೆನ್ ಕಲಾಶಾಲೆ ಬೆಂಗಳೂರು ಸಂಸ್ಥಾಪಕ ದಿ. ಆರ್.ಎಂ. ಹಡಪದ್ ಹಾಗೂ ಸಾಹಿತ್ಯ ಮತ್ತು ಚಿತ್ರಕಲಾ ಕ್ಷೇತ್ರದಲ್ಲಿ ಉನ್ನತ ಸ್ಥಾನ ಸಂಪಾದಿಸಿರುವ ಡಾ. ಬಿ.ಕೆ. ಹಿರೇಮಠ ಹಿರಿಯ ತಲೆಮಾರು ಕಲಾವಿದರಾಗಿರುವ ವಿಜಯಸಿಂಧೂರ, ಮಹಾದೇವ ಕವಿಶೆಟ್ಟಿ ಬಾಗಲಕೋಟೆ ಜಿಲ್ಲೆಯವರು ಎನ್ನುವುದು ವಿಶೇಷ.

ಶಾಸನಗಳು

ಜಿಲ್ಲೆಯ ಇತಿಹಾಸವನ್ನು ಪುನರ‍್ರಚಿಸುವಲ್ಲಿ ಶಾಸನಗಳೇ ಪ್ರಧಾನ ಆಕರಗಳಾಗಿದ್ದು, ಕ್ರಿ.ಶ. ಆರನೆಯ ಶತಮಾನದಿಂದ ೧೦ನೆಯ ಶತಮಾನಕ್ಕೆ ಸೇರಿದ ಕನ್ನಡ, ಸಂಸ್ಕೃತ, ಮರಾಠಿ, ಪರ್ಷಿಯನ್, ಅರೇಬಿಕ್ ಹಾಗೂ ಇಂಗ್ಲಿಷ್ ಭಾಷೆಗಳಲ್ಲಿರುವ ಸುಮಾರು ೧,೩೦೦ಕ್ಕೂ ಹೆಚ್ಚು ಶಾಸನಗಳು ಜಿಲ್ಲೆಯಿಂದ ಈವರೆಗೆ ವರದಿಯಾಗಿದ್ದು, ಅವುಗಳಲ್ಲಿ ಹತ್ತಾರು ತಾಮ್ರ ಶಾಸನಗಳನ್ನು ಬಿಟ್ಟರೆ ಉಳಿದವು ಶಿಲಾಶಾಸನಗಳಾಗಿವೆ. ಈ ಅವಧಿಯಲ್ಲಿ ಜಿಲ್ಲೆಯ ಮೇಲೆ ನಿಯಂತ್ರಣ ಹೊಂದಿದ್ದ ಬಾದಾಮಿ ಚಾಲುಕ್ಯ, ರಾಷ್ಟ್ರಕೂಟ, ಕಲ್ಯಾಣದ ಚಾಲುಕ್ಯ, ಕಳಚೂರಿ, ಸೇಲುಣ, ವಿಜಯನಗರ, ಬಹುಮನಿ, ಆದಿಲ್‌ಶಾಹಿ ಹಾಗೂ ಬ್ರಿಟೀಷ್ ಆಡಳಿತಕ್ಕೆ ಸಂಬಂಧಿಸಿದಂತೆ ಅಳರಸರು, ಮಾಂಡಲೀಕರು, ದಂಡ ನಾಯಕರು, ಸ್ಥಳೀಯ ಅಧಿಕಾರಿಗಳು ಗಣ್ಯ ವ್ಯಕ್ತಿಗಳೇ ಮುಂತಾದವರು ನೀಡಿರುವ ಈ ಶಾಸನಗಳಲ್ಲಿ ಹೆಚ್ಚಿನವು ದತ್ತಿ ಶಾಸನಗಳಾಗಿವೆ. ಅವುಗಳ ನೆರವಿನಿಂದ ಜಿಲ್ಲೆಯ ರಾಜಕೀಯ, ಸಾಮಾಜಿಕ, ಆರ್ಥಿಕ, ಧಾರ್ಮಿಕ ಹಾಗೂ ಸಾಂಸ್ಕೃತಿಕ ಅಂಶಗಳನ್ನು ತಿಳಿಯಬಹುದಾಗಿದೆ.

ನಾಣ್ಯಗಳು

ಹಿರೇಮಾಗಿ, ಐಹೊಳೆ, ಬಾದಾಮಿ, ಪಟ್ಟದಕಲ್ಲು, ಕಲಾದಗಿ, ಗಲಗಲಿ, ಕಾತ್ರಾಳ, ಹುನಗುಂದ, ಹನಗಂಡಿ, ಹಿಪ್ಪರಗಿ, ಕೋಲೂರುಗಳಿಂದ ಬಂಗಾರ, ಬೆಳ್ಳಿ ಹಾಗೂ ತಾಮ್ರದ ಪ್ರಾಚೀನ ನಾಣ್ಯ ಸಂಗ್ರಹಗಳು ವರದಿಯಾಗಿವೆ. ಐಹೊಳೆಯಲ್ಲಿ ಶಾತವಾನ ಹಾಗೂ ಮಹಾರಥಿ ಅರಸರ ಒಂದೆರಡು ನಾಣ್ಯಗಳು ಪತ್ತೆಯಾಗಿವೆ. ಹಿರೇಮಾಗಿಯಲ್ಲಿ ಪತ್ತೆಯಾಗಿರುವ ಪೋರ್ಟಿನ್ ನಾಣ್ಯಗಳ ಮುಮ್ಮುಖದಲ್ಲಿ ವೃಷಭ ಇದ್ದು ಹಿಮ್ಮುಖದಲ್ಲಿ ಗುಡ್ಡ, ಅರ್ಧಚಂದ್ರ, ಶ್ರೀವತ್ಸ ಬೇಲಿ ಆವೃತ್ತ ವೃಕ್ಷ ಅಥವಾ ಗುಡ್ಡ ಹಾಗೂ ನದಿಯ ಚಿತ್ರಗಳಿವೆ. ಒಂದು ನಾಣ್ಯದ ಮೇಲೆ ಸದರ ಮಹಾರಥಿಸ ಎಂಬ ಬ್ರಾಹ್ಮಿ ಅಲೇಖವಿದ್ದು ಇವು ಮಹಾರಠಿ ನಾಣ್ಯಗಳೆಂದು ಪಾಡಿಗಾರ ಅಭಿಪ್ರಾಯಪಡುತ್ತಾರೆ. ಕಾತ್ರಳದಿಂದ ವರದಿಯಾಗಿರುವ ಬಂಗಾರದ ೪೮ ನಾಣ್ಯಗಳಲ್ಲಿ, ೨೨ ನಾಣ್ಯಗಳನ್ನು ರೋಮನ್ ನಾಣ್ಯಗಳೆಂದು

ಅನುಮಾನದೊಂದಿಗೆ ಗುರುತಿಸಲಾಗಿದೆ. ಅವುಗಳಲ್ಲಿ ಒಂದನ್ನು ಬೈಜಾಂಟೈನ್ ದೊರೆ ಒಂದನೆಯ ಲಿಯೋನ(ಕ್ರಿ.ಶ. ೪೫೭-೪೭೪)ದಿರಬಹುದೆಂದು ಅನುಮಾನಿಸಲಾಗಿದೆ. ಉಳಿದ ನಾಣ್ಯಗಳನ್ನು ಬಾಂಬೆಯ ಪ್ರಿನ್ಸ್ ಆಫ್ ವೇಲ್ಸ್ ವಸ್ತುಸಂಗ್ರಹಾಲಯವೂ ಸೇರಿದಂತೆ ಇತರೆ ವಸ್ತು ಸಂಗ್ರಹಾಲಯಗಳಿಗೂ ನೀಡಲಾಗಿದೆಯೆಂದು ವರದಿಯಾಗಿದ್ದು, ಹೆಚ್ಚಿನ ವಿವರ ಲಭ್ಯವಿಲ್ಲ. ಆದರೂ ಟಾಲೆಮಿಯ 'ಎ ಗೈಡ್ ಟು ದ ಜಿಯಾಗ್ರಫಿ' ಗ್ರಂಥದಲ್ಲಿ ಜಿಲ್ಲೆಯ ಬಾದಾಮಿ, ಪಟ್ಟದಕಲ್ಲು ಮುಂತಾದ ಪಟ್ಟಣಗಳು ಉಲ್ಲೇಖಿತಗೊಂಡಿವೆ ಎಂಬ ಅಭಿಪ್ರಾಯದ ಹಿನ್ನೆಲೆಯಲ್ಲಿಕಾತ್ರಾಳಿನ ರೋಮನ್ ನಾಣ್ಯಗಳು ಮಹತ್ವ ಪಡೆಯುತ್ತವೆ.

ಕೋಲೂರಿನಲ್ಲಿ ಪತ್ತೆಯಾಗಿರುವ ಬೆಳ್ಳಿಯ ನಾಣ್ಯದ ಮುಮ್ಮುಖದ ಮೇಲೆ ಗರ್ಜಿಸುತ್ತಿರುವ ಸಿಂಹ ಇದ್ದು, ಹಿಮ್ಮುಖದಲ್ಲಿ ಶಂಖ, ದೀಪಗಳ ಜೊತೆಗೆ ಸುಮಾರು ೬-೭ನೆಯ ಶತಮಾನಕ್ಕೆ ಸೇರಿದ ಲಿಪಿ ಲಕ್ಷಣಗಳುಳ್ಳ 'ಶ್ರೀ ಪೃಥ್ವಿ' ಎಂಬ ಉಲ್ಲೇಖವಿದೆ. ಇದನ್ನು ಪಾಡಿಗಾರ ಬಾದಾಮಿ ಚಾಲುಕ್ಯರ ನಾಣ್ಯವೆಂದು ತರ್ಕಿಸಿದ್ದಾರೆ. ಐಹೊಳೆಯಿಂದ ವರದಿಯಾಗಿರುವ ೧೧೦ ಬಂಗಾರದ ನಾಣ್ಯಗಳು ಗಂಗ ಮತ್ತು ಕಲ್ಯಾಣದ ಚಾಲುಕ್ಯರ ಕಾಲದ್ದೆಂದು ದಾಖಲಾಗಿದೆ. ಮಲಘಾಣದಲ್ಲಿ ಪತ್ತೆಯಾಗಿರುವ ಚಿನ್ನದ ಆರು ನಾಣ್ಯಗಳ ಮುಮ್ಮುಖದಲ್ಲಿ 'ಶ್ರೀ ಜಗದೇಕಮಲ್ಲ' ಎಂಬ ಉಲ್ಲೇಖವಿದ್ದು. ಇವನ್ನು ಕಲ್ಯಾಣದ ಚಾಳುಕ್ಯ ಅರಸ ಇಮ್ಮಡಿ ಜಗದೇಕಮಲ್ಲನ ನಾಣ್ಯಗಳೆಂದು ಪರಿಗಣಿಸಲಾಗಿದೆ. ಹುನಗುಂದ ದಿಂದ ವರದಿಯಾಗಿರುವ ಗುಪ್ತನಿಧಿಯಲ್ಲಿ ಸೇರುವ ರಾಮಚಂದ್ರನ ಹನ್ನೊಂದು ನಾಣ್ಯಗಳು ಸಿಕ್ಕಿವೆ. ಬಹುಮನಿ ಅರಸರ ಕಾಲದ ಸುಮಾರು ೮೨೦ ಚಿನ್ನ, ಬೆಳ್ಳಿ ಹಾಗೂ ತಾಮ್ರದ ನಾಣ್ಯಗಳು ಬಿಜಾಪುರ ಹಾಗೂ ಹನಗಂಡಿಗಳಲ್ಲಿ ಪತ್ತೆಯಾಗಿವೆ. ಮೊಗಲ್ ಸುಲ್ತಾನ ಔರಂಗಜೇಬಿನ ಕಾಲದ ಚಿನ್ನದ ನಾಣ್ಯವೊಂದು ಕೊಲ್ಹಾರದಲ್ಲಿ ಲಭಿಸಿದ್ದು ಬೆಳ್ಳಿ ಹಾಗೂ ತಾಮ್ರದ ನಾಣ್ಯಗಳು ಕ್ರಮವಾಗಿ ಕಾತ್ರಾಳದಲ್ಲಿ ಪತ್ತೆಯಾಗಿವೆ. ಮರಾಠರ ಕಾಲಕ್ಕೆ ಸೇರಿದ ಬೆಳ್ಳಿ ನಾಣ್ಯಗಳು ಗಲಗಲಿಗಳಿಂದ ವರದಿಯಾಗಿದ್ದು ಈಸ್ಟ್ ಇಂಡಿಯಾ ಕಂಪನಿಯ ನಾಣ್ಯಗಳು ಗಲಗಲಿ, ಕಾತ್ರಾಳಗಳಿಂದ ವರದಿಯಾಗಿದ್ದು ವಿವಿಧ ಸಂಸ್ಥಾನಗಳಿಗೆ ಸೇರಿದ ಕೆಲವು ನಾಣ್ಯಗಳು ಕಾತ್ರಾಳದ ಗುಪ್ತನಿಧಿ ಸಂಗ್ರಹದಲ್ಲಿವೆ.

ವಾಸ್ತುಶಿಲ್ಪ

ಜಿಲ್ಲೆಯ ಇತಿಹಾಸವನ್ನು ಗ್ರಹಿಸುವಲ್ಲಿ ಪ್ರಾಚೀನ ಕಾಲದ ವಾಸ್ತುಶಿಲ್ಪಾವಶೇಷಗಳೂ ಪ್ರಮುಖ ಆಕರಗಳಾಗಿವೆ. ಬಾದಾಮಿ ಚಾಳುಕ್ಯರಿಂದ ಹಿಡಿದು ಮುಧೋಳ ಜಮಖಂಡಿ ಮುಂತಾದ ಸ್ಥಾನಿಕ ರಾಜಮನೆತನಗಳವರೆಗೆ ಜಿಲ್ಲೆಯ ಉದ್ದಗಲಕ್ಕೂ ಹರಡಿಕೊಂಡಿರುವ ವಾಸ್ತುಶಿಲ್ಪಾವಶೇಷಗಳಿಂದ ಗತ

ಸಮಾಜದ ವಿವಿಧ ಅಂಶಗಳನ್ನು ಅರಿಯಬಹುದಾಗಿದೆ. ಬಾದಾಮಿ ಐಹೊಳೆ, ಪಟ್ಟದಕಲ್ಲು ಶಿರೂರು. ಹಳ್ಳೂರು ಮುಂತಾದೆಡೆಗಳಲ್ಲಿರುವ ದೇವಾಲಯಗಳ ಭಿತ್ತಿಗಳನ್ನು ಅಲಂಕರಿಸಿರುವ ಉಬ್ಬುಶಿಲ್ಪ ಕೆತ್ತನೆಗಳು ಅಂದಿನ ಸಾಮಾಜಿಕ ಜೀವನವನ್ನು ಪ್ರತಿಬಿಂಬಿಸುತ್ತವೆ. ಬಾದಾಮಿಯಲ್ಲಿ ಮುಸ್ಲಿಂ ವಾಸ್ತುಶಿಲ್ಪಾವಶೇಷಗಳೂ ಈ ನಿಟ್ಟಿನಲ್ಲಿ ನೆರವಾಗುತ್ತವೆ. ಅದರಂತೆ ಜಿಲ್ಲೆಯಾದ್ಯಂತ ಕಂಡುಬರುವ ವೀರಗಲ್ಲು, ಮಾಸ್ತಿಕಲ್ಲುಗಳು, ಬಾದಾಮಿ ಚಾಲುಕ್ಯರ ಕಾಲಕ್ಕೆ ಸೇರಿದ ಗೋಸಾಸಕಲ್ಲು ಹಾಗೂ ಲಜ್ಜಗೌರಿ ಶಿಲ್ಪಗಳು, ಆಯಾ ಕಾಲದ ಸಾಮಾಜಿಕ, ಧಾರ್ಮಿಕ ಆಚರಣೆಗಳ ಬಗ್ಗೆ ತಿಳಿಸುತ್ತದೆ.

ವರ್ಣಚಿತ್ರ

ಶಿಲಾಯುಗ ಸಂಸ್ಕೃತಿಕ ವರ್ಣಚಿತ್ರಗಳು, ಕಲಹಳ್ಳಿ, ಕುಟಿಗನಕೇರಿ ಮುಂತಾದೆಡೆಗಲ್ಲಿ ಪತ್ತೆಯಾಗಿದ್ದು, ಬಾದಾಮಿ, ಐಹೊಳೆ, ಗುಳೇದಗುಡ್ಡ ಮುಂತಾದ ಸ್ಥಳಗಳಲ್ಲಿ ಇತಿಹಾಸ ಕಾಲದ ವರ್ಣಚಿತ್ರಗಳಿವೆ. ಅವುಗಳ ನೆರವಿನಿಂದ ಜಿಲ್ಲೆಯ ಚಿತ್ರಕಲಾ ಇತಿಹಾಸವನ್ನು ಅರಿಯಬಹುದಾಗಿದೆ.

ಐಹೊಳೆ ಬಾದಾಮಿಗಳಿಗೆ ಸಂಬಂಧಿಸಿದಂತೆ ಇರುವ ಇಲ್ವಲವಾತಾಪಿ ದೈತ್ಯ ಸೋದರರ ಪೌರಾಣಿಕ ಕಥೆ ಕುತೂಹಲವಾಗಿದೆ. ವಿಂಧ್ಯಪರ್ವತದಿಂದ ದಕ್ಷಿಣಕ್ಕೆ ವಾತಾಪಿ ಪ್ರದೇಶದಲ್ಲಿದ್ದ ಈ ಸೋದರರಲ್ಲಿ ಇಂದ್ರಸಮಾನ ಪುತ್ರನನ್ನು ಪಡೆಯಬೇಕೆಂಬ ಇಲ್ವಲನ ಅಪೇಕ್ಷೆಯನ್ನು ಬ್ರಾಹ್ಮಣರು ನಿರಾಕರಿಸಿದ್ದರಿಂದ, ಬ್ರಾಹ್ಮಣ ದ್ವೇಷಿಗಳಾದ ಈ ಸಹೋದರರು ತಮ್ಮಲ್ಲಿಗೆ ಬಂದ ಬ್ರಾಹ್ಮಣರನ್ನು ಅತಿಥ್ಯ ನೀಡುವ ನೆಪದಲ್ಲಿ ಕರೆತರುತ್ತಿದ್ದರು. ಅಣ್ಣ ವಾತಾಪಿ ಟಗರಿನ ರೂಪ ತಾಳಿ ಅಥಿತಿಗಳಿಗೆ ಆಹಾರವಾಗುತ್ತಿದ್ದ. ಅತಿಥಿ ಆಹಾರ ಸೇವಿಸಿದ ನಂತರ ಇಲ್ವಲ ವಾತಾಪಿಯನ್ನು ಹೊರಗೆ ಬರುವಂತೆ ಕರೆದಾಗ ಟಗರಿನ ರೂಪದಲ್ಲಿ ಆಹಾರವಾಗಿ ಅತಿಥಿಯ ಹೊಟ್ಟೆ ಸೇರಿದ್ದ ವಾತಾಪಿ, ಅತಿಥಿಯ ಹೊಟ್ಟೆಯನ್ನು ಸೀಳಿಕೊಂಡು ಹೊರಬರುತ್ತಿದ್ದ. ಅದರಂತೆ ಉತ್ತರದಿಂದ ಬಂದಿದ್ದ ಅಗಸ್ತ್ಯರ ಮಹಿಮೆಯನ್ನು ಅರಿಯದ ಈ ಸಹೋದರರು, ತಮ್ಮ ಕುಟಿಲೋಪಾಯದಿಂದ ಅಗಸ್ತ್ಯರನ್ನು ಸಂಹರಿಸಲು ಮುಂದಾದರು. ಆದರೆ ದಿವ್ಯಶಕ್ತಿಯಿಂದ ಇದನ್ನು ಮುಂದಾಗಿ ಮನಗಂಡ ಅಗಸ್ತ್ಯರು, ಇಲ್ವಲ ನೀಡಿದ ಆಹಾರವನ್ನು ಸೇವಿಸಿ 'ವಾತಾಪಿ ಜೀರ್ಣೋದ್ಭವ' ಎಂದು ಹೇಳಿ ಆ ಸಹೋದರರ ವಂಚನೆಗೆ ಅಂತ್ಯ ಹಾಡಿದರು. ಇದರಿಂದ ದಿಕ್ಕೆಟ್ಟ ಇಲ್ವಲ, ಋಷಿಗಳಿಗೆ ಮೊರೆಹೊಕ್ಕು ತಮ್ಮನ್ನು ಉದ್ಧರಿಸಬೇಕೆಂದು ಪ್ರಾರ್ಥಿಸಿದ ಅದರಂತೆ ಇಲ್ವಲ ಐಹೊಳೆ ಬಳಿ ಗುಡ್ಡವಾದರೆ ವಾತಾಪಿ ಬಾದಾಮಿ ಬಳಿ ಗುಡ್ಡವಾದ ಅಗಸ್ತ್ಯರ ನೆನಪಿಗಾಗಿ ಇಂದಿಗೂ ಬಾದಾಮಿಯಲ್ಲಿ 'ಅಗಸ್ತ್ಯ ಹೊಂಡ' ಇದೆ.

ಇತಿಹಾಸ ಪೂರ್ವಕಾಲ

ಇತಿಹಾಸ ಪೂರ್ವಕಾಲಕ್ಕೆ ಸೇರಿದ ಗವಿ ವರ್ಣಚಿತ್ರ ಬಯಲುಬಂಡೆ ರೇಖಾಚಿತ್ರಗಳು ಜಿಲ್ಲೆಯ ದಕ್ಷಿಣ ಭಾಗದಿಂದ ವರದಿಯಾಗಿದೆ. ಇವುಗಳಲ್ಲಿ ಹೆಚ್ಚಿನವು ಕಲ್ಲಾಸರೆಗಳಲ್ಲಿ ಕಂಡುಬಂದಿದ್ದು. ಬಯಲು ಬಂಡೆ ಚಿತ್ರಗಳು ಕಡಿಮೆ ಪ್ರಮಾಣದಲ್ಲಿ ಲಭಿಸಿವೆ. ಇವುಗಳ ಪ್ರಾಚೀನತೆಯನ್ನು ಗರಿಷ್ಠ ಅಂತ್ಯ ಹಳೆ ಶಿಲಾಯುಗದಿಂದ ಕನಿಷ್ಠ ಬೃಹತ್ ಶಿಲಾಸಾಂಸ್ಕೃತಿಯಷ್ಟು ಹಿಂದಕ್ಕೆ ಗುರುತಿಸಬಹುದಾಗಿದೆ. ಈ ಪ್ರದೇಶದ ಇತರೆಡೆಗಳಲ್ಲಿ ಶಿಲಾತಾಮ್ರಯುಗ ಬೃಹತ್ ಶಿಲಾಯುಗಗಳ ಕಾಲಕ್ಕೆ ಸೆರಿದ ಮಡಕೆಗಳ ಮೇಲಿನ ವೈವಿಧ್ಯಮಯವಾದ ವರ್ಣಚಿತ್ರಗಳು ಗಿರಿದ ರೇಖಾಚಿತ್ರಗಳು ಹಾಗೂ ಸುಡಾವೆ ಗೊಂಬೆಗಳೂ, ಲಭಿಸಿರುವುದು ಗಮನಾರ್ಹವಾಗಿದೆ.

ಬಾದಾಮಿ, ಹೊಸ ಮಹಾಕೂಟ, ಕುಟುಕನಕೇರಿ, ಐಹೊಳೆಗಳಲ್ಲಿ ಸೂಕ್ಷ್ಮ ಶಿಲಾಯುಗದಿಂದ ಹಿಡಿದು ಬಾದಾಮಿ ಚಾಲುಕ್ಯರ ಕಾಲದವರೆಗಿನ ಕೆಲವು ಅಪೂರ್ವ ಗವಿ ವರ್ಣಚಿತ್ರಗಳು ಶೋಧವಾಗಿದೆ. ಬಾದಾಮಿಯಲ್ಲಿರುವ ಎರಡು ವಿಚಿತ್ರ ರೇಖಾಚಿತ್ರಗಳೂ ಕೂಡ ಸೂಕ್ಷ್ಮ ಶಿಲಾಯುಗ ಕಾಲಕ್ಕೆ ಸೇರಿದ್ದು, ಶಿಡ್ಲಫಡಿಯಲ್ಲಿರುವ ಬಿಳಿ ಬಣ್ಣದ ಪಕ್ಷಿ, ಹಾವು ಗಮನಾರ್ಹವಾಗಿದೆ. ಕುಟುಕನಕೇರಿಯಲ್ಲಿರುವ ಮಾನವಾಕೃತಿ ಹಾಗೂ ಪ್ರಾಣಿಯ ರೇಖಾಚಿತ್ರಗಳು ಸೂಕ್ಷ್ಮ ಶಿಲಾಯುಗ ಕಾಲದ್ದಾಗಿವೆ. ಐಹೊಳೆಯಲ್ಲಿ ಮೂರೆಡೆಗಳಲ್ಲಿ ಪ್ರಾಗೈತಿಹಾಸಿಕ ವರ್ಣಚಿತ್ರಗಳಿದ್ದು ಅವುಗಳಲ್ಲಿ ಕೆಮ್ಮಣ್ಣಿನಲ್ಲಿ ಬಿಡಿಸಿದ, ಮೈಮೇಲೆ ಪಟ್ಟೆಯಿರುವ ಪ್ರಾಣಿಚಿತ್ರವಿದ್ದು, ಇದು ಸೂಕ್ಷ್ಮ ಶಿಲಾಯುಗಕ್ಕೆ ಸೇರಿದ್ದು, ಸಿದ್ದನಕೊಳ್ಳದಲ್ಲಿ ಪತ್ತೆ ಹಚ್ಚಿರುವ ಚರ್ಟ್‌ಕಲ್ಲಿನ ಮೇಲೆ, ಊರಿ ಬಿಡಿಸಿರುವ ಸೂಕ್ಷ್ಮ ಶಿಲಾಯುಗ ಕಾಲದ ರೇಖಾಚಿತ್ರವಿದೆ. ಇದೇ ರೀತಿ ಕುಲ್ಹೊಳ್ಳಿಯಲ್ಲಿ ಬೃಹತ್ ಶಿಲಾಸಂಸ್ಕೃತಿಗೆ ಸೇರಿದ ಗೂಳಿ, ಆಕಳು, ಜಿಂಕೆ, ಮನುಷ್ಯ ಮುಂತಾದ ಗೀರು ರೇಖೆಗಳು ಸೂಕ್ಷ್ಮವಾಗಿದ್ದು, ಕೋಡುಗಳು ಮುಂದಕ್ಕೆ ಬಾಗಿವೆ. ಇದರಲ್ಲಿ ಸ್ಥೂಲಕ್ಕಿಂತ ಸೂಕ್ಷ್ಮಭಾವಕ್ಕೆ ಹೆಚ್ಚು ಒತ್ತಿದೆ. ಇವು ಶಿಲಾ ಮಾತ್ರ ಇಲ್ಲದೇ ಬೃಹತ್ ಶಿಲಾಸಂಸ್ಕೃತಿ ಜನರ ರಚನೆಗಳಾಗಿರಬೇಕೆಂದು ಸುಂದರ ಅವರು ಅಭಿಪ್ರಾಯವಡುತ್ತಾರೆ. ಸೀತಿಡೋಣಿಯ ಕಲ್ಲಾನರೆಯೊಂದರ ಮೇಲೆ ಪ್ರಾಯಶಃ ಬಲೆಯಂತಹ ರೇಖಾಚಿತ್ರವಿದ್ದು ಅದರೊಳಗೆ ಪ್ರಾಯಶಃ ಕೋಣದ ರೇಖಾಚಿತ್ರವಿದೆ. ಇದು ಅಲ್ಟಮಿರಾ ಗವಿಯ ಕೋಣವನ್ನು ಹೋಲುತ್ತದೆ. ಈ ರೇಖಾಚಿತ್ರವು ಬಲೆ ಬೀಸಿ ಪ್ರಾಣಿಗಳನ್ನು ಬೇಟೆಯಾಡುವ ವಿಧಾನವನ್ನು ಸೂಚಿಸುತ್ತಿದ್ದು, ಯಶಸ್ವಿ ಬೇಟೆಗಾಗಿ ಶಿಲಾಯುಗದ ಮಾನವರು ಇದನ್ನು ಚಿತ್ರಿಸಿರುವರೆಂದು ಊಹಿಸಬಹುದೇನೋ. ಜಿಲ್ಲೆಯಲ್ಲಿ ಪ್ರಾಗಿತಿಹಾಸ ಚಿತ್ರಕಲೆ ಸಮೃದ್ಧವಾಗಿದ್ದು, ಬಾದಾಮಿ, ಪಟ್ಟದಕಲ್ಲು ನಡುವೆ ಇರುವ ಅರೆಗುಡ್ಡ, ಹಿರೇಗುಡ್ಡ ಪರಿಸರದಲ್ಲಿ

ವರ್ಣಚಿತ್ರಗಳಿರುವ ಸುಮಾರು ೧೦ ನೆಲೆಗಳನ್ನು ಸುಂದರ, ಇರ್ವಿನ್ ನ್ಯೂಮೇಯರ್ ಹಾಗೂ ಯಶೋಧರ ಮಠಪಾಲ್ ಪತ್ತೆಹಚ್ಚಿದ್ದಾರೆ. ಇವು ಶಿಲಾಯುಗ, ತಾಮ್ರ ಶಿಲಾಯುಗ ಸಂಸ್ಕೃತಿ ಕಾಲದ ರಚನೆಗಳಾಗಿವೆ. ಬಾದಾಮಿಯ ಗವಿಯೊಂದರಲ್ಲಿ ಕಪ್ಪು ಬಿಳಿ ವರ್ಣಗಳಲ್ಲಿ ರಚಿಸಲ್ಪಟ್ಟಿರುವ ಪ್ರಾಣಿ, ಪಕ್ಷಿ ಹಾಗೂ ಮಾನವರ ಚಿತ್ರಗಳು ದ್ವಿವರ್ಣದಲ್ಲಿರುವ ಅಪೂರ್ವ ಚಿತ್ರಗಳಾಗಿವೆ. ಅಂತ್ಯ ಹಳೆ ಶಿಲಾಯುಗಕ್ಕೆ ಗುರುತಿಸಬಹುದಾದ ಇದೊಂದು ಅಪೂರ್ವ ಶೋಧವೆಂದು ವಿದ್ವಾಂಸರು ಪರಿಗಣಿಸಿದ್ದಾರೆ.

ಬಾಗಲಕೋಟೆಯ ಪ್ರಾಕೃತಿಕ ನೋಟ

ಬಾಗಲಕೋಟೆ ಜಿಲ್ಲೆಯ ದಖನ್‌ಪ್ರಸ್ಥಭೂಮಿಯ ಒಣ ಮತ್ತು ಶುಷ್ಕ ಪ್ರದೇಶದಲ್ಲಿದೆ. ದಕ್ಷಿಣ ಕರಾವಳಿಯಿಂದ ಸುಮಾರು ೨೦೦ ಕಿ.ಮೀ.ಗಳಷ್ಟು ದೂರದಲ್ಲಿರುವ ಜಿಲ್ಲೆಯು ಸಮುದ್ರಮಟ್ಟದಿಂದ ಸರಾಸರಿ ೬೨೫ ಮೀ. ಎತ್ತರದಲ್ಲಿದೆ. ಜಿಲ್ಲೆಯ ಉತ್ತರ ಮತ್ತು ಈಶಾನ್ಯಕ್ಕೆ ಬಿಜಾಪುರ ಜಿಲ್ಲೆ, ದಕ್ಷಿಣ ಮತ್ತು ನೈಋತ್ಯಕ್ಕೆ ಗದಗ ಜಿಲ್ಲೆ, ಪೂರ್ವಕ್ಕೆ ರಾಯಚೂರು ಮತ್ತು ಗುಲಬರ್ಗಾ ಜಿಲ್ಲೆಗಳು. ಪಶ್ಚಿಮ ಮತ್ತು ವಾಯುವ್ಯಕ್ಕೆ ಬೆಳಗಾವಿ ಜಿಲ್ಲೆ ಹಾಗೂ ಆಗ್ನೇಯಕ್ಕೆ ಕೊಪ್ಪಳ ಜಿಲ್ಲೆಗಳಿವೆ. ಜಿಲ್ಲೆಯ ಉತ್ತರ ಭಾಗ ಕೃಷ್ಣಾ ಕಣಿವೆಯ ದಕ್ಷಿಣ ಪ್ರದೇಶವಾದರೆ, ದಕ್ಷಿಣ ಭಾಗ ಮಲಪ್ರಭಾ ಕಣಿವೆ ಪ್ರದೇಶವಾಗಿದೆ. ಜಿಲ್ಲೆಯ ಮಧ್ಯಭಾಗದಲ್ಲಿ ಘಟಪ್ರಭಾ ಕಣಿವೆಯಿದೆ. ಕರ್ನಾಟಕ ರಾಜ್ಯದ ಉತ್ತರ ಭಾಗದಲ್ಲಿರುವ ಬಾಗಲಕೋಟೆ ಜಿಲ್ಲೆಯ ಭೂಪ್ರದೇಶವು ೭೪.೫೯ ಪೂರ್ವ ರೇಖಾಂಶದಿಂದ ೭೬.೨೨. ಪೂರ್ವ ರೇಖಾಂಶಗಳ ಮಧ್ಯೆ ಹಾಗೂ ೧೫.೪೮ ಉತ್ತರ ಅಕ್ಷಾಂಶದಿಂದ ೧೬.೫೩ ಉತ್ತರ ಅಕ್ಷಾಂಶಗಳ ಮಧ್ಯೆ ಹರಡಿಕೊಂಡಿದೆ. ಜಿಲ್ಲೆಯ ಒಟ್ಟು ವಿಸ್ತೀರ್ಣ ೬೫೪೭.೯೨ ಚ.ಕಿ.ಮೀ.ಗಳಿಷ್ಟಿದೆ. ಜಿಲ್ಲೆಯಲ್ಲಿ ಬೆಟ್ಟಗುಡ್ಡಗಳ ನಡುವೆ ನದಿಕಣಿವೆಗಳಿರುವುದು ಒಂದು ವಿಶೇಷ. ಹುನಗುಂದ ಬಯಲನ್ನು ಬಿಟ್ಟರೆ ಹೆಚ್ಚು ಕಡಿಮೆ ಇಡೀ ಜಿಲ್ಲೆ ಬೆಟ್ಟಗಳಿಂದ ಕೂಡಿದೆ.

ಜಿಲ್ಲೆಯ ಹವಾಮಾನ ಆರೋಗ್ಯಕರವಾಗಿದೆ. ಡಿಸೆಂಬರ್ ತಿಂಗಳ ಚಳಿಗಾಲದ ಅವಧಿಯಲ್ಲಿ ಕನಿಷ್ಠ ಉಷ್ಣಾಂಶ ೧೫° ಡಿಗ್ರಿ ಸೆಂಟಿಗ್ರೇಡ್ ಇರುತ್ತದೆ. ಮೇ ತಿಂಗಳ ಬೇಸಿಗೆ ಅವಧಿಯಲ್ಲಿ ಗರಿಷ್ಠ ತಾಪಮಾನ ೩೯° ಡಿಗ್ರಿ ಸೆಂಟಿಗ್ರೇಡ್‌ವರೆಗೆ ಇರುತ್ತದೆ. ಜಿಲ್ಲೆಯ ವಾರ್ಷಿಕ ಮಳೆಯ ಪ್ರಮಾಣ ಸರಾಸರಿ ೫೯೧ ಮೀ.ಮೀ. ಜಿಲ್ಲೆಯಲ್ಲಿ ಅರಣ್ಯ ಸಂಪತ್ತು ಗಮನಾರ್ಹವಾಗಿದೆ. ಜಿಲ್ಲೆಯ ಒಟ್ಟು ವಿಸ್ತೀರ್ಣದ ಶೇ. ೧೨.೩೭ರಷ್ಟು ಅಂದರೆ ೮೧೦೮೧ ಹೆಕ್ಟೇರು ಪ್ರದೇಶದಲ್ಲಿ ಅರಣ್ಯವಿದೆ. ಮೂರು ನದಿಗಳಾದ ಕೃಷ್ಣಾ, ಘಟಪ್ರಭಾ ಮತ್ತು ಮಲಪ್ರಭಾ ಈ ಜಿಲ್ಲೆಯ ಜನತೆಯ ಜೀವನಾಡಿಗಳಾಗಿವೆ. ಶಾಸನಗಳಲ್ಲಿ ಪೆರ್ದೊರೆ, ಸಂಸ್ಕೃತದಲ್ಲಿ ಕೃಷ್ಣವೇಣಿ ಹಾಗೂ ಜಾನಪದದಲ್ಲಿ ಹಿರಿಹೊಳೆ ಎಂದು

ಕರೆಯಲಾಗುವ ಕೃಷ್ಣೆಯು ಜಿಲ್ಲೆಯ ಪ್ರಮುಖ ನದಿಯಾಗಿದೆ. ಜಿಲ್ಲೆಯ ಖನಿಜಸಂಪತ್ತು ಸಮೃದ್ಧವಾಗಿದೆ. ಲೋಕಾಪುರ, ಕಲಾದಗಿ, ಬಾಗಲಕೋಟೆ, ಭಾಗಗಳಲ್ಲಿ ಸುಣ್ಣಶಿಲೆ, ರಾಮತಾಳ ಹುನಗುಂದ ಭಾಗದಲ್ಲಿ ಕಬ್ಬಿಣದ ಅದಿರು, ಖಜ್ಜಿಡೋಣಿ, ಗದ್ದನಕೇರಿ ಸಮೀಪದ ಪ್ರದೇಶದಲ್ಲಿರುವ ಸುಣ್ಣಶಿಲೆಗಳಲ್ಲಿ ತಾಮ್ರ ಸಂಚಯನದ ಮಚ್ಚೆಗಳಿರುವುದು ಪತ್ತೆಯಾಗಿದೆ. ಇಲಾಳ ಭಾಗದಲ್ಲಿ ಕಾಗೆ ಬಂಗಾರದ ಸಂಚಯವಿದೆ. ಯಲ್ಲನಹಟ್ಟಿ, ಯಳ್ಳಿಗುತ್ತಿ ಭಾಗದಲ್ಲಿ ಬಿರುಸಾದ ಎಳೆಗಳುಳ್ಳ ಕಲ್ನಾರಿನ ಶಿಲೆಗಳಿವೆ. ಬೆನಕಟ್ಟಿ, ಮಹಾಕೂಟ, ಮುಚಖಂಡಿ, ಗುಳೇದಗುಡ್ಡ ಬೆಟ್ಟ ಪ್ರದೇಶಗಳು ದಟ್ಟ ಹಸಿರಿನಿಂದ ಕಂಗೊಳಿಸುತ್ತವೆ.

ಸಾಂಸ್ಕೃತಿಕ ನೋಟ

ಪ್ರಸ್ತುತ ಜಿಲ್ಲೆಯು ಸಾಂಸ್ಕೃತಿಕ ಶ್ರೀಮಂತಿಕೆಯಲ್ಲಿ ಕನ್ನಡ ನಾಡಿನಲ್ಲಿಯೇ ಮಾದರಿಯೆನಿಸಿದೆ. ಬಾದಾಮಿ ಬನಶಂಕರಿ ಕ್ಷೇತ್ರ ಬನಸಿರಿಯ ಮಧ್ಯೆ ಕಂಗೊಳಿಸಿ ಜಿಲ್ಲೆಯ ಧಾರ್ಮಿಕ ಮತ್ತು ಪ್ರಾಕೃತಿಕ ಉನ್ನತ ವೈಭವಕ್ಕೆ ಸಾಕ್ಷಿಯಾಗಿದೆ. ಜಿಲ್ಲೆಯ ಪ್ರತಿ ತಾಲೂಕು ತನ್ನದೇಯಾದ ಸಾಂಸ್ಕೃತಿಕ ಹಿರಿಮೆಗರಿಮೆಗೆ ಹೆಸರಾಗಿವೆ. ಬಾದಾಮಿ ತಾಲೂಕಿನಲ್ಲಿ ಪಟ್ಟದಕಲ್ಲು ಚಾಲುಕ್ಯರ ಉಜ್ವಲ ಇತಿಹಾಸಕ್ಕೆ ಸಾಕ್ಷಿಯಾಗಿವೆ. ಬಾದಾಮಿ, ಐಹೊಳೆ, ಪಟ್ಟದಕಲ್ಲು ಶಿಲ್ಪಕಲಾ ವೈಭವದಿಂದ ಕನ್ನಡ ನಾಡಿನ ಶಿಲ್ಪಕಲೆಗೆ ಈ ಜಿಲ್ಲೆ ತವರುಮನೆ ಎನಿಸಿವೆ. ವಿಶ್ವಪರಂಪರೆಯ ಸ್ಮಾರಕಗಳಲ್ಲಿ ಗುರುತಿಸುಕೊಂಡಿರುವ ಪಟ್ಟದಕಲ್ಲು ಪ್ರಾಚೀನ ಕಾಲದಿಂದಲೂ ತನ್ನ ವಾಸ್ತುಶಿಲ್ಪ ವೈವಿಧ್ಯಮಯದಿಂದ ಕೀರ್ತಿ ಪಡೆದಿದೆ.

ಮಲಪಹಾರಿಯ ಮಗ್ಗುಲಲ್ಲಿ ಹಸಿರ ಸಿರಿಯಲ್ಲಿ ಪುಣ್ಯತಾಣವಾಗಿ ಕಂಗೊಳಿಸುತ್ತಿರುವ ಶಿವಯೋಗ ಮಂದಿರ ತಪೋಭೂಮಿ ಎನಿಸಿದೆ. ಬಾದಾಮಿ ಗುಹಾ ದೇವಾಲಯಗಳೆನಿಸಿದ ಮೇಣಬಸದಿಯ ಶೈವ, ವೈಷ್ಣವ ಹಾಗೂ ಜೈನ ಧರ್ಮಗಳ ಸಂಗಮದ ಸಮನ್ವಯತೆಯನ್ನು ಸಾಧಿಸಿದೆ.

ಬಾಗಲಕೋಟೆ ತಾಲೂಕಿನ ಬೇವೂರ ಒಂದು ಪ್ರಾಚೀನ ಗ್ರಾಮ. ಇಲ್ಲಿರುವ ರಾಮೇಶ್ವರ ದೇವಾಲಯವು ಸುಂದರ ವಾಸ್ತುಶಿಲ್ಪವನ್ನು ಹೊಂದಿದೆ. ಹಳ್ಳೂರ ಮೇಲೆ ಜೈನಗುಡಿ, ಊರಲ್ಲಿನ ಬಸವೇಶ್ವರ ಗುಡಿ ಸುಪ್ರಸಿದ್ಧವಾಗಿವೆ. ಅಚನೂರು ಮತ್ತು ತುಳಸಿಗೇರಿ ಹನಮಂತದೇವರ ಗುಡಿಯಿಂದ ಖ್ಯಾತಿಗಳಿಸಿವೆ. ಗದ್ದನಕೇರಿ ಮೋನಪ್ಪಯ್ಯನ ಮಠ ಹಿಂದೂ-ಮುಸ್ಲಿಂರಿಗೆ ಧರ್ಮಕ್ಷೇತ್ರವೆನಿಸಿದೆ. ಕಲಾದಗಿಯ ಗುರುಲಿಂಗೇಶ್ವರ ಮಠವು ಸುಮಾರು ೪೦೦ ವರ್ಷಗಳಷ್ಟು ಪ್ರಾಚೀನವಾದುದು. ರಾಮಾಯಣ ಕಾಲದ ಐತಿಹ್ಯಗಳನ್ನು ನೆನಪಿಸುವಂತೆ ಇರುವ ಈಗಿನ ರಾಮಪುರ ಹೆಸರಿನ ಗ್ರಾಮದ ಆಚೆ ಈಚೆಗಿನ ಊರುಗಳಿಂದ ಸೀತಿಮನಿ, ಜಡ್ರಾಮಕುಂಟಿಗಳು ರಾಮಾಯಣ ಕಾಲದ ಮೇಲೆ ಬೆಳಕು ಚೆಲ್ಲುತ್ತದೆ.

ಬಾಗಲಕೋಟೆಯ ಮೋಟಗಿ ಬಸವೇಶ್ವರ ಗುಡಿ, ಕೊತ್ತಲೇಶಗುಡಿ, ಪಂಖಾ ಮಸೀದಿ, ಅಡವಿಸ್ವಾಮಿ ಮಠ, ಚರಂತಿಮಠ, ರಾಮಾರೂಢ ಮಠ, ಮುಚಖಂಡಿ ವೀರಭದ್ರೇಶ್ವರ ದೇವಾಲಯ ಪ್ರಸಿದ್ಧವಾದವು.

ಬೀಳಗಿ ತಾಲೂಕಿನ ಚಿಕ್ಕಸಂಗಮ, ನಾಗರಾಳ, ಬಾಲವತ್ತಿ, ಬಾಡಗಿ, ಯಡಹಳ್ಳಿ, ಗಲಗಲಿ ಪ್ರಸಿದ್ಧ ಕ್ಷೇತ್ರಗಳೆನಿಸಿದೆ. ಗಲಗಲಿಯ ಗಾಲವ ಮುನಿಗಳ ತಪೋಭೂಮಿ ಎನಿಸಿದೆ. ಬೀಳಗಿಯ ಪುರಾತನ ಕಾಲದ ಸಿದ್ದೇಶ್ವರ ಗುಡಿಯಿಂದಾಗಿ ಪುಣ್ಯಕ್ಷೇತ್ರವೆನಿಸಿದೆ. ಜೊತೆಗೆ ಹಸನಡೋಂಗ್ರಿ ದರ್ಗಾ ಸುಪ್ರಸಿದ್ಧವಾಗಿದೆ.

ಅಧ್ಯಾಯ - ೩

ಪ್ರಾಗೈತಿಹಾಸಿಕ ಚಿತ್ರಕಲೆ

* ಬಾಗಲಕೋಟೆ ಜಿಲ್ಲೆಯ ಬಾದಾಮಿಯ ಪ್ರಾಗೈತಿಹಾಸಿಕ ನೆಲೆಗಳು
* ಪ್ರಾಗೈತಿಹಾಸಿಕ ಭಿತ್ತಿ ಚಿತ್ರಗಳು
* ಬಳಕೆಯ ವಿಧಾನ
* ಪ್ರಾಗೈತಿಹಾಸಿಕ ಭಿತ್ತಿಚಿತ್ರಗಳ ವಿಧಗಳು
* ಬಾದಾಮಿಯ ಪ್ರಾಗೈತಿಹಾಸಿಕ ಭಿತ್ತಿ ಚಿತ್ರಕಲೆ ನೆಲೆಗಳು
* ಪ್ರಾಚೀನ ಚಿತ್ರಕಲೆಯ ಉದ್ದೇಶ
* ಕುಲ್ಹಳ್ಳಿ ಗೊಂಚಿ ಗುಡ್ಡದ ಪ್ರಾಗೈತಿಹಾಸಿಕ ಚಿತ್ರಗಳು

೩. ಪ್ರಾಗೈತಿಹಾಸಿಕ ಚಿತ್ರಕಲೆ

ಬಾಗಲಕೋಟೆ ಜಿಲ್ಲೆಯ ಪ್ರಾಗೈತಿಹಾಸಿಕ ಚಿತ್ರ ವ್ಯಾಪ್ತಿಯು ಬಹಳಷ್ಟು ವಿಸ್ತಾರವಾಗಿದೆ. ಹೊಸ ಹೊಸ ವಿಚಾರಗಳ ಹಾಗೂ ಕಳೆದು ಹೋದ ಸಂಸ್ಕೃತಿಯ ಪಳೆಯುಳಿಕೆಗಳು ಅಧ್ಯಯನಕ್ಕೆ ಸ್ಫೂರ್ತಿ ನೀಡುತ್ತವೆ. ಆದರೆ, ಪ್ರಸ್ತುತ ಅಧ್ಯಯನವು ಬಾದಾಮಿ ತಾಲ್ಲೂಕು ಹಾಗೂ ಆ ಪರಿಸರದ ಸುತ್ತ ಮುತ್ತಲಿನಲ್ಲಿ ಬೆಳೆದುಬಂದ ಶಿಷ್ಟಪದ ಕಲೆ, ಜನಪದ ಕಲೆ ಮತ್ತು ಪ್ರಾಗೈತಿಹಾಸಿಕ ಕಲೆಗಳಿಗೆ ಮಾತ್ರ ಸೀಮಿತಗೊಂಡಿವೆ.

"ಚಾಲುಕ್ಯರು ಸಾಮ್ರಾಜ್ಯ ಬೆಳೆಸಿದಷ್ಟೇ ಅವರು ಬೆಳೆಸಿದ ಕಲೆಗಳು ಪ್ರಸಿದ್ಧವಾಗಿದ್ದವು. ಇಂತಹ ಕಲೆಗಳು ಚಾಲುಕ್ಯ ಪರಿಸರದ ಸಂಸ್ಕೃತಿಯನ್ನು ಎತ್ತಿ ಹಿಡಿಯುತ್ತವೆ"[೧]. ಈ ಹಿನ್ನೆಲೆಯಲ್ಲಿ ಇಂತಹ ಅಧ್ಯಯನ ವಿಶಾಲವಾದರೂ ಅದನ್ನು ಈ ಪ್ರಬಂಧದಲ್ಲಿ ಸ್ಥೂಲವಾಗಿ ಕೊಡಲು ಪ್ರಯತ್ನಿಸಲಾಗಿದೆ. ಚಾಲುಕ್ಯರು ಬಾದಾಮಿ ನಗರವನ್ನು ಕ್ರಿ.ಶ. ೬-ಅನೇ ಶತಮಾನದಲ್ಲಿ ರಾಜಧಾನಿಯನ್ನಾಗಿ ಮಾಡಿಕೊಂಡು ಇಡೀ ದಕ್ಷಿಣ ಭಾರತವನ್ನು ಆಳಿದರು. ಈ ಪ್ರಸಿದ್ಧವಾದ ಚಾಲುಕ್ಯ ಅರಸು ಮನೆತನದ ಮೇಲೆ ಅನೇಕ ಸಂಶೋಧಕರು ಅಧ್ಯಯನ ನಡೆಸಿದ್ದಾರೆ. ಐತಿಹಾಸಿಕ, ಪ್ರಾಗೈತಿಹಾಸಿಕ ನೆಲೆಗಳನ್ನು ಗುರುತಿಸಿದ್ದಾರೆ. ೧೮೭೬ರಲ್ಲಿ ಭೂವಿಜ್ಞಾನ ಸರ್ವೇಕ್ಷಣ ಇಲಾಖೆಯ ರಾಬರ್ಟ್ ಭೂಸ್ ಫೂಟ್, ೧೯೪೯ರಲ್ಲಿ ಆರ್.ಎಸ್. ಪಂಚಮುಖಿ, ೧೯೪೯-೫೨ರ ಅವಧಿಯಲ್ಲಿ ಆರ್.ವಿ. ಜೋಶಿ, ಅ. ಸುಂದರ ಹಾಗೂ ಎಂ.ಎನ್ ದೇಶಪಾಂಡೆ ಮುಂತಾದವರು ಮೆಣಸಗಿ, ಡಾಣಕಶಿರೂರ, ಐಹೊಳೆ, ಖ್ಯಾಡ, ಭದ್ರನಾಯಕನ ಜಾಲಿಹಾಳ ಮುಂತಾದ ಸ್ಥಳಗಳನ್ನು ಗುರುತಿಸಿ ಪ್ರಾಗೈತಿಹಾಸಿಕ ಪಳೆಯುಳಿಕೆಗಳನ್ನು ಸಂಗ್ರಹಿಸಿದ್ದಾರೆ.

---

೧. ಡಾ. ಯಾದಪ್ಪ ಪರದೇಶಿ, ಉತ್ತರ ಕರ್ನಾಟಕದ ಭಿತ್ತಿಚಿತ್ರ ಕಲೆ, ಪಿಎಚ್.ಡಿ. ಮಹಾಪ್ರಬಂಧ, ಕನ್ನಡ ವಿಶ್ವವಿದ್ಯಾಲಯ, ಹಂಪಿ ೨೦೦೧

ಪ್ರಸ್ತುತ ಅಧ್ಯಯನಕ್ಕೆ ಬಾದಾಮಿ ನಗರ ಹಾಗೂ ಸುತ್ತಮುತ್ತಲಿನ ಪ್ರದೇಶವನ್ನು ಸೀಮಿತಗೊಳಿಸಿ ಅಲ್ಲಿ ಕಂಡುಬರುವ ಚಿತ್ರಕಲೆ, ಜನಪದಕಲೆ, ಪ್ರಾಗೈತಿಹಾಸಿಕ ರೇಖಾಚಿತ್ರ ಮುಂತಾದವುಗಳನ್ನು ಮಾತ್ರ ಅಧ್ಯಯನದ ಕೇಂದ್ರ ವಸ್ತುವಾಗಿ ಪರಿಗಣಿಸಲಾಗಿದೆ.

ಚಾಲುಕ್ಯರ ಚಿತ್ರಕಲೆಯನ್ನು ಬೆಳಕಿಗೆ ತಂದ ಕೀರ್ತಿ ಶ್ರೀಮತಿ ಸ್ಟೆಲ್ಲಾಕ್ರಾಮರಿಸ್ ಅವರಿಗೆ ಸಲ್ಲುತ್ತದೆ. ನಂತರ ಇದನ್ನು ಸವಿಸ್ತಾರವಾಗಿ ನಡೆಸಿ, ಕ್ಷೇತ್ರಕಾರ್ಯವನ್ನು ಮಾಡಿ ಸುದೀರ್ಘವಾದ ಲೇಖನ ಬರೆದ ಶ್ರೇಯಸ್ಸು ಶ್ರೀಯುತ ಶಿವರಾಮ ಮೂರ್ತಿಯವರಿಗೆ ಸಲ್ಲುತ್ತದೆ. ಈ ಸಂಶೋಧಕರು ಸಂಶೋಧಿಸಿ ಹಾಗೂ ಕ್ಷೇತ್ರಕಾರ್ಯ ನಡೆಸಿದ ಸಂದರ್ಭದಲ್ಲಿ ಕಂಡು ಬಂದ ವಿಚಾರಗಳನ್ನು ತಮ್ಮ ಗ್ರಂಥಗಳಲ್ಲಿ ನಮೂದಿಸಿದ್ದಾರೆ. ಅವರಲ್ಲಿ ಜಾನ್ ಫ್ಲೀಟ್ ಅವರು "Ynastics for the Kanarese Disticts" ಎಂಬ ಕೃತಿಯಲ್ಲಿ ಚಾಲುಕ್ಯರ ಬಗೆಗೆ ತಿಳಿಸಿದ್ದಾರೆ. ಆರ್.ಜಿ. ಭಂಡಾರಕರವರು "History of the Deccan" ಎಂಬ ಗ್ರಂಥದಲ್ಲಿ ದಕ್ಷಿಣ ಭಾರತದಲ್ಲಿ ಬೆಳೆದು ಬಂದ ಚಾಲುಕ್ಯರ ಪರಂಪರೆ ಯನ್ನು ಗುರುತಿಸಿದ್ದಾರೆ. ಬಿ.ಆರ್. ಗೋಪಾಲ ಶ್ರೀನಿವಾಸ ರಿತ್ತಿ ಹಾಗೂ ಐ.ಬಿ. ದೇಸಾಯಿ ಇವರು ಸಂಯುಕ್ತವಾಗಿ ಸಂಶೋಧನೆ ನಡೆಸಿ, ಅದರ ಪ್ರಯುಕ್ತವಾಗಿ ಹೊರಬಂದ ಕೃತಿ. ಈ ಕೃತಿಯಲ್ಲಿ ಚಾಲುಕ್ಯರ ವಾಸ್ತು ಶಿಲ್ಪಕಲೆ ಹಾಗೂ ಅವರ ಪರಿಸರದ ಮೇಲೆ ಹೆಚ್ಚಿನ ಬೆಳಕು ಚೆಲ್ಲುತ್ತದೆ. ಈ ರಾಜಮನೆತನವನ್ನೇ ಇಟ್ಟುಕೊಂಡು ಡಿ.ಐ. ದೀಕ್ಷಿತರು "Political History of the Chalukyas of Badami" ಎಂಬ ಕೃತಿಯನ್ನು ಬರೆದಿದ್ದಾರೆ. ಅಲ್ಲದೆ ಎಂ.ಎಸ್. ನಾಗರಾಜರಾವ್ ಅವರು "The Chalukyas of Badami" ಎಂಬ ಕೃತಿಯನ್ನು ಸಂಪಾದಿಸಿದ್ದಾರೆ. ಜೊತೆಗೆ ಸಂಶೋಧಕರಾದ ಡಾ. ಎಸ್.ಸಿ. ಪಾಟೀಲ, ಡಾ. ಶಿಲಾಕಾಂತ ಪತ್ತಾರ ಹಾಗೂ ಡಾ. ಯಾದಪ್ಪ ಪರದೇಶಿಯವರ ಸಂಶೋಧನಾ ಪ್ರಬಂಧಗಳನ್ನು ಈ ಅಧ್ಯಯನದಲ್ಲಿ ಬಳಸಲಾಗಿದೆ. ಹಾಗೆಯೇ ಈ ಕ್ಷೇತ್ರ ಪರಿವೀಕ್ಷಣೆಯ ಸಂದರ್ಭದಲ್ಲಿ ತೆಗೆದ ರೇಖಾಚಿತ್ರಗಳನ್ನು ಮತ್ತು ಈ ಹಿನ್ನೆಲೆಯಲ್ಲಿ ಪ್ರಾಚೀನ ಹಾಗೂ ಆಧುನಿಕ ಚಿತ್ರಕಲೆಯ ಕೃತಿಗಳನ್ನು ಅಧ್ಯಯನಕ್ಕೆ ಬಳಸಲಾಗಿದೆ.

ಬಾಗಲಕೋಟೆ ಜಿಲ್ಲೆಯ ಬಾದಾಮಿಯ ಪ್ರಾಗೈತಿಹಾಸಿಕ ನೆಲೆಗಳು

ಐವತ್ತರಿಂದ ಎಪ್ಪತ್ತರ ದಶಕದಲ್ಲಿ ಬಾದಾಮಿ ತಾಲ್ಲೂಕಿನ ಪರಿಸರದಲ್ಲಿ ಹಲವಾರು ಪ್ರಾಗೈತಿಹಾಸಿಕ ನೆಲೆಗಳನ್ನು ಇತಿಹಾಸಕಾರರು ಹಾಗೂ ಸಂಶೋಧಕರು ಕಂಡುಹಿಡಿದ್ದಾರೆ. ಆದಿಮಾನವ ಕಾಲದ ಶಿಲಾಯುಗದ ಹಾಗೂ ನವ ಶಿಲಾಯುಗದ ಪಳಿಯುಳಿಕೆಗಳನ್ನು ಸಂಗ್ರಹಿಸಿ ಕಾಲ ನಿರ್ಣಯದ ಜೊತೆಗೆ

ಪ್ರಾಚೀನ ಕಾಲದ ಸಂಸ್ಕೃತಿಯನ್ನು ಅವರ ಕಲಾವಂತಿಕೆಯನ್ನು ಕಟ್ಟಿಕೊಡುವುದರಲ್ಲಿ ಸಂಶೋಧಕರ ಕಾರ್ಯ ಮಹತ್ವದ್ದಾಗಿ ಕಾಣುತ್ತದೆ. ಈ ಹಿನ್ನೆಲೆಯಲ್ಲಿ ೧೮೮೨ರಲ್ಲಿ ರಾಬರ್ಟ್ ಬ್ರೂಸ್ ಫೂಟ್ ಅವರು ಮಲಪ್ರಭಾ ನದಿಯ ದಂಡೆಯ ಮೇಲಿರುವ ಡಾಣಕ ಶಿರೂರ, ಖ್ಯಾಡ, ಮೆಣಸಗಿ, ಮೊದಲಾದ ಗ್ರಾಮಗಳ ಹತ್ತಿರ ಆದಿಮಾನವರ ಉಪಕರಣಗಳನ್ನು ಶೋಧಿಸಿದ್ದಾರೆ. ತದನಂತರ ಆರ್.ವಿ. ಜೋಶಿ ೧೯೫೮ರಲ್ಲಿ ಇದೇ ನದಿ ಬಯಲಿನ ಹಿರೇ ಮೂಲಂಗಿ, ಅಲೂರ, ಮ್ಯಾಗೇರಿ, ತಮಿನಹಾಳ, ಹೊಳೆ-ಆಲೂರ, ಡಾಣಕಶಿರೂರ ಮುಂತಾದ ಸ್ಥಳಗಲ್ಲಿ ಹಳೆಶಿಲಾಯುಗದ ಅವಶೇಷಗಳನ್ನು ಗುರುತಿಸಿದ್ದಾರೆ.

ಅ. ಸುಂದರ ಮತ್ತು ಎಂ.ಎಸ್. ದೇಶಪಾಂಡೆ ಅವರು ೧೯೮೮ರಲ್ಲಿ ಭದ್ರನಾಯಕ ಜಾಲಿಹಾಳ, ಐಹೊಳೆ ಮತ್ತು ನಂದಿಕೇಶ್ವರಗಳಲ್ಲಿ ಶಿಲೆಯ ಆಯುಧಗಳನ್ನು ಸಂಗ್ರಹಿಸಿದ್ದಾರೆ. ಬಾದಾಮಿಬಳಿಯ ಸಿದ್ಲಫಡಿ ಮತ್ತು ಪಟ್ಟದಕಲ್ಲು ಆದಿ ಹಳೆಶಿಲಾಯುಗದದ ನೆಲೆಗಳಾಗಿದ್ದವೆಂಬುದು ತಿಳಿದುಬಂದಿದೆ. ಈ ನಗರದ ಸಾಲಾರಫಡಿ ಹತ್ತಿರ ಕೈಕೊಡಲಿ, ಮಚ್ಚು ಮುಂತಾದ ಸಾಮಗ್ರಿಗಳನ್ನು ಶ್ರೀನಿವಾಸ ಪಾಡಿಗಾರರು ಶೋಧಿಸಿದ್ದಾರೆ.

ಬಾದಾಮಿ, ಹೊಸ ಮಹಾಕೂಟ, ಐಹೊಳೆ ಮುಂತಾದ ಸ್ಥಳಗಳಲ್ಲಿ ಕೆಮ್ಮಣ್ಣಿನ ಬಣ್ಣದ ವಿವಿಧ ಪ್ರಾಣಿ ಹಾಗೂ ಮನುಷ್ಯರ ರೇಖಾಚಿತ್ರಗಳಿವೆ. ಈ ಚಿತ್ರಗಳೆಲ್ಲಾ ಶಿಲಾಯುಗದ ಮಾನವರ ಸಂಸ್ಕೃತಿಯ ಹೆಜ್ಜೆಗುರುತು ತಿಳಿಯುವಲ್ಲಿ ಸಹಕಾರಿಯಾಗಿವೆ. ಬಾದಾಮಿ ರಂಗನಾಥ ಗುಡ್ಡದ ಹತ್ತಿರ ಸೂಕ್ಷ್ಮ ಶಿಲಾಯುಗದ ಸಂಸ್ಕೃತಿಯ ಕಲಾತ್ಮಕ ಅಭಿವ್ಯಕ್ತಿಯನ್ನು ಕಲ್ಲಾಸರೆಗಳಲ್ಲಿ ಕಾಣಬಹುದು. ಕೆಲವು ಕೆಮ್ಮಣ್ಣಿನ ಬಣ್ಣದ ಚಿತ್ರಗಳನ್ನು ಸಂಶೋಧಕರು ಸಂಶೋಧಿಸಿದ್ದಾರೆ. ನಾಗರೀಕತೆಯ ಬೆಳವಣಿಗೆಯಾದಂತೆ ಅವರ ಸಂಸ್ಕೃತಿಯಲ್ಲೂ ಬದಲಾವಣೆ ಕಾಣುತ್ತೇವೆ. ಹೀಗೆ ಬಾದಾಮಿಯು ನಮ್ಮ ನಾಡಿನ ಸಂಸ್ಕೃತಿ ಹಾಗೂ ಪರಂಪರೆಯನ್ನು ಎತ್ತಿ ಹಿಡಿಯುವಲ್ಲಿ ಯಶಸ್ವಿಯಾಗಿದೆ. ಮಲಪ್ರಭಾ ತೀರದ ಮೇಲೆ ಮಣ್ಣಿನ ಪಾತ್ರೆಗಳ ಮೇಲೆ ತೆಗೆದ ರೇಖಾಚಿತ್ರಗಳು ದೊರೆತಿವೆ. ಈ ಪ್ರದೇಶದಲ್ಲಿ ಆರ್.ಎಸ್. ಪಂಚಮುಖಿಯರು ಅಧ್ಯಯನ ಕೈಗೊಂಡ ಸಂದರ್ಭದಲ್ಲಿ ಶಂಖದ ಆಭರಣಗಳನ್ನು ಕಂಡುಹಿಡಿದಿದ್ದಾರೆ. ಈ ತಾಲ್ಲೂಕಿನ ಸುತ್ತಮುತ್ತಲಿನ ಪ್ರದೇಶಗಳಾದ ಐಹೊಳೆ, ಪಟ್ಟದಕಲ್ಲು ಮ್ಯಾಕಲ್ಲ ಬಾಚನಗುಡ್ಡ, ಸಿದ್ದನಕೊಳ್ಳ, ಬಾದಾಮಿಯ ಮೇಗುತಿ ಗುಡಿಯ ಹತ್ತಿರದ ಮುಂತಾದ ಸ್ಥಳಗಳಲ್ಲಿ ಕಿಂಡಿಕೋಣೆಗೋರಿ, ಹಾದಿಕೋಣೆ ಗೋರಿ, ಕಲ್ಲುಪ್ಪಿಗಳು ಮುಂತಾದವುಗಳನ್ನು ಸಂಶೋಧಕರು ತಮ್ಮ ಅಧ್ಯಯನದ ಗ್ರಂಥಗಳಲ್ಲಿ ಎತ್ತಿ ಹಿಡಿದಿದ್ದಾರೆ.

ಪ್ರಾಗೈತಿಹಾಸಿಕ ಭಿತ್ತಿ ಚಿತ್ರಗಳು

ಆದಿಮಾನವ ಎಂದು ಕರೆಯಿಸಿಕೊಳ್ಳುವ ಕಾಲದಲ್ಲಿ ಮಾನವ ಇತರ ಪ್ರಾಣಿಗಳೊಂದಿಗೆ ತಾನೂ ಪ್ರಕೃತಿಯೊಂದಿಗೆ ಬೆರೆತು ಹೋಗಿದ್ದನು. ಕಾಲಕಳೆದಂತೆ ಮಾನವ ತನ್ನ ಬುದ್ಧಿ ಯೋಚನಾ ಶಕ್ತಿಯ ಉಪಯೋಗವನ್ನು ಮಾಡುತ್ತಾ ಹೋದಂತೆ ಅವನಲ್ಲಿ ಭಿನ್ನ ಭಿನ್ನ ಅಭಿರುಚಿಗಳು ಬೆಳೆಯಲಾರಂಭಿಸಿದವು. ಕಾಡು, ಬೆಟ್ಟ, ಗುಡ್ಡ, ನೀರು ಹೀಗೆ ಪ್ರಕೃತಿ ಸೌಂದರ್ಯವನ್ನು ಕಂಡ ಅವನಿಗೆ ಮನಸ್ಸಿನಲ್ಲಿ ಹುಟ್ಟಿಕೊಂಡಿದ್ದೇ ಈ ಕಲೆ, ಕಂಡದ್ದನ್ನು ಚಿತ್ರದ ಮೂಲಕ ವ್ಯಕ್ತಪಡಿಸುವ ಕಲೆ ಹೀಗೆ ಮಾನವ ಚಿತ್ರಕಲೆಯ ಬಗ್ಗೆ ಆಸಕ್ತಿ ಮೂಡಿಸಿಕೊಂಡು ಅದನ್ನು ವ್ಯಕ್ತಪಡಿಸುವ ಹಾದಿಯ ಕಡೆಗೆ ಗಮನಹರಿಸಿದ. ಮೊದಲು ಕುಳಿತ ಸ್ಥಳದಲ್ಲಿ ಅಂದರೆ ಮಣ್ಣಿನಲ್ಲಿ ಕೈಯಿಂದ, ಕಟ್ಟಿಗೆಯಿಂದ ಚಿತ್ರ ಬಿಡಿಸಲು ಆರಂಭಿಸಿದ. ಅನಂತರ ಅವನು ಸ್ವಲ್ಪ ಮುಂದುವರೆದು ಬಂಡೆಯ ಮೇಲೆ ಚಿತ್ರ ಬಿಡಿಸಿದ. ಆದಿ ಮಾನವರು ಬಿಡಿಸಿದ ಬಂಡೆಯ ಮೇಲಿನ ಚಿತ್ರಗಳು ಬಾದಾಮಿಯ ಸುತ್ತಮುತ್ತಲಿನ ಬೆಟ್ಟ, ಗುಡ್ಡಗಳಲ್ಲಿ ಕಂಡುಬರುತ್ತವೆ. ಇವುಗಳನ್ನು ಪ್ರಾಗೈತಿಹಾಸಿಕ ಭಿತ್ತಿ ಚಿತ್ರಗಳೆಂದೂ ಕರೆಯುತ್ತಾರೆ. ಪ್ರಾಗೈತಿಹಾಸಿಕ ಭಿತ್ತಿ ಚಿತ್ರಗಳ ಸ್ವರೂಪ, ರಚನಾ ತಂತ್ರ, ಅವುಗಳ ವಿಧಗಳ ಕುರಿತು ಸ್ಥೂಲವಾಗಿ ಈ ಕೆಳಗಿನಂತೆ ವಿವರಿಸಲಾಗಿದೆ.

ಭಿತ್ತಿಚಿತ್ರಗಳು ಶಿಲಾಗುಹೆಯಲ್ಲಿ ಶಿಲಾಶ್ರಯಗಳಲ್ಲಿ ಮತ್ತು ಬಯಲು ಬಂಡೆಗ ಮೇಲೆ ರಚನೆಯಾಗಿರುತ್ತವೆ. ಪ್ರಾಗೈತಿಹಾಸಿಕ ಮಾನವರು ಗವಿಯ ಮುಂದಿನ ಭಾಗಗಳಲ್ಲಿ ವಾಸಿಸುತ್ತಿದ್ದಂತೆ ನಿದರ್ಶನಗಳು ದೊರೆತಿದ್ದು, ಚಿತ್ರಗಳು ಅವರ ವಾಸದ ನೆಲೆಯಿಂದ ದೂರದಲ್ಲಿ ಇಲ್ಲವೇ ತೀರಾ ಹಿಂಭಾಗದಲ್ಲಿ ಅಥವಾ ಮೇಲ್ಭಾಗದಲ್ಲಿ ಸುಲಭವಾಗಿ ತಲುಪಲಾರದ ಸ್ಥಳದಲ್ಲಿ ರಚನೆಯಾಗಿವೆ. ಅದರಂತೆ ಬಾದಾಮಿಯಲ್ಲಿರುವ ಸೀತಿದೋಣಿ ಎಂಬ ಸ್ಥಳದಲ್ಲಿ ಬೃಹತ್ ಶಿಲೆಯ ಮೇಲೆ ನೆಲದಿಂದ ಎರಡು ಮೀಟರ್ ಎತ್ತರದಲ್ಲಿ ಚಿತ್ರಗಳು ಕಂಡುಬರುತ್ತವೆ. ಮತ್ತು ಇಲ್ಲಿಯೇ ಇರುವ ರಂಗನಾಥ ಬೆಟ್ಟದ ಚಿತ್ರಗಳು ಗುಡ್ಡದಲ್ಲಿನ ಬೃಹತ್‌ದ ಶಿಲೆಯೊಂದರ ತೆರದ ಭಾಗದಲ್ಲಿವೆ. ಬಾದಾಮಿಯ ಸುತ್ತಮುತ್ತಲಿನ ಇತ್ತೀಚಿಗೆ ಹೊಸದಾಗಿ ಡಾ. ಎಸ್.ಸಿ. ಪಾಟೀಲ, ಡಾ. ಆನಂದ ಪೂಜಾರ, ಎಂ.ಆರ್. ಬಾರಾವಲಿ ಇವರಿಂದ ಶೋಧವಾದ ಸುಮಾರು ೯ ರಿಂದ ೧೦ ಸ್ಥಳಗಳಲ್ಲಿ ಬೃಹತ್ ಬಂಡೆಯ ಕಲ್ಲಾಸರೆಗಳಲ್ಲಿ ಅನೇಕ ರೇಖಾವರ್ಣ ಚಿತ್ರಗಳು ಶೋಧವಾಗಿವೆ. ಬಾದಾಮಿಯ ಹತ್ತಿರದಲ್ಲಿರುವ ಕುಟುಕನಕೇರಿ ಎಂಬ ಗ್ರಾಮದಲ್ಲಿಯೂ ಬಂಡೆಯ ಹೊರ ಮೈಯಲ್ಲಿಯೇ ಚಿತ್ರ ರಚನೆಯಾಗಿದ್ದುದನ್ನು ಮೇಲೆ ತಿಳಿಸಿದ ವಿದ್ವಾಂಸರು ಶೋಧಿಸಿದ್ದಾರೆ.

ಬಳಕೆಯ ವಿಧಾನ

ಭಿತ್ತಿಚಿತ್ರಗಳ ರಚನಾಕಾರನು ತನಗೆ ಚಿತ್ರಕಲೆಗೆ ಬೇಕಾದ ಉಪಕರಣಗಳನ್ನು ವಿವಿಧ ವಿಧಾನಗಳಿಂದ ಸ್ವಾಭಾವಿಕವಾಗಿ ದೊರೆಯುವ ವಸ್ತುಗಳನ್ನು ಉಪಯೋಗಿಸಿಕೊಂಡು ತಯಾರಿಸಲು ಆರಂಭಿಸಿದ. ಚಿತ್ರ ರಚನೆಗೆ ಬೇಕಾಗುವ ಬಣ್ಣ, ಕುಂಚ, ಉಳಿ, ಅಂಟು ಮಾಧ್ಯಮಗಳಂತಹ ಸ್ವಾಭಾವಿಕ ಪರಿಕರಗಳನ್ನು ಈ ಕೆಳಗೆ ಸೂಚಿಸಿದ ವಸ್ತುಗಳಿಂದ ತಯಾರಿಸಿಕೊಂಡ. ಸ್ವಾಭಾವಿಕವಾಗಿ ದೊರೆಯುತ್ತಿದ್ದ ಮಣ್ಣಿನ ಗಡ್ಡಿಗಳಿಂದ ಬಣ್ಣ, ಗಿಡದ ಟೊಂಗೆ, ಪ್ರಾಣಿಗಳ ಕೂದಲುಗಳಿಂದ ಕುಂಚ, ರಕ್ತದಿಂದ ಅಂಟು ಮಾಧ್ಯಮ, ಕಲ್ಲಿನಿಂದ ಚೂಪಾದ ಸಾಧನ ತಯಾರಿಸಿಕೊಂಡು ತನ್ನ ಚಿತ್ರರಚನೆಯ ತಂತ್ರಗಾರಿಕೆಯನ್ನು ಪೂರೈಸಿಕೊಂಡಿದ್ದಾನೆ ಎಂಬುದು ವಿದ್ವಾಂಸರ ಅಭಿಪ್ರಾಯ.

ಪ್ರಾಗೈತಿಹಾಸಿಕ ಭಿತ್ತಿಚಿತ್ರಗಳ ವಿಧಗಳು

ಪ್ರಾಗೈತಿಹಾಸಿಕ ಚಿತ್ರಗಳನ್ನು ಅಧ್ಯಯನದ ಅನುಕೂಲತೆಯ ದೃಷ್ಟಿಯಿಂದ ದ್ವಿ-ವಿಧವಾಗಿ ವಿಂಗಡಿಸಲಾಗಿದೆ.

೧. ವರ್ಣಚಿತ್ರಗಳು

ಪ್ರಾಗೈತಿಹಾಸಿಕ ಭಿತ್ತಿಚಿತ್ರಗಳು ಹೆಚ್ಚಾಗಿ ನಸುಗೆಂಪು ಬಣ್ಣದಲ್ಲೇ ಇದ್ದರೂ ಅದರ ಜೊತೆಗೆ ಬಿಳಿ, ಕಪ್ಪು, ಹಳದಿ, ಹಸಿರು ಬಣ್ಣಗಳಿಂದ ರಚನೆಯಾದ ಚಿತ್ರಗಳು ಕಂಡುಬಂದಿರುತ್ತವೆ. ಮಧ್ಯಭಾರತದ ಪ್ರಾಗೈತಿಹಾಸಿಕ ನೆಲೆಯಲ್ಲಿ ಈ ಬಗೆಯ ಚಿತ್ರಗಳಿವೆ. ವರ್ಣಚಿತ್ರಗಳು ಗುಹೆಗಳ ಒಳಭಾಗದಲ್ಲಿ ಬಂಡೆಯಾಸರೆಯಲ್ಲಿ ಬೃಹತ್ ಬಂಡೆಗಳ ತೆರೆದ ಮೈಯಲ್ಲಿ ರಚನೆಯಾಗಿರುತ್ತವೆ. ಕಂದು ವರ್ಣದ ಚಿತ್ರಗಳು ಬಾದಾಮಿ ಬಳಿಯ ಶಿಡ್ಲಫಡಿಯಲ್ಲಿ ರಚನೆಯಾಗಿವೆ. ಇತ್ತಿಚೀಗೆ ಡಾ. ಎಸ್.ಸಿ. ಪಾಟೀಲರು ಬಾದಾಮಿಯ ಪರಿಸರದಲ್ಲಿ ಶೋಧಿಸಿದ ಕೆಲವು ನೆಲೆಗಳಲ್ಲಿಯೂ ವರ್ಣಚಿತ್ರಗಳು ಕಂಡುಬಂದಿವೆ. ಮಂಜು ಹಳದಿ ಬಣ್ಣದ ಚಿತ್ರಗಳು ಬಾದಾಮಿಯ ಎತ್ತರ ಬೆಟ್ಟದ ೨ನೇ ಗುಹೆಯಲ್ಲಿ ರಚನೆಯಾಗಿವೆ.

ವಿವಿಧ ಬಣ್ಣದಲ್ಲಿ ರಚನೆಯಾದ ಪ್ರಾಗೈತಿಹಾಸಿಕ ವರ್ಣಚಿತ್ರಗಳು ಮುಖ್ಯವಾಗಿ ಎರಡು ಬಗೆಯಲ್ಲಿ ಇರುವುದು ಕಂಡುಬರುತ್ತದೆ. ಅವುಗಳನ್ನು ಸ್ಥೂಲವಾಗಿ ಕೆಳಗಿನವುಗಳಂತೆ ವಿಂಗಡಿಸಬಹುದು.

ಅ. ರೇಖಾಚಿತ್ರಗಳು : ರೇಖಾಚಿತ್ರಗಳು ಪ್ರಧಾನವಾಗಿ ವರ್ಣಚಿತ್ರಗಳಲ್ಲಿಯೂ ಕಂಡುಬಂದಿವೆ. ವರ್ಣದಿಂದ ಎಳೆದ ರೇಖೆಗಳೇ ಇಲ್ಲಿ ಚಿತ್ರದ ಸ್ವರೂಪವನ್ನು ತೋರಿಸುತ್ತಿದ್ದು ಚಿತ್ರದ ಅಗಲ, ಉದ್ದ, ದಪ್ಪ, ಅಳತೆಯನ್ನು ಬಿಂಬಿಸುವ ಚಪ್ಪಟೆ ವರ್ಣ ಲೇಪನ ಇರುವುದಿಲ್ಲ. ವರ್ಣದಿಂದ

ರಚಿಸಿದ ರೇಖಾಚಿತ್ರಗಳು ಕರ್ನಾಟಕದ ಹಲವು ನೆಲೆಗಳಲ್ಲಿ ಕಂಡುಬಂದಿವೆ. ಬಾದಾಮಿ ರಂಗನಾಥ ಬೆಟ್ಟದಲ್ಲಿ ಇನ್ನಿತರ ಕೆಲವು ಸ್ಥಳದಲ್ಲಿ ಮತ್ತು ಕುಟಕನಕೇರಿ, ಅರೆಗುಡ್ಡ, ಹಿರೆಗುಡ್ಡದಲ್ಲಿ ವರ್ಣದಿಂದ ರಚಿಸಿದ ರೇಖಾಪ್ರಧಾನ ಚಿತ್ರಗಳು ಕಂಡುಬರುತ್ತವೆ.

ಬ. ನೆರಳು ಚಿತ್ರಗಳು : ವರ್ಣದಿಂದ ರಚಿಸಿದ ರೇಖಾಪ್ರಧಾನ ಚಿತ್ರಗಳಂತೆ ವರ್ಣದಿಂದ ರಚಿಸಿದ ನೆರಳು ಚಿತ್ರಗಳೂ ಕಂಡುಬರುತ್ತವೆ. ಇಂತಹ ಚಿತ್ರಗಳಲ್ಲಿ ರೇಖೆಯಿಂದ ಮೊದಲು ಚಿತ್ರರಚನೆ ಮಾಡಿ ನಂತರ ಚಿತ್ರದ ಒಳಭಾಗಕ್ಕೆ ಚಪ್ಪಟೆಯಾಗಿ ವರ್ಣ ಲೇಪಿಸಲಾಗುತ್ತದೆ. ಈ ಚಿತ್ರಗಳು ಆಯಾ ವಸ್ತು ಇಲ್ಲವೇ ಪ್ರಾಣಿ-ಪಕ್ಷಿಗಳ ನೆರಳಿನಂತೆ ಚಪ್ಪಟೆಯಾಗಿರುವ ಸ್ವರೂಪದಲ್ಲಿ ಇರುವುದರಿಂದ ಇವುಗಳನ್ನು ವರ್ಣದಿಂದ ರಚಿಸಿದ ನೆರಳು ಚಿತ್ರಗಳೆಂದು ಕರೆಯಬಹುದು. ಇಂತಹ ನೆರಳು ಚಿತ್ರಗಳು ಕರ್ನಾಟಕದ ಅನೇಕ ಭಾಗಗಳಲ್ಲಿ ಕಾಣಸಿಗುತ್ತವೆ. ಬಾದಾಮಿ ಪರಿಸರದಲ್ಲಿ ಸಮೀಪದ ಕುಟುಕನಕೇರಿಯ ಗುಡ್ಡಗಳಲ್ಲಿ ಈ ಪರಿಸರದಲ್ಲಿ ಹೊಸದಾಗಿ ಶೋಧಿಸಲಾದ ಕೆಲವು ನೆಲೆಗಲಲ್ಲಿ ನೆರಳು ಚಿತ್ರಗಳು ಕಂಡುಬರುತ್ತವೆ.

೨. ವರ್ಣರಹಿತ ಚಿತ್ರಗಳು

ವರ್ಣರಹಿತ ಚಿತ್ರಗಳನ್ನು ಅವುಗಳ ರಚನಾ ಸ್ವರೂಪ ಆಧರಿಸಿ ವಿಂಗಡಿಸಬಹುದು. ಬಂಡೆಯ ಮೇಲೆ ರಚನೆಯಾದ ಈ ವರ್ಣರಹಿತ ಚಿತ್ರಗಳು ರೇಖಾಪ್ರಧಾನವಾಗಿರುವುದೇ ಅಧಿಕವಾದರೂ ಕೆಲವು ನೆಲೆಗಳಲ್ಲಿ ರೇಖಾಕೃತಿಯ ಚಿತ್ರಗಳನ್ನು ರಚನೆ ಮಾಡಿ ಅವುಗಳ ಒಳಭಾಗಗಳಲ್ಲಿ ಏಕಪ್ರಕಾರವಾಗಿ ಕುಟ್ಟಿ ಆ ಚಿತ್ರ ಬಂಡೆಯಿಂದ ಪ್ರತ್ಯೇಕವಾಗಿ ಕಾಣುವಂತೆ ಮಾಡಲಾಗಿರುತ್ತದೆ. ಇವು ನೋಡಲು ವರ್ಣದಿಂದ ರಚಿಸಿದ ಚಿತ್ರದ ಸ್ವರೂಪದಲ್ಲಿ ಇರುತ್ತವೆ. ಬಿರುಸಾದ ಚೂಪಾದ ಸಾಧನದಿಂದ ಬಂಡೆಯ ಮೇಲೆ ಕುಟ್ಟಿ, ಚಿತ್ರ ಮೂಡಿಸಿದ್ದಾರೆ. ಇವು ನೋಡಲು ವರ್ಣದಿಂದ ರಚಿಸಿದ ಚಿತ್ರದ ಸ್ವರೂಪದಲ್ಲಿ ಇರುತ್ತವೆ.

ಅ. ಕುಟ್ಟಿದ ಚಿತ್ರಗಳು : ಬೃಹತ್ ಬಂಡೆಯ ಮೇಲೆ ಚೂಪಾದ ಸಾಧನದಿಂದ ಕುಟ್ಟಿ ರಚಿಸಿರುವುದರಿಂದ ಈ ಪ್ರಕಾರದ ಚಿತ್ರಗಳನ್ನು ಕುಟ್ಟು ಚಿತ್ರಗಳೆನ್ನುವರು. ಮೊದಲಿಗೆ ಬಂಡೆಯ ಮೇಲೆ ಕಲ್ಲಿನ ತುಂಡು ಇಲ್ಲವೇ ಮಣ್ಣಿನ ಗಡ್ಡಿಯಿಂದ ರೆಖಾಕೃತಿ ಮೂಡಿಸಿಕೊಂಡು ಆ ರೇಖೆಗುಂಟ ಚೂಪಾದ ಸಾಧನದಿಂದ ಒತ್ತೊತ್ತಾಗಿರುವಂತೆ ನಿರಂತರವಾಗಿ ಕುಟ್ಟಿ ಚಿತ್ರಗಳನ್ನು ರಚನೆ ಮಾಡಿರುವಂತೆ ಕಂಡುಬರುತ್ತದೆ ಬಾದಾಮಿಯ ಉತ್ತರ ಗುಡ್ಡ ಸೀತಿದೋಣಿ, ಶಿಡ್ಲಫಡಿ, ಮಹಾಕೂಟದಲ್ಲಿ ಈ ಬಗೆಯ ಚಿತ್ರಗಳಿವೆ.

ಬ. ಕೊರೆದ ಚಿತ್ರಗಳು : ಕಲ್ಲು ಅಥವಾ ಬಿರುಸಿನ ಸಾಧನದಿಂದ ಕುಟ್ಟಿ ರಚನೆ ಮಾಡಿದ ಚಿತ್ರಗಳಲ್ಲಿ ಮೊದಲಿಗೆ ಬಂಡೆಯ ಮೇಲೆ ರೇಖಾಕೃತಿ ಮೂಡಿಸಿಕೊಳ್ಳುವಂತೆ ಕೊರೆವ ಚಿತ್ರರಚನೆಗೂ ಮೊದಲು ಬಂಡೆಯ ಮೇಲೆ ರೇಖಾಕೃತಿ ಮೂಡಿಸಿಕೊಂಡು ಅದರ ಮೇಲೆ ಚೂಪಾದ ಸಾಧನದಿಂದ ಆಳವಾಗಿ ಕೊರೆದು ಚಿತ್ರ ರಚಿಸಲಾಗಿರುತ್ತದೆ. ಹೀಗೆ ಕೊರೆದು ರಚಿಸಿದ ಚಿತ್ರಗಳು ಮಹಾಕೂಟಕ್ಕೆ ಹೋಗುವ ಒಂದು ಬಂಡೆಯ ಮೇಲೆ ಕಂಡುಬರುತ್ತವೆ. ಜಿಂಕೆ, ಹಾವು, ಗೂಳಿ ಮತ್ತು ಮನುಷ್ಯನ ಚಿತ್ರಗಳು ಇಲ್ಲಿವೆ.

ಬಾದಾಮಿಯ ಪ್ರಾಗೈತಿಹಾಸಿಕ ಭಿತ್ತಿ ಚಿತ್ರಕಲೆ ನೆಲೆಗಳು

ಬಾದಾಮಿಯ ಉತ್ತರಕ್ಕೆ ಮಹಾಕೂಟಕ್ಕೆ ಹೋಗುವ ಕಾಲು ಹಾದಿಯ ಎಡಬದಿಯಲ್ಲಿ ಹೊಸ ಮಹಾಕೂಟದ ಹತ್ತಿರ ಒಂದು ವಿಶಾಲವಾದ ದೊಡ್ಡ ಕಣಿವೆಯಿದೆ. ಇದರ ಮೂಲದಲ್ಲಿ ಒಂದು ಇಕ್ಕಟ್ಟಾದ ಕಲ್ಲಾಸರೆ ಕೆಳಗೆ ಬಾದಾಮಿ ಚಾಲುಕ್ಯರ ಕಾಲದ ಸಣ್ಣ ದೇವಾಲಯವಿದೆ ಇದರ ಹಿಂಬದಿಯ ಬಂಡೆಯ ಮೇಲೆ ಕೆಲವು ಕೆಮ್ಮಣ್ಣಿನ ಬಣ್ಣದ ಚಿತ್ರಗಳಿವೆ. ಇವು ಅಸ್ಪಷ್ಟವಾಗಿದ್ದು. ಕೆಲವು ಮನುಷ್ಯಾ ಕೃತಿಗಳು ಇಲ್ಲಿ ಗಮನಸೆಳೆಯುತ್ತವೆ.

ವಿಶಾಲವಾದ ಕಮಾನಿನ ಸಿಡಿಲಫಡಿ ಕೋಟೆ ಬಾಗಿಲಿನ ರೂಪದಂತಿದೆ. ಇದರ ಎರಡು ಬದಿಗಳ ಒಳಮೈಯಲ್ಲಿ ಬಹಳಷ್ಟು ಚಿತ್ರಗಳಿವೆ. ಕೈಕೈ ಹಿಡಿದು ಕುಣಿಯುತ್ತಿರುವ ಮನುಷ್ಯಾಕೃತಿಗಳು ಗುಬ್ಬಚ್ಚಿ ಯಂತಹ ಪಕ್ಷಿಗಳು, ಅವುಗಳ ಮರಿಗಳು ಇವುಗಳ ಮಧ್ಯೆ ಹಾವುಗಳು ಹಾಗೂ ಸಾಂಕೇತಿಕ ಮನುಷ್ಯಾ ಕೃತಿಗಳು ಇವೆ. ಅಲ್ಲಿಯೇ ಒಂದು ಕಡೆ ಬಂದು ನಿಂತ ಗೂಳಿಯ ಚಿತ್ರ ಅದರ ಪಕ್ಕದಲ್ಲಿ ಸುಮಾರು ನಾಲ್ಕು ಐದನೆಯ ಶತಮಾನದ ಅಲಂಕಾರಿಕವಾಗಿ ಬರೆದ ೮ ಅಕ್ಷರಗಳುಳ್ಳ ಒಂದು ಸಾಲಿನ ಲಿಪಿ ಇದೆ. ಇಂಥಹ ಒಂದು ಸಾಲಿನ ಲಿಪಿಗಳು ಅಲ್ಲಿಯೇ ಬಹಳಷ್ಟು ಕಡೆಗಳಲ್ಲಿವೆ. ಹಾಗೆಯೇ ಸೀತಿ ದೋಣಿಯ ಹತ್ತಿರದ ಕಲ್ಲಾಸರೆಗಳ ಚಿತ್ರಗಳ ಮೇಲೆ ಇಂತಹ ಲಿಪಿಗಳಿವೆ.

ಈ ಗವಿಯಲ್ಲಿ ನಾಯಿ, ದನ, ಎಮ್ಮೆಯಂತಹ ಒಂದು ಪಶು, ಒಂದು ವಿಚಿತ್ರ ತರಹದ ಪ್ರಾಣಿ ಮತ್ತು ಮನುಷ್ಯರ ಚಿತ್ರಗಳು ರಚನೆಯಾಗಿವೆ. ಈಚಿನ ಕಾಲದಲ್ಲಿ ಈ ಗವಿಯ ಒಳಮೈಯನ್ನು ಮಣ್ಣಿನಿಂದ ಬಳಿಯಲಾಗಿದೆ. ಆದ್ದರಿಂದ ಇದ್ದಿರಬಹುದಾದ ಮತ್ತೆ ಕೆಲವು ಚಿತ್ರಗಳು ಮುಚ್ಚಿಹೋಗಿವೆ. ಮೇಲೆ ವಿಚಿತ್ರ ಪ್ರಾಣಿಗೆ ಕಡ್ಡಿಯಂತಹ ಉದ್ದನೆಯ ಕಾಲುಗಳು ಮತ್ತು ಮೈ, ತಲೆಯಾಕಾರವಿದ್ದು ಎರಡೂ ಬದಿಗಳಲ್ಲಿಯೂ ಮತ್ತು ಮೇಲೆರಡು ಉದ್ದನೆಯ ಮೊನೆಗಳಿವೆ. ವೃತ್ತಕಾರದ ದೊಡ್ಡ

ಕಣ್ಣುಗಳು, ಮಸುಕಾದ ಬಿಳಿ ಬಣ್ಣದಲ್ಲಿದ್ದು ಅದಕ್ಕೆ ಕರಿಬಣ್ಣದ ಗೆರೆ ಇವೆ. ಮನುಷ್ಯನ ಚಿತ್ರಗಳಲ್ಲಿ ಎರಡು ಕಪ್ಪು ಮತ್ತು ಬಿಳಿ ಬಣ್ಣದಲ್ಲಿದ್ದು ಇದರ ಅಂಚಿನಲ್ಲಿ ಕಪ್ಪು ಬಣ್ಣದ ಗೆರೆ ಇವೆ.

ಪಶ್ಚಿಮಕ್ಕೆ ಅದೇ ಸಾಲಿನಲ್ಲಿ ಸ್ವಲ್ಪ ದೂರದಲ್ಲಿ ಉತ್ತರ ಬೆಟ್ಟದ ಚಿತ್ರಿತ ಸ್ಥಳವಿದೆ. ಈ ಚಿತ್ರವು ಉಳಿದೆಲ್ಲಾ ಗವಿ ಚಿತ್ರಗಳಿಗಿಂತ ತಾಂತ್ರಿಕ ಪದ್ಧತಿ, ಶೈಲಿ ಮತ್ತು ಚಿತ್ರಗಳ ಸ್ವರೂಪದಲ್ಲಿ ಭಿನ್ನವಾಗಿದ್ದು, ಸುಸಂಸ್ಕೃತ ಕಲಾ ಸಂಪ್ರದಾಯದ್ದಾಗಿದೆ. ಇಲ್ಲಿ ಹಿಂಬದಿಯ ನೆಟ್ಟಗಿನ ಕಲ್ಲು ಬಂಡೆಯ ಮೇಲೆ ತೆಳ್ಳಗೆ ಸ್ವಲ್ಪ ಹಳದಿ ಬಣ್ಣದ ಸುಣ್ಣದ ಲೇಪನ ಮಾಡಿದೆ. ಇದರ ಮೇಲೆ ಕೆಂಪು ಬಣ್ಣದ ರೇಖೆಗಳಲ್ಲಿ ಪ್ರಮಾಣ ಬದ್ಧವಾಗಿ ಎಲ್ಲಾ ಶಾರೀರಿಕ ಕಲ್ಪನೆಗಳು ಇನ್ನೂ ಕಾಣುವ ಹಾಗೆ ಗಣ್ಯರ ಚಿತ್ರಗಳನ್ನು ಬಿಡಿಸಲಾಗಿದೆ. ರೇಖೆಗಳೊಳಗಿನ ಭಾಗವು ಹಿನ್ನೆಲೆ ಹಳದಿ ಬಣ್ಣದಿಂದ ತುಂಬಿರುವುದರಿಂದ ವ್ಯಕ್ತಿಗಳ ಮೈಮಾಟ ಸ್ಫುಟವಾಗಿ ಕಾಣುತ್ತದೆ. ಒಬ್ಬಳು ಗಣ್ಯ ಸ್ತ್ರೀ ಕುಳಿತಿದ್ದಾಳೆ. ಈ ತಂತ್ರವು ಸುಪ್ರಸಿದ್ಧ ಸ್ಪೇನ್ ಅಲ್ಟ್ಮಿಮಿವ್ ಗವಿಯ ವರ್ಣಚಿತ್ರಗಳನ್ನು ಜ್ಞಾಪಕ ತರುತ್ತವೆ. ಆದುದರಿಂದಲೇ ಇದೊಂದು ಮಹತ್ವದ ಗವಿಚಿತ್ರವೆಂದು ಹೇಳಬಹುದು. ಇದರ ಕಾಲಮಾನವು ಸುಮಾರಾಗಿ ಊಹಿಸಿದಲ್ಲಿ ಅಂತ್ಯ ಹಳೆ ಶಿಲಾಯುಗಕ್ಕೆ ಸರಿಹೊಂದಬಹುದು.

ಬಾದಾಮಿ ಪರಿಸರದ ಕನ್ನೂರು ಗವಿಯ ಭಿತ್ತಿನಲ್ಲಿ ಕೆಂಪು ಬಣ್ಣದ ಮನುಷ್ಯರ ಚಿತ್ರಗಲು, ಗುರುತಿಸಲಾಗದ ಆಕಾರಗಳಿವೆ. ಇಷ್ಟಲ್ಲದೆ ಮೇಲೆ ಕೊರೆದು ರಚಿಸಲಾದ ಐತಿಹಾಸಿಕ ಗಣಪತಿಯ ಚಿತ್ರಗಳಿವೆ. ಹಾಗೆಯೇ ಕಳ್ಳರ ಫಡಿಯಲ್ಲಿ ಕಲ್ಲಾಸರೆಯ ಒಳಭಾಗದಲ್ಲಿ ಕೆಂಪು ಬಣ್ಣದಿಂದ ರಚಿತವಾದ ರೇಖಾವಿನ್ಯಾಸದ ಚಿತ್ರಗಳಿವೆ. ಇಲ್ಲಿಂದ ಪಶ್ಚಿಮಕ್ಕೆ ಇನ್ನೊಂದು ಕಲ್ಲಾಸರೆಯಲ್ಲಿ ಕೆಂಪು ಬಣ್ಣದ ಮನುಷ್ಯಾಕಾರದ ಚಿತ್ರಗಳಿವೆ. ಗುಡ್ಡದ ರಂಗನಾಥ ದೇವಾಲಯದ ಎದುರಿಗೆ ಬಲಗಡೆಯಲ್ಲಿ ಸ್ವಲ್ಪ ದೂರ ಸಾಗಿದರೆ ಸಿಗುವ ಬೃಹತ್ ಶಿಲೆಯ ಕೆಳಭಾಗದಲ್ಲಿ ಬಿಳಿ ಬಣ್ಣದಿಂದ ರಚನೆಯಾದ ಮನುಷ್ಯನ ಚಿತ್ರವಿದೆ. ಮಾಲಗಿತ್ತಿ ಶಿವಾಲಯದ ಎದುರಿಗೆ ಕೆಳಗಿನ ಭಾಗದ ಗುಡ್ಡದಲ್ಲಿ ಒಂದು ಕಲ್ಲಾಸರೆಯಲ್ಲಿ ಮಾನವರ, ಬೇಟೆಗಾರರ, ಪ್ರಾಣಿಗಳ ಚಿತ್ರಗಳಿವೆ. ಇಷ್ಟೇ ಅಲ್ಲದೆ ಬಲೆಯಂತಹ ವಿನ್ಯಾಸಗಳೂ ಇವೆ. ಕೆ.ಇ.ಬಿ. ಕಛೇರಿಯ ಹಿಂದುಗಡೆಗೆ ಉತ್ತರ ದಿಕ್ಕಿನಲ್ಲಿ ಕಲ್ಲಾಸರೆಯಲ್ಲಿ ಜಿಂಕೆಗಳ ಸಮೂಹ, ಚಿರತೆಗಳ ಚಿತ್ರಗಳಿವೆ.

ಪ್ರಾಚ್ಯವಸತು ಇಲಾಖೆಯ ವಸ್ತುಸಂಗ್ರಹಾಲಯದ ಪೂರ್ವದಿಕ್ಕಿನಿಂದ ಉತ್ತರ ದಿಕ್ಕಿಗೆ ಸಾಗಿದರೆ ಸಿಗುವ ದೊಡ್ಡ ಶಿಲಾಶ್ರಯದಲ್ಲಿ ಕೆಂಪು ಬಣ್ಣದ ಮಾನವಾಕೃತಿಗಳು ಹಾಗೂ ಬಿಳಿಯ ಬಣ್ಣದ ಬಲೆಯಾಕಾರದ ಚಿತ್ರಗಳೂ ಕಾಣಸಿಗುತ್ತವೆ.

ಇನ್ನೊಂದು ಪ್ರಮುಖ ಸ್ಥಳವಾದ ಸೀತಿದೋಣಿಯ ಹತ್ತಿರ ಎತ್ತರದಲ್ಲಿರುವ ಬಂಡೆಯಲ್ಲಿ ಬೃಹತ್ತಾದ ಜೇನು ಹುಟ್ಟುಗಳು ಸದಾಕಾಲ ಇರುತ್ತವೆ. ಹಾಗಾಗಿಯೇ ಇದನ್ನು ಜೇನುಘಡಿ ಎಂದು ಕರೆಯುವರು. ಕೆಂಪು ಬಣ್ಣದ ದೊಡ್ಡ ಬಲೆಯಾಕಾರದ ಚಿತ್ರ ಇಲ್ಲಿ ರಚನೆಗೊಂಡಿದೆ. ನೀರಿನ ದೋಣಿ ಹತ್ತಿರದಲ್ಲಿ ಬಿಳಿಯ ಬಣ್ಣದ ಚಿತ್ರವಿದೆ. ಇಲ್ಲಿಂದ ಎರಡು ಕಿ.ಮೀ. ದೂರದಲ್ಲಿ ಮತ್ತೊಂದು ಬಂಡೆಯಲ್ಲಿ ಕೆಂಪು ಬಣ್ಣದ ಪ್ರಾಣಿ ಹಾಗೂ ಮನುಷ್ಯಾಕೃತಿಗಳಿವೆ.

ಬಾದಾಮಿ ತಾಲೂಕಿನ ಕುಟುಕನಕೇರಿಯ ಪ್ರದೇಶದಲ್ಲಿ ಒಂದು ಬೃಹತ್ತಾದ ಬಂಡೆಯ ಕೆಳಗಡೆ ಕೆಂಪು ಬಣ್ಣದಿಂದ ರಚಿಸಿದ ಮನುಷ್ಯಾಕೃತಿಗಳಿವೆ. ಅಲ್ಲದೇ ಎಲೆಯ ವಿನ್ಯಾಸಗಳೂ ಇವೆ. ಇಲ್ಲಿಯೇ ಮತ್ತೊಂದು ಕಡೆಗೆ ಹಳದಿ ಬಣ್ಣದಿಂದ ಚಿತ್ರಿಸಿದ ಆಕೃತಿಗಳಿವೆ. ಇವೆರಡೂ ಚಿತ್ರಗಳಲ್ಲದೇ ರೈತರು ಪೂಜಿಸುತ್ತಿರುವ ಒಂದು ಬಂಡೆಯ ಮೇಲಿನ ಭಾಗದಲ್ಲಿ ಕೆಂಪು ಹಾಗೂ ಬಿಳಿಯ ಬಣ್ಣದ ಮನುಷ್ಯ ಮತ್ತು ಪ್ರಾಣಿ ಚಿತ್ರಗಳು ಕಂಡುಬರುತ್ತವೆ. ಗೂಡಿನ ಹನಮಪ್ಪ ಎಂದು ಕರೆಯಲಾಗುವ ಸ್ಥಳದಲ್ಲಿನ ಒಂದು ಬಂಡೆಯಲ್ಲಿ ಕೆಂಪು, ಕರಿ ಮತ್ತು ಬಿಳಿ ಬಣ್ಣದ ಮಾನವಕಾರಗಳು, ಪ್ರಾಣಿ ಚಿತ್ರಗಳು ಮತ್ತು ಬಲೆಯಂತಹ ವಿನ್ಯಾಸ ಎದ್ದು ಕಾಣುತ್ತದೆ.

ಗವಿಗಳಲ್ಲಿರುವ ಈ ಚಿತ್ರಗಳು ಅಧ್ಯಯನ ತರಬೇತಿಗಳಿಂದ ಪ್ರಬುದ್ಧರಾದ ಉತ್ತಮ ಚಿತ್ರಕಾರರ ಕೃತಿಗಳಾಗಿರದೆ ಜನಸಾಮಾನ್ಯರಿಂದ ಬಿಡಿಸಲಾಗಿವೆ. ಮುಖ್ಯವಾಗಿ ಸಮಾಜದಲ್ಲಿಯ ಕಟ್ಟಳೆ ನಂಬಿಕೆಗಳಿಗನು ಗುಣವಾಗಿ ನಿತ್ಯ ಜೀವನೋಪಾಯಗಳಲ್ಲಿ ತೊಂದರೆಗಳು ಬಾರದಿರುವುದಕ್ಕೂ ಒಳ್ಳೆಯ ಪ್ರತಿಫಲ ಪಡೆಯಲಿಕ್ಕೂ ತೆಗೆದ ಸಾಂಪ್ರದಾಯಿಕ ಚಿತ್ರಗಳು ಇವುಗಳೆಲ್ಲ ಸಾಮಾನ್ಯವಾಗಿ ಕೆಮ್ಮಣ್ಣಿನಂಥ ಬಣ್ಣದ್ದು, ಕೆಲವು ಮುಸುಕಾದ ಬಿಳಿ ಬಣ್ಣದಲ್ಲಿವೆ. ಇಲ್ಲಿ ನೇರವಾಗಿ ಕಲ್ಲಿನ ಮೇಲೆ ಈ ಬಣ್ಣಗಳಿಂದ ಬಿಡಿಸ ಲಾಗಿದೆ. ಸಾಮಾನ್ಯವಾಗಿ ಪ್ರಾಣಿಗಳ ಮನುಷ್ಯರ ಚಿತ್ರಗಳನ್ನು ರೂಢಿಯಂತೆ ಸಾಂಕೇತಿಕವಾಗಿ ತೋರಿಸ ಲಾಗಿದೆ. ಕಣ್ಣು, ಕಿವಿ, ಮೂಗು ಮೊದಲಾದ ಶಾರೀರಿಕ ಲಕ್ಷಣಗಳನ್ನು ತೋರಿಸಿಲ್ಲ. ಬರೀ ಬಾಹ್ಯ ರೇಖೆಗಳ ಆಕೃತಿಗಳಿವೆ. ಆದರೆ ಈ ರೇಖೆಗಳು ಸಾಮಾನ್ಯವಾಗಿ ಭಾವನೆಗಳನ್ನು ಸೂಚಿಸುವ ಸ್ವಭಾವವುಳ್ಳ ದ್ದಾಗಿದ್ದು ಮನುಷ್ಯರ ಪ್ರಾಣಿಗಳ ಭಂಗಿಗಳನ್ನೆ ಇಂಗಿತಗಳನ್ನು ಪ್ರತ್ಯಕ್ಷವಾಗಿ ಸೂಕ್ಷ್ಮವಾಗಿ ಗ್ರಹಿಸಿ ಅವುಗಳನ್ನು ಅರ್ಥಗರ್ಭಿತವಾಗಿಯೂ ಸಹಜವಾಗಿಯೂ ಅಲ್ಲದೆ ಕಲಾವಂತಿಕೆಯಿಂದ ರಚನೆ ಮಾಡಿದ್ದಾರೆ.

ಚಿತ್ರಗಳನ್ನು ಕೆಮ್ಮಣ್ಣಿನ ಪುಡಿ, ಪ್ರಾಣಿಗಳ ಬಹುಮಟ್ಟಿಗೆ ಹಂದಿಯ ಪಕ್ಷಿಗಳ ಮೊಟ್ಟೆಯ ಬಿಳಿಯ ತಿರುಳು ಹಾಗೂ ಎಲುಬಿನ ಪುಡಿಗಳನ್ನು ಹದವಾಗಿ ಕಲಿಸಿ ಮಾಡಿದ್ದಿರಬೇಕೆಂದು ತಜ್ಞರ

ಅಭಿಪ್ರಾಯ. ಆದ್ದರಿಂದಲೆ ಪುರಾತನ ಕಾಲದ ಇವು ಬಿಸಿಲು, ಮಳೆ, ಗಾಳಿಗೆ ತೆರೆದಿದ್ದರೂ ಪೂರ್ಣವಾಗಿ ಅಳಿಸಿ ಹೋಗಿಲ್ಲ. ಇವುಗಳು ಕ್ರಮೇಣವಾಗಿ ಬಿಳಿಯ ಬಣ್ಣಕ್ಕೆ ತಿರುಗಿವೆ. ಹಾಗೂ ಈ ಚಿತ್ರಗಳು ಕತ್ತಲಲ್ಲೂ ಸಹ ಕಾಣಿಸುತ್ತವೆ.ಯ ಬಹಳ ಪ್ರಾಚೀನ ಚಿತ್ರಗಳಲ್ಲಿ ಮಾನವರ, ಪ್ರಾಣಿ ಪಕ್ಷಿಗಳ ಚಿತ್ರಗಳೇ ಹೆಚ್ಚಾಗಿವೆ. ಬೇಟೆಯಾಡುವ ಅಥವಾ ಸಮೂಹ ಕುಣಿತದ ಸಾಂಕೇತಿಕ ದೃಶ್ಯ ಎದುರು ಬದುರಾಗಿ ನಿಂತಿರುವ ಗೂಳಿ, ಕಾಡೆಮ್ಮೆ, ಹಾಗೂ ಆನೆ, ಚಿಗರೆ ಇವುಗಳು ವಿಶೇಷವಾಗಿ ರಚನೆಗೊಂಡಿವೆ.

ಈ ಕಾಲದ ವರ್ಣಚಿತ್ರಗಳು ಬಾದಾಮಿ ನಗರದ ಸುತ್ತಮುತ್ತಲಿರುವ ಗವಿಗಳಲ್ಲಿ ಕಲ್ಲುಗಳ ಮೇಲೆ ಕಾಣಸಿಗುತ್ತವೆ. ೧ನೇ ಪುಲಿಕೇಶಿಯ ಕೋಟೆ, ಕೆಳಗಣ, ಮೇಲಣ, ಮಾಲಗಿತ್ತಿ ಶಿವಾಲಯಗಳಿರುವ ಉತ್ತರ ಗುಡ್ಡದಾಚೆ ಉತ್ತರ ದಿಕ್ಕಿಗಿರುವ ಬೆಟ್ಟದ ಸಾಲಿನಲ್ಲಿ ಸುಮಾರು ನಾಲ್ಕು ಕಡೆಗಳಲ್ಲಿ ವರ್ಣ ಚಿತ್ರಗಳನ್ನು ಕಾಣುತ್ತೇವೆ. ಹಾಗೆಯೇ ಅಲ್ಲಿಂದ ಸಿಡಿಲಫಡಿ ಕಾಲು ಹಾದಿಯು ಮಹಾಕೂಟಕ್ಕೆ ಹೋಗುವ ರಸ್ತೆಗೆ ಅಡ್ಡವಾಗಿ ಹೋಗಿವೆ. ಇವೆರಡರ ಕೂಡು ರಸ್ತೆಯಲ್ಲಿ ಸೀತಿದೋಣಿ ಎಂಬ ನೀರಿನ ಆಸರೆಯ ಹತ್ತಿರದಲ್ಲಿ ಬಹು ಎತ್ತರದ ಕಲ್ಲಾಸರೆ ಇರುವುದು. ಅದರ ಒಳ ಭಾಗದ ಮೈಯಲ್ಲಿ ಮರದ ಕೊಂಬೆ ಮಂಗ ಮೊದಲಾದ ನಾನಾ ತರಹದ ರೇಖಾವರ್ಣಚಿತ್ರಗಳಿವೆ. ವಿಶಾಲವಾದ ಸಿಡಿಲಫಡಿಯ ಎದುರಿನ ಬಂಡೆಯ ಮೆಲೆ ನಾನಾ ತರಹದ ವರ್ಣಚಿತ್ರಗಳಿವೆ. ತಟಕೋಟಿ ಭಾಗದ ಗುಡ್ಡದಂಚಿನಲ್ಲಿ ಕಲ್ಲಾಸರೆಯಲ್ಲೂ ವಿವಿಧ ವರ್ಣಚಿತ್ರಗಳಿವೆ. ಹೀಗೆ ಬಾದಾಮಿ ಸುತ್ತಮುತ್ತಲಿನ ಗುಡ್ಡ ಬೆಟ್ಟಗಳು ಪ್ರಾಗೈತಿಹಾಸಿಕ ವರ್ಣಚಿತ್ರಕಲೆಗಳಿಗೆ ಆಕರ ಕೇಂದ್ರಗಳಾಗಿವೆ.

ಈ ಭಿತ್ತಿಚಿತ್ರಗಳು ಉತ್ತಮ ಕಲಾಕಾರನಿಂದ ರಚನೆಗೊಂಡ ಕಲಾಕೃತಿಗಳಲ್ಲ ಆದಿಮಾನವರು ತಮ್ಮ ಜೀವನದಲ್ಲಿ ಅಳವಡಿಸಿಕೊಂಡ ನಂಬಿಕೆ ಮತ್ತು ಆಚರಣೆಯ ಉದ್ದೇಶದಿಂದಲೇ ತೆಗೆದ ಚಿತ್ರ ಗಳಾಗಿವೆ. ಇವೆಲ್ಲಾ ಸಾಮಾನ್ಯವಾಗಿ ಕೆಮ್ಮಣ್ಣಿನಿಂದ ರಚಿಸಲ್ಪಟ್ಟ ಕಲಾಕೃತಿಗಳಾಗಿವೆ. ಕೆಲವು ಬಿಳಿಯ ಬಣ್ಣದಲ್ಲಿವೆ. ಜನಸಾಮಾನ್ಯರು ನೇರವಾಗಿ ಬಂಡೆಗಳ ಮೇಲೆ ಈ ಬಣ್ಣಗಳಿಂದ ಬಿಡಿಸಿದ್ದಾರೆ. ಅದರಲ್ಲಿ ಅನೇಕ ರೀತಿಯ ಚಿತ್ರಗಳೂ ಇವೆ. ಅವುಗಳಲ್ಲಿ ಸಾಮಾನ್ಯವಾಗಿ ಪ್ರಾಣಿಗಳು, ಮನುಷ್ಯರ ಹಾಗೂ ವಿವಿಧ ರೇಖಾಚಿತ್ರಗಳಿವೆ. ಕೇವಲ ಧಾರ್ಮಿಕ ಕಟ್ಟಳೆಗನುಸಾರವಾಗಿ ಮಾಡಿದ್ದಾಗಿದ್ದರೂ ಅವುಗಳಲ್ಲಿ ಮೆಚ್ಚಿಕೊಳ್ಳುವಂಥ ಕಲಾವಂತಿಕೆಯೂ ಇದೆ. ಈ ಎಲ್ಲ ಚಿತ್ರಗಳನ್ನು ತಮ್ಮ ಆತ್ಮ ಸಂತೋಷಕ್ಕಾಗಿ ಪ್ರಾಚೀನರು ರಚಿಸಿದ್ದಾರೆ. ಕಲಾಕೃತಿಗಳನ್ನು ನಿರ್ಮಿಸುವಲ್ಲಿ ಪ್ರಾಚೀನ ಕಾಲದ ಜನಸಾಮಾನ್ಯರು ಬಳಸುವ ಬಣ್ಣಗಳು ವಿಶೇಷವಾಗಿವೆ. ಕೆಮ್ಮಣ್ಣಿನ ಪುಡಿ ತಯಾರಿಸಲು ಪ್ರಾಣಿಗಳ ರಕ್ತ, ಪಕ್ಷಿಗಳ ಮೊಟ್ಟೆಯ ಬಿಳಿಯ ತಿರುಳು ಹಾಗೂ ಎಲುಬಿನ ಪುಡಿ ಇವುಗಳನ್ನು ಹದವಾಗಿ ಕಲಿಸಿ ತಮ್ಮ ಕಲಾಕೃತಿಗಳಿಗೆ

ಬಳಸುತ್ತಿದ್ದವರೆಂದು ತಜ್ಞರು ತಿಳಿಸಿದ್ದಾರೆ. ಈ ಎಲ್ಲಾ ಚಿತ್ರಗಳು ಪ್ರಾಚೀನ ಕಾಲದಿಂದಲೂ ಇವತ್ತಿನ ವರೆಗೂ ಮುಸುಕು ಮುಸುಕಾಗಿ ಕಂಡು ಬರುತ್ತವೆ. ಬಿಸಿಲು, ಗಾಳಿ, ಮಳೆ ಮುಂತಾದ ಪ್ರಕೃತಿಯ ಅಪತ್ತುಗಳಿಗೆ ಮೈಯೊಡ್ಡಿ ನಿಂತಿರುವ ಸಾಮಾನ್ಯರ ವರ್ಣಚಿತ್ರಗಳು ಇವತ್ತಿಗೂ ಪ್ರಾಚೀನರ ಬದುಕಿನ ವೈಶಿಷ್ಟ್ಯತೆಯನ್ನು ಸಾರಿ ಹೇಳುತ್ತವೆ.

ಬಾದಾಮಿ ಪ್ರದೇಶದ ಜನಪದರು ಹಲವಾರು ರೀತಿಯ ಭಿತ್ತಿಚಿತ್ರಗಳನ್ನು ರಚಿಸುತ್ತಾ ಬಂದಿದ್ದಾರೆ. ರಂಗವಲ್ಲಿಯ ನಾನಾ ನಮೂನೆಯ ಚಿತ್ತಾರಗಳು ಸಹೃದಯಿಗಳ ಮನಸ್ಸನ್ನು ಆಕರ್ಷಿಸುತ್ತವೆ. ಹಾಗೆಯೇ ಇಲ್ಲಿಯ ಜನರು ಮದರಂಗಿಗಳನ್ನು ಬಳಸುತ್ತಾರೆ. ಈ ಮದರಂಗಿ ಬಳಸುವುದರಲ್ಲಿ ಅನೇಕ ರೀತಿಯ ಸಲಕರಣೆಗಳಿವೆ. ಹಾಗೂ ಅದನ್ನು ನುರಿತ ಮದರಂಗಿ ಹಚ್ಚುವ ವ್ಯಕ್ತಿಗಳಿಂದ ಹಚ್ಚಿಸಿಕೊಳ್ಳಬಹುದು. ಈ ಬಾದಾಮಿ ನಗರದ ಸುತ್ತಮುತ್ತಲೂ ಇರುವ ಇನ್ನೊಂದು ವಿಶೇಷತೆ ಎಂದರೆ ಕೌದಿ ಹೊಲೆ ಯುವುದು ಇಲ್ಲಿಯ ಕೌದಿಗಳು ಬೇರೆ ಬೇರೆ ಪಟ್ಟಣಗಳಿಗೆ ಹಾಗೂ ಹೊರ ರಾಜ್ಯಗಳಲ್ಲಿ ಮಾರಾಟ ವಾಗುತ್ತವೆ. ಈ ಕೌದಿಗಳನ್ನು ಉತ್ತರಕರ್ನಾಟಕದ ರಗ್ಗುಗಳೆಂದೇ ಕರೆಯುತ್ತಾರೆ. ಬಣ್ಣ ಬಣ್ಣದ ಅರಿವೆ ತುಂಡುಗಳು ಹಚ್ಚಿ ಹೊಲೆಯುತ್ತಾರೆ. ಹೊರನಾಡಿನಲ್ಲೂ ಸಹ ಅವುಗಳಿಗೆ ಅಪಾರ ಬೇಡಿಕೆ ಇದೆ.

ಶಿಷ್ಟಪದ ಭಿತ್ತಿಚಿತ್ರಕಲೆ ಚಾಲುಕ್ಯರ ಆಳ್ವಿಕೆಯಲ್ಲಿ ಕಂಡುಬರುವುದು ಈ ಶಿಷ್ಟಪದ ಭಿತ್ತಿ ಚಿತ್ರಕಲೆ ಚಾಲುಕ್ಯರು ನಿರ್ಮಿಸಿದ ವಾಸ್ತು ಶಿಲ್ಪಗಳಲ್ಲಿ ಅರಳಿ ನಿಂತಿವೆ. ಪ್ರೌಢನಾದ ಕಲಾಕಾರ ತನ್ನ ಪರಿಸರದ ಎಲ್ಲಾ ಆಯಾಮುಗಳನ್ನು ಅರಗಿಸಿಕೊಂಡು ಅಂದಿನ ಕಾಲದ ವೈಶಿಷ್ಟ್ಯತೆಗಳನ್ನು ವರ್ಣ ಚಿತ್ರಕಲೆಯಲ್ಲಿ ಎತ್ತಿ ತೋರಿಸಿದ್ದಾನೆ. ಬಾದಾಮಿ ಚಾಲುಕ್ಯರು ನಿರ್ಮಿಸಿದ ಗುಹಾಂತರ ದೇವಾಲಯಗಳಲ್ಲಿ ಸ್ತ್ರೀ-ಪುರುಷರ ಚಿತ್ರಗಳನ್ನು ಬಿಡಿಸಿದ್ದಾರೆ. ಅಂದಿನ ಕಾಲದ ಉಡುಗೆ, ತೊಡುಗೆ, ನಯ, ನಾಜೂಕು, ಅಭರಣ, ಅಲಂಕಾರ ಮುಂತಾದವುಗಳನ್ನು ವರ್ಣಚಿತ್ರಗಳಲ್ಲಿ ಕಾಣಬಹುದು. ಸಂಪ್ರದಾಯ ಬದ್ಧವಾದ ಕಲಾಕೃತಿಗಳು ಕಲಾಸಕ್ತರ ಮನಸ್ಸನ್ನು ಸೆರೆಹಿಡಿಯುತ್ತವೆ ಒಟ್ಟಿನಲ್ಲಿ ಈ ಕಾಲದಲ್ಲಿ ಚಿತ್ರಕಲೆಯ ಒಂದು ಪರಂಪರೆಯೇ ಬೆಳೆದು ಬಂದಿದೆ.

ಪ್ರಾಚೀನ ಚಿತ್ರಕಲೆಯ ಉದ್ದೇಶ

ಮಾನವನು ಸೌಂದರ್ಯಾನುಭವವೆಂಬ ದೊಡ್ಡ ತತ್ವ ದೃಷ್ಟಿಯಿಂದಲ್ಲಿದಿದ್ದರೂ, ವಿನೋದಕ್ಕಾದರೂ ತನ್ನ ಸುತ್ತಮುತ್ತಲೂ ಓಡಾಡುತ್ತಿದ್ದ ಪ್ರಾಣಿ, ಪಕ್ಷಿಗಳನ್ನು ಬಿಡುವಿನ ಸಮಯದಲ್ಲಿ ಅವುಗಳಂತೆ ಚಿತ್ರಿಸಲು ಪ್ರಯತ್ನಿಸಿ ಅಂತೆಯೇ ಕಲೆಯಲ್ಲಿ ಮುಂದುವರೆದಿರಬಹುದು. ಈ ಸಂದೇಹವನ್ನು ಹೋಗ

ಲಾಡಿಸಲು ಈ ಚಿತ್ರಕಲಾ ಕೃತಿಗಳಿರುವ ಗವಿಗಳು ಮತ್ತು ಚಿತ್ರಗಳು ಬರೆಯಲ್ಪಟ್ಟಿರುವ ರೀತಿ ಇವುಗಳನ್ನು ಅರ್ಥ ಮಾಡಿಕೊಂಡರೆ ಅನುಕೂಲವಾಗುವುದು. ಮೇಲೆ ಹೇಳಿದಂತೆ ಕಲೆಯು ಮನುಷ್ಯನ ಸೌಂದರ್ಯಾನುಭವದ ಪ್ರತಿಬಿಂಬ. ಈ ಮನುಷ್ಯರೂ ಅಂತೆಯೇ ಈ ಚಿತ್ರಗಳನ್ನು ರಚಿಸಿರಬಹುದೇ ಎಂಬುದನ್ನು ಈಗ ಕಾಣಬೇಕಾಗಿದೆ. ಮೊದಲನೆಯದಾಗಿ ಇನ್ನೂ ಅಪಕ್ವ ಸ್ಥಿತಿಯಲ್ಲಿಯೇ ಇದ್ದ ಮನವರಲ್ಲಿ ಸೌಂದರ್ಯಾನುಭವದ ಶಕ್ತಿ ಇತ್ತೇ? ಅದರೆ ಆಗಲೇ ತನ್ನ ಬಂಧುಗಳು, ಹೆಂಡತಿ, ಮಕ್ಕಳು ತನ್ನ ಆಯುಧಗಳು ಮುಂತಾದವುಗಳನ್ನು ನಿರ್ದೇಶಿಸಿ ಒಂದು ಸಮೂಹ ಜೀವನವನ್ನು ನಡೆಸಬಲ್ಲಷ್ಟು ಪ್ರಗತಿ ಹೊಂದಿದ್ದ ಎಂಬುದಾಗಿದೆ. ಮೇಲೆ ಹೇಳಿದಂತೆ ಈ ಚಿತ್ರಕಲೆಯು ಇವರ ಸೌಂದರ್ಯಾನುಭವದ ಫಲವಾಗಿರಬಹುದು. ಪ್ರಾಚೀನ ಚಿತ್ರಗಳೆಲ್ಲವೂ ಸಾಮಾನ್ಯವಾಗಿ ಗವಿಗಳ ಒಳ ಹಿಂಪಾರ್ಶ್ವಗಲ್ಲಿಯೂ ಒಳಛಾವಣಿಗಳ ಮೇಲೆಯೋ ರಚಿಸಲ್ಪಟ್ಟಿವೆ. ಇದರಿಂದ ಮನುಷ್ಯರು ಗವಿಯೊಳಗೆ ವಾಸಿಸದೆ ಮುಂದಿನ ಭಾಗಗಳಲ್ಲಿ ವಾಸಿಸುತ್ತಿದ್ದಂತೆ ಅನೇಕ ಕುರುಹುಗಳು ದೊರೆತಿವೆ.

ಅನಾದಿ ಕಾಲದಿಂದಲೂ ಮಾನವನಲ್ಲಿ ಮೂಢನಂಬಿಕೆಯೂ ಶಕುನ ಸಾಲಾವಳಿಗಳೂ ಮಾಟ ಕೂಟಗಳು ಆಚರಣೆಯಲ್ಲಿವೆ. ಇದಲ್ಲದೆ ಈ ಆದಿಮಾನವರು ರಚಿಸಿರುವ ಕೆಲವಡೆಗಳಲ್ಲಿ ಪೂರೈಸಲ್ಪಟ್ಟ ಚಿತ್ರಗಳ ಮೇಲೆ ಬಾಣದ ಗುರುತುಗಳು ಅವುಗಳಿಂದ ಮಾಡಲ್ಪಟ್ಟ ಘಾತಗಳೂ ಇವೆ. ಎರಡನೆಯದಾಗಿ ಇವರ ಚಿತ್ರಕಲಾಕೃತಿಗಳು ಸಾಮಾನ್ಯವಾಗಿ ಕೆಲವು ಕಡೆ ಇವರ ನಿವಾಸ ಸ್ಥಾನದಿಂದ ದೂರವಾಗಿ ಬಹುದುರ್ಗಮದ ಸ್ಥಾನಗಳಲ್ಲಿ ಚಿತ್ರಿಸಲ್ಪಟ್ಟಿವೆ. ಪ್ರಾಚೀನ ಮಾನವನು ಸಾಮಾನ್ಯವಾಗಿ ಮಾಡಿರುವ ಕಾರ್ಯಗಳೆಲ್ಲವೂ ಸ್ವಪ್ರಯೋಜನಕ್ಕೆ ಮಾಡಿರುವಂಥವಹವು. ಒಟ್ಟಿನಲ್ಲಿ ಹೇಳುವುದಾದರೆ ಪ್ರಾಕ್ತನ ಮಾನವರು ಸಾಮಾನ್ಯವಾಗಿ ಚಿತ್ರಕಲೆಯನ್ನು ತಮ್ಮ ತಾಂತ್ರಿಕ ವಿದ್ಯಾಸಾಧನವನ್ನಾಗಿ ಉಪಯೋಗಿಸುತ್ತಿದ್ದರು. ಅವರಲ್ಲಿ ಪ್ರಗತಿಪರರಾದವರು ತಮ್ಮ ಕಲಾಭಿರುಚಿಯಿಂದಲೂ ಚಿತ್ರಗಳನ್ನು ರಚಿಸುತ್ತಿದ್ದರು.

ಚಿತ್ರಕಲೆ ರಚನೆಯ ಉದ್ದೇಶ

ಪ್ರಾಗೈತಿಹಾಸಿಕ ಕಾಲದ ಚಿತ್ರ ರಚನೆಯ ಉದ್ದೇಶಗಳ ಬಗೆಗೆ ಬಹಳಷ್ಟು ಬೇರೆ ಬೇರೆ ರೀತಿಯಲ್ಲಿ ಅಭಿಪ್ರಾಯಗಳಿರುವುದು. ಪ್ರಾಚೀನ ಕಾಲದ ಸಾಮಾನ್ಯ ಜನತೆಯ ಭಾವನಾತ್ಮಕ ಅಭಿವ್ಯಕ್ತಿಯ ಫಲವಾಗಿ ರಚಿಸಲ್ಪಟ್ಟುವುಗಳೆಂದು ಹಾಗೂ ಸೌಂದರ್ಯ ಪ್ರಜ್ಞೆಯುಳ್ಳ ಕೆಲವರು ನಿಸರ್ಗದ ಚೆಲುವಿನಿಂದ ಪ್ರೇರೇಪಿತರಾಗಿ ನಿರ್ಮಿಸಿರುವ ಉದ್ದೇಶವೆಂದು ಅಭಿಪ್ರಾಯಿಸಲಾಗಿದೆ. ನಿರಂತರ ಆಹಾರ ದೊರಕಿಸಿ ಕೊಳ್ಳುವ ಮಾಂತ್ರಿಕ ಸಂಬಂಧಿ ಚಿತ್ರಗಳೆಂದು ಹೇಳಲಾಗುತ್ತದೆ. ಬಾದಾಮಿ ಸುತ್ತಮುತ್ತಲಿನ ಪ್ರದೇಶದ ವ್ಯಾಪ್ತಿಗೆ ಸಂಬಂಧಿಸಿದಂತೆ ಈ ಅಭಿಪ್ರಾಯಗಳ ಹಿನ್ನಲೆಯಲ್ಲಿ ಮೂರು ರೀತಿಯ ಉದ್ದೇಶಗಳನ್ನು ಈ ಕೆಳಗಿನಂತೆ ಕಾಣಬಹುದು.

೧. ಭಾವನಾತ್ಮಕ ಪ್ರೇರಣೆ

ಮನುಷ್ಯ ಭಾವನಾ ಜೀವಿ. ಭಾವನೆಗಳ ತೀವ್ರ ಅಭಿವ್ಯಕ್ತಿಯ ಪ್ರೇರಣೆಯಾದಾಗ ಅದನ್ನು ವಿವಿಧ ಮಾಧ್ಯಮದ ಮೂಲಕ ಅಭಿವ್ಯಕ್ತಿಸುತ್ತಾನೆ ಎಂಬುದು ಚಿತ್ರದ ನೆಲೆ ಹಿನ್ನೆಲೆಯನ್ನು ಗಮನಿಸಿ ಕೆಲವು ಚಿತ್ರಗಳು ಭಾವನಾತ್ಮಕ ಪ್ರೇರಣೆಯ ಫಲವಾಗಿ ರಚಿತವಾಗಿವೆ. ಆ ವ್ಯಕ್ತಿ ಕಾಲಾ ಪ್ರಜ್ಞೆಯುಳ್ಳವನಾಗಿದ್ದರೆ ಅಭಿವ್ಯಕ್ತಗೊಂಡ ಯಾವುದೇ ಮಾಧ್ಯಮದ ಅಥವಾ ಚಿತ್ರರಚನೆ ಮತ್ತು ಭಾವ ಪ್ರಕಟಣೆಯ ದೃಷ್ಟಿಯಿಂದ ಉತ್ತಮವಾಗಿರುತ್ತದೆ. ಹೀಗೆ ಬಾದಾಮಿಯ ಸುತ್ತಮುತ್ತಲಿನ ಪ್ರದೇಶದಲ್ಲಿ ಕೆಲವು ಚಿತ್ರಗಳನ್ನು ಮಾಂತ್ರಿಕ ಉದ್ದೇಶದಿಂದ ರಚಿಸಿದವೆಂದು ಹೇಳಲಾಗುವುದು. ವಿಶೇಷವಾಗಿ ಬಯಲು ಬಂಡೆಯಲ್ಲಿ ಕೊರೆದು ಕುಟ್ಟಿದ ಮನುಷ್ಯರ ಮತ್ತು ಪ್ರಾಣಿಗಳ ಚಿತ್ರಗಳು ನಿಜವಾಗಲೂ ತಕ್ಷಣದ ಅಭಿವ್ಯಕ್ತಿಯ ಉದ್ದೇಶದಿಂದ ರಚಿತವಾಗಿರುವುದೆಂದು ಹೇಳಬಹುದು.

೨. ಅಲಂಕರಣೆ

ಅದೇ ರೀತಿ ಅಲಂಕರಣೆಯ ಉದ್ದೇಶದಿಂದ ಕೆಲವು ಚಿತ್ರಗಳನ್ನು ಚಿತ್ರಿತವಾಗಿವೆ ಎನ್ನಬಹುದು. ಮನುಷ್ಯ ಮೂಲತಃ ಪ್ರಕೃತಿಯಲ್ಲಿನ ನಿಸರ್ಗ ಜೀವಿ ಅವನಲ್ಲಿ ಸೌಂದರ್ಯ ಪ್ರಜ್ಞೆ ಸೂಪ್ತವಾಗಿರುತ್ತದೆ. ಇದಕ್ಕೆ ಹಳೆಯ ಶಿಲಾಯುಗದ ಒರಟು ಆಯುಧಗಳನ್ನೆಲ್ಲ, ನವಶಿಲಾಯುಗದಲ್ಲಿ ಸುಂದರವಾಗಿ ಮಾಡಿಕೊಂಡಿರುವುದು ನಿತ್ಯ ಬಳಕೆಯ ಮಡಿಕೆಗಳನ್ನು ಅಲಂಕರಿಸಿಕೊಂಡಿರುವುದು ಅನವ ಕಲಾ ಪ್ರಜ್ಞೆಯ ಸಾಕ್ಷಿಗೆ ಹಿಡಿದ ಕನ್ನಡಿಯಾಗಿದೆ.

ಈ ಆದಿಮಾನವರು ಬಳಸುವ ಪಾತ್ರೆಗಳಷ್ಟೆ ಅಲ್ಲದೇ ತಾವು ಸಾಕಿದ ಪ್ರಾಣಿ ಪಕ್ಷಿಗಳನ್ನು ಅಲಂಕರಿಸಿದ ಹಾಗೆ ಚಿತ್ರಗಳಲ್ಲಿ ಕಾಣಬಹುದು. ಇದರಿಂದ ಚಿತ್ರಗಳನ್ನು ಬಿಡಿಸುವುದಷ್ಟೇ ಉದ್ದೇಶವಾಗಿದ್ದಲ್ಲಿ, ಈ ರೀತಿಯ ಅಲಂಕರಣೆ ಅಗತ್ಯವಿರಲಿಲ್ಲ. ಹಾಗಾಗಿ ಸ್ಪಷ್ಟವಾಗಿ ಅಲಂಕರಣೆಯ ಉದ್ದೇಶವೇ ಇಲ್ಲಿ ಪ್ರಧಾನವಾಗಿರುವುದು ಗುರುತಿಸಬಹುದು.

೩. ಮಾಂತ್ರಿಕ ಕಟ್ಟಳೆ

ಪ್ರಾಗೈತಿಹಾಸಿಕ ಕಾಲದ ಹೆಚ್ಚಿನ ಚಿತ್ರ ರಚನೆಗೆ ಮತ್ತೊಂದು ಮಹತ್ವದ ಉದ್ದೇಶ ಒಂದು ರೀತಿಯಲ್ಲಿ ಮಾಂತ್ರಿಕ ಕಟ್ಟಳೆ ಅಥವಾ ಆಚರಣೆ ಕಾರಣವೆನ್ನಬಹುದು. ಒಬ್ಬ ಮನುಷ್ಯ ಅಥವಾ ಪ್ರಾಣಿಯ ಚಿತ್ರಗಳನ್ನು ತೆಗೆದು ಮಂತ್ರಿಸಿದರೆ ಅವನು ಅಥವಾ ಅದು ತನ್ನ ವಶವಾಗುವುದೆಂದು ಅತವಾ ಶತ್ರುವಾಗಿದ್ದಾರೆ ನಾಶವಾಗುವನೆಂಬ ನಂಬಿಕೆ ಬಹು ಪುರಾತನ ಕಾಲದಿಂದ ಉಳಿದುಕೊಂಡು

ಬಂದಿರುವಂತಹದು. ಬೇಟೆ, ಪಶುಪಾಲನೆ, ಸಮೂಹ ಕುಣಿತ, ನಗ್ನ ಕುಣಿತ, ಇವೆಲ್ಲ ಮಾಂತ್ರಿಕ ಕಟ್ಟಳೆ ಉದ್ದೇಶಿತ ರಚನೆಗಳೆಂದು ಹೇಳಬಹುದು. ಬಾದಾಮಿಯ ಸುತ್ತಮುತ್ತಲಿನ ಇಂತಹ ಚಿತ್ರಗಳು ಕಂಡುಬರುತ್ತವೆ. ಹೀಗೆ ಚಿತ್ರಕಲೆಯಲ್ಲಿ ಅದರ ಉಪಕರಣಗಳಲ್ಲಿ ಬದಲಾವಣೆಯಾಗಿರಬಹುದು. ಆದರೆ ಭಾವ ಮತ್ತು ವಿನ್ಯಾಸ ಕ್ರಮಗಳಲ್ಲಿ ಪ್ರಗತಿ ಏಷ್ಟಾಗಿದೆ ಹಾಗೂ ಇವರ ಕಲೆಯಲ್ಲಿ ಪಾಶ್ಚಾತ್ಯ ಪದ್ಧತಿಯ ಚಿತ್ರಗಳಿಗೆ ಸರಿಸಮನಾದ ಚಿತ್ರಗಳು ಪ್ರಾಚ್ಯ ಪದ್ಧತಿಯ ಚಿತ್ರಗಳು ಆಧುನಿಕ ಭಾವನಾ ಪ್ರಧಾನವಾದ ಪದ್ಧತಿಯ ಚಿತ್ರಗಳು ದೊರೆಯುತ್ತದೆ.

ಕುಲ್ಹಳ್ಳಿ ಗೊಂಬಿ ಗುಡ್ಡದ ಪ್ರಾಗೈತಿಹಾಸಿಕ ಚಿತ್ರಗಳು

ಐತಿಹಾಸಿಕವಾಗಿ, ಅವಿಭಜಿತ ವಿಜಾಪೂರ ಜಿಲ್ಲೆಯು ಒಂದು ಶ್ರೀಮಂತ ಜಿಲ್ಲೆ. ಇಲ್ಲಿಯು ಜೀವನಕ್ಕೆ ಬೇಕಾಗುವಂತ ನೀರು, ಹವಾಮಾನ, ಫಲವತ್ತಾದ ನೆಲ ಇದರಿಂದಾಗಿ, ಪ್ರಾಚೀನ ಕಾಲದಿಂದಲೂ ಮಾನವನು ಇಲ್ಲಿ ವಾಸಿಸಿದ ಬಗ್ಗೆ ಪುರಾವೆಗಳಿವೆ.

ಈಗಿನ ಬಾಗಲಕೋಟೆ ಜಿಲ್ಲೆಯ, ಜಮಖಂಡಿ ತಾಲೂಕಿನಲ್ಲಿಯ ಆಸಂಗಿ ಮತ್ತು ಕುಲ್ಹಳ್ಳಿ ಗ್ರಾಮಗಳ ನಡುವೆ ಒಂದು ಮೈಲು ಸುತ್ತಳತೆಯ ಒಂದು ಕಲ್ಲಿನ ಗುಡ್ಡವಿದ್ದು ಇದಕ್ಕೆ "ಗೊಂಬಿ ಗುಡ್ಡ" ಎಂದು ಕರೆಯುತ್ತಾರೆ. ಇಲ್ಲಿ ಪ್ರಾಚೀನ ಕಾಲದ ಜನರು ಕಲ್ಲಿನಲ್ಲಿ ಕೆತ್ತಿದ ಚಿತ್ರಗಳಿವೆ. ಈ ಸರಳ ಚಿತ್ರಗಳನ್ನು ಕಲ್ಲಿನ ಇಳಿಜಾರಿನ ಮೇಲೆ ಕೆತ್ತಿದ್ದು, ಅವು ಸುಮಾರು ೧/೮" ಆಳವಾಗಿವೆ. ಈ ಚಿತ್ರಗಳಲ್ಲಿ ಕಾದಾಡುತ್ತಿರುವ ಗೂಳಿಗಳು, ಮನುಷ್ಯರು, ಒಂಟೆಗಳು (ಒಂಟೆ ಸವಾರರು) ಆನೆಗಳು, ಚಿಗರೆಗಳು, ಎಂಟೆಲೋಪ ಮತ್ತು ಡೋಲಿ ಹೊತ್ತವರ ಚಿತ್ರಗಳು ಕಾಣುತ್ತವೆ. ಈ ಚಿತ್ರಗಳಿಗೂ ಮತ್ತು ಬಳ್ಳಾರಿಯ ಸಮೀಪದ ಕುಪ್ಪಗಲ್ಲು ಗುಡ್ಡದಲ್ಲಿ ಕಾಣುವ ಚಿತ್ರಗಳಿಗೂ ಹೋಲಿಕೆ ಇರುವದರಿಂದ ಇವು ಪ್ರಾಚೀನ (Pre-Historic) ಮಾನವನ ಕಾಲದ್ದು ಎಂದು ತಿಳಿದುಬರುತ್ತದೆ. ಇವುಗಳ ಜೊತೆಗೆ ಕೆಲವು ಹೊಸದಾದ ಚಿತ್ರಕಲೆಗಳು ಕಾಣುತ್ತವೆ. (ಶ್ರೀ ಆರ್. ಎಸ್. ಪಂಚಮುಖಿ).

"ಯಲ್ಲಟ್ಟಿಯ ಹತ್ತಿರದ ಬಂಡಿಗಣಿ ಎಂಬ ಗುಡ್ಡದಲ್ಲಿಯೂ ಕೂಡ ಗುಹೆಯಲ್ಲಿ (ಕಲ್ಲಿನ) ಕಲ್ಲಿನ ಮೇಲೆ ಬಿಳಿ ಬಣ್ಣದಿಂದ ಚಿತ್ರಿಸಿದ ಚಿತ್ರಗಳು ಇದ್ದು, ಇವುಗಳಲ್ಲಿ ದೇವಾಲಯ ಮತ್ತು ತೇರಿನ ಸುತ್ತ ಜನರು ಬೇರೆ ಬೇರೆ ಭಂಗಿಯಲ್ಲಿ ನಿಂತಿರುವುದು ಕಂಡುಬರುತ್ತದೆ".[೨] ಇದಕ್ಕೆ ನೂರಾಳಪಡಿ ಎಂದು ಹೆಸರು (ನೂರಾಳ ಎಂದರೆ ನೂರು ಜನರು). ಈ ಪ್ರಾಚೀನ ಕಾಲದ ಚಿತ್ರಗಳು ಮತ್ತು ಕೆತ್ತನೆಯ ಕಾಳಜಿ ಇಲ್ಲದೇ ಹಾಳುಗುತ್ತಲಿವೆ. ಇವುಗಳ ರಕ್ಷಣೆ ಅತಿ ಅವಶ್ಯ.

---


೨. ಡಾ. ಎಚ್.ಜಿ. ದಡ್ಡಿ., *ಗೊಂಬಿ ಗುಡ್ಡ ರಕ್ಷಣೆ,* (ಲೇಖನ) ಸಂಯುಕ್ತ ಕರ್ನಾಟಕ.



ಬಾದಾಮಿ ಹತ್ತಿರ ಕುಟಕನಕೇರಿ
ಬಂಡೆಯ ಮೇಲೆ ಪ್ರಾಗೈತಿಹಾಸಿಕ
ಚಿತ್ರಕಲೆ



ತಟಕೋಟಿಯ ಬಂಡೆಯಲ್ಲಿ
ಕೆಂಪುಬಣ್ಣದ ಮನುಷಾಕೃತಿ ರೇಖಾಚಿತ್ರ




ಸಿಡಲಫಡಿಯ ಬಂಡೆಯ ಮೇಲಿನ
ಬಿಳಿಬಣ್ಣದ ಪ್ರಾಣಿ
ರೇಖಾಚಿತ್ರ




ಬಾದಾಮಿ ರಂಗನಾಥ
ಬಂಡೆಯ ಮೇಲೆ ಪ್ರಾಗೈತಿಹಾಸಿಕ
ಚಿತ್ರಕಲೆ





ಬಾದಾಮಿ ಹತ್ತಿರ ಮಹಾಕೂಟ
ಬಂಡೆಯ ಮೇಲೆ ಪ್ರಾಗೈತಿಹಾಸಿಕ
ಚಿತ್ರಕಲೆ

ಬಾದಾಮಿ ಹತ್ತಿರ ಸಿಡಲಫಡಿ
ಬಂಡೆಯ ಮೇಲೆ ಪ್ರಾಗೈತಿಹಾಸಿಕ
ಚಿತ್ರಕಲೆ







ಬಾದಾಮಿ ಹತ್ತಿರ ಮಹಾಕೂಟ
ಬಂಡೆಯ ಮೇಲೆ ಪ್ರಾಗೈತಿಹಾಸಿಕ
ಚಿತ್ರಕಲೆ



ಬಾದಾಮಿ ಹತ್ತಿರ ಮಹಾಕೂಟ
ಬಂಡೆಯ ಮೇಲೆ ಪ್ರಾಗೈತಿಹಾಸಿಕ
ಚಿತ್ರಕಲೆ



ಬಾದಾಮಿ ಹತ್ತಿರ ತಟಕೋಟಿ
ಬಂಡೆಯ ಮೇಲೆ ಪ್ರಾಗೈತಿಹಾಸಿಕ
ಚಿತ್ರಕಲೆ





ಬಾದಾಮಿ ಭೂತನಾಥ
ಬಂಡೆಯ ಮೇಲೆ ಪ್ರಾಗೈತಿಹಾಸಿಕ
ಚಿತ್ರಕಲೆ



ಬಾದಾಮಿ ಹತ್ತಿರ ಮಹಾಕೂಟ
ಬಂಡೆಯ ಮೇಲೆ ಪ್ರಾಗೈತಿಹಾಸಿಕ
ಚಿತ್ರಕಲೆ



ಬಾದಾಮಿ ಹತ್ತಿರ ತಟಕೋಟಿ
ಬಂಡೆಯ ಮೇಲೆ ಪ್ರಾಗೈತಿಹಾಸಿಕ
ಚಿತ್ರಕಲೆ




ಬಾದಾಮಿ ಭೂತನಾಥ
ಬಂಡೆಯ ಮೇಲೆ ಪ್ರಾಗೈತಿಹಾಸಿಕ
ಚಿತ್ರಕಲೆ






ಬಾದಾಮಿ ಹತ್ತಿರ ಕುಟಕನಕೇರಿ
ಬಂಡೆಯ ಮೇಲೆ ಪ್ರಾಗೈತಿಹಾಸಿಕ
ಚಿತ್ರಕಲೆ


ಬಾದಾಮಿ ಹತ್ತಿರ ಕುಟಕನಕೇರಿ
ಬಂಡೆಯ ಮೇಲೆ ಪ್ರಾಗೈತಿಹಾಸಿಕ
ಚಿತ್ರಕಲೆ



ಜಮಖಂಡಿ ತಾಲೂಕಿನ ಕುಲ್ಲೋಳ್ಳಿಯ ಗೊಂಬಿಗುಡ್ಡದಲ್ಲಿರುವ ಪ್ರಾಗೈತಿಹಾಸಿಕ ರೇಖಾಚಿತ್ರಗಳು










ಡಾ. ಶಿಲಾಕಾಂತ ಪತ್ತಾರ ಅವರ ಸಂಗ್ರಹದಲ್ಲಿನ ಪ್ರಾಗೈತಿಹಾಸಿಕ ರೇಖಾಚಿತ್ರ ಪ್ರತಿಕೃತಿಗಳು









ಜಮಖಂಡಿ ತಾಲೂಕಿನ
ಕುಲ್ಲೋಳ್ಳಿಯ
ಗೊಂಬಿಗುಡ್ಡದಲ್ಲಿರುವ
ಪ್ರಾಗೈತಿಹಾಸಿಕ
ರೇಖಾಚಿತ್ರಗಳು










ಜಮಖಂಡಿ ತಾಲೂಕಿನ ಕುಲ್ಲೋಳ್ಳಿಯ ಗೊಂಬಿಗುಡ್ಡದಲ್ಲಿರುವ ಪ್ರಾಗೈತಿಹಾಸಿಕ ರೇಖಾಚಿತ್ರಗಳು









ಜಮಖಂಡಿ ತಾಲೂಕಿನ ಕುಲ್ಲೋಳ್ಳಿಯ ಗೊಂಬಿಗುಡ್ಡದಲ್ಲಿರುವ ಪ್ರಾಗೈತಿಹಾಸಿಕ ರೇಖಾಚಿತ್ರಗಳು








ಜಮಖಂಡಿ ತಾಲೂಕಿನ ಕುಲ್ಲೋಳ್ಳಿಯ ಗೊಂಬಿಗುಡ್ಡದಲ್ಲಿರುವ ಪ್ರಾಗೈತಿಹಾಸಿಕ ರೇಖಾಚಿತ್ರಗಳು







ಅಧ್ಯಾಯ - ೪

ಜನಪದ ಚಿತ್ರಕಲೆ

- ಕಸೂತಿ ಕಲೆ
- ಕಸೂತಿ ಕಲಾವಿದರು
- ಹಚ್ಚೆಕಲೆ
- ಬೆಳದಿಂಗಳ ಚಿತ್ರಗಳು
- ರಂಗೋಲಿ
- ಜನಪದ ಚಿತ್ರಕಲೆ
- ಮದರಂಗಿ ಕಲೆ
- ಕಾಕನೂರಿನ ತೊಗಲು ಗೊಂಬೆಗಳು
- ಇಳಕಲ್ ರಂಗಪರದೆಯ ಚಿತ್ರ ಪರಂಪರೆ
- ಇಳಕಲ ಕೆಲವು ಪ್ರಮುಖ ರಂಗಪರದೆಯ ಚಿತ್ರಗಾರರ ಪರಿಚಯ

ಜನಪದ ಚಿತ್ರಕಲೆ

ಆದಿಮಾನವರ ಉಗಮದೊಂದಿಗೆ ಜನಪದ ಚಿತ್ರಕಲೆಯು ಆರಂಭವಾಯಿತೆಂದು ಹೇಳಬಹುದು. ಕಲೆಯು ದಿಢೀರನೆ ಹುಟ್ಟಿ ಬರಲಿಲ್ಲ. ಹಾಗೆಯೇ ಕಲೆಯು ಇಂಥ ಕಾಲದಲ್ಲಿಯೇ ಹುಟ್ಟಿತು ಎಂದೂ ಹೇಳಲಾಗುವುದಿಲ್ಲ. ಮನುಷ್ಯನ ಸಂಪರ್ಕ ಸಾಧನವಾಗಿ ಭಾಷೆಯು ಹುಟ್ಟುವ ಮೊದಲೇ ಚಿತ್ರಗಳನ್ನು ಗುಹೆಗಳಲ್ಲಿ ಬಂಡೆಗಳಲ್ಲಿ ಕೊರೆಯುತ್ತಿದ್ದುದರ ಬಗ್ಗೆ ಅನೇಕ ನಿದರ್ಶನಗಳಿವೆ.

ನಾಗರೀಕತೆಗಳು ಬೆಳೆಯುವ ಮುಂಚೆ ಆದಿಮಾನವರು ವನ್ಯಜೀವಿಗಳ ಜೊತೆಗೆ ಬದುಕು ನಡೆಸು ತ್ತಿದ್ದಾಗ, ಗುಹೆಗಳು, ಬಂಡೆಯಾಸರೆಗಳಲ್ಲಿ ಆಶ್ರಯ ಪಡೆಯುತ್ತಿದ್ದರು. ಇಂತಹ ಗುಹೆ ಹಾಗೂ ಶಿಲಾಶ್ರಯಗಳಲ್ಲಿ ವರ್ಣಚಿತ್ರ ಹಾಗೂ ರೇಖಾಚಿತ್ರಗಳು ರಚನೆಗೊಂಡಿವೆ. ಹಾಗೆಯೇ ಆದಿಮಾನವರು ರೇಖಾವಿನ್ಯಾಸದ ಕೊರೆದ ಚಿತ್ರಗಳನ್ನು ರಚಿಸಿದ್ದಾರೆ.

"ಆದಿಮಾನವನ ಕಲಾಕೃತಿಗಳು ಸುಮಾರು ೨೭೦೦ ವರ್ಷಗಳ ಹಿಂದೆ ಅರಿನೇಷಿಯನ್ ನಾಗರೀ ಕತೆಯ ಕಾಲದಲ್ಲಿ ದೊರೆತಿವೆ"[೧]. ಕುದುರೆ, ಕರಡಿ, ಕಾಡುಕೋಣ ಮುಂತಾದ ಕಲಾಕೃತಿಗಳು ದೊರೆತಿವೆ. ಅಲ್ಲದೇ ಮಾಟಮಂತ್ರ, ಬೇಟೆ ವ್ಯವಸಾಯಗಳಿಗೆ ಸಂಬಂಧಿಸಿದ ಕಲಾಕೃತಿಗಳೂ ಹೆಚ್ಚಾಗಿವೆ. ಅಮೆರಿಕಾ, ಇಜಿಪ್ಟ್, ಏಷ್ಯಾ ಹಾಗೂ ಯುರೋಪ ಕಂಡಗಳಲ್ಲಿ ಇವು ಹೇರಳವಾಗಿವೆ. ಭಾರತದಲ್ಲಿಯೂ ಸಹ ಇಂತಹ ಪ್ರಾಚೀನ ಗುಹಾ ಚಿತ್ರಗಳಿವೆ. ಮಾನವಶ ಕಲಾಕೃತಿಗಳನ್ನು ತಮ್ಮ ಗ್ರಂಥದಲ್ಲಿ ಉಲ್ಲೇಖಿಸುತ್ತ ಅವು ಹತ್ತು ಸಾವಿರ ವರ್ಷಗಳ ಹಿಂದೆ ನಿರ್ಮಾಣಗೊಂಡಿರುವ ಸಾಧ್ಯತೆಯನ್ನು ತಿಳಿಸುತ್ತಾರೆ. ಆಫ್ರಿಕಾದ ಬುಷ್‌ಮನ್ ಗೇಲಿಯ ಚಿತ್ರ ಹಾಗೂ ಸ್ಪೇನಿನ ಶಿಲಾಶ್ರಯದ ಚಿತ್ರಗಳಂತೆ ಭಾರತದ ಚಿತ್ರಗಳೂ

---

೧. ಡಾ. ಎಸ್.ಸಿ. ಪಾಟೀಲ, ಚಿತ್ರಾಕ್ಷಿ, ಜನಪದ ಚಿತ್ರಕಲೆ ಪ್ರಾಚೀನತೆ ಲೇಖನ.

ರಚನೆಗೊಂಡಿರುವುದು ಕುತೂಹಲಕರ ಸಂಗತಿ. ಭಾರತದಲ್ಲಿ ೫೦೦ಕ್ಕೂ ಮೀರಿದ ಗುಹಾ ಚಿತ್ರಗಳ ನೆಲೆಗಳಿವೆ ಎಂದು ಡಾ. ಅ. ಸುಂದರ ಅವರು ಅಭಿಪ್ರಾಯಪಟ್ಟಿದ್ದಾರೆ. ಇಂತಹ ಗುಹಾಚಿತ್ರಗಳು ಭಾರತದ ಮಧ್ಯಪ್ರದೇಶ, ಉತ್ತರ ಪ್ರದೇಶ, ಗುಜರಾತ, ರಾಜಸ್ಥಾನ, ಆಂಧ್ರಪ್ರದೇಶ ಕೇರಳ, ತಮಿಳುನಾಡು, ಕರ್ನಾಟಕದಲ್ಲಿ ಹೇರಳವಾಗಿ ಶೋಧವಾಗಿವೆ. ಈ ಗುಹಾಚಿತ್ರಗಳನ್ನು ನೈಸರ್ಗಿಕವಾಗಿ ಸಿಗುವ ವಸ್ತುಗಳಿಂದ ಬಣ್ಣ ತಯಾರಿಸಿ ಚಿತ್ರರಚಿಸಿದ್ದಾರೆ.

ಬಾಗಲಕೋಟ ಜಿಲ್ಲೆಯೂ ಸಹ ಅನೇಕ ಆದಿಮಾನವರ ಗುಹಾ ಚಿತ್ರಗಳನ್ನು ಹೊಂದಿದೆ. ಬಾಗಲಕೋಟೆ ಜಿಲ್ಲೆಯ ಬದಾಮಿ, ಸಿಡಿಲಫಟ್ಟಿ, ಸೀತದೋಣಿ, ಮಹಾಕೂಟ, ಯಲ್ಲಟ್ಟಿ, ಐಹೊಳೆ, ನೂರಾಳಫಡಿ, ಕುಲ್ಲೊಳ್ಳಿ (ಗೊಂಬಿಗುಡ್ಡ)ಗಳಲ್ಲಿ ಗುಹಾ ವರ್ಣಚಿತ್ರಗಳಿವೆ. ಬಾಗಲಕೋಟೆ ಜಿಲ್ಲೆಯ ಬದಾಮಿಯ ಗವಿವರ್ಣಚಿತ್ರಗಳು ಪಾಶ್ಚಿಮಾತ್ಯ ವಿದ್ವಾಂಸರ ಗಮನಸೆಳೆದಿರುವುದು ಸಂತೋಷದ ಸಂಗತಿಯಾಗಿದೆ.

ಕಸೂತಿ ಕಲೆ

ಕಸೂತಿ ಎಂದರೆ ಬಣ್ಣದ ದಾರಗಳಿಂದ ಬಟ್ಟೆಗಳಿಗೆ ಮಾಡುವ ಹೆಣಿಕೆಯ ಅಲಂಕಾರ ಇಲ್ಲವೇ ಚರ್ಮ ಮತ್ತು ಇತರ ವಸ್ತುಗಳ ಮೇಲೆ ಸೂಜಿದಾರಗಳಿಂದ ಹೆಣೆದು ಮಾಡಿದ ಅಲಂಕಾರವನ್ನೇ ಕಸೂತಿ ಎಂದು ಕರೆಯುತ್ತಾರೆ.

ಕಸೂತಿಯ ಕರ್ನಾಟಕದಲ್ಲಿ ಕಸೂತಿ ಎನಿಸಿಕೊಂಡರೆ ಪಂಜಾಬದಲ್ಲಿ ಪುಲ್ಕರಿ, ಗುಜರಾಥದಲ್ಲಿ ಕಥಿ, ರಾಜಸ್ಥಾನದಲ್ಲಿ ಪಿಚಾವಾಯಿ, ಬಂಗಾಲದಲ್ಲಿ ಕಂಥೆ, ಬಿಹಾರದಲ್ಲಿ ಕಸಿದಾ, ಒರಿಸ್ಸಾದಲ್ಲಿ ಪುರಿ, ಉತ್ತರ ಪ್ರದೇಶದಲ್ಲಿ ಚಿಕನ್, ಕಾಶ್ಮೀರದಲ್ಲಿ ಕಸೀದಾ, ಮಣಿಪುರದಲ್ಲಿ ಪಾನ್ನೈಕ್, ಹಿಮಾಚಲ ಪ್ರದೇಶದಲ್ಲಿ ಛಾಂಬಾ, ಸಿಂಧ ಪ್ರಾಂತದಲ್ಲಿ ಕಚ್, ಲಖನೌದಲ್ಲಿ ಚಿಕನ್‌ಕಾರಿ, ಮಹಾರಾಷ್ಟ್ರದಲ್ಲಿ ಕಶಿದಾ, ಹಿಂದಿಯಲ್ಲಿ ಕಶೀದಹ ಎಂದು ಕರೆಯುವರು.

"ಭಾರತದ ಕಸೂತಿಯಲ್ಲಿ ಚಿನ್ನದ ಎಳೆ ಹಾಗೂ ರತ್ನ ಉಪಯೋಗಿಸುತ್ತಿದ್ದುದನ್ನು ಮೆಗಸ್ತನಿಸ್ ಹೇಳುತ್ತಾರೆ"[೨]. ಕರ್ನಾಟಕದಲ್ಲಿಯೂ ಇದು ಪ್ರಾಚೀನತೆಯನ್ನು ಹೊಂದಿದೆ. ಈ ಕಸೂತಿ ಕಲೆ ಕೇವಲ ಕಲೆಯಾಗದೆ ತನ್ನ ಕ್ಷೇತ್ರವನ್ನು ವಾಣಿಜ್ಯ ಕ್ಷೇತ್ರಕ್ಕೂ ವ್ಯಾಪಿಸಿದೆ.

---

೨. ಮಹಾದೇವ ಜಗತಪ, ಕಸೂತಿ, ಕರ್ನಾಟಕ ಲಲಿತ ಕಲಾ ಅಕಾಡೆಮಿ ಪ್ರಕಟಣೆ

ಕಟ್ಟಿಗೆ ಅಥವಾ ಧಾತುವಿನ ರಿಂಗುಗಳು, ಸೂಜಿ, ಕತ್ತರಿ, ವಿವಿಧ ವರ್ಣಗಳ ದಾರ ಹಾಗೂ ರೇಶ್ಮೆಯ ದಾರಗಳು, ಅಂಗುಸ್ಥಾನ, ಚಿತ್ರ ಬಾಹ್ಯರೇಖೆಗಳನ್ನು ಹಾಕಲು ಪೆನ್ಸಿಲ್, ಹಾಲು ಮುತ್ತಿನ ಬೇರೆ ಬೇರೆ ಬಣ್ಣದ ಮಣಿಗಳು ತೂತಿರುವ ರಟ್ಟು, ಮ್ಯಾಟಿಬಟ್ಟೆ, ನೇಯ್ಗೆಯಬಟ್ಟೆ, ಪ್ಲಾಸ್ಟಿಕ್ ಚಪ್ಪಟೆ ದಾರವಿರುವ ಬಟ್ಟೆ, ಉಲನ್ ದಾರಗಳು ದುಂಡು ತೂತಿರುವ ಕೊಳವೆಯ ಸೂಜಿ, ಗಾಜಿನ ಹಾಗೂ ಹೊಳಪುಳ್ಳ ಬಣ್ಣದ ಮುತ್ತು, ಪೈಪು, ಮತ್ತು ಗುಂಡಿಗಳನ್ನು ಕಸೂತಿ ರಚನೆಯಲ್ಲಿ ಬಳಸಲಾಗುವುದು.

ಕಸೂತಿ ಹಾಕಲು ಎರಡು ಪ್ರಕಾರದ ಸೂಜಿಗಳಿವೆ. ಸಾಮಾನ್ಯ ಸೂಜಿ ಹಾಗೂ ಕೊಕ್ಕೆ ಸೂಜಿ, ಹೊಲಿಗೆ ಕಸೂತಿಯಲ್ಲಿ ಸಾಮಾನ್ಯ ಸೂಜಿಯನ್ನು ಬಳಸುವರು. ಹಾಗೆ ಹೆಣಿಕೆ ಕಸೂತಿಯಲ್ಲಿ ಕೊಕ್ಕೆ ಸೂಜಿಯನ್ನು ಬಳಸುತ್ತಾರೆ. ಹಾಗೆಯತೆ ಕಸೂತಿ ಹಾಕಲು ಹತ್ತಿ, ರೇಷ್ಮೆ ಹಾಗೂ ಉಣ್ಣೆಯ ದಾರಗಳನ್ನು ಉಪಯೋಗಿಸುತ್ತಾರೆ. ಹೆಚ್ಚಾಗಿ ಸಿದ್ಧ ದಾರಗಳನ್ನೇ ಬಳಸುತ್ತಾರೆ. ಅರಿವೆಯ ಮೇಲೆ ಚಿತ್ರಗಳನ್ನು ಹೆಣೆಯ ಬೇಕಾದರೆ ಚಿತ್ರ ಬರೆಯುವುದರಿಂದ ಮೊದಲು ಬಾಹ್ಯ ರೇಖೆಗಳನ್ನು ಹಾಕಿಕೊಂಡು ಆ ರೇಖೆಗಳ ಮೇಲೆ ಕಸೂತಿ ಹೆಣೆಯುತ್ತಾರೆ. ಈ ಮೊದಲು ಇದ್ದಲಿ, ವಿಭೂತಿ ಬಳಸುತ್ತಿದ್ದರು. ಚಿತ್ರ ಬರೆಯಲು ಬರುವವರು ತಾವೇ ಚಿತ್ರ ಬಿಡಿಸಿಕೊಂಡು ಕಸೂತಿ ಹೆಣೆಯುತ್ತಾರೆ.

ಕಸೂತಿ ಹಾಕುವುದರಲ್ಲಿ ಎರಡು ವಿಧಾನಗಳಿವೆ. ೧. ಕೈಕಸೂತಿ ಕೈಯಿಂದ ಕಸೂತಿಯ ಚಿತ್ರ ವಿನ್ಯಾಸಗಳನ್ನು ನಿರ್ಮಾಣ ಮಾಡುವ ಕೌಶಲಯುಕ್ತ ಕಾರ್ಯವಾಗಿದೆ. ಈ ಕೈ ಕಸೂತಿಯಲ್ಲಿಯೇ ಎರಡು ವಿಧಗಳಿವೆ. ೧. ಹೊಲಿಗೆಯ ಕಸೂತಿ ೨. ಹೆಣಿಕೆಯ ಕಸೂತಿ

೧. ಹೊಲಿಗೆ ಕಸೂತಿ

ಸೂಜಿಯಲ್ಲಿ ವರ್ಣರಂಜಿತವಾದ ದಾರಗಳನ್ನು ಪೋಣಿಸಿ ಅರಿವೆಯ ಮೇಲೆ ಹೋಲಿಗೆಯಿಂದ ಮಾಡುವ ಕಸೂತಿಯ ಕೆಲಸವನ್ನು ಹೊಲಿಗೆಯ ಕಸೂತಿ ಎಂದು ಕರೆಯುವರು. ಈ ಹೊಲಿಗೆ ಕಸೂತಿಯಲ್ಲಿ ಎಳೆ, ಕತ್ತರಿ, ಕಾಶ್ಮೀರಿ ಕಂಬಳಿ, ಸರವಳಿ, ರೆಕ್ಕೆ, ಅಂಚಿನ, ದೇಡಿನ, ಗುಂಡಿಮನಿ ಗಂಟಿನ, ಎಲೆ, ಹೂವಿನ ಜೇನು ಹರಿದ್ದಿನ ಜೇಡರ ಬಲೆ, ಮೀನಿನ ಎಲುಬಿನ ಸುತ್ತಿದ ಎಂಬ ಹಲವಾರು ಬಗೆಯ ಹೊಲಿಗೆಗಳಿವೆ. ಕೈಚೀಲ, ಟೇಬಲ್‌ಕ್ಲಾಥ್ ಕುರ್ಚಿಯ ಹಿನ್ನೆಲೆಯ ಬಾಗಿಲು ತೋರಣ, ತಲೆದಿಂಬು, ಮಕ್ಕಳ ತೊಟ್ಟಿಲು, ಚೆಡ್ಡಿ, ಕುಲಾಯಿ, ಕುಂಚಿಗೆ ಮುಂತಾದವುಗಳಿಗಾಗಿ ಹೊಲಿಗೆ ಕಸೂತಿ ಹಾಕುತ್ತಾರೆ.

೨. ಹೆಣಿಕೆ ಕಸೂತಿ

ದಾರದಲ್ಲಿ ದಾರವನ್ನು ಅಥವಾ ರೇಷ್ಮೆಯ ನೂಲನ್ನು ತೆಗೆದುಕೊಂಡು ಕೊಕ್ಕೆ ಸೂಜಿಯಿಂದ ದಾರವನ್ನೇ ಹೆಣೆಯುವುದಕ್ಕೆ ಹೆಣಿಕೆ ಕಸೂತಿ ಎನ್ನುವರು. ನೂಲನ್ನು ಅಥವಾ ದಾರವನ್ನು ಎಡಗೈ ತೋರ್ಬೆರಳುಗಳಿಗೆ ಸುತ್ತಿಕೊಂಡು ಅಲ್ಲಿಂದ ದಾರವನ್ನು ಎಡಗೈ ಹೆಬ್ಬೆರಳು ಮತ್ತು ನಡುವಿನ ಬೆರಳುಗಳ ಮೂಲಕ ಸ್ವಲ್ಪ ಸ್ವಲ್ಪ ದಾರವನ್ನು ಬಿಡುತ್ತಾ ಬಲಗೈಯಲ್ಲಿ ಹಿಡಿದು, ಕೊಕ್ಕೆ ಸೂಜಿಯಿಂದ ಹೆಣೆಯುತ್ತಾ ಹೋಗುತ್ತಾರೆ.

೩. ಯಂತ್ರದ ಕಸೂತಿ

ಯಂತ್ರದ ಸಹಾಯದಿಂದ ಆಧುನಿಕ ರೀತಿಯಲ್ಲಿ ಹಾಕುವ ಕಸೂತಿಯನ್ನು ಯಂತ್ರದ ಕಸೂತಿ ಎನ್ನಬಹುದು. ವೃತ್ತಿನಿರತ ಕಸಬುದಾರರಿಗೆ ಮಾತ್ರ ಯಂತ್ರದ ಕಸೂತಿ ಸಹಾಯಕವಾಗುವುದು.

ಕಸೂತಿಯ ಪ್ರಕಾರಗಳು ೧. ಗಾಂವಟಿ ದೇಶೀ ಕಸೂತಿ ೨. ಮೆಂತೆ ಕಸೂತಿ ೩. ನೇಯ್ಗೆ ಕಸೂತಿ ೪. ಮುರುಗಿ ಕಸೂತಿ ೫. ಪ್ಲಾಸ್ಟಿಕ್ ಬಟ್ಟೆಯ ಮೇಲೆ ಉಲನ್ ಕಸೂತಿ ೬. ಗಾಜಿನ ಕಟ್ಟಿನಲ್ಲಿ ಹಾಕುವ ಕಸೂತಿ ೭. ಗಂಟೆಣಿಕೆಯ ಕಸೂತಿ.

ಗಾಂವಟಿ ಕಸೂತಿ

ಹಳ್ಳಿಯ ಕಸೂತಿ ಕನ್ನಡ ಕಸೂತಿಯೆಂದು ಕರೆಯಿಸಿಕೊಳ್ಳುವ ಇದು ಬಾಗಲಕೋಟೆ ಜಿಲ್ಲೆಯ ಇತರ ಕಸೂತಿಗಳಿಗಿಂತ ತೀರಾ ಭಿನ್ನವಾಗಿದೆ. ಸಿದ್ಧವಾದ ಗಾಂವಟಿ ಕಸೂತಿಯ ಆದಿ ಅಂತ್ಯಗಳನ್ನು ಗುರುತಿಸುವುದು ಸುಲಭದ ಕೆಲಸವಲ್ಲ. ಕೆಳಗಿನ ಬದಿ ಮತ್ತು ಮೇಲಿನ ಬದಿಗಳೆರಡನ್ನು ಬೇಕಾದ ಹಾಗೆ ತಿರುಗಿಸಿ ನೋಡಿದರೂ ಕಸೂತಿ ವಿನ್ಯಾಸ ಒಂದೇಯಾಗಿರುತ್ತದೆ. ಗುಳೇದಗುಡ್ಡದ ಚಂದ್ರಕಾಳಿ ಹೆಸರಿನ ಕರಕುಶಲ ಕಲಾತ್ಮಕ ಕಸೂತಿಯ ಸೀರೆಗಳು ನಾಡಿನಾದ್ಯಂತ ತಮ್ಮ ಹಿರಿಮೆಯನ್ನು ಮೆರೆದಿವೆ. ಚಂದ್ರಕಾಳಿ ಮುಂತಾದ ಪ್ರಾಣಿ ಪಕ್ಷಿಗಳ ಚಿತ್ತಾರಗಳು, ಹೂಬಳ್ಳಿಗಳು, ತೇರು, ಕಾಳಿಂಗನ ಮಡು, ಕಮಲದಲ್ಲಿ ಕುಳಿತ ಲಕ್ಮಿ ಮುಂತಾದ ಕಸೂತಿ ಚಿತ್ತಾರಗಳಿರುತ್ತವೆ. ಚಂದ್ರಕಾಳಿ ಸೀರೆಯಲ್ಲಿ ಸಾಮಾನ್ಯವಾಗಿ ಹಳದಿ, ಕೆಂಪು, ತಿಳಿಗೆಂಪು, ತಿಳಿಹಸಿರು, ಗುಲಾಬಿ ಬಿಳಿಬಣ್ಣದ ರೇಷ್ಮೆದಾರಗಳಿಂದ ರಚಿತಗೊಂಡ ವರ್ಣಮಯ ಚಿತ್ರಾರಗಳಿರುತ್ತವೆ. ಇವು ಸೀರೆಯ ಬಾಳಿಕೆಯನ್ನು ಸೌಂದರ್ಯವನ್ನು ಕಾಪಾಡುತ್ತವೆ.

ಕಸೂತಿ ಕಲಾವಿದರು

ಗುಳೇದಗುಡ್ಡದ ಶ್ರೀಮತಿ ಉಮ್ಮವ್ವಾ, ವಿರೂಪಾಕ್ಷಪ್ಪ ಹಗ್ಗದ ಅವರು ಚಂದ್ರಕಾಳಿ ಸೀರೆಗೆ ಕಸೂತಿ ಹಾಕುವುದರಲ್ಲಿ ಅಪ್ರತಿಮ ಕೌಶಲ್ಯ ಪ್ರದರ್ಶಿಸಿದ್ದಾರೆ. ೮೫ರ ಇಳಿವಯಸ್ಸಿನಲ್ಲಿರುವ ಅವರು

ತಮ್ಮ ಸುಧೀರ್ಘ ಜೀವನದಲ್ಲಿ ಸಾಕಷ್ಟು ಸೀರೆಗಳಿಗೆ ಕಸೂತಿ ಹಾಕಿಕೊಟ್ಟಿದ್ದಾರೆ. ಶ್ರೀಮತಿ ಹಗ್ಗದ ಅವರಂತೆಯೇ ಗುಳೇದಗುಡ್ಡದಲ್ಲಿ ಚಂದ್ರಕಾಳಿ ಸೀರೆಗೆ ಕಸೂತಿ ಹಾಕುವುದರಲ್ಲಿ ಪರಿಣಿತರಾಗಿರುವವರಲ್ಲಿ ಶ್ರೀಮತಿ ಶೇಷವ್ವ ಪತ್ತಾರ ಇಂದ್ರವ್ವ ಸುರೇಬಾನ, ಶಾಂತವ್ವ ಬಸಪ್ಪ, ಗೋಟ ಶಿವಗಂಗವ್ವ ಬಳಿಗೆ ನಾಗವ್ವ ಗೊಂದಳೆ, ತಿಪ್ಪವ್ವ, ಬಸಪ್ಪ, ಶಿವಗಂಗವ್ವ ಬಲಿಗೆದ ನಾಗವ್ವ ಗೊಂದಳೆ ತಿಪ್ಪವ್ವ ಅಡಿವೆಪ್ಪ ಬೆನಕಿನಾಳ, ರೇಣುಕಾ ಗಂಜಿಹಾಳ ಮುಂತಾದವರನ್ನೂ ಹೆಸರಿಸಬಹುದು.

ಕುಂಚಿಗೆ ಕುಲಾಯಿಗಳ ಮೇಲೆ ಕಸೂತಿ

ಕುಂಚಿಗೆ ಕುಲಾಯಿಗಳು ಬರಬರುತ್ತಾ ಮುಖಮಲ್‌ದ ಮೆತ್ತನೆಯ ನೀಲಿ, ಕಂದು, ಕೆಂಪು ವರ್ಣದ ಬಟ್ಟೆಗಳ ಮೇಲೆ ಕಸೂತಿ ಕಾರ್ಯ ನಡೆಯುತ್ತಿದೆ. ಕುಂಚಿಗೆ ಕೇವಲ ಕಲೆಯ ಭಾಗವನ್ನು ಅಲಂಕಾರ ಗೊಳಿಸಿದರೆ, ಕುಲಾಯಿ ತಲೆಯಿಂದ ಕೆಳಗಡೆ ಭುಜಗಳ ಕೆಳಗಿನವರೆಗಿನ ಭಾಗವನ್ನು ಅಲಂಕರಿಸುತ್ತದೆ. ಸಂಪ್ರದಾಯಿಕ ಕುಂಚಿಗೆ ಕುಲಾಯಿಗಳಲ್ಲಿ, ಪ್ರಾಣಿ, ಪಕ್ಷಿಗಳ ಅಲಂಕಾರಿಕ ರೂಪಗಳು ಹಾಗೂ ಹೂಬಳ್ಳಿಗಳ ಸುಂದರ ರೂಪಗಳಲ್ಲಿ ರೇಷ್ಮೆಯ ದಾರಗಳು ನೋಡುಗರ ಮನರಂಜಿಸುತ್ತವೆ. ಇತ್ತೀಚಿನ ದಿನಗಳಲ್ಲಿ ಮುತ್ತುಗಳು ಮುಂಚೂಣಿಯಲ್ಲಿ ನಿಂತು ಕುಂಚಿಗೆ ಕುಲಾಯಿಗಳ ಕಸೂತಿ ಕಲೆಯನ್ನು ಮುಂದುವರೆಸಿವೆ. ಹೀಗೆ ಕಸೂತಿ ಕಲೆಯು ಬಿಡುವಿನ ವೇಳೆಯನ್ನು ಪೂರ್ತಿ ಆಕ್ರಮಣ ಮಾಡುತ್ತದೆ. ಇದು ಹೆಣ್ಣುಮಕ್ಕಳಲ್ಲಿ ಸೃಜನಶೀಲತೆಯನ್ನು ಮೂಡಿಸುತ್ತದೆ. ಅಲ್ಲದೇ ನೋಡುಗರಲ್ಲಿ ಸಂತೃಪ್ತಿಯ ವಾತಾವರಣವನ್ನು ಸೃಷ್ಟಿಸುವಲ್ಲಿ ಈ ಕಸೂತಿ ಕಲೆಯ ಪಾತ್ರ ವಿಶಿಷ್ಟವಾಗಿದೆ ಎನ್ನಬಹುದು.

೨. ಕೌದಿ

ಕೌದಿಯು ಮೊದಲು ರೂಪ ತಾಳಿದ್ದು ಬಡ ಜನರ ಹಾಸಿಗೆ ಹೊದಿಕೆಯಾಗಿ ಹೆಚ್ಚಾಗಿ ಕೌದಿಯನ್ನು ಹೊಲೆಯಲು ಬಿಳಿಯ ದಾರವನ್ನೇ ಬಳಸುತ್ತಾರೆ. ಕೌದಿ ಕೆಲಸವನ್ನು ಪ್ರಾರಂಭಿಸಲು ಮತ್ತು ಮುಗಿಸಲು ಶುಭ ದಿನಗಳನ್ನು ಆಯ್ದುಕೊಳ್ಳುತ್ತಾರೆ. ಮೊದಲು ತೆಳುವಾದ ದೊಡ್ಡ ಗಾತ್ರದ ಅರಿವೆಗಳನ್ನು ನೀರಿನಲ್ಲಿ ತೊಯಿಸಿ ಅಗಲವಾಗಿ ಬಗ್ಗಿ ಹಿಡಿದು ನೆಲದ ಮೇಲಿರಿಸಿ ಎರಡು ಮೂರು ಪದರ ಅರಿವೆ, ಹೆಚ್ಚಾಗಿ ಹಡದವ್ವನ ಹಡದಿಯನ್ನೇ ಮೂಲತಳವನ್ನಾಗಿ ಆರಿಸಿಕೊಂಡು, ಹಾಸಿ ನಾಲ್ಕೂ ಮೂಲೆಗೆ ಭಾರವಾದ ಕಲ್ಲುಗಳನ್ನಿಟ್ಟು, ದೊಡ್ಡ ಸೂಜಿಯಿಂದ ಕೌದಿದಾರ ಪೋಣಿಸಿ ದೂರ ದೂರ ಹೊಲಿಗೆ ಹಾಕಿ, ಅನಂತರ ಅದನ್ನು ಮಡಿಚಿ ಅದರ ಮೇಲೆ ಭಾರ ಹಾಕಿ ಇಡುತ್ತಾರೆ. ನೀರಿನ ಅಂಶ ಆರಿಹೋಗುತ್ತಿದ್ದಂತೆ ಕೌದಿಗೆ ಬೇಕಾದ ತಳ ಸಿದ್ಧವಾಗುತ್ತದೆ. ಇದನ್ನು ಗ್ರಾಮ್ಯ ಭಾಷೆಯಲ್ಲಿ ಲ್ಯಾವಿ ಮಾಡುವುದು ಎನ್ನುವರು.

ಈ ಲ್ಯಾವಿಯ ಮೇಲೆಯೇ ಅಂಚಿಗೆಲ್ಲ ಗಟ್ಟಿಯಾದ ರೇಷ್ಮೆಯ ಸೆರಗಿನ ದಡಿಗಳನ್ನು ಬಳಸುವರು ಇಲ್ಲವೇ ಮನೆಯಲ್ಲಿರುವ ಹಳೆಯ ಬಟ್ಟೆಗಳನ್ನು ಹರಿದು ಕೌದಿಯನ್ನು ತಯಾರಿಸುವರು. ಬಣ್ಣಬಣ್ಣದ ಅರಿವೆಗಳನ್ನು ತುಂಡು ತುಂಡಾಗಿ ಕತ್ತರಿಸಿ ಒಂದರ ಮೇಲೊಂದು ಹಚ್ಚಿ, ಬಿಳಿಯ ದಪ್ಪನೆಯ ಕೌದಿ ದಾರದಿಂದ ಹೊಲಿಗೆ ಹಾಕುತ್ತಾರೆ. ಹೊಲಿಗೆಗಳು ಉದ್ದನೆಯ ಅಕ್ಕಿಕಾಳಿನಂತೆ ಗೋಚರಿಸುತ್ತವೆ. ದೊಡ್ಡ ಗಾತ್ರದ ಕೌದಿ, ಚಿಕ್ಕಮಕ್ಕಳಿಗೆ ಹಾಸುವ, ಹೋದಿಸುವ ಕೌದಿ, ಮಧ್ಯಮ ಮಯಸ್ಕರ ಮಧ್ಯಮ ಗಾತ್ರದ ಕೌದಿಗಳೆಂದು ವಿಭಾಗಿಸಬಹುದು. ದೊಡ್ಡವರ ಕೌದಿಗಳು ಏಳುಮೊಳ ಉದ್ದ ಐದು ಮೊಳ ಅಗಲವಿರುತ್ತವೆ. ಚಿಕ್ಕವರ ಕೌದಿಗಳು ಸಾಮಾನ್ಯವಾಗಿ ಐದು ಮೊಳ ಉದ್ದ. ನಾಲ್ಕು ಮೊಳ ಅಗಲ ವಿರುತ್ತವೆ. ಬಾಗಲಕೋಟೆ ಜಿಲ್ಲೆಯ ಹುನಗುಂದ ತಾಲೂಕಿನ ಕಟಗೂರ ಎಂಬ ಗ್ರಾಮದಲ್ಲಿ ಗಂಗವ್ವ ಹನಮಪ್ಪ ಕಿಳ್ಳಿಕ್ಯಾತರ ಎಂಬ ದಂಪತಿಗಳು ಕೌದಿ ಹೊಲಿಯುವುದನ್ನು ತಮ್ಮ ಜೀವನದ ವೃತ್ತಿಯನ್ನಾಗಿಸಿ ಕೊಂಡಿದ್ದಾರೆ. ಇವರು ಕೌದಿಗಳನ್ನು ಹೊಲೆಯುವುದರಲ್ಲಿ ಸಿದ್ಧಹಸ್ತರು.

ಕೌದಿಗಳನ್ನು ಬಳಸುವುದಕ್ಕೂ ಕೆಲವು ಪದ್ಧತಿಗಳಿವೆ. ಚಿತ್ತಾರಗಳಿರುವ ಕೌದಿಗಳನ್ನು ಒಲಬದಿಯಾಗಿ ಹೊದ್ದುಕೊಳ್ಳುವುದು ಪದ್ಧತಿ. ಇಲ್ಲವಾದಲ್ಲಿ ಕೆಟ್ಟ ಕನಸುಗಳು ಬೀಳುತ್ತವೆ ಅಥವಾ ಸಾಲ ಹೆಚ್ಚಾಗುತ್ತದೆ ಎಂಬ ಮೂಢನಂಬಿಕೆಗಳೂ ಇವೆ.

ಇಂತಹ ರಂಗುರಂಗಿನ ಕೌದಿಗಳು ಹಾಸಲು ಹೊದಿಯಲು ಮಾತ್ರವಲ್ಲದೇ ಪೂಜೆಗೊಳ್ಳುತ್ತವೆ. ಇಂದಿಗೂ ಸಹ ಹುಬ್ಬಳ್ಳಿಯ ಶ್ರೀ ಸಿದ್ಧಾರೂಢ ಮಠದಲ್ಲಿ ಕೌದಿಯ ಪೂಜೆ ನಡೆಯುತ್ತದೆ. ಅಲ್ಲದೇ ಶೇಷಗಿರಿ ಗ್ರಾಮದಲ್ಲಿಯೂ ಸಹ ಪೂಜೆಗೊಳ್ಳುವ ಕೌದಿಯನ್ನು ಕಾಣಬಹುದು.

ಹೀಗೆ ಕೌದಿಯು ಗೃಹಿಣಿಯ ಕೌಶಲ್ಯತೆಯನ್ನು ಮೆರೆಯುತ್ತದೆ. ಅಲ್ಲದೇ ರಂಗುರಂಗಿನ ಬಣ್ಣದ ಬಟ್ಟೆಗಳಿಂದ ತಯಾರಾಗಿರುವ ಕೌದಿಯ ನೋಡುಗರ ಕಣ್ಣಿಗೆ ಸಂತೋಷವನ್ನುಂಟು ಮಾಡುತ್ತದೆ. ಅಲ್ಲದೇ ಕೌದಿಯು ಕಸದಿಂದ ರಸ ಎಂಬ ಗಾದೆಗೆ ಒಳ್ಳೆಯ ನಿದರ್ಶನವಾಗುತ್ತದೆ. ಇದಲ್ಲದೆಯೆ ಕೌದಿಯು ಆರೋಗ್ಯಕ್ಕೂ ಸಹ ಒಳ್ಳೆಯದಾಗಿರುತ್ತದೆ. ಹೀಗೆ ಜನಪದ ಕಲೆಯಲ್ಲೊಂದಾದ ಕೌದಿಯು ಒಂದು ಕೋಲಾಜ್ ಕೃತಿಯಂತೆ ಅಂದರೆ ಆಧುನಿಕ ಚಿತ್ರಕೃತಿಯಂತೆ ಕಾಣಿಸುತ್ತದೆ. ಹೀಗೆ ಕೌದಿಯು ಮಾನವನ ಬದುಕಿನ ಒಳ್ಳೆಯ ಸಂಗಾತಿಯಾಗಿದೆ.

೨. ಇಳಕಲ್ಲ ಸೀರೆ

ಇಳಕಲ್ಲ ಸೀರೆ ಉಟ್ಗೊಂಡು
ಮೊಣಕಾಲತನ ಎತ್ಗೊಂಡು

ಏರಿ ಮೇಲೆ ಏರಿ ಬಂದ್ನು ನಾರಿ......... ಎಂಬ ಹಳ್ಳಿ ಮೇಷ್ಟ್ರು ಸಿನೇಮಾದ ಹಾಡನ್ನು ಕೇಳಿದರೆ ಮುದಕರಿಗೂ ಮೈ ಬಿಸಿಯಾಗುತ್ತದೆ. ಇಳಕಲ್ಲ ಸೀರೆಯ ಆಕರ್ಷಣೆಯೇ ಹಾಗಿದೆ.

ಹತ್ತಿ ಬೆಳೆಯುವ ಕೃಷಿಕ, ನೂಲಿನ ಬಣ್ಣ ಹಾಕುವ ಬಣಗಾರನಿಂದ ಹಿಡಿದು ನೇಕಾರಿಕೆಯಲ್ಲಿ ವಿವಿಧ ಕಾರ್ಯ ಪೂರೈಸುವ ವೃತ್ತಿ ಸಮೂಹಗಳು ಪಳಯುಳಿಕೆ ರೂಪದಲ್ಲಿ ಇಂದಿಗೂ ಇವೆ. ಆದರೆ ನೂಲುವುದನ್ನೇ ಕಸವಾಗಿ ಮಾಡಿಕೊಂಡು ವೃತ್ತಿ ಸಮೂಹ ಈಗ ಮಾಯವಾಗಿದೆ. ಬಹುಶಃ ಗಿರಣಿ ನೂಲು ಈ ಗುಂಪನ್ನು ನುಂಗಿ ಹಾಕಿದೆ. ನೂಲಿ ಚಂದಯ್ಯ ಶರಣರ ಹೆಸರು ೧೨ನೇ ಶತಮಾನದಲ್ಲಿ ದಾಖಲಾಗಿದೆ. ಆದರೆ ಆತನ ವೃತ್ತಿ ಹುಲ್ಲಿನಿಂದ ಹಗ್ಗ ಹೊಸೆಯುವುದಾಗಿತ್ತೆಂಬುದನ್ನು ಗಮನಿಸಬಹುದು.

"ಇಲಕಲ್ಲ ಸೀರೆಯ ವಿಶೇಷತೆಯಿರುವುದೇ ಅದರ ಬಣ್ಣದ ಗುಣ ಹಾಗೂ ವಿನ್ಯಾಸದಲ್ಲಿ. ಸೀರೆ ಹರಿದರೂ ಬಣ್ಣ ಮಾಸುವುದಿಲ್ಲ ಎಂಬ ನಂಬಿಕೆಯಿದೆ"[೩]. ನೂಲಿಗೆ ಬಣ್ಣ ಹಾಕುವ ವೃತ್ತಿಯಲ್ಲಿ ಬಣಗಾರ ಹಾಗೂ ನೀಲಗಾರ ಎಂಬ ಗುಂಪುಗಳಿವೆ. ಬಣಗಾರರು ನೂಲಿಗೆ ಎಲ್ಲ ತರಹದ ಬಣ್ಣ ಹಾಕುತ್ತಾರೆ. ಆದರೆ ನೀಲಗಾರರು ಕೇವಲ ಕರಿ ಬಣ್ಣವನ್ನು ಮಾತ್ರ ಹಾಕುತ್ತಾರೆ. ಇಲಕಲ್ಲ ಸೀರೆಯ ಬಣ್ಣ ಗ್ಯಾರಂಟಿ ಎಂಬುದಕ್ಕೆ ಇಲ್ಲಿಯ ಹಳ್ಳದ ನೀರಿನಲ್ಲಿರುವ ಲವಣಾಂಶಗಳೇ ಕಾರಣವೆಂದು ಅನುಭವಿ ಬಣಗಾರ ಅನಿಸಿಕೆಯಾಗಿದೆ. ಇಳಕಲ್ಲನ್ನು ಸುತ್ತುವರೆದ ಹಿರೇಹಳ್ಳಕ್ಕೆ ಮೂರ್‍ನಾಲ್ಕು ಕಿರಿ ಎರೆ ಹಳ್ಳಗಳು ಸಂಗಮಿಸುತ್ತವೆ. ಎರಿಭೂಮಿ ಹಾಗೂ ಮಸಾರಿಭೂಮಿಯಿಂದ ಹರಿದು ಬರುವ ನೀರು ವಿಶೇಷಣೆಗೆ ಲವಣಾಂಶ ಪಡೆದುಕೊಂಡಿರಬಹುದು. ವೈಜ್ಞಾನಿಕ ವಿಶ್ಲೇಷಣೆಗೆ ಈ ಹಳ್ಳದ ನೀರನ್ನು ಒಳಪಡಿಸಿದ ತಜ್ಞರು ಫ್ಲೋರಾಯಿಡ್ ಪ್ರಮಾಣ ಈ ನೀರಿನಲ್ಲಿ ಹೆಚ್ಚಿದೆ. ವಸುಡು ಹಾಗೂ ಎಲುಬಿನ ಕೀಲುಗಳಿಗೆ ಈ ನೀರು ಅಪಾಯಕಾರಿಯೆಂದು ಹೇಳುತ್ತಾರೆ. ಆದರೆ ಈ ನೀರು ನೂಲಿಗೆ ತುಂಬಾ ಉಪಯುಕ್ತವಾಗಿದೆ.

ಇಳಕಲ್ಲ ಸೀರೆಯ ವಿಶಿಷ್ಟತೆ ಇರುವುದು ಇದರ ವಿನ್ಯಾಸದಲ್ಲಿ ಸೀರೆಯ ಮುಖ್ಯ ಭಾಗಗಳೆಂದರೆ ಸೆರಗು, ದಡಿ, ವಡ್ಲ, ಕಾಲದಿಂದ ಕಾಲಕ್ಕೆ ಇವುಗಳಲ್ಲಿ ತೀವ್ರ ಬದಲಾವಣೆಗಳಾಗಿಲ್ಲ. ಎಂದರೂ ಕ್ರಮೇಣ ಬದಲಾವಣೆಗಳು ಉಂಟಾಗಿವೆ. ಸೃಜನಶೀಲತೆ ಕೇವಲ ಸಾಹಿತಿ ಕಲಾವಿದರ ಗುತ್ತಿಗೆಯಲ್ಲಿ ಅರ್ಧ ದೇಹವನ್ನು ಮಗ್ಗದ ಕುಣಿಯಲ್ಲಿ ಇಳಬಟ್ಟೆ ನೇಕಾರನೂ ಒಂದು ರೀತಿಯಿಂದ ಸೃಜನಶೀಲನೇ ಎಂದು ಹೇಳಿದರೆ ತಪ್ಪಾಗಲಿಕ್ಕಿಲ್ಲ.

ಅವಶ್ಯಕತೆ ಸಂಶೋಧನೆಗೆ ದಾರಿ ಎಂದು ಹೇಳುತ್ತಾರೆ. ಆದರೆ ಮಹತ್ವಾಕಾಂಕ್ಷಿತನವು ಹೊಸದನ್ನು

---

೩. ಡಾ. ಮಹೇಶ ತಿಪ್ಪಶೆಟ್ಟಿ, ಇಳಕಲ್ಲ ಸೀರೆ, ಮಂಟಪಮಾಲೆ, ಕನ್ನಡ ವಿಶ್ವವಿದ್ಯಾಲಯ, ಹಂಪಿ

ಹುಟ್ಟು ಹಾಕಬಲ್ಲದು ಎಂಬುದಕ್ಕೆ ಅನೇಕ ನೇಕಾರರು ಉದಾಹರಣೆಯಾಗಿದ್ದಾರೆ. ಹುನಗುಂದ ತಾಲೂಕಿನ ಅಮೀನಗಡ ನೇಕಾರರಾದ ಮಲಕಪ್ಪ ಮುಸರಿ ಜೀವಂತ ಸಾಕ್ಷಿಯಾಗಿದ್ದಾನೆ. ಕಣ್ಣಲ್ಲಿ ಕಣ್ಣಿಟ್ಟು ಲಾಳಿ ಓಡಿಸುವುದೇ ಸೂಕ್ಷ್ಮ ಕೆಲಸ. ಅಂತಹದ್ದರಲ್ಲಿ ಸೀರೆಯ ಸೆರಗಿನಲ್ಲಿ ಮಹಾತ್ಮ ಗಾಂಧೀಜಿ, ಭುವನೇಶ್ವರಿ, ಭಾರತ, ಕರ್ನಾಟಕ, ಬಾಗಲಕೋಟೆ ಜಿಲ್ಲೆಯ ನಕಾಶೆ ನೇಯ್ದು ಅದರಲ್ಲಿ ಚುಕ್ಕೆಗಳಿಂದ ಹುನಗುಂದ ತಾಲೂಕ ಹಾಗೂ ಅಮೀನಗಡ ಗ್ರಾಮ ಗುರುತಿಸುವುದು ಎಷ್ಟು ಕಷ್ಟಕರ ಎಂಬುದನ್ನು ಊಹಿಸಬಹುದು ಸ್ವಾತಂತ್ರ್ಯ ಸುವರ್ಣ ಮಹೋತ್ಸವದ ನೆನಪಿಗೆ ಒಬ್ಬ ಬಡನೇಕಾರ ತನ್ನ ಭಾವಸ್ಪಂದನೆಗಳನ್ನು ತನ್ನ ವೃತ್ತಿಯಲ್ಲಿ ಕಲೆಯಾಗಿ ಮೂಡಿಸಿದ್ದಾನೆ. ಚಿತ್ರ, ರಂಗೋಲಿ, ಕಸೂತಿ ಹಾಕಲು ಸಿದ್ಧ ಮಾದರಿಯು ಇರುತ್ತದೆ. ಆದರೆ ಸೀರೆಯ ನೇಯ್ಗೆಯಲ್ಲಿ ಚಿತ್ರ ಬಿಡುಸುವುದೆಂದರೆ ಅದರ ಕ್ಲಿಷ್ಟತೆ ಊಹಿಸಬಹುದು. ನೇಕಾರನ ಕಲ್ಪನೆಯೇ ಇಲ್ಲಿ ಸಾಕಾರಗೊಳ್ಳಬೇಕಾಗುತ್ತದೆ.

ಮೊದಲು ಗಚ್ಚಿದಡಿ ಸೀರೆಗಳು ಹೆಚ್ಚು ಚಲಾವಣೆಯಲ್ಲಿದ್ದವು. ಅದರ ಬದಲಾಗಿ ಈಗ ಗೋಮಿ ದಡಿ ಸೀರೆ ಹೆಚ್ಚು ಜನಪ್ರಿಯವಾಗಿದೆ. ಗೋಧಿಕಾಳುಗಳನ್ನು ಸಾಲಾಗಿ ಜೋಡಿಸಿಟ್ಟ ವಿನ್ಯಾಸವನ್ನು ಇಲ್ಲಿ ಕಾಣಬಹುದು. ಈ ಗೋಮಿ ದಡಿಯೇ ಇಳಕಲ್ಲ ದಡಿ ಎಂದು ಜನಪ್ರಿಯವಾಗಿದೆ. ಈ ದಡಿಯ ಜೊತೆಗೆ ಸೀರೆಯ ವಡ್ಲದಲ್ಲಿ ಕಡ್ಡಿ, ದಪ್ಪಳ, ರಾಗಾವಳಿ, ಚಂದ್ರಕಾಳಿ ಮುಂತಾದ ನಮೂನೆಗಳು ರೂಪುಗೊಂಡಿವೆ. ಕ್ರಮೇಣವಾಗಿ ತೋಪುತೆನಿ ತಿರುವಿದ ಸೆರಗುಗಳು ಹುಟ್ಟಿಕೊಂಡವು. ಈ ಸೆರಗು ಅತ್ಯಂತ ಕಲಾತ್ಮಕ ಹಾಗೂ ಆಕರ್ಷಕವಾಗಿರುತ್ತದೆ. ಇದರಲ್ಲಿ ಬಣ್ಣದ ಹೊಂದಾಣಿಕೆ ಕವಿಯ ಕಲ್ಪನೆಗೂ ಮೀರಿದ್ದು, ಕಸೂತಿ ಕುಸುರಿನ ನೈಪುಣ್ಯತೆ ಇದು ಹೊಂದಿರುತ್ತದೆ. ಮೂರು ತಾಳಿಗಳನ್ನು ಬಳಸಿ ಇಬ್ಬರು ಒಪ್ಪಿಗೆ ಇದನ್ನು ನೇಯುತ್ತಾರೆ. ತೋಪತೆನಿ ಸೆರಗು ಇಳಕಲ್ಲು ಸೆರಗು ಎಂದೇ ಖ್ಯಾತವಾಗಿದೆ. ಕ್ರಮೇಣ ಇವುಗಳಲ್ಲಿ ಚಿಕ್ಕ ಪರಾಸ, ಪ್ಲೇನ್, ಚೆಕ್ಸ್, ಕಡ್ಡಿ, ರಾಗಾವಳಿ, ಗಟ್ಟಿದಡಿ, ಗಾಡಿವಡಿ, ರೂಫಿಲ್, ದೊಡ್ಡದಡಿ, ರುದ್ರಾಕ್ಷಿ ದಡಿ, ಗೊಡ್ಡ ಪರಾಸ, ರಾಸ್ತಾಕಲಿ, ಕೊಂಡಿಕಿಕ್ಕಿ, ಪರಾಸಪೇಟೆ, ಬುಗುಡಿ, ಪುಟಾಣಿ, ಜಬ್ಬರ, ರಾಸ್ತಾ ಮುಂತಾದ ವಿನ್ಯಾಸದ ಸೀರೆಗಳು ಮಾರುಕಟ್ಟೆಗೆ ಬಂದಿವೆ. ಪ್ಲಾಸ್ಟಿಕ್ ಜರಿ ಹಾಗೂ ಚಮಕ ಬ್ಳಕೆಗೆ ಬಂದ ನಂತರ ಮಾರುಕಟ್ಟೆಯಲ್ಲಿ ಸೀರೆಗಳು ಹೆಚ್ಚು ಜನಪ್ರಿಯವಾಗಿವೆ. ಒಂದು ದಿನದಲ್ಲಿ ಚಮಕಾ ಸೀರೆಯನ್ನು ನೇಯಬಹುದು. ಆದರೆ ರೇಷ್ಮೆ ಸೀರೆ ನೇಯಲು ಎರಡು ಮೂರು ದಿನ ಬೇಕಾಗುತ್ತದೆ.

ಸೀರೆಗಳ ಅಂದವನ್ನು ಹೆಚ್ಚಿಸಲು ಸೆರಗಿಗೆ ಗೊಂಡೆ ಕಟ್ಟುವ ಹಾಗೂ ಕಸೂತಿ ಹಾಕುವ ಕೆಲಸಗಳು ಇವೆ. ರೇಷ್ಮೆ ಸೀರೆಗೆ ವಿಶೇಷ ಕಸೂತಿಯನ್ನು ಹಾಕಿಸುತ್ತಾರೆ. ಮೊದಮೊದಲು ಇಡೀ ವರ್ಷ ಸೀರೆ

ನೇಯಿಸಿ ಸಂಗ್ರಹಿಸಿ ವರ್ಷದಲ್ಲಿ ಮೂರು ತಿಂಗಳು ಮಾತ್ರ ವ್ಯಾಪಾರ ಮಾಡುವ ಕಾಲ ಇತ್ತು. ಈಗ ವರ್ಷದುದ್ದಕ್ಕೂ ಹೆಚ್ಚು ಕಡಿಮೆ ವ್ಯಾಪಾರ ಜರುಗತ್ತಲೇ ಇರುತ್ತದೆ. ಇಳಕಲ್ಲು ಸೀರೆಯ ಉದ್ಯಮದಲ್ಲಿ ಬಿಳಿಕುದುರಿ, ಧೋತ್ರೆ, ಗುಳೇದ, ಕೊಪ್ಪರದ, ಕಾಳಗಿ, ಮನೆತನಗಳು ಒಂದು ಕಾಲಕ್ಕೆ ಪ್ರಸಿದ್ಧವಾಗಿದ್ದವು. ಇಳಕಲ್ ಸೀರೆ ದೇಶಿ ಪರಂಪರೆಯ ಸಂಕೇತವಾಗಿ ಒಂದು ಮನೆತನದ ನೆನಪುಗಳ ಖಜಾನೆಯಾಗಿ ಉಳಿಯುತ್ತದೆ ಏಕೆಂದರೆ ಹಳೆಯ ಬಣ್ಣ ಮಾಸದ ಸೀರೆ, ಕುಲಾಯಿ, ಕುಂಚಿಗೆ, ಕಾವಿಯಾಗಿ ರೂಪಾಂತರ ಪಡೆಯುತ್ತದೆ.

ಇಳಕಲ್ಲ ಸೀರೆಗೆ ವಿಶೆಷ ಮಾರುಕಟ್ಟೆ ಇರುವುದೇ ಉತ್ತರ ಕರ್ನಾಟಕ ಹಾಗೂ ಮಹಾರಾಷ್ಟ್ರದಲ್ಲಿ ಮೂಗುತಿ, ಕುಂಕುಮ ಬಳೆ ಮುಂತಾದವುಗಳು ಮುತ್ತೈದೆಯ ಸಂಕೇತವಾದಂತೆ ಇಳಕಲ್ಲ ಸೀರೆ ಉಡುವುದು ಕೆಲವರಿಗೆ ಇಂದಿಗೂ ಒಂದು ಪರಂಪರೆಯಾಗಿದೆ.

ಹಚ್ಚೆಕಲೆ

"ಮನುಷ್ಯ ಸಾಯುವಾಗ ಯಾವುದೂ ಜೊತೆಗೆ ಬರುವುದಿಲ್ಲ. ಆದರೆ ನಮ್ಮೊಟ್ಟಿಗೇ ಬರುವುದು ಹಚ್ಚೆಬೊಟ್ಟು ಮಾತ್ರ ಎಂಬ ನಂಬಿಕೆಯಿದೆ"[೪]. ಈ ಮೊದಲು ಹಿಂದೂ ಮತ್ತು ಮುಸ್ಲಿಂರನ್ನು ಗುರುತಿಸಲು ಹಚ್ಚಿಬೊಟ್ಟು ಸಹಾಯ ಮಾಡುತ್ತಿತ್ತು. ಏಕೆಂದರೆ ಹಿಂದೂಗಳು ಮಾತ್ರ ಹಣೆಯ ಮೇಲೆ ಹಚ್ಚೆಬೊಟ್ಟು ಹಾಕಿಸಿಕೊಳ್ಳುತ್ತಿದ್ದರು.

ಹಚ್ಚೆಬೊಟ್ಟನ್ನು ತಯಾರಿಸುವ ವಿಧಾನ

ಮೊದಲು ಒಂದು ಒಳ್ಳೆಣ್ಣೆ ದೀಪವನ್ನು ಹಚ್ಚಿ ಅದರ ಮೇಲೆ ಒಂದು ಡಬ್ಬಿಯನ್ನು ಮುಚ್ಚುತ್ತಾರೆ. ಆ ಡಬ್ಬಿಯನ್ನು ಒಂದು ಗಂಟೆಯ ನಂತರ ತೆಗೆಯುತ್ತಾರೆ. ಆಗ ಅದರಲ್ಲಿ ಶೇಖರವಾದ ಕಾಡಿಗೆ ಅಥವಾ ಮಸಿಯನ್ನು ಒಂದು ಬಟ್ಟೆಯಲ್ಲಿ ಉದುರಿಸುತ್ತಾರೆ. ನಂತರ ಅದನ್ನು ಒಂದು ಸಣ್ಣ ಕುಡಿಕೆ ಯಲ್ಲಿ ಹಾಕಿ ಅದಕ್ಕೆ ನೀರನ್ನು ಬೆರೆಸುತ್ತಾರೆ. ನಂತರ ಆ ಕಾಡಿಗೆಯಿಂದ ಹಚ್ಚೆ ಹಚ್ಚಲು ಐದು ಸೂಜಿಯನ್ನು ದಾರದಿಂದ ಕಟ್ಟಿ ತಯಾರಿ ಮಾಡುತ್ತಾರೆ.

ಹಚ್ಚೆಬೊಟ್ಟನ್ನು ಹಾಕುವ ವಿಧಾನ

ಮೊದಲು ಚಿತ್ರಗಳನ್ನು ಒಂದು ಸಣ್ಣ ಕಡ್ಡಿಯಲ್ಲಿ ಬಿಡಿಸುವರು. ನಂತರ ತಯಾರು ಮಾಡಿ ಕೊಂಡಿದ್ದ ಕಾಡಿಗೆಯನ್ನು ಚಿತ್ರದ ಮೇಲೆ ಹಚ್ಚುತ್ತಾರೆ. ಕಡ್ಡಿ ಐದು ಸೂಜಿಯಿಂದ ರಕ್ತ ಬರುವವರಿಗೂ ೭ ಬಾರಿ ಚುಚ್ಚುತ್ತಾರೆ. ನಂತರ ಅದರ ಮೇಲೆ ಅರಿಶಿನ ಒಳ್ಳೆಣ್ಣೆಯನ್ನು ಹಚ್ಚುತ್ತಾರೆ.

---

೪. ಡಾ. ಎಸ್.ಸಿ. ಪಾಟೀಲ, ಜನಪದ ಚಿತ್ರಕಲೆ, ಪಿಎಚ್.ಡಿ. ಮಹಾಪ್ರಬಂಧ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

ಈ ಹಚ್ಚೆಬೊಟ್ಟನ್ನು ಅನೇಕ ಚಿತ್ತಾರಗಳಲ್ಲಿ ರಚಿಸುತ್ತಾರೆ. ಉದಾಹರಣೆಗೆ ನಾಗರಹಾವು, ನೊಣ, ಚೇಳು, ತ್ರಿಶೂಲ, ಈಶ್ವರ, ಲಕ್ಷ್ಮಿ, ಸರಸ್ವತಿ, ಗಣೇಶ, ಓಂ. ಹನುಮಂತ, ವಂಕಿ, ಖಡ್ಗ, ಹೊಬಳ್ಳಿಗಳು, ಬಾಸಿಂಗ, ದಂಡಿ, ಬೆನ್ನಚ್ಚು, ಹಣೆಯ ಮೇಲೆ ಚಿಕ್ಕಿ ಹೆಸರುಗಳು ಮುಂತಾದವು.

ಹಚ್ಚೆಬೊಟ್ಟಿನ ಬಗೆಗಿನ ನಂಬಿಕೆಗಳು

ಹೆಣ್ಣುಮಕ್ಕಳು ತಮ್ಮ ಬೆರಳುಗಳ ಮೇಲೆ ನೊಣದ ಹಚ್ಚೆಯನ್ನು ಹಾಕಿಸಿಕೊಳ್ಳುವುದರಿಂದ ಅವರು ಮಾಡಿದ ಅಡುಗೆ ಹಳಸುವುದಿಲ್ಲ ಎಂಬ ನಂಬಿಕೆ ಇದೆ. ಮೊದಲನೇ ಮಗುವಿಗೆ ಬೆನ್ನಿನ ಮೇಲೆ ಸುಳಿ ಇದ್ದರೆ ಆ ಮಗುವಿಗೆ ಬೆನ್ನಿನ ಮೇಲೆ ಹಚ್ಚೆ ಹಾಕಿಸುವರು. ಇಲ್ಲವಾದಲ್ಲಿ ಇವರ ಹಿಂದಿನ ಮಗು ಸಾಯುತ್ತದೆ ಎಂಬ ನಂಬಿಕೆಯಿದೆ.

ಈ ಹಚ್ಚೆಬೊಟ್ಟನ್ನು ಅನೇಕ ಕಾರಣಗಳಿಗೆ ಹಾಕಿಸಿಕೊಳ್ಳುತ್ತಾರೆ. ಮೊಣಕಾಲು ನೋವಿಗೆ ಕಣ್ಣಿನ ಎಡಬಲಕ್ಕೆ, ತಲೆನೋವಿಗೆ ಮೂಗಿನ ಎಡಬಲಕ್ಕೆ ಹಸಿರು ನರಗಳು ಎದ್ದರೆ, ಹಿಮ್ಮಡಿಯ ಸೂಲಕ್ಕೆ ಹಚ್ಚೆಬೊಟ್ಟನ್ನು ಹಾಕಿಸಿಕೊಳ್ಳುತ್ತಾರೆ. ಈ ಹಚ್ಚೆಬೊಟ್ಟನ್ನು ಸೋದರ ಅತ್ತೆ, ಸೋದರ ಮಾವಂದಿರು ಮಾತ್ರ ಹಾಕಿಸಬೇಕೆಂಬ ರೂಡಿ ಇದೆ.

ಆದರೆ ಆಧುನಿಕ ಯುಗದಲ್ಲಿ ಹಚ್ಚೆಯ ಕಲೆಯು ಆಧುನೀಕರಣಗೊಂಡಿವೆ. ಈಗ ಇವನ್ನು ವಿದ್ಯುತ್ ಯಂತ್ರದ ಮುಖಾಂತರ ಹಾಕುತ್ತಾರೆ. ಕೇವಲ ಇಂದು ಇದು ಬರೀ ಸಂಪ್ರದಾಯವಾಗಿರದೇ ಫ್ಯಾಶನ್ ಕೂಡ ಆಗಿದೆ. ಅಲ್ಲದೇ ಈ ಹಚ್ಚೆ ಕಲೆಯು ವಿದೇಶಿಯರನ್ನು ಕೂಡ ಆಕರ್ಷಿಸಿದೆ. ವಿದೇಶಿಯರು ಕೂಡ ಅನೇಕ ವಿನ್ಯಾಸಗಳನ್ನು ತಮ್ಮ ಮೈ ತುಂಬೆಲ್ಲಾ ಹಾಕಿಸಿಕೊಳ್ಳುತ್ತಿದ್ದಾರೆ. ಇದು ಭಾರತೀಯರ ಜನಪದ ಕಲೆಯ ವೈಶಿಷ್ಟ್ಯತೆ ಜಾಣ್ಮೆ, ಕಲಾವಂತಿಕೆಯನ್ನು ಸಾರಿ ಹೇಳುತ್ತದೆ.

ಹಚ್ಚೆ ಕಲಾವಿದೆ

ಬಾಗಲಕೋಟೆ ಜಿಲ್ಲೆಯ ಹುನಗುಂದ ತಾಲೂಕಿನ ಮಲಗಿಹಾಳ ಗ್ರಾಮದ ತಂದೆ ದುರಗಪ್ಪ ತಾಯಿ ಹುಲಗವ್ವ ಅವರ ಉದರದಲ್ಲಿ ಜನಿಸಿದ ಯಲ್ಲವ್ವನವರೇ ಈ ಹಚ್ಚೆ ಕಲಾವಿದೆ ಯಲ್ಲವ್ವನವರ ತಾಯಿಯ ಕಸುಬು ಇದಾಗಿತ್ತು. ಯಲ್ಲವ್ವನವರು ತಮ್ಮ ತಾಯಿಯ ಮಾರ್ಗದರ್ಶನದಲ್ಲಿ ಹಚ್ಚೆ ಹಾಕುವುದನ್ನು ಕಲಿತರು. ಪ್ರತಿ ಹಳ್ಳಿ ಹಳ್ಳಿಗೂ ಅಡ್ಡಾಡಿ ಜನರು ಇಷ್ಟಪಡುವ ವಿನ್ಯಾಸಗಳನ್ನು ಹಚ್ಚೆಯ ಮೂಲಕ ಹಾಕಿ ಜನರ ಪ್ರೀತಿಗೆ ಪಾತ್ರರಾಗಿದ್ದಾರೆ. ಅನಕ್ಷರಸ್ಥಳಾದ ಈಕೆ ಹಚ್ಚೆ ಹಾಕುವ ಅದ್ಭುತ ಕಲಾವಿದೆ.

ಬೆಳದಿಂಗಳ ಚಿತ್ರಗಳು

ಬೆಳದಿಂಗಳು ಎಂದಾಕ್ಷಣ ಎಲ್ಲರಿಗೂ ಆನಂದವೆನಿಸುತ್ತದೆ. ಆ ಬೆಳದಿಂಗಳನಲ್ಲಿ ಬೆಳದಿಂಗಳೂಟ ಮಾಡುವುದಂತೂ ಅದ್ಭುತ ಎಲ್ಲಾ ಹುಣ್ಣಿಮೆಗಳಿಗಿಂತ ಭಾರತ ಹುಣ್ಣಿಮೆಯೆಂದು ಹೆಚ್ಚಿನ ಹಾಲು ಬೆಳದಿಂಗಳಿರುತ್ತವೆ. ಈ ಭಾರತ ಹುಣ್ಣಿಮೆಗೆ ಅನೇಕ ಹೆಸರುಗಳಿಂದ ಕರೆಯುವರು. ಆ ಚಂದಪ್ಪನ ಹುಣ್ಣಿಮೆ, ಬೆಳದಿಂಗಳ ಹುಣ್ಣಿಮೆ, ಗುಡಿ ಹುಣ್ಣಿಮೆ ಇತ್ಯಾದಿ. ಪುಷ್ಯ, ಮಾಘ, ಮಾಸದಲ್ಲಿ ಬರುವ ಈ ಭಾರತ ಹುಣ್ಣಿಮೆಯ ಐದು ದಿವಸಗಳು ಹೆಣ್ಣುಮಕ್ಕಳಿಗೆ ಸೌಭಾಗ್ಯವನ್ನು ನೀಡುತ್ತವೆ. ಈ ಭಾರತ ಹುಣ್ಣಿಮೆಯ ಹಾಲು ಬೆಳದಿಂಗಳಿನಲ್ಲಿ ಬಿಡಿಸುವ ಚಿತ್ತಾರಗಳು ಸ್ತ್ರೀಯರಲ್ಲಿ ಭಾವೈಕ್ಯತೆ, ಆನಂದ ಸಕಲ ಸೌಭಾಗ್ಯವನ್ನು ನೀಡುತ್ತವೆ. ಈ ಹಾಲು ಬೆಳದಿಂಗಳಿನಲ್ಲಿ ನಡೆಯುವ ಚಿತ್ರಕಲಾ ಚಟುವಟಿಕೆಯನ್ನು ಬೆಳದಿಂಗಳ ಹೊಯ್ಯುವುದು ಎನ್ನುವರು. ಇದು ಕನ್ನಡ ನಾಡಿನ ಬಹುಭಾಗದಲ್ಲಿ ನಡೆಯುತ್ತದೆ. ಈ ಉತ್ಸವ ಇಂದಿಗೂ ಗುಳೇದಗುಡ್ಡದ ಕೆಲವು ಮನೆಗಳಲ್ಲಿ ಉದಾಹರಣೆಗೆ ಬನ್ನಿ ತಿಪ್ಪಾಹರೀಬ ಶೀಲವಂತರ ಅವರುಗಳ ಮನೆಯಲ್ಲಿ ನಡೆಯುತ್ತಿದೆ.

ಈ ಚಿತ್ತಾರಗಳನ್ನು ಸ್ತ್ರೀಯರು ಮನೆಯ ಗೋಡೆಗಳ ಮೇಲೆ ಇಲ್ಲವೆ ಮಣೆಗಳ ಮೇಲೆ ಭಾರತ ಹುಣ್ಣಿಮೆಯೆಂರದು ಚಿತ್ರಿಸುತ್ತಾರೆ. ನೈಸರ್ಗಿಕವಾಗಿ ಸಿಗುವ ಕೆಂಪು ಮಣ್ಣು ಮತ್ತು ಸುಣ್ಣಗಳೆರಡೇ ಬಣ್ಣಗಳ ಮುಖಾಂತರ ಚಿತ್ರ ಬಿಡಿಸುವರು. ಮೊದಲು ಗೋಡೆಯ ಮೇಲೆ ಕೆಂಪುಬಣ್ಣದಿಂದ ಸಾರಿಸಿ ಬಿಳಿ ಸುಣ್ಣದಲ್ಲಿ ಬೆರಳುಗಳನ್ನು ಅದ್ದಿ ಬಿಂದುಗಳ ಮುಖಾಂತರ ಚಿತ್ರಿಸುತ್ತಾರೆ. ಇಲ್ಲವಾದಲ್ಲಿ ಇದೇ ರೀತಿ ಬಿಳಿ ಸುಣ್ಣದ ಗೋಡೆಯ ಮೇಲೆ ಕೆಂಪುಮಣ್ಣಿನ ಬಿಂದುಗಳ ಮುಖಾಂತರ ಚಿತ್ರರಚಿಸುತ್ತಾರೆ. ಹುಣ್ಣಿಮೆಗೆ ನಾಲ್ಕು ದಿನಗಳ ಮುಂಚೆಯೇ ಚಿತ್ತಾರ ಬಿಡಿಸುವ ಕಾರ್ಯ ಆರಂಭವಾಗುತ್ತದೆ. ಅವತ್ತಿನ ಚಿತ್ರಗಳು ಅವತ್ತು ಮಾತ್ರ ನೋಡಲು ಸಿಗುತ್ತವೆ. ಮರುದಿನ ಆ ಚಿತ್ರಗಳನ್ನು ಅಳಿಸಿ ಹೊಸ ಚಿತ್ರಗಳನ್ನು ರಚಿಸುತ್ತಾರೆ. ಐದನೆಯ ದಿನದ ಅಂದರೆ ಭಾರತ ಹುಣ್ಣಿಮೆಯೆಂದು ರಚಿಸಿದ ಚಿತ್ರಗಳು ಮಾತ್ರ ದಸರಾ ಮತ್ತು ದೀಪಾವಳಿ ಬರುವವರೆಗೂ ನೋಡಲು ಸಿಗುತ್ತದೆ. ಮೊದಲನೆಯ ದಿನದಂದು ಕೆಂಪು ಮಣ್ಣಿನ ಹಿನ್ನೆಲೆಯಲ್ಲಿ ಬೆರಳುಗಳನ್ನು ಸುಣ್ಣದಲ್ಲಿ ಅರ್ಧ ಚಂದ್ರ ಇಲ್ಲವೆ ಪೂರ್ಣಚಂದ್ರನನ್ನು ಬಿಂದುಗಳ ಮುಖಾಂತರ ರಚಿಸುತ್ತಾರೆ. ಹೀಗೆ ಮೊದಲನೆ ದಿನ ಸೂರ್ಯ ಮತ್ತು ಚಂದ್ರರ ಚಿತ್ರವನ್ನು ಮಾತ್ರ ರಚಿಸುತ್ತಾರೆ.

ಎರಡನೇಯ ದಿನದಂದು ಸೂರ್ಯ, ಚಂದ್ರ, ಹಾವುಗಳ ಚಿತ್ರವನ್ನು ಮಾತ್ರ ರಚಿಸುವರು. ಸೂರ್ಯ ಹಾಗೂ ಚಂದ್ರನನ್ನು ರಚಿಸಲು ಊಟದ ತಾಟನ್ನು ಗೋಡೆಯ ಮೇಲೆ ಹಿಡಿದು ಅದರ

ಪಕ್ಕಕ್ಕೆ ಬಿಳಿಸುಣ್ಣದ ಬಿಂದುಗಳನ್ನಿಟ್ಟು ರಚಿಸುವರು ಹಾಗೆಯೇ ಅಂಕುಡೊಂಕಾಗಿ ರೇಖೆಗಳನ್ನು ರಚಿಸಿ ನಾಗರಹಾವಿನ ಚಿತ್ತಾರವನ್ನು ಮಾಡುವರು.

ಮೂರನೇಯ ದಿನದಂದು ಬರೀ ಚೌಕಾರದ ರಾಮನ ತೊಟ್ಟಿಲನ್ನು ರಚಿಸುವರು. ಅದರಲ್ಲಿ ಕೆಲವು ನಕ್ಷೆಗಳನ್ನು ಬಿಂದುಗಳ ಮೂಲಕ ಇಡುತ್ತಾರೆ. ಹೀಗೆ ರಚಿಸಿದ ಚಿತ್ತಾರದಲ್ಲಿ ಪುತ್ರ ಸಂತಾನದ ಅಪೇಕ್ಷೆಗಳನ್ನು ಪೂರೈಸಿಕೊಳ್ಳುವರು. ಮತ್ತೆ ನಾಲ್ಕನೆಯ ದಿನ ಎಲೆ, ಹೂ, ಬಳ್ಳಿಗಳು, ನಾಗರಹಾವು ಮತ್ತು ಮಧ್ಯದಲ್ಲಿ ಚಿಕ್ಕದಾಗಿ ತೇರಿನ ಚಿತ್ರವನ್ನು ರಚಿಸುತ್ತಾರೆ. ಅದರಲ್ಲಿಯೇ ರೂಢಿಯಲ್ಲಿರುವಂತೆ ಹುಚ್ಚಯ್ಯನನ್ನು ಸಹ ರಚಿಸುತ್ತಾರೆ.

ಇನ್ನೂ ಐದನೆಯ ದಿನದಂದು ಮಧ್ಯದಲ್ಲಿ ದೊಡ್ಡದಾದ ತೇರು, ಮೇಲೆ ಸೂರ್ಯ, ಚಂದ್ರ ಅಕ್ಕಪಕ್ಕದಲ್ಲಿ ಹಾವು, ಚೇಳು, ಬಸವಣ್ಣ ವಾದ್ಯಮೇಳಗಳನ್ನು ಚಿತ್ರಿಸುತ್ತಾರೆ. ತೇರಿನ ಕಳಸವನ್ನು ಚೆನ್ನಾಗಿ ಚಿತ್ರಿಸಲು ಬಸರಿ ಎಲೆಯನ್ನು ಗೋಡೆಯ ಮೇಲೆ ಹಿಡಿದು ಅದರ ಪಕ್ಕದಲ್ಲಿ ಸುಣ್ಣದ ಬೊಟ್ಟುಗಳನ್ನಿಟ್ಟು ಸುಂದರವಾಗಿ ಚಿತ್ರಿಸುತ್ತಾರೆ. ಹಾಗೆಯೇ ಜೋಳದ ದಂಟನ್ನು ಬಳಸಿ ಸುಂದರ ಸಮಾಂತರ ಸಾಲು ಬಿಂದುಗಳಿಂದ ತೇರನ್ನು ರಚಿಸುತ್ತಾರೆ.

ಬೆಳದಿಂಗಳ ಹೊಯ್ಯುವ ಕಲಾವಿದೆ

ಶ್ರೀಮತಿ ಶ್ರಾವಂತ್ರೆವ್ವ ರಾಚಯ್ಯ ಮರಬದಮಠ ಹಾಗೂ ಶ್ರೀಮತಿ ಬಸವ್ವ ವೀರಭದ್ರಯ್ಯ ಸಾಲಿಮಠ ಬೆಳದಿಂಗಳ ಚಿತ್ತಾರಗಳನ್ನು ಬಿಡಿಸುವ ಕಲಾವಿದೆಯರು. ಇಂದಿಗೂ ಸಹ ಗುಳೇದ ಗುಡ್ಡದಲ್ಲಿ ಇವರು ಈ ಪದ್ಧತಿಯನ್ನು ಆಚರಿಸುತ್ತಿದ್ದಾರೆ. ಇವರ ಪ್ರಕಾರ ಈ ಕಾರ್ಯಕ್ರಮವು ಖರ್ಚಿಲ್ಲದೆಯೇ ಸೃಜನಶೀಲತೆಯ ವಾತಾವರಣವನ್ನು ಸಮಾಜದಲ್ಲಿ ಮೂಡಿಸುವುದಕ್ಕೆ ಸಹಾಯಕವಾಗಿದೆ.

ಹೋಳಿಹಬ್ಬ

ದಕ್ಷಿಣ ಭಾರತದ ರಾಜ್ಯಗಳಲ್ಲಿ ಹೋಳಿಹಬ್ಬವನ್ನು ಬಹಳ ಅದ್ದೂರಿ ಹಾಗೂ ವಿಶಿಷ್ಟವಾಗಿ ಆಚರಿಸುತ್ತಾರೆ. ಶಿವನ ತಪಸ್ಸನ್ನು ಭಂಗಮಾಡಿದ ರತಿ ಹಾಗೂ ಕಾಮನನ್ನು ದಹಿಸುವ ಹಬ್ಬವೇ ಕಾಮದಹನ ಅಥವಾ ಹೋಳಿಹಬ್ಬ. ಕರ್ನಾಟಕದ ಬಾಗಲಕೋಟೆ ಜಿಲ್ಲೆಯಲ್ಲಂತೂ ಭಾರೀ ವಿಜೃಂಭಣೆ ಯಿಂದ ಈ ಹಬ್ಬವನ್ನು ಆಚರಿಸುತ್ತಾರೆ.

ಹೋಳಿ ಹುಣ್ಣಿಮೆಯ ದಿನದಂದು ರಾತ್ರಿ ಸುಂದರವಾದ ಮಂಟಪದಲ್ಲಿ ಸುಂದರವಾದ ಬಣ್ಣಗಳಿಂದ ರಚಿಸಿದ ರತಿ ಮತ್ತು ಕಾಮನ ಮೂರ್ತಿಗಳನ್ನು ಕೂಡಿಸುತ್ತಾರೆ. ಕಟ್ಟಿಗೆಯಲ್ಲಿ ನಿರ್ಮಿಸಿ ಬಣ್ಣಗಳಿಂದ

ಅಲಂಕರಿಸಿದ ಸುಂದರ ಮೂರ್ತಿಗಳನ್ನು ಇಟ್ಟು ಸುಟ್ಟು ಬಿಡುತ್ತಾರೆ. ಈ ಹುಣ್ಣಿಮೆಯೆಂದು ಪ್ರತಿ ಮನೆಯವರು ಧನುಶ್ಯಧಾರಿಯಾದ ಮನ್ಮಥ ಚಿತ್ರವನ್ನು ರಚಿಸಿ ಬೆಂಕಿಯಲ್ಲಿಟ್ಟು ಸುಡುತ್ತಾರೆ. ಹೀಗೆ ಪ್ರತಿಯೊಬ್ಬರು ಕಾಮದ ದಹನ ಮಾಡಿ ಆ ಬೆಂಕಿಯಲ್ಲಿ ಹೋಳಿಗೆ ಬೆಚ್ಚಗೆ ಮಾಡಿ ಎಲ್ಲರಿಗೂ ಹಂಚುತ್ತಾರೆ. ಸಾರ್ವಜನಿಕವಾಗಿ ಕಾಮನನ್ನು ಸುಟ್ಟು ಬೆಂಕಿಯನ್ನು ಮನೆಗೆ ತಂದು ಅದರಲ್ಲಿ ಕಡ್ಲಿ ಕಾಳುಗಳನ್ನು ಹುರಿದು ಮನೆಮಂದಿ ತಿನ್ನುತ್ತಾರೆ. ಅದೇ ಬೆಂಕಿಯಿಂದ ದೀಪ ಹಾಗೂ ಒಲೆಯನ್ನು ಹೊತ್ತಿಸುತ್ತಾರೆ.

ಹೋಳಿ ಹುಣ್ಣಿಮೆಯ ಮರುದಿನ ನಡೆಯುವ ಬಣ್ಣದಾಟ ಎಲ್ಲರಲ್ಲಿಯೂ ಆನಂದ ತಂದಿರುತ್ತದೆ. ಅನೇಕ ಹಲಗೆಗಳನ್ನು ಯುವಕರು ಹೆಗಲಿಗೆ ಏರಿಸಿ ಎಲ್ಲರೂ ತಮ್ಮ ಭೇದ ಭಾವಗಳನ್ನು ಮರೆತು ಪರಸ್ಪರರು ಬಣ್ಣ ಹಚ್ಚುತ್ತಾ ಹಾಡಿ ಬಣ್ಣಗಳನ್ನು ಎರಚುತ್ತಾ ಹೋಳಿ ಹಾಡುಗಳನ್ನು ಕುಣಿದು ಸಂಭ್ರಮಿಸುತ್ತಾರೆ. ಸಂಜೆಯ ಬಣ್ಣದಾಟದ ಮುಕ್ತಾಯವು ಹೆಣಗಳ ಸೋಗಿನೊಂದಿಗೆ ಮುಗಿಯುತ್ತದೆ.

ಗುಳೇದಗುಡ್ಡದ ಖಣ

ಕರ್ನಾಟಕದ ಬಾಗಲಕೋಟೆ ಜಿಲ್ಲೆಯ ಗುಳೇದಗುಡ್ಡ ಎಂಬ ಗ್ರಾಮದಲ್ಲಿ ಉತ್ಪನ್ನವಾಗುವ ಖಣಗಳು ವಿಶೇಷತೆಗೆ ಬಹುಮುಖ್ಯವಾಗಿವೆ. ಈ ಖಣಗಳು ಜನ್ಮ ತಾಳುವುದು ಮಗ್ಗಗಳಲ್ಲಿ. ಎರಡು ಕಟ್ಟಿಗೆಯು ಚೌಕಟ್ಟುಗಳ ಮಧ್ಯ ಎರಡು ಕಪಾಳಗಳ ಆಶ್ರಯದಲ್ಲಿ ಲಾಳಿ ಎಂಬ ಹತ್ತು ಇಂಚಿನ ಒಂದು ಕಟ್ಟಿಗೆಯ ವಸ್ತುವು ಈ ಕಲಾತ್ಮಕ ಖಣಗಳ ನಿರ್ಮಾಣಕ್ಕೆ ಸಹಾಯವಾಗುತ್ತದೆ. ಈ ರೇಷ್ಮೆ ಖಣಗಳು ನೂಲು ಹಾಗೂ ರೇಷ್ಮೆಯ ಎಳೆಗಳಿಂದ ನಿರ್ಮಾಣಗೊಳ್ಳುತ್ತವೆ. ನೇಯ್ಗೆ ಹಣಿಗೆ ಹಾಗೂ ಕೋಲುಗಳು ಪ್ರಸ್ತುತ ಕಾರ್ಯದಲ್ಲಿ ಮುಖ್ಯ ಪಾತ್ರವಹಿಸುತ್ತವೆ.

ನಾಲ್ಕು ಕೋಲಿನ ನೇಯ್ಗೆಯಲ್ಲಿ ವಗಸಾಲಸಾದಿ ತೆಂಗಿನಗರಿ, ಐದು ಕೋಲಿನ ನೇಯ್ಗೆಯಲ್ಲಿ ತೇರು, ರುದ್ರಾಕ್ಷಿ; ಆರು ಕೋಲಿನ ನೇಯ್ಗೆಯಲ್ಲಿ ಏಲಕ್ಕಿ, ಕರಿಮಣಿ ಎಕ್ಕ, ಏಲಕ್ಕಿ ಬಳ್ಳಿ; ಏಳು ಕೋಲಿನ ನೇಯ್ಗೆಯಲ್ಲಿ ಕವಳಿ ಹೂವು, ಸೂಜಿ ಮಲ್ಲಿಗೆ; ಎಂಟು ಕೋಲಿನ ನೇಯ್ಗೆಯಲ್ಲಿ ಸಿಲಾರಿ, ತುಳಸಿಪಾನ, ಪಿಚ್ ತೇರು, ಏಲಕ್ಕಿ; ಒಂಭತ್ತು ಕೋಲಿನ ನೇಯ್ಗೆಯಲ್ಲಿ ನವಲಹರಿ, ತುಳಸಿಪಾನ; ಹತ್ತು ಕೋಲಿನ ನೇಯ್ಗೆಯಲ್ಲಿ ಸಿದ್ಧೇಶ್ವರ ಮುಕುಟ, ತೇರು, ಕೇದಗಿ, ಚಿಕ್ಕಬಳ್ಳಿ, ಚಿಕ್ಕ ಸೂಜಿಮಲ್ಲಿಗೆ, ಗೊಡ್ಡ ಶಾವಂತಿಗಿ ಚಿತ್ತಾರಗಳು ಮೂಡುತ್ತವೆ.

ಇಷ್ಟಲ್ಲದೆ ಅದ್ಭುತವಾದ ಸುದರ್ಶನಚಕ್ರ, ಸೂರ್ಯನಾರಾಯಣ ಚಿತ್ತಾರಗಳು ಹದಿನೈದು

ಕೋಲಿನಲ್ಲಿ ಮೂಡುತ್ತವೆ. ಹದಿನೇಳು ಕೋಲಿನ ನೇಯ್ಗೆಯಲ್ಲಿ ಆನೆ, ನವಿಲು, ಈಶ್ವರ, ಬಸವಣ್ಣ, ಬಾತುಕೋಳಿಗಳು ಸುಂದರವಾಗಿ ನಿರ್ಮಾಣಗೊಳ್ಳುತ್ತವೆ. ಇದಲ್ಲದೆ ಇಪ್ಪತ್ತು ಕೋಲಿನ ನೇಯ್ಗೆಯಲ್ಲಿ ಅತ್ಯದ್ಭುತವಾದ ರಾಷ್ಟ್ರೀಯ ಭಾವೈಕ್ಯತೆಯನ್ನು ಬಿಂಬಿಸುವಂತಹ ಜೈಹಿಂದ ಎಂಬಕ್ಷರಗಳು ಹಾಗೂ ಮಾನವನ ಆಕೃತಿಗಳು ಮೂಡುತ್ತವೆ.

ಅಡ್ಡಲಾಗಿ ಓಡಾಡುವ ಲಾಳಿಯಲ್ಲಿ ನೂಲಿನ ದಾರವು ದಟ್ಟ ನೀಲಿ ಬಣ್ಣದಲ್ಲಿರುತ್ತದೆ. ಇದು ಅಡ್ಡಲಾಗಿ ಹೆಣೆದುಕೊಂಡು ಆ ರೇಷ್ಮೆಯ ನೂಲಿನೊಂದಿಗೆ ಬೆರೆತು ಚಿತ್ರ ಹಾಗೂ ಬಟ್ಟೆಯ ಬಿಗುವನ್ನು ಸೃಷ್ಟಿಸುತ್ತಾ ನೂಲಿನ ದಾರವು ಓಡಾಡುತ್ತದೆ. ನಿರಂತರವಾಗಿ ಈ ಕ್ರಿಯೆಯು ನಡೆಯುವುದರಿಂದ ಚಿತ್ತಾರಮಯ ಖಣಗಳು ನಿರ್ಮಾಣವಾಗುತ್ತವೆ.

ನಿಸರ್ಗದಲ್ಲಿಯೇ ಅತೀ ಬೃಹತ್ ಪ್ರಾಣಿಯಾದ ಆನೆಯ ಅಲಂಕಾರ ರೂಪವನ್ನು ನೇಯ್ಗೆಯ ಚಕ್ರಗಳ ಪಟ್ಟಿಯ ಸಹಾಯದಿಂದ ಬಟ್ಟೆಯ ಮೇಲೆ ಮೂಡಿಸಲಾಗುತ್ತದೆ. ಹಾಗೆ ಅದರ ಸೊಂಡಿಲನ್ನು ಕೆಳಗೆ ತೂಗುಬಿಟ್ಟು ವಿನಯದಿಂದ ನಿಂತಿದೆ. ಅದರ ಹಿಂದೆ ಸುಂದರವಾದ ನವಿಲೊಂದು ತನ್ನ ಠೀವಿಯಿಂದ ಗರಿಗೆದರಿ ನಿಂತಿರುವಂತೆ ಸಂಯೋಜನಾತ್ಮಕವಾಗಿ ರೂಪಿಸಿದ್ದಾರೆ. ಪ್ರತಿಯೊಂದು ಚಿತ್ತಾರಕ್ಕೂ ಹೊರಗೆ ಚೌಕಕಾರದ ಚೌಕನ್ನು ಹಾಕಿದ್ದಾರೆ. ಹೀಗೆ ಖಣದ ದಡಿಯಲ್ಲಿಯೂ ಇದೇ ಸೂಕ್ಷ್ಮ ರೂಪ ಗಳಿವೆ. ದಟ್ಟ ಕಂದು ಬಣ್ಣದ ದಡಿಯಲ್ಲಿ ನಕ್ಷೆಗಳು ಚೆನ್ನಾಗಿ ಕಂಡುಬಂದಿವೆ. ಎಲ್ಲಾ ರೀತಿಯ ಬಣ್ಣಗಳನ್ನು ಉಪಯೋಗಿಸಿಕೊಂಡು ಚಿತ್ತಾರಗಳನ್ನು ಬಿಡಿಸುವುದು ವಾಡಿಕೆ. ಇದರಂತೆಯೇ ಸುಪ್ರಸಿದ್ಧ ಗುಳೇದಗುಡ್ಡ ಖಣದಲ್ಲಿ ಜನಪದ ಚಿತ್ತಾರಗಳು ಅದ್ಭುತವಾಗಿ ಮೂಡಿ ಬಂದಿವೆ. ಹೀಗೆ ಜನಪದ ಚಿತ್ತಾರಗಳನ್ನೊಳಗೊಂಡ ರೇಷ್ಮೆ ಖಣಗಳಿಗೆ ಹೊರರಾಜ್ಯಗಳಲ್ಲೂ ಬೇಡಿಕೆ ಇದೆ. ಅಲ್ಲದೇ ಈ ಖಣಗಳು ವಿದೇಶಿಯರ ಪ್ರೀತಿಗೂ ಪಾತ್ರವಾಗಿದೆ ಎಂಬುದು ಸಂತಸದ ವಿಷಯ.

ರಂಗೋಲಿ

"ಮಾನವ ಬದುಕಿನಲ್ಲಿ ಚಿತ್ರಕಲೆಯ ಪ್ರವೇಶದೊಂದಿಗೆ ರಂಗೋಲಿ ಪ್ರವೇಶ ಪಡೆದಿದೆ"[೫]. ಸಂತೋಷಕುಮಾರ ಗುಲ್ವಾಡಿಯವರು ರಂಗೋಲಿಯ ಪ್ರಾಚೀನತೆಯನ್ನು ಸುಮಾರು ೫೦೦೦ ವರ್ಷಗಳ ಹಿಂದ ಎಳೆದು ಪರಿಚಯಾತ್ಮಕ ಲೇಖನವನ್ನು ಬರೆದಿದ್ದಾರೆ. ಬಾಣನು ತನ್ನ ಕಾದಂಬರಿಯಲ್ಲಿ ಸೂತಿಕಾರಾಗೃಹದ ಮುಂದೆ ರಂಗೋಲಿ ಹಾಕುವುದನ್ನು ವಿವರಿಸಿದ್ದಾನೆ. ಕಾಮಶಾಸ್ತ್ರದ ತೆಲುಗು

---

೫. ಡಾ. ಎಸ್.ಸಿ. ಪಾಟೀಲ, ವರ್ಣಸಂಚಯ, ಪ್ರಕಟಣೆ ವಿಜಯ ಚಿತ್ರಕಲಾ ಶಾಲೆ, ಇಳಕಲ್ಲ.

ವ್ಯಾಖ್ಯಾನಕಾರರಾದ ಮೆಡಿಚರ್ಲ ಆಂಜನೇಯಶಾಸ್ತ್ರೀಯವರು ರಂಗೋಲಿ ಇದು ಚಿತ್ರಕಲೆಯಷ್ಟೇ ಪ್ರಾಚೀನವಾದದ್ದು ಎಂದು ವಿವರಿಸಿದ್ದಾರೆ.

ಕರ್ನಾಟಕದ ರಂಗೋಲಿ ಹಾಕುವಾಗ ರಂಗೋಲಿ ಪುಡಿ, ಅರಿಶಿಣ, ಜೇಡಿಮಣ್ಣು, ಧಾನ್ಯಗಳು, ಪತ್ರಿಗಳು, ಇದ್ದಿಲು, ಕುಂಚಗಳು, ಕುಂಕುಮ, ಸುಣ್ಣ, ಕ್ಯಾವಿ, ಹೂವುಗು, ತರಕಾರಿಗಳು, ಹಣ್ಣುಹಂಪಲುಗಳು, ವಿವಿಧ ವರ್ಣಗಳು ಇತ್ಯಾದಿ ಬಗೆಯ ಸಾಧನ ಮತ್ತು ಸಾಮಗ್ರಿಗಳನ್ನು ಉಪಯೋಗಿಸುತ್ತಿದ್ದರು.

ರಂಗೋಲಿ ಬಿಡಿಸುವ ವಿಧಾನಗಳು

೧. ಪ್ರಾಚೀನ ರೀತಿಯಲ್ಲಿ ಹಾಕುವ ರಂಗೋಲಿ ಉತ್ತರ ಕರ್ನಾಟಕದ ಪ್ರಮುಖ ಕೊಡುಗೆ ಎನ್ನಬಹುದು. ಇದರಲ್ಲಿ ಎರಡು ಪ್ರಕಾರಗಳಿವೆ.

ಅ. ಚುಕ್ಕೆಯ ರಂಗೋಲಿ: ರಂಗೋಲಿಯ ಹಿಟ್ಟಿನಿಂದ ಚುಕ್ಕೆಗಳನ್ನು ಇಟ್ಟು ತಮ್ಮಗೆ ಬೇಕಾದ ರೀತಿಯಲ್ಲಿ ಚುಕ್ಕೆಯಿಂದ ಚುಕ್ಕೆಗೆ ಗೆರೆಗಳನ್ನು ಕೂಡಿಸುತ್ತ ಅಪೇಕ್ಷಿತ ಕೃತಿಗಳನ್ನು ತೆಗೆಯುವ ವಿಧಾನವೇ ಚುಕ್ಕೆಯ ರಂಗೋಲಿ.

ಆ. ಚುಕ್ಕೆ ರಹಿತ ರಂಗೋಲಿ: ಚುಕ್ಕೆಗಳನ್ನು ಇಡಲಾರದೆ ನೇರವಾಗಿ ರಂಗೋಲಿ ಪುಡಿಯಿಂದಲೇ ರಂಗೋಲಿಯನ್ನು ಹಾಕುವ ವಿಧಾನವಾಗಿದೆ. ಇದನ್ನು ಸರಳಗ್ಗೆ ರಂಗೋಲಿ ಎಂದೂ ಕರೆಯುತ್ತಾರೆ. ಇವು ಹೆಚ್ಚಾಗಿ ಅಲಂಕಾರಿಕ ವಿನ್ಯಾಸದ ರಚನೆಗಳಾಗಿವೆ.

ಇ. ಆಧುನಿಕ ರಂಗೋಲಿ: ಇತ್ತೀಚಿಗೆ ಕೆಲವರು ರಸಾಯನಿಕ ವರ್ಣ ಮತ್ತು ಕೃತಿಮ ಕಟ್ಟಿಗೆಯ ಕೊಳವೆಗಳಿಂದಲೂ ರಂಗೋಲಿ ಹಾಕುತ್ತಾರೆ. ಅಲ್ಲದೆ ಇನ್ನೂ ಕೆಲವರು ತೈಲವರ್ಣದಿಂದ ಮನೆಯ ಮುಂದೆ ರಂಗೋಲಿ ಹಾಕಿಸುತ್ತಾರೆ. ಇವೆಲ್ಲ ಆಧುನಿಕ ರೀತಿಯಲ್ಲಿ ರಂಗೋಲಿಗಳಾಗಿವೆ. ವರ್ಣಗಾರಿಕೆ, ಹಾಕುವ ವಿಧಾನ ಇವೆಲ್ಲವೂ ಪ್ರಾಚೀನ ರೀತಿಯ ರಂಗೋಲಿಗಳಿಗಿಂತ ಇಲ್ಲಿ ಭಿನ್ನವಾಗಿ ಕಂಡುಬರುತ್ತವೆ.

ಜನಪದ ಚಿತ್ರಕಲೆ

ಬಾದಾಮಿ ಪ್ರದೇಶದಲ್ಲಿ ಜನಪದ ಭಿತ್ತಿ ಚಿತ್ರಕಲೆಯು ವಿಶೇಷವಾಗಿ ರಚನೆಯಾಗುತ್ತಾ ಬಂದಿದೆ. ಹಬ್ಬಹರಿದಿನಗಳಲ್ಲಿ ದೇವರ ಜಾತ್ರೆ ಉತ್ಸವಗಳನ್ನು ಮದುವೆ ಮುಂಜಿವೆಗಳಲ್ಲಿ ಮತ್ತು ಇನ್ನಿತರ ವಿಶೇಷ ದಿನಗಳಲ್ಲಿ ಈ ಪ್ರದೇಶದಲ್ಲಿ ಜನಪದರು ಭಿತ್ತಿಚಿತ್ರ ವಿನ್ಯಾಸಗಳನ್ನು ರಚನೆ ಮಾಡುತ್ತಾರೆ. ಅವುಗಳಲ್ಲಿ ಕೆಲವು ಪ್ರಮುಖವಾದ ಚಿತ್ರವಿನ್ಯಾಸಗಳ ಬಗ್ಗೆ ಸ್ಥೂಲವಾಗಿ ಗಮನಿಸಬಹುದು.

ಗೋಡೆಯ ಹೊರಬದಿಯ ಅಲಂಕಾರದ ಚಿತ್ರ ವಿನ್ಯಾಸಗಳು

ಹಬ್ಬ, ಉತ್ಸವ, ಜಾತ್ರೆ, ಮದುವೆಯಂತಹ ಸಂಭ್ರಮದ ದಿನಗಳಲ್ಲಿ ಗೋಡೆಯನ್ನು ಸಾರಿಸಿ, ಸುಣ್ಣ, ಬಣ್ಣ ಹಚ್ಚಿ ಅಲಂಕರಿಸುತ್ತಾರೆ. ಈ ಸಂದರ್ಭದಲ್ಲಿ ಅಲಂಕಾರಗಳು ಹೀಗಿರುತ್ತವೆ. ಜೋರು ಬಿಡುವುದು, ಚುಕ್ಕೆಗಳನ್ನು ಇಡುವುದು, ಅಧಿಕ, ಸ್ವಸ್ತಿಕ್ ಮುಂತಾದ ಚಿಹ್ನೆಗಳನ್ನು ಬರೆಯುವುದು ಪಾಂಡವರ ಚಿತ್ರ ಬರೆಯುವುದು ಬಾಗಿಲು ಸುತ್ತಲಿನ ಇತ್ಯಾದಿ ಚಿತ್ರವಿನ್ಯಾಸ ಬಿಡಿಸುವ ಸಂಪ್ರದಾಯ ಬಾದಾಮಿ ಭಾಗದಲ್ಲಿ ಪ್ರಚಲಿತದಲ್ಲಿದೆ.

ಮನೆಯ ಗೋಡೆಗಳಿಗೆ ಜೋರು ಬಿಡುವುದು

ಹಬ್ಬ ಮದುವೆಯಂಥ ಮಂಗಲ ಕಾರ್ಯಗಳಲ್ಲಿ ವರ್ಷಕ್ಕೊಮ್ಮೆಯಾದರು ಮನೆಯನ್ನು ಅಲಂಕಾರ ಗೊಳಿಸುವ ಪರಿಪಾಠ ಉತ್ತರ ಕರ್ನಾಟಕದಲ್ಲಿ ಇರುವಂತೆ ಬಾದಾಮಿ ಸುತ್ತಮುತ್ತಲಿನ ಕುಟಕನಕೇರಿ, ಬೇಲೂರು, ಐಹೊಳೆ, ಪಟ್ಟದಕಲ್ಲು ಹಾಗೂ ಸುತ್ತಮುತ್ತಲಿನ ಹಳ್ಳಿಗಳಲ್ಲಿ ಸಗಣಿಯಿಂದ ನೆಲ, ಗೋಡೆಗಳನ್ನು ಸಾರಿಸುತ್ತಾರೆ. ನಂತರ ಸುಣ್ಣದಿಂದ ಗೋಡೆಗಳನ್ನು ತುದಿಯಿಂದ (ಕುಂಬಿಯಿಂದ) ಉದ್ದ ವಾದ ಗೆರೆ(ಪಟ್ಟೆ)ಗಳನ್ನು ಎಳೆಯುತ್ತಾರೆ. ಅದರ ಪಕ್ಕದಲ್ಲಿ ಹುರಿಮಂಜಿನಿಂದ (ಕಾವಿ ಬಣ್ಣದ) ಪಟ್ಟಿ ಗಳನ್ನು ಒಂದರ ನಂತರ ಒಂದರಂತೆ ಎಳೆಯುತ್ತಾರೆ. ಅವು ಕುಂಬಿಯ ಮೇಲುಗಡೆಯಿಂದ ಇಳಿಬಿಟ್ಟ ತಳಿರು ತೋರಣಗಳಂತೆ ಶೋಭಾಯಮಾನವಾಗಿ ಕಾಣಿಸುವುದುಂಟು. ಕೆಲವರು ಬಾಗಿಲವಿರುವ ಭಾಗದಲ್ಲಿ ಈ ರೀತಿ ಅಲಂಕರಿಸುತ್ತಾರೆ. ಇದಕ್ಕೆ ಜೋರು ಬಿಡುವುದು ಎನ್ನುತ್ತಾರೆ. ಇದು ಬಾದಾಮಿ ಸುತ್ತಮುತ್ತ ಲಿನಲ್ಲಿ ಬಹಳ ಕಂಡುಬರುತ್ತಾರೆ.

ಮನೆಗೋಡೆಗಳಿಗೆ ಚಿತ್ರ ಬಿಡಿಸುವುದು

ಮನೆಯ ಮೇಲು ಭಾಗದಲ್ಲಿ ಜೋರು ಬಿಡಿಸುವುದು ಒಂದು ವಿಧವಾದರೆ, ಕೆಳಗಿನ ಹೊರ ಭಾಗದಲ್ಲಿ ಒಳಗಿನ ಭಾಗದಲ್ಲಿ ದೊಡ್ಡ ದೊಡ್ಡ ಮನೆಗಳಿದ್ದರೆ, ಸಾರಿಸಿದ ಮನೆಯನ್ನು ಹಾಗೆಯೇ ಬಿಡಬಾರದೆಂಬ ನಂಬಿಕೆ ಇದೆ. ಕೈ ನಿಲುಕುವಷ್ಟು ಎತ್ತರದಲ್ಲಿ ಸಾಲಾಗಿ ಒಂದು ಹುರಿಮಂಜಿನ ಚುಕ್ಕೆ, ಒಂದು ಸುಣ್ಣದ ಚುಕ್ಕೆಗಳನ್ನು ಮನೆಯ ಮುಂದುಗಡೆ ಬಾಗಿಲಿನ ಎರಡೂ ಬದಿಯಿಂದ ಗೋಡೆ ಮುಗಿಯುವವರೆಗೆ ಸುತ್ತಲೂ ಇಡುತ್ತಾರೆ. ಗೋಡೆಯ ಮೇಲೆ ಇವು ಸುಂದರವಾಗಿ ಕಂಗೊಳಿ ಸುತ್ತವೆ. ನೆಲ ಗೋಡೆಗಳನ್ನು ಇಡಿಯಾಗಿ ಸಾರಣೆ ಮಾಡಿದಾಗಲೆಲ್ಲಾ ಹೀಗೆ ಚುಕ್ಕೆಗಳನ್ನು ಇಡುವ ಸಂಪ್ರದಾಯ ಉತ್ತರ ಕರ್ನಾಟಕದುದ್ದಕ್ಕೂ ಸಾಮಾನ್ಯವಾಗಿದೆ. ಇಲ್ಲಿ ಸುಣ್ಣ ಹುರಿಮಂಜುಗಳನ್ನು ಪ್ರತ್ಯೇಕ ಗಡಿಗೆಗೆ ಹಾಕಿಕೊಂಡು ನೀರಿನೊಂದಿಗೆ ಬೆರೆಸಿ ಹದಮಾಡಿ ಕೊಂಡಿರುತ್ತಾರೆ. ಸಣ್ಣ ಅರಿವೆ

ತುಂಡಿನಿಂದ ಈ ಚುಕ್ಕೆಗಳನ್ನು ಇಡುತ್ತಾರೆ. ಕಿಡಕಿಗಳಿದ್ದರೆ ಸುತ್ತಲೂ ಕಲಾತ್ಮಕವಾಗಿ ಅಲಂಕಾರ ಮಾಡುತ್ತಾರೆ.

ಅಧಿಕ ಮತ್ತು ಸ್ವಸ್ತಿಕ್ ಚಿಹ್ನೆಗಳನ್ನು ಬರೆಯುವುದು

ಬಾದಾಮಿ, ಐಹೊಳೆ, ಪಟ್ಟದಕಲ್ಲು, ಕುಟಕನಕೇರಿ, ಬೇಲೂರು, ಜಾಲಿಹಾಳ ಮುಂತಾದ ಊರುಗಳಲ್ಲಿ ಮನೆಯನ್ನು ಸಾರಿಸಿದಾಗ ಸ್ವಸ್ತಿಕ್ ಚಿಹ್ನೆಯನ್ನು ಸುಣ್ಣದಿಂದ ಇಲ್ಲವೇ ಹುರಿಮಂಜಿನಿಂದ ಚಿತ್ರಿಸುತ್ತಾರೆ. ಕೆಲವು ಅಧಿಕ ಚಿಹ್ನೆಯನ್ನು ಚಿತ್ರಿಸುವುದುಂಟು. ಮನೆಯ ಗೋಡೆಗಳಿಗೆ ಅಧಿಕ, ಸ್ವಸ್ತಿಕ್ ಬರೆಯುವ ಸಂಪ್ರದಾಯ ಬಾದಾಮಿ ಸುತ್ತಮುತ್ತ ಕಂಡುಬರುತ್ತದೆ. ಗೋಡೆಗಳನ್ನು ಖಾಲಿ ಬಿಟ್ಟರೆ ಅಮಂಗಳವೆಂಬ ಭಾವನೆ ಈ ಭಾಗದಲ್ಲಿದೆ.

ಬಾಗಿಲಿನ ಸುತ್ತಲೂ ಅಲಂಕಾರ ಮಾಡುವುದು

ಮನೆಯ ಪ್ರಮುಖ ಆಕರ್ಷಣೆ ಬಾಗಿಲು ಬಾಗಿಲನ್ನು ನೋಡಿಯೇ ಆ ಮನೆಯ ಸ್ಥಿತಿಗತಿಗಳನ್ನು ಅಳೆಯುವ ರೂಢಿಯಿದೆ. ಮನೆಯ ಬಾಗಿಲಿನ ಸುತ್ತಲೂ ಮಾಡುವ ಅಲಂಕಾರ ಈ ಕೆಳಗಿನಂತಿರುತ್ತದೆ. ಬಾಗಿಲಿನ ಮೇಲಿನ ಭಾಗದಲ್ಲಿ ಪಾಂಡವರ ಐದು ಸಾಂಕೇತಿಕ ಚಿತ್ರಗಳನ್ನು ಚಿತ್ರಿಸುವುದು ಮತ್ತು ಬಾಗಿಲು ಬದಿಯಲ್ಲಿ ತೇರಿನಾಕೃತಿಯಲ್ಲಿ ಚಿತ್ರ ವಿನ್ಯಾಸ ಚಿತ್ರಿಸುವುದು ಮತ್ತು ಇಲ್ಲಿ ಮಾನವನಾಕೃತಿಗಳು, ಹಾವು, ಚೇಳು, ಸೂರ್ಯ, ಚಂದ್ರ ಮತ್ತು ವಾಲಗದವರು ಮೊದಲಾದ ಚಿತ್ರಗಳನ್ನು ವಿವಿಧ ಸಂದರ್ಭಗಳಲ್ಲಿ ರಚಿಸುತ್ತಾರೆ.

ಗೂಡು / ಮಾಡುಗಳಿಗೆ ಅಲಂಕಾರ ವಿನ್ಯಾಸ ಮಾಡುವುದು

ಪ್ರಮುಖವಾಗಿರುವ ಗೂಡು ಅಥವಾ ಮಾಡುಗಳಿಗೆ ಗಣಪತಿಯ ಗೂಡು. ಇನ್ನುಳಿದ ಗೂಡುಗಳಿಗಿಂತ ಇದು ಭಿನ್ನವಾಗಿರುತ್ತದೆ. ಗಣಪತಿಯನ್ನು ಕುಳ್ಳಿರಿಸುವ ಗೂಡಿನ ಸುತ್ತಲೂ ವಿಶೇಷವಾದ ಅಲಂಕಾರ ಮಾಡುತ್ತಾರೆ. ಗೂಡಿನ ಸುಳಿವು ಎಲೆ ಬಳ್ಳಿ, ಭೂಮಿತಿ ಆಕೃತಿಯ ಪ್ರಧಾನ ವರ್ತುಳ ತ್ರಿಕೋನ ಚೌಕ ಮೊದಲಾದ ಹಲವಾರು ರೀತಿಯ ವಿನ್ಯಾಸಗಳನ್ನು ಗೂಡಿನ ಎರಡೂ ಬದಿಗಳಲ್ಲಿ ಚಿತ್ರಿಸುತ್ತಾರೆ. ಇನ್ನೂ ಕೆಲವರು ನವಿಲು, ಬಾತುಕೋಳಿ ಮುಂತಾದ ಪಕ್ಷಿಗಳ ಹಾಗೂ ನಿಸರ್ಗ ಚಿತ್ರಗಳನ್ನು ಬಿಡಿಸುತ್ತಾರೆ. ಇನ್ನುಳಿದ ಗೂಡುಗಳಿಗೆ ಸಾಮಾನ್ಯ ರೀತಿಯ ಅಲಂಕಾರವಿರುತ್ತದೆ.

ಮದುವೆ ಸಂದರ್ಭದ ಚಿತ್ರವಿನ್ಯಾಸಗಳು

ಮದುವೆ ಸಂದರ್ಭದಲ್ಲಿ ಪ್ರಧಾನವಾದ ಚಿತ್ರಗಳೆಂದರೆ ಅವು ವಧುವರರ ಸಂಕೇತ ಚಿತ್ರಗಳಾಗಿವೆ. ಅವುಗಳಲ್ಲಿ ಒಂದು ವರನ ತಲೆಗೆ ಕಟ್ಟುವ ಬಾಸಿಂಗವೆಂದು ಇನ್ನೊಂದು ಮದುಮಗಳಿಗೆ ದಂಡೆ

ಕಟ್ಟುವುದಾಗಿರುತ್ತದೆ. ಇವುಗಳ ಸ್ವರೂಪದ ಚಿತ್ರಣವನ್ನು ಬಿಡಿಸಿರುತ್ತಾರೆ. ಅವುಗಳ ಬಲಬದಿ ಸೂರ್ಯ ಮತ್ತು ಎಡಬದಿ ಚಂದ್ರ ಬಿಡಿಸುವುದುಂಟು. ಸೂರ್ಯ ಚಂದ್ರ ಇರುವವರೆಗೂ ಬಾಳಲಿ ಎಂದು ಹಿರಿಯರು ಮಾಡಿದ ಜಾನಪದ ಚಿತ್ರವಾಗಿದೆ.

ಗುಡಿ ಹುಣ್ಣಿಮೆಯ ಬೆಳದಿಂಗಳ ಚಿತ್ರ ಬಿಡಿಸುವುದು

"ಪ್ರಕೃತಿಯ ಚಟುವಟಿಕೆಗಳಾದ ಹಗಲು, ರಾತ್ರಿ, ಮೊಡ, ಮಳೆ, ಗುಡುಗು, ಸಿಡಿಲು, ಸೂರ್ಯ, ಚಂದ್ರ, ನಕ್ಷತ್ರ ಮುಂತಾದವುಳು ವ್ಯಕ್ತಿಯ ಬದುಕಿನ ಮೇಲೆ ಒಂದಿಲ್ಲೊಂದು ರೀತಿಯ ಪರಿಣಾಮ ವನ್ನುಂಟು ಮಾಡಿದೆ. ಆ ಪರಿಣಾಮಗಳಿಗೆ ಪ್ರತಿಕ್ರಿಯೆಯಾಗಿ ಪೂಜೆ ಪುನಸ್ಕಾರಗಳಂತಹ ಅನೇಕ ಆಚರಣೆ ರೂಢಿಗೆ ಬಂದವು"[೬]. ಇಂತವುಗಳಲ್ಲಿ ಚಂದ್ರನಿಗೆ ಸಂಬಂಧಿಸಿದ ಹಸೆಯ ಚಿತ್ತಾರ ಬರೆಯುವ ಆಚರಣೆಯೂ ಒಂದಾಗಿದೆ. ಭಾರತದಲ್ಲಿ ಇದು ವ್ಯಾಪಕವಾಗಿ ಬೆಳೆದುಕೊಂಡು ಬಂದಿದೆ. ಬಾದಾಮಿ ಭಾಗದಲ್ಲಿಯೂ ಬೆಳದಿಂಗಳಪ್ಪನ ಪೂಜೆ, ಬೆಳದಿಂಗಳಪ್ಪನ ಹೊಯ್ಯುವುದು ಮತ್ತು ಆರಾಧನೆ ಬೆಳೆದಿಂಗಳು ಬರೆಯುವುದು. ಬೆಳೆದಿಂಗಳ ತೇರು ತೆಗೆಯುವುದು, ಬೆಳದಿಂಗಳನ್ನು ಕರೆದುಕೊಳ್ಳುವುದು ಚಂದ್ರಮಾನ ಪೂಜೆ, ಬೆಳದಿಂಗಳ ಹೊಯ್ಯುವುದು ಹಲವಾರು ಹೆಸರುಗಳಿಂದ ಪ್ರಸಿದ್ಧವಾಗಿದೆ. ಚಂದ್ರನನ್ನು ಕುರಿತ ಈ ಆರಾಧನೆಯ ಹಿಂದೆ ಆಚರಣೆಯಲ್ಲಿ ಭಿನ್ನತೆಗಳಿರುತ್ತವೆ.

ಐದು ದಿನದ ಬೆಳದಿಂಗಳ ಹೊಯ್ಯುವಿಕೆ

ಭರತಹುಣ್ಣಿಮೆ ಬರುತ್ತಿದ್ದಂತೆ ಹಳ್ಳಿಗರ ಮನೆಯ ಅಂಗಳ, ಗೋಡೆಗಳು, ಸಾರಣೆಗೊಳ್ಳುತ್ತವೆ. ಮನೆಯನ್ನು ದಿನಂಪ್ರತಿ ಗುಡಿಸಿ, ಸಾರಿಸಿ, ರಂಗೋಲಿ ಹೋಯ್ಯುವುದರ ಬದಲಾಗಿ ಬೆಳದಿಂಗಳ ಚಿತ್ರ ಗಳನ್ನು ವಿಶೇಷವಾಗಿ ಚಿತ್ರಿಸುತ್ತಾರೆ.

ಸಾಮಗ್ರಿಗಳು

ಹದವರಿತು ತೆಳ್ಳಗೆ ಮಾಡಿದ ಸುಣ್ಣ, ಗಂಗಾಳ ಅಥವಾ ಬಟ್ಟಲು, ದೀಪದ ಕಡ್ಡಿ, ತೊಗರಿ ಕಡ್ಡಿ ಮುಂತಾದ ಸಾಮಗ್ರಿಗಳು ಬೇಕಾಗುತ್ತವೆ. ಕೆಲವರು ಚಿತ್ರ ಬಿಡಿಸಲು ಮನೆಯಲ್ಲಿ ಊಟಕ್ಕೆ ಕುಳಿತುಕೊಳ್ಳುವ ಕೋಣೆಗಳನ್ನು ಬಳಸಿಕೊಳ್ಳುತ್ತಾರೆ. ಇನ್ನೂ ಕೆಲವರು ಮನೆಯ ಮುಂದೆ ರಂಗೋಲಿ ಹಾಕುವ ಸ್ಥಳದಲ್ಲಿ ಬೆಳದಿಂಗಳ ಚಿತ್ರ ಬಿಡಿಸುತ್ತಾರೆ. ಮನೆಯ ಕಟ್ಟೆಯ ಮೇಲೆ ಯಾರೂ ತುಳಿದಾಡ ದಂತಹ ಸ್ಥಳದಲ್ಲಿ ಜನರಿಗೆ ಕಾಣುವಂತಹ ಸ್ಥಳದಲ್ಲಿ ಚಿತ್ರ ಬಿಡಿಸುವುದು ವಾಡಿಕೆ.

---

೬. ಮಹಾದೇವ ಜಗತಾಪ, ಕರ್ನಾಟಕ ಜನಪದ ಚಿತ್ತಾರಗಳು ಹಾಗೂ ಶಿಲ್ಪಗಳು, ಪ್ರ. ಕನ್ನಡ ಸಾಹಿತ್ಯ ಪರಿಷತ್, ಬೆಂಗಳೂರು.

ಮೊದಲನೆಯ ದಿನದ ಚಿತ್ರ : ಮೊದಲನೆ ದಿನ ಸೂರ್ಯ ಚಂದ್ರರ ಚಿತ್ರಗಳನ್ನು ಬಿಡಿಸುತ್ತಾರೆ. ಈ ಚಿತ್ರಗಳ ಬದಿಗೆ ಹಾವು ಚೇಳುಗಳ ಚಿತ್ರಗಳನ್ನು ಬರೆದಿರುತ್ತಾರೆ. ಸೂರ್ಯ ಚಂದ್ರ ಚಿತ್ರಗಳನ್ನು ದೊಡ್ಡ ಗಾತ್ರದಲ್ಲಿ ಚಿತ್ರಿಸಿ ಹಾವು, ಚೇಳಿನ ಚಿತ್ರಗಳನ್ನು ಪ್ರಧಾನ ಚಿತ್ರಗಳಿಗೆ ಪೂರಕವಾಗಿ ಚಿಕ್ಕ ಗಾತ್ರದಲ್ಲಿ ತೆಗೆದಿರುತ್ತಾರೆ. ಇವು ಮನೆಯಿಂದ ಮನೆಗೆ, ಊರಿನಿಂದ ಊರಿಗೆ ಭಿನ್ನವಾಗಿರುತ್ತದೆ.

ಮೊದಲನೇ ದಿನ ಹಾಕುವ ಸೂರ್ಯ : ಚಂದ್ರರನ್ನು ಗಂಗಾಳು, ಬಟ್ಟಲವೆಂದು ಭಾವಿಸಿ "ಗಂಗಾಳ ಹೊಯ್ಯುವುದು", "ಬಟ್ಟಲು ಹೊಯ್ಯುವುದು" ಎನ್ನುತ್ತಾರೆ ಇಲ್ಲಿ ಸೂರ್ಯನು ಗಂಗಾಳ, ಚಂದ್ರನು ಬಟ್ಟಲು. ಕೆಲವರು ಪೂರ್ಣ ಚಂದ್ರನಾಗಲಿ, ಅರ್ಧ ಚಂದ್ರನನ್ನಾಗಲಿ ಮಾತ್ರ ತೆಗೆಯುತ್ತಾರೆ. ಆದರೆ, ಸೂರ್ಯನನ್ನು ತೆಗೆಯುವುದಿಲ್ಲ. ಸೂರ್ಯಚಿತ್ರ ತೆಗೆಯದಿದ್ದರೆ ಆತ ಸಿಟ್ಟಾಗಿದ್ದಾನೆಂಬ ನಂಬಿಕೆಯಿಂದ ಚಂದ್ರನೊಂದಿಗೆ ಸೂರ್ಯನನ್ನು ಚಿಕ್ಕದಾಗಿ ಚಿತ್ರಿಸುತ್ತಾರೆ. ಸೂರ್ಯ ಚಂದ್ರ ಇಬ್ಬರೂ ಬೆಳಕು ನೀಡುವವರು. ಸೂರ್ಯ ಹೋದ ಮೇಲೆ ಚಂದ್ರ ಮೂಡುವನು. ಚಂದ್ರನ ಶುಭ್ರ ಬೆಳದಿಂಗಲ ಸಂತೋಷಕ್ಕಾಗಿ ಇಬ್ಬರ ಚಿತ್ರಗಳನ್ನು ತೆಗೆಯುತ್ತಾರೆ. ಚಂದ್ರನ ಪ್ರಶಾಂತ ಬೆಳಕನಲ್ಲಿ ಹುಡುಗಿಯರು ಹೆಚ್ಚಾಗಿ ಮನೆಗಳ ಮೇಲೆ ತಮ್ಮ ಅಭಿರುಚಿಗೆ ತಕ್ಕಂತೆ ಸುಣ್ಣದ ಬೆಟ್ಟುಗಳನ್ನು ಇಡುತ್ತಾ ಸೂರ್ಯ ಚಂದ್ರರ ಚಿತ್ರಗಳನ್ನು ಬಿಡಿಸುತ್ತಾರೆ. ನಂತರ ಉದಿನಕಡ್ಡಿ ಬೆಳಗಿ ಪೂಜೆ ಸಲ್ಲಿಸಿ ಕಳಸ ಬೆಳಗಿ ಚಂದ್ರನನ್ನು ನೋಡಿ ಕೈಮುಗಿದು ಹಾಲು ಸಕ್ಕರೆಯ ನೈವೇದ್ಯವನ್ನು ಸಲ್ಲಿಸುತ್ತಾರೆ.

ಎರಡನೆಯ ದಿನದ ಚಿತ್ರ : ಮೊದಲನೆಯ ದಿನದಂತೆ ರಾತ್ರಿ ಬೆಳದಿಂಗಳಲ್ಲಿ ನೆಲವನ್ನು ಸ್ವಚ್ಛವಾಗಿ ಸಾರಿಸಿ ಚಿತ್ರ ಬಿಡಿಸುವ ತಯಾರಿ ನಡೆಸುತ್ತಾರೆ. ಕೆಲವರು ಮನೆಯ ಮೇಲೆ ಚಿತ್ರಿಸುವರು. ಹಿಂದಿನ ದಿನವನ್ನು ಅಳಿಸಿ ಅದರ ಮೇಲೆ ಚಿತ್ರ ಬರೆಯುತ್ತಾರೆ ಎರಡನೆ ದಿನದ ಚಿತ್ರ ತಳಕು ಬಟ್ಟಲವಾಗಿದೆ. ಈ ಚಿತ್ರದಲ್ಲಿ ವೈವಿಧ್ಯತೆಗಳಿವೆ. ತೆಳು ಬಟ್ಟಲುಗಳ ಚಿತ್ರ ಬಿಡಿಸುವ ರೀತಿ ಹೀಗಿದೆ. ಮೊದಲು ಒಂದು ಗಂಗಾಳು ತೆಗೆದುಕೊಂಡು ಅದರ ಸುತ್ತಲೂ ಸುಣ್ಣದ ಬೊಟ್ಟುಗಳನ್ನು ಇಟ್ಟು ನಂತರ ಮತ್ತೊಂದು ಬಟ್ಟಲನ್ನು ಇಟ್ಟು ಅದರ ಸುತ್ತಲೂ ಮತ್ತೇ ಸುಣ್ಣದ ಬೊಟ್ಟು ಇಡುತ್ತಾರೆ. ಹೀಗೆ ಬಟ್ಟಲು ಸಹಾಯದಿಂದ ಬಿಡಿಸಿದ ಚಿತ್ರ ಒಂದು ಮೇಲೊಂದು ತಳುಕಾಗಿ ಕಂಡುಬರುತ್ತದೆ. ಅದಕ್ಕೆಂದೇ ತಳಕು ಬಟ್ಟಲು ಚಿತ್ರವೆಂದು ಕರೆಯುತ್ತಾರೆ. ಚಿತ್ರದ ಎರಡು ಪಕ್ಕದಲ್ಲಿ ನಾಲಿಗೆ ಚಾಚಿದ ಜೋಡಿ ಹಾವುಗಳನ್ನು ಚಿತ್ರಿಸಿರುವುದನ್ನು ನೋಡಿದರೆ ಚಂದ್ರ ಗ್ರಹಣದ ಕಲ್ಪನೆ ಇರಬಹುದೆನಿಸುತ್ತದೆ.

ಮೂರನೆ ದಿನದ ಚಿತ್ರ : ಹಿಂದಿನ ಚಿತ್ರಗಳನ್ನು ಅಳಿಸಿ ನೆಲ ಸ್ವಚ್ಛಗೊಳಿಸಿ ಸಾರಿಸಿ ಚಿತ್ರ ಬಿಡಿಸುತ್ತಾರೆ. ಮನೆಯ ಮೇಲೆ ಹಾಕುವವರೂ ಸಹ ಹಿಂದಿನ ದಿನದ ಚಿತ್ರವನ್ನು ತೊಳೆದು ಅದರ

ಮೇಲೆ ಚಿತ್ರ ಬಿಡಿಸುತ್ತಾರೆ. ಮೂರನೆ ದಿನದ ಚಿತ್ರ ರಾಮನ ತೊಟ್ಟಿಲು ಇಲ್ಲವೇ ಕೊಳಲು ಬಾವಿಯ ಚಿತ್ರವೆಂದು ಬಿಡಿಸುತ್ತಾರೆ. ಚೌಕಾಕಾರದ ರೇಖೆಯನ್ನು ಸುಣ್ಣದಿಂದ ಎಳೆದು ನಾಲ್ಕು ಚೌಕದಲ್ಲಿ ಸುಳುವುಗಳನ್ನು ರಚಿಸಿ ಈ ಚಿತ್ರ ಪೂರ್ತಿಗೊಳಿಸುತ್ತಾರೆ. ಸುಣ್ಣದ ಬೊಟ್ಟುಗಳೇ ಇಲ್ಲಿಯೂ ಪ್ರಮುಖ ಆಕರ್ಷಣೆ. ಚೌಕುಗಳು ನೀಟಾಗಿ ಕಾಣಲೆಂದು ದಾರದ ಸಹಾಯದಿಂದ ಸರಳ ರೇಖೆಗಳನ್ನು ಗುರುತಿಸಿ ಕೊಂಡು ನಂತರ ಕೈಯಿಂದ ಉಳಿದ ಆಕಾರಗಳನ್ನು ಮಾಡುತ್ತಾರೆ. ಈ ಚಿತ್ರದ ರಚನೆಯ ಹಿಂದೆ ಸಂತಾನ ಭಾಗ್ಯದ ಆಸೆಯ ಅಡಕವಾಗಿರುತ್ತದೆ.

ನಾಲ್ಕನೆ ದಿನದ ಚಿತ್ರ : ನೆಲದ ಮೇಲೆ, ಮನೆಯ ಮೇಲೆ ಇದ್ದಿರುವ ಹಿಂದಿನ ದಿನದ ಚಿತ್ರ ಗಳನ್ನು ಮತ್ತೇ ಅಳಿಸಿ ಹಾಕಿ ಬೆಳದಿಂಗಳಲ್ಲಿ ಇಂದು ಚಿತ್ರಬಿಡಿಸಲು ತೊಡಗುತ್ತಾರೆ. ಈ ದಿನದಂದು ಎಲೆ ಬಳ್ಳಿ ಚಿತ್ರವನ್ನು ಹಾಕುತ್ತಾರೆ.

ಮದರಂಗಿ ಕಲೆ

ಮದರಂಗಿ ಕಲೆಯು ಭಾರತದ ಎಲ್ಲೆಡೆಗಳಲ್ಲಿ ಒಂದು ಸಂಪ್ರದಾಯದಂತೆ ಬೆಳೆದು ಬಂದಿದೆ. ಈ ಕಲೆಯು ಮೂಲತಃ ಪರ್ಶಿಯಾದಿಂದ ಹನ್ನೆರಡನೆಯ ಶತಮಾನದಲ್ಲಿ ಭಾರತಕ್ಕೆ ಪ್ರವೇಶ ಪಡೆಯಿತು. ಈ ಮದರಂಗಿಯನ್ನು ಸಂಸ್ಕೃತ ಭಾಷೆಯಲ್ಲಿ ಮದಯಂತಿಕಾ, ಹಿಂದಿಯಲ್ಲಿ ಮೆಹಂದಿ, ಮರಾಠಿಯಲ್ಲಿ ಮುದಿಯಾಚೆ, ತೆಲುಗಿನಲ್ಲಿ ಗೌರಿಂಟಾಡು, ಇಂಗ್ಲೀಷ್‌ನಲ್ಲಿ ಹೆನ್ನಾ, ಪರ್ಶಿಯನ್‌ದಲ್ಲಿ ಹಿನಾ ಎಂದು ಕರೆಯುತ್ತಾರೆ. ಈ ಮದರಂಗಿಯನ್ನು ಸ್ತ್ರೀಯರು, ಪುರುಷರು, ಇರ್ವರೂ ಹಾಕಿಸಿಕೊಳ್ಳುವರು. ಆದರೆ ಹೆಚ್ಚಾಗಿ ಹೆಣ್ಣು ಮಕ್ಕಳೇ ಮದರಂಗಿ ಹಾಕಿಕೊಳ್ಳುವ ಸಂಪ್ರದಾಯವಿದೆ. ಮುಸ್ಲಿಂ ಜನಾಂಗದವರು ಹೆಚ್ಚಾಗಿ ಮದರಂಗಿಯನ್ನು ಬಳಸುತ್ತಿದ್ದರು ಹಾಗೂ ಬಳಸುತ್ತಿದ್ದಾರೆ. ಈ ಮದರಂಗಿ ಕಲೆ ಭಾರತದ ಸಂಸ್ಕೃತಿಯಲ್ಲಿ ತನ್ನ ಸ್ಥಾನ ಭದ್ರಪಡಿಸಿಕೊಂಡಿದೆ.

ಮದರಂಗಿ ಹಚ್ಚುವ ವಿಧಾನ

ಬೇಕಾಗುವ ಸಾಮಾನುಗಳು ಮದರಂಗಿ ಪುಡಿಯ ಡಬ್ಬಿ, ಕಲಿಸುವ ಪಾತ್ರೆ, ಒಂದು ಕಡ್ಡಿ, ಒಂದು ಹಳೆ ಬಟ್ಟೆ.

ಮದರಂಗಿ ಗಿಡದ ಎಲೆಗಳನ್ನು ಹರಿದು ತಂದು ಅದನ್ನು ಒಣಗಿಸಿ ಕುಟ್ಟಿ ಪುಡಿಮಾಡಿ ಸಂಗ್ರಹಿಸಿ ಇಟ್ಟುಕೊಂಡಿರುತ್ತಾರೆ. ಮದರಂಗಿ ಹಚ್ಚಿಕೊಳ್ಳಬೇಕಾದ ಸಂದರ್ಭದಲ್ಲಿ ಒಂದು ಪಾತ್ರೆಯಲ್ಲಿ ನೀರಿನೊಂದಿಗೆ ಕಲಿಸಿ, ಮಿಶ್ರಣವನ್ನು ಹಾಗೆಯೇ ಸ್ವಲ್ಪ ಹೊತ್ತು ನೆನೆಸಿಡುತ್ತಾರೆ. ಹಾಗೆಯೇ ಹದವಾಗಿ ನೆನೆದ

ಮದರಂಗಿಯಲ್ಲಿ ಕಡ್ಡಿಯನ್ನು ಅದ್ದಿ ವಿವಿಧ ವಿನ್ಯಾಸಗಳನ್ನು ರಚಿಸುತ್ತಾರೆ. ಹಳ್ಳಿಗಳಲ್ಲಿ ಸಾಮಾನ್ಯವಾಗಿ ದೀಪದ ಕಡ್ಡಿಯಿಂದ ಮದರಂಗಿಯನ್ನು ಹಾಕುತ್ತಾರೆ. ಅದಲ್ಲದೆ ದಂತದ ಕಡ್ಡಿ, ಚಂದನದ ಕಡ್ಡಿ, ಪ್ಲಾಸ್ಟಿಕ್ ಕಡ್ಡಿಗಳನ್ನು ಉಪಯೋಗಿಸುತ್ತಾರೆ. ಮದರಂಗಿ ಹಾಕುವಾಗ ಅದು ಕೆಟ್ಟರೆ ಅಳಿಸಿ ಹಾಕಲು ಹಳೆಯ ಬಟ್ಟೆಯನ್ನು ಬಳಸುತ್ತಾರೆ. ಈ ಮದರಂಗಿಯನ್ನು ಹೆಚ್ಚಾಗಿ ಸಾಯಂಕಾಲ ಇಲ್ಲವೇ ರಾತ್ರಿಯ ವೇಳೆಯಲ್ಲಿ ಹಾಕಿಸಿಕೊಳ್ಳುತ್ತಾರೆ. ಹಚ್ಚಿಕೊಂಡ ನಂತರ ಒಂದು ಏಳೆಂಟು ತಾಸು ಒಣಗಲು ಬಿಡಬೇಕು. ಹೀಗೆ ಒಣಗಿದ ನಂತರ ಕೊಬ್ಬರಿ ಎಣ್ಣೆಯನ್ನು ಹಚ್ಚಿ ಐದು ನಿಮಿಷ ಬಿಟ್ಟು ಕೈ ತೊಳೆಯಬೇಕು. ಹೀಗೆ ಮಾಡುವುದರಿಂದ ಕೈ ರಂಗು ಚೆನ್ನಾಗಿರುತ್ತದೆ ಎಂಬ ಅಭಿಪ್ರಾಯವಿದೆ. ಮದರಂಗಿಯನ್ನು ಹೆಚ್ಚಾಗಿ ಹಬ್ಬ, ಹುಣ್ಣಿಮೆ, ಉತ್ಸವ, ಮದುವೆ ಮುಂಜಿಗಳ ಸಂದರ್ಭದಲ್ಲಿ ಹಾಕಿಕೊಳ್ಳುತ್ತಾರೆ. ಬಾಗಲಕೋಟೆ ಜಿಲ್ಲೆಯಲ್ಲಿ ಮುಸ್ಲಿಂ, ಮರಾಠ, ಮಾರವಾಡಿ ಜನರಲ್ಲಿ ಮದರಂಗಿ ಉಪಯೋಗ ಹೆಚ್ಚಾಗಿರುತ್ತದೆ. ಉಳಿದೆಲ್ಲ ಜನಾಂಗದವರು ಮದುವೆಯಂತಹ ಪ್ರಸಂಗಗಳಲ್ಲಿ ಮಾತ್ರ ಹಚ್ಚಿಕೊಳ್ಳುತ್ತಾರೆ.

ಉತ್ತರ ಭಾರತದ ಮುಸ್ಲಿಂ ಜನಾಂಗದಲ್ಲಿ ಮದುಮಕ್ಕಳಿಗೆ ಮುತ್ತೈದೆಯರು ಮಾತ್ರ ಮದರಂಗಿ ಹಚ್ಚಬೇಕೆಂಬ ಶಾಸ್ತ್ರ ಬೆಳೆದುಬಂದಿದೆ. ಇದಕ್ಕೆ ಬಾಗಲಕೋಟೆ ಜಿಲ್ಲೆಯೂ ಸಹ ಹೊರತಾಗಿಲ್ಲ. ಮದರಂಗಿಯನ್ನು ಬೂಮಿತ ಆಕೃತಿ ಪ್ರಧಾನ ಮತ್ತು ಬಳ್ಳಿ ಆಕೃತಿ ಪ್ರಧಾನ ಎಂಬೆರೆಡು ರೀತಿಯಲ್ಲಿ ವಿನ್ಯಾಸಗೊಳಿಸುತ್ತಾರೆ.

ಜಿಲ್ಲೆಯಲ್ಲಿ ಮದರಂಗಿಯ ಬಗೆಗೆ ನಂಬಿಕೆಗಳು

೧. ಹೆಚ್ಚು ಉಷ್ಣ ದೇಹ ಹೊಂದಿದವರಿಗೆ ಹೆಚ್ಚು ಕೆಂಪಾಗುತ್ತದೆ.

೨. ಒಂದು ಹುಡುಗಿಯ ಮದರಂಗಿ ಹೆಚ್ಚು ಕೆಂಪಾದರೆ ಅವಳ ಪ್ರಿಯತಮ ಅವಳನ್ನು ತುಂಬಾ ಪ್ರೀತಿಸುತ್ತಾನೆಂಬ ನಂಬಿಕೆಯಿದೆ.

೩. ಮದರಂಗಿಯು ದೇಹಕ್ಕೆ ತಂಪನ್ನು ಕೊಡುತ್ತದೆ. ಇತ್ಯಾದಿ

ಹೀಗೆ ಪ್ರೀತಿ ಪ್ರೇಮವಾಗಿ, ಸೌಂದರ್ಯ ಸಂಪ್ರದಾಯವಾಗಿ, ಸುಮಂಗಲೆಯ ಸೌಭಾಗ್ಯವಾಗಿ ಜನಪದರ ಚಿತ್ರಕಲೆಯಾಗಿ ಈ ಮದರಂಗಿಯ ಜನರ ಜೀವನದಲ್ಲಿ ಹಾಸುಹೊಕ್ಕಾಗಿದೆ.

ಕಾಕನೂರಿನ ತೊಗಲು ಗೊಂಬೆಗಳು

ಬಾಗಲಕೋಟೆ ಜಿಲ್ಲೆ ಬಾದಾಮಿಯ ತಾಲೂಕಿನಲ್ಲಿ ಬರುವ ಕುಕನೂರ ಗ್ರಾಮವು ಈ ತೊಗಲು ಗೊಂಬೆ ಚಿತ್ರಕಲೆಗೆ ಹೆಸರುವಾಸಿಯಾಗಿದೆ. ಬಾದಾಮಿಯಿಂದ ರಾವದುರ್ಗಕ್ಕೆ ಹೋಗುವ ಮಾರ್ಗದಲ್ಲಿ

ಸುಮಾರು ೨೦ ಕಿ.ಮೀ. ದೂರದಲ್ಲಿರುವ ಈ ಗ್ರಾಮವು ಇದ್ದುದರಲ್ಲಿಯೆ ಸುಧಾರಣೆಯನ್ನು ಹೊಂದಿರುವಂತಹ ಗ್ರಾಮವಾಗಿದೆ. ಕೃಷಿಯು ಈ ಗ್ರಾಮದ ಮೂಲ ಕಸುಬುಗಳಲ್ಲಿ ಒಂದಾಗಿದೆ. ಇದರ ಜೊತೆಗೆ ಈ ಗ್ರಾಮದ ಕೆಲವು ಮನೆತನಗಳು ಜನಪದ ತೊಗಲು ಗೊಂಬೆಯ ಚಿತ್ರಗಳ ತಯಾರಿಕೆಯಲ್ಲಿ ತೊಡಗಿವೆ. ಈ ಮನೆತನಗಳು ಈ ಕಲೆಯನ್ನೇ ತಮ್ಮ ಮೂಲ ವೃತ್ತಿಯನ್ನಾಗಿಸಿಕೊಂಡಿದ್ದಾರೆ. ಇಂದಿಗೂ ಇವರು ರಾಜ್ಯವಲ್ಲದೇ ಇತರ ರಾಜ್ಯಗಳಿಗೆ ಹೋಗಿ ತೊಗಲುಗೊಂಬೆ ಚಿತ್ರಗಳ ಪ್ರದರ್ಶನಗಳನ್ನು ಏರ್ಪಡಿಸುತ್ತಾ ಬಂದಿದ್ದಾರೆ.

ಸುಮಾರು ಏಳು ಸಾವಿರ ಜನಸಂಖ್ಯೆ ಹೊಂದಿರುವ ಬಾದಾಮಿ ತಾಲೂಕಿನ ಕಾಕನೂರು ಗ್ರಾಮದಲ್ಲಿ ಸುಮಾರು ನೂರು ಕಿಳ್ಳಿಕ್ಯಾತರ ಕುಟುಂಬಗಳಿದ್ದುದು ತಿಳಿದುಬರುತ್ತದೆ. ತೊಗಲುಗೊಂಬೆ ಚಿತ್ರಗಳನ್ನು ತಯಾರಿಸುವವರಿಗೆ ಕಿಳ್ಳಿಕ್ಯಾತರೆಂದು ಕರೆಯುವರು. ಆದರೆ, ಈಗ ಒಂದೇ ಕುಟುಂಬ ತೊಗಲುಗೊಂಬೆ ಆಟದಲ್ಲಿ ತೊಡಗಿದ್ದು ಕಂಡುಬರುತ್ತದೆ. ಕಾಕನೂರಿನಲ್ಲಿ ತೊಗಲುಗೊಂಬೆಯಾಟವನ್ನು ಮೊದಲು ಪ್ರಾರಂಭಿಸಿದವರು. ಸುಬಾನಪ್ಪ ದುರುಗಪ್ಪ ಕಿಳ್ಳಿಕ್ಯಾತರ ನಂತರ ಇವರ ಗರಡಿಯಲ್ಲಿ ಬೆಳೆದುಬಂದವರಲ್ಲಿ ಕಾಕಪ್ಪ ಕಿಳ್ಳಿಕ್ಯಾತರ ಪ್ರಮುಖರು. ಇವರಿಗೆ ಕೇಶಪ್ಪ, ಗುರುಪಾದ ಮತ್ತು ತುಕಾರಾಮ ಎಂಬ ಮೂರು ಜನ ಗಂಡು ಮಕ್ಕಳು. ಇವರಲ್ಲಿ ಹಿರಿಯ ಮಗನಾದ ಕೇಶಪ್ಪ ತೊಗಲುಗೊಂಬೆಯಾಟದ ಸೂತ್ರಧಾರನಾಗಿ ಈ ಆಟವನ್ನು ಮುಂದುವರೆಸಿದನು. ಇವರಿಗೆ ಸಹಾಯಕರಾಗಿ ತಮ್ಮಂದಿರಾದ ಗುರುಪಾದ ಹಾಗೂ ತುಕಾರಾಮ ಅವರು ತಬಲಾ ಹಾಗೂ ತಾಳದ ಸಾಥಿಯಾದರು. ಕೇಶಪ್ಪ ಮತ್ತು ಪರಿವಾರದವು ಜಿಲ್ಲೆಯ ಪ್ರತಿಯೊಂದು ಹಳ್ಳಿ ಹಳ್ಳಿಗೂ ಹೋಗಿ ತೊಗಲು ಗೊಂಬೆಯಾಟ ನಡೆಸಿ ಜನರ ಮೆಚ್ಚುಗೆಯನ್ನು ಪಡೆದು ಕೊಂಡಿದ್ದಾರೆ. ಅಂದಿನ ದಿನಗಳಲ್ಲಿ ಹಬ್ಬಹರಿದಿನಗಳಾದ ಊರಿನ ಜಾತ್ರೆ, ಉತ್ಸವ, ಗಣೇಶ ಚೌತಿ, ಅಲ್ಲದೇ ಮಳೆ ಇಲ್ಲದೇ ಬರಗಾಲದ ಪರಿಸ್ಥಿತಿ ಬಂದಾಗ ತೊಗಲು ಗೊಂಬೆಯಾಟ ನಡೆಸುವುದ ರಿಂದ ಮಳೆ ಬರುತ್ತದೆ ಎಂಬ ನಂಬಿಕೆ ಇರುವುದರಿಂದ ಈ ಕಿಳ್ಳಿಕ್ಯಾತರನ್ನು ಕರೆಯಿಸಿ ಆಟವನ್ನು ಆಡಿಸುತ್ತಿದ್ದರು. ಹೀಗಾಗಿ ಅಂದು ಈ ತೊಗಲು ಗೊಂಬೆಯಾಟ ಬಹು ಪ್ರಸಿದ್ಧಿಯನ್ನು ಪಡೆದು ಕೊಂಡಿತು.

ತೊಗಲು ಗೊಂಬೆಯ ಚಿತ್ರಕಲೆ ಜನರ ಮನೋಧರ್ಮದ ವಿವಿಧ ಆಯಾಮಗಳನ್ನು ತಿಳಿಯಪಡಿಸುವ ಪ್ರದರ್ಶನಾತ್ಮಕ ಕಲೆಗಳು ಜಗತ್ತಿನ ಎಲ್ಲೆಡೆಯೂ ಕಂಡುಬರುತ್ತದೆ. ಒಂದೊಂದು ಕಲೆಯೂ ವಿಶಿಷ್ಟವಾದ ಪ್ರೇಕ್ಷಕವರ್ಗವನ್ನು ಹೊಂದಿದೆ. ಚಿತ್ರಗಳ ಮೂಲಕ ಮನರಂಜನೆಯೊದಗಿಸುವ ಕೆಲಸವನ್ನು ದಕ್ಷಿಣ ಭಾರತ ತೊಗಲುಗೊಂಬೆ ಕಲಾವಿದರು ಮಾಡಿಕೊಂಡು ಬಂದಿದ್ದಾರೆ. ಇಂತಹ ಕಲೆಗಳಲ್ಲಿ

ಅಡಕವಾಗಿರುವ ಚಿತ್ರಕಲೆ ಪ್ರಾಚೀನ ಕಾಲದಿಂದಲೂ ವೈವಿಧ್ಯತೆಯನ್ನು ಉಳಿಸಿಕೊಂಡು ಬಂದಿದೆ. ತೆರೆಯ ಹಿಂದೆ ವರ್ಣರಂಜಿತ ಮಾಯಾಲೋಕವನ್ನು ಸೃಷ್ಟಿಸುವ ಅದ್ಭುತ ಕೈಚಳಕದ ಈ ಕಲೆ ಜಗತ್ತಿನ ಜನಪದ ವರ್ಣ ಚಿತ್ರಕಲಾ ಪ್ರಪಂಚಕ್ಕೆ ಅಮೂಲ್ಯ ಕೊಡುಗೆ ಈ ತೊಗಲುಗೊಂಬೆ ಚಿತ್ರಕಲೆ. ಕೇವಲ ಒಬ್ಬ ವ್ಯಕ್ತಿಗೆ ಸೀಮಿತವಿರದೇ ಇಡೀ ಕುಟುಂಬದ ಜನರನ್ನು ತೊಡಗಿಸಿಕೊಳ್ಳುವ ಜನ ಸಮುದಾಯದ ಕಲೆಯಾಗಿದೆ. ತೊಗಲಿನಲ್ಲಿ ವಿವಿಧ ರೀತಿಯ ಚಿತ್ರಗಳನ್ನು ಕೊರೆದು, ವಿವಿಧ ರೀತಿಯ ವರ್ಣಲೇಪನ ಮಾಡಿ ರಂಗದ ಮೇಲೆ ರಾತ್ರಿ ಹೊತ್ತು ದೀಪದ ಬೆಳಕಿನಲ್ಲಿ ಹಿಂದೆ ವಾದ್ಯಮೇಳ ಗಳೊಂದಿಗೆ ವಿವಿಧ ಕಥಾನಕಗಳನ್ನು ಆಡಿಸುವ ಆಟವೇ ತೊಗಲುಗೊಂಬೆಯಾಟವಾಗಿದೆ.

ತೊಗಲುಗೊಂಬೆಯ ಇತಿಹಾಸ

ಕರ್ನಾಟಕದಲ್ಲಿ ತೊಗಲು ಗೊಂಬೆಯ ಪ್ರಾಚೀನತೆಯನ್ನು ವಿದ್ವಾಂಸರು ಗುರುತಿಸುವ ಸಾಧ್ಯತೆ ಇದೆ. ನಿಲುಕೋಷ್ಠ ರೋಗ ಹಿಡಿದ ಒಬ್ಬ ಚೋಳರಾಜ ಉಪ್ಪಾರವನಿಗೆ ದೊರೆತನ ನೀಡಿ ಮಹಾಭಾರತ ವನ್ನು ಸಂಪೂರ್ಣ ಕೇಳಿ ರೋಗವಾಸಿ ಮಾಡಿಕೊಳ್ಳಲು ವೇದಾಂತಿಗಳೊಡನೆ ಅರಣ್ಯಕ್ಕೆ ಹೋದ. ದೊರೆಯಾದ ಉಪ್ಪಾರ, ಮಾಡಿಸಲು ಅಕ್ಕಸಾಲಿಗೆ ಹೇಳಿದಾಗ, ಉಪ್ಪಾರನ ಜಾತಿ ಹಿಡಿದು ಜಾತಿ ಕಸುಬಿನ ಕುಸರಿ ಕೆಲಸ ಮಾಡಿ ಕಿರೀಟ ಕೊಟ್ಟರು. ಉಪ್ಪಾರನ ಕೆಳಗಿನ ಮಂತ್ರಿ ರಾಜಕೀರಿಟವಲ್ಲದ್ದನ್ನು ಎತ್ತಿ ತೋರಿಸಿದಾಗ ಉಪ್ಪಾರನು ಅಕ್ಕಸಾಲಿಗರ ವಂಶವೇ ಇಲ್ಲದಂತಾಗಬೇಕೆಂದು ಕ್ರಮಕೈಗೊಂಡನು. ಅದರಲ್ಲಿ ಹೇಗೋ ಒಬ್ಬ ಉಳಿದುಕೊಂಡು ಅರಣ್ಯದಲ್ಲಿ ಕಾಳಿಕಾದೇವಿಯನ್ನು ಪ್ರಾರ್ಥಿಸಿದಾಗ ಕಾಳಿಕಾದೇವಿ ಪ್ರತ್ಯಕ್ಷಳಾಗಿ ತನ್ನ ಗುಡಿಯಲ್ಲಿರುವ ಭಾರತ, ರಾಮಾಯಣದ ಬೊಂಬೆ ನೋಡಿಕೊಂಡು ಕಾಡಿನಲ್ಲಿರುವ ಸಾರಂಗ, ಜಿಂಕೆ, ಕುರು ಚರ್ಮಾದಿಗಳಿಂದ ಬೊಂಬೆ ಮಾಡಿಕೊಂಡು ಬದುಕಿಕೋ ಎಂದಳಂತೆ. ಅಷ್ಟೊತ್ತಿಗೆ ಚೋಳರಾಜ ಆರಾಮವಾಗಿ ಉಪ್ಪಾರನನ್ನು ದೊರೆತನ ಬಿಟ್ಟು ಕೊಡಲು ಹೇಳಿದರೆ ಅವನು ಬಿಡಲಿಲ್ಲವಂತೆ.

ಅಲ್ಲಿಗೆ ದೇವಿಯ ವರದ ಬಲದಿಂದ ಆ ಅಕ್ಕಸಾಲಿಗ ಗೊಂಬೆಗಳೊಡನೆ ಬಂದು ಉಪ್ಪಾರ ರಾಜನನ್ನು ಕಂಡು ತಾವು ಕಥಾನಾಯಕರು, ಕಥೆಯಾಡಲು ಅಪ್ಪಣೆ ಕೊಡಬೇಕೆಂದು ಕೇಳಿಕೊಂಡು ತನ್ನ ಸಂಗಡಿಗರೊಡನೆ ಮಹಾಭಾರತದ ಕತೆಯಾಡುತ್ತಾನೆ. ಕರ್ಣಾರ್ಜುನರ ಕಾಳಗದ ಸಂದರ್ಭಕ್ಕೆ ಮಹಾಮಂಗಳಾರತಿಯ ನೆಪದಲ್ಲಿ ಅಕ್ಕಸಾಲಿಗ ಮೊದಲೇ ವ್ಯವಸ್ಥೆ ಮಾಡಿದ, ತುಪಾಕಿನ ಬೆಂಕಿ ತಗುಲಿಸಿ ಉಪ್ಪಾರನ ರಾಜ ಪರಿವಾರವನ್ನು ಸರ್ವನಾಶ ಮಾಡಿ ರೈತರೊಡನೆ ಕುಳಿತಿರುವ ಚೋಳ ರಾಜನನ್ನು ರಾಜನನ್ನಾಗಿಸಿದರು. ಕೊನೆಗೆ ಆ ಅಕ್ಕಸಾಲಿಗ ತನ್ನ ಅಕ್ಕಸಾಲಿ ಕೆಲಸಕ್ಕೆ ಹೋದ. ಅವನ ಸಂಗಡಿಗರ

ಗೊಂಬೆಯಾಟವನ್ನು ರೂಢಿಸಿಕೊಂಡು ಊರೂರು ತಿರುಗುತ್ತಾ ಜೀವನ ಮಾಡುತ್ತಿದ್ದೇವೆಂದು ತೊಗಲು ಗೊಂಬೆ ಯಾಟದವರು ಅವರ ಪರಂಪರೆಯ ಪೀಳಿಗೆ ನಾವಾಗಿದ್ದೇವೆಂದು ಹೇಳುತ್ತಾರೆ. ಹೀಗೆ ಕಾಕನೂರಿನ ತೊಗಲುಗೊಂಬೆಯ ಜಿಲ್ಲೆಯಲ್ಲಿ ಇಂದಿಗೂ ಜೀವಂತವಾಗಿ ಅಲ್ಪಸ್ವಲ್ಪ ಉಳಿದುಬಂದಿದ್ದೂ ಈಗ ಇತಿಹಾಸ.

ಇಳಕಲ್ ರಂಗಪರದೆಯ ಚಿತ್ರ ಪರಂಪರೆ

ವೃತ್ತಿ ರಂಗಭೂಮಿಯಾಗಲಿ ಅಥವಾ ಹವ್ಯಾಸಿ ರಂಗಭೂಮಿಯಾಗಲಿ ಕೆಲವು ಸಾಮಾನ್ಯ ಸ್ವರೂಪದ ರಂಗಸಜ್ಜಿಕೆಗಳನ್ನು ನಿಶ್ಚಿತವಾಗಿ ಹೊಂದಿರಲೇಬೇಕಾಗುತ್ತದೆ. ನಾಟಕ ಪ್ರದರ್ಶನವೆಂದರೆ ಇಂತಿಷ್ಟು ಸೀನರಿಗಳು ಮತ್ತು ಸೆಟಿಂಗ್ಸ್‌ಗಳು ಇನ್ನಿತರ ಪರಿಕರಗಳು ಇರಲೇಬೇಕಾಗುತ್ತದೆ ಎಂಬ ನಿಯಮ ರಂಗಸಜ್ಜಿಕೆಯದಾಗಿದೆ. ನಾಟಕಗಳಲ್ಲಿ ಪೌರಾಣಿಕ, ಐತಿಹಾಸಿಕ, ಮತ್ತು ಸಾಮಾಜಿಕ ಎಂಬ ಮೂರು ಪ್ರಕಾರಗಳು ಇವೆ. ಅದರಲ್ಲಿ ಸಾಮಾಜಿಕಕ್ಕಿಂತ ಪೌರಾಣಿಕವಾಗಿಲಿ ಮತ್ತು ಐತಿಹಾಸಿಕ ಇವೆರಡರಲ್ಲಿ ರಂಗಸಜ್ಜಿಕೆಗಳು ಅತಿ ಹೆಚ್ಚಿನ ಅಬ್ಬರ ಮತ್ತು ಹಿನ್ನಲೆಯ ಸೌಂದರ್ಯಕ್ಕೆ ಮುಖ್ಯ ಪಾತ್ರವಹಿಸುತ್ತದೆ. ವೇದಿಕೆಗೆ ನೇರವಾಗಿ ಇರುವ ಜಾಗದಲ್ಲಿ ಎತ್ತರವಾಗಿ ಸ್ವಾಗತ ಸೂಚಿಸುವ ಮಹಾದ್ವಾರವನ್ನು ನಿರ್ಮಿಸಿರುತ್ತಾರೆ. ಈ ಮಹಾದ್ವಾರದಲ್ಲಿ ಮೂರು ಕಟೌಟಗಳ ಜೋಡಣೆ ಇರುತ್ತದೆ

ಅದರಲ್ಲಿ ಎರಡು ರಸ್ತೆಯ ಎಡ ಮತ್ತು ಬಲಭಾಗದಲ್ಲಿ ಅವುಗಳನ್ನು ಲಂಬವಾಗಿ ನಿಲ್ಲಿಸಿ ಅವುಗಳಿಗೆ ನೇರವಾಗಿ ಸಹಾಯಕವಾಗಿ ಅವುಗಳಷ್ಟೆ ಎತ್ತರದ ಕಟ್ಟಿಗೆ ಕಂಬಗಳನ್ನು ಕಟೌಟಗಳ ಹಿಂದೆ ನಡೆಸುತ್ತಿದ್ದರು. ಆಮೇಲೆ ಅವೆರಡು ಕಟೌಟಗಳ ಮೇಲೆ ಅಡ್ಡವಾಗಿ ಬರುವ ಕಟೌಟ ಮೂರನೇಯ ದಾಗಿರುತ್ತದೆ. ಈ ಮೂರು ಕಟೌಟಗಳು ಬರುವ ಜನರಿಗೆ ಸ್ವಾಗತ ಬಯಸಲು ವಿರುದ್ಧ ಮುಖವಾಗಿ ಇರುತ್ತವೆ. ಅದರಲ್ಲಿ ಒಂದೊಂದು ಕಟೌಟಗಳಲ್ಲಿ ಕಲಾವಿದನ ಬಣ್ಣ ಮತ್ತು ಕುಂಚದ ಕೈಚಳಕ ಮುಖ್ಯ ಪಾತ್ರವಹಿಸುತ್ತದೆ.

ಲಬಂವಾಗಿ ನಿಲ್ಲಿಸಿರುವ ಎರಡು ಕಟೌಟಗಳ ಮೇಲೆ ಸ್ವಾಗತ ಬಯಸುತ್ತಿರುವ ಸುಂದರ ಯುವತಿಯರ ಪ್ರತಿಮೆಗಳು. ಕೈಯಲ್ಲಿ ಬರ್ಚಿ ಅಥವಾ ಗದೆ ಹಿಡಿದ ದ್ವಾರಪಾಲಕರು. ದರ್ಪಣಾ ಸುಂದರಿಯರು ಮತ್ತು ಕೈಯಲ್ಲಿ ಹೂವಿನ ಮಾಲೆಯನ್ನು ಹಿಡಿದಂತ ಸುಂದರಿಯರು ಇನ್ನು ಮುಂತಾದ ದೃಶ್ಯಗನ್ನು ಕಲಾವಿದರು ಸುಂದರವಾಗಿ ರಚಿಸಿರುತ್ತಾರೆ. ಇಷ್ಟೇಯಲ್ಲದೇ ಆ ಎರಡು ಕಟೌಟಗಳಲ್ಲಿ ಸುಳುವಿನ ನಕ್ಷಾವಿನ್ಯಾಸದಿಂದ ವರ್ಣಸಂಯೋಜನೆಯೂ ತುಂಬಿರುತ್ತದೆ. ಉಳಿದಿರುವ ಅತ್ಯಾಕರ್ಷಕ

ಮತ್ತು ಅಲಂಕಾರಿಕ ಚೌಕಟ್ಟು ಕಲಾವಿದರ ಕುಂಚ ನೈಪುಣ್ಯಕ್ಕೆ ತಕ್ಕಂತೆ ಅತ್ಯಂತ ನಯನ ಮನೋಹರವಾದ ವಿನ್ಯಾಸಗಳಿಂದ ಚಿತ್ರಿಸಿರುತ್ತಾರೆ ಈ ಎಲ್ಲಕ್ಕಿಂತ ಮುಖ್ಯವಾಗಿ ರಂಗವೇದಿಕೆಯ ವಿಸ್ತೀರ್ಣ ಅಂದರೆ ಒಟ್ಟು ವೇದಿಕೆಯ ಸುತ್ತಳತೆ. ಈ ರಂಗವೇದಿಕೆಯು ಸುಮಾರು ೩೦ ಅಡಿ ಅಗಲವಿರುತ್ತದೆ. ಇದು ಮುಖ್ಯ ಭಾಗವಾಗಿ ಮತ್ತು ಇದು ಎರಡು ಬದಿ ಅಂದರೆ ಎಡಗಡೆ ಮತ್ತು ಬಲಗಡೆ ಇನ್ನಷ್ಟು ಅವಕಾಶವಿರುತ್ತದೆ. ಪ್ರಸಿದ್ಧ ವೃತ್ತಿ ಕಂಪನಿಯವರಲ್ಲಿ ಇನ್ನು ದೊಡ್ಡ ಸ್ಥಳವಕಾಶವಿರುತ್ತದೆ. ಮತ್ತು ಪರದೆಗಳ ಎತ್ತರ ೧೨ ರಿಂದ ೧೫ ಅಡಿಗಳಷ್ಟು ಎತ್ತರವಿರುತ್ತದೆ. ಈ ಎಲ್ಲಕ್ಕಿಂತ ಮುಖ್ಯವಾಗಿ ರಂಗ ವೇದಿಕೆಯ ಕಲಾತ್ಮಕ ನಿರ್ಮಾಣ. ಈ ರಂಗವೇದಿಕೆಯು ಸುಮಾರು ೩೦ ಅಡಿ ಅಗಲವಿರುತ್ತದೆ. ಎರಡೂ ಬದಿ ಅಂದರೆ ಎಡಗಡೆ ಮತ್ತು ಬಲಗಡೆ ಇನ್ನಷ್ಟು ಅವಕಾಶವಿರುತ್ತದೆ. ಪ್ರಸಿದ್ಧ ವೃತ್ತಿ ಕಂಪನಿಯವರಲ್ಲಿ ಇನ್ನೂ ದೊಡ್ಡ ಸ್ಥಳವಕಾಶವಿರುತ್ತದೆ. ಮತ್ತು ಪರದೆಗಳ ಎತ್ತರ ೧೨ ರಿಂದ ೧೫ ಅಡಿಗಳಷ್ಟು ಎತ್ತರವಿರುತ್ತದೆ.

ಈ ಸೆಟ್ಟಿಗೆ ಹೊಂದಿಕೊಂಡು ನಾಟಕದ ಅಂಕದ ಪರದೆ ಇರುತ್ತದೆ. ಇದು ಸ್ಯಾಟಿನ್ ಬಟ್ಟೆಯ ನೆರಿಗೆ ನೆರಿಗೆಗಳ ಮಿಂಚು ಮಿಂಚಿನ ಪದೆಯಾಗಿರುತ್ತದೆ. ಆ ನಾಟಕ ಪ್ರಾರಂಭವಾದ ಕೂಡಲೇ ಮೇಲೆತ್ತಿದ್ದ ಈ ಪರದೆ ನಾಟಕ ಮುಗಿದ ನಂತರವೆ ಕೆಳಗೆ ಇಳಿಯುವುದು. ಇದು ಅಂಕದ ಪರದೆಯ ಕ್ರಿಯೆಯಾಗಿರುತ್ತದೆ.

ಇಳಕಲ್ಲ ಕೆಲವು ಪ್ರಮುಖ ರಂಗಪರದೆಯ ಚಿತ್ರಗಾರರ ಪರಿಚಯ

ಶ್ರೀ ಚಿಲ್ಲಾಳ ಪೇಂಟರ್

ಬಾಗಲಕೋಟೆ ಜಿಲ್ಲೆಯ ಹುನುಗುಂದ ತಾಲೂಕು ಇಲಕಲ್ಲಿನ ಶ್ರೀ ಲಕ್ಷ್ಮಣ ಶ್ರೀಮತಿ ಧರ್ಮವ್ವ ದಂಪತಿಗಳ ಗರ್ಭ ಸಂಜಾತ ತುಕಾರಾಮ ಚಿಲ್ಲಾಳರು ೧೯೨೨ರಲ್ಲಿ ಜನ್ಮವೆತ್ತಿದರು. ಇವರ ಮೂಲ ಉದ್ಯೋಗ ನೇಕಾರಿಕೆ ಆದರೆ ತುಕಾರಾಮ ಚಿಲ್ಲಾಳರು ಚಿಕ್ಕಂದಿನಲ್ಲಿಯೆ ಚಿತ್ರಕಲೆಯಲ್ಲಿ ಆಸಕ್ತಿ ಹೊಂದಿದ್ದರು. ಅದಕ್ಕೆ ಇಲಕಲ್ಲಿನ ಗರಡಿ ಮನೆ ಬಾಸಿಂಗ್ ಕಟ್ಟೆ ಮೊದಲಾದ ಕಡೆಗಳೆಲ್ಲಾ ಚಿತ್ರ ಬರೆಯುತ್ತಾ ತಮ್ಮ ಕಲಾ ಪ್ರೌವೃತ್ತಿಯನ್ನು ವಿಸ್ತರಿಸಿಕೊಂಡರು.

ಕೇವಲ ಪ್ರಾಥಮಿಕ ನಾಲ್ಕನೆಯ ತರಗತಿಯ ವರೆಗೆ ಓದಿಕೊಂಡ ಇವರು ಹೆಚ್ಚಿನ ಅಭ್ಯಾಸಕ್ಕೆ ಮನಸ್ಸು ಮಾಡದೇ ಹತ್ತೇ ವರ್ಷದಲ್ಲಿ ಶಿಕ್ಷಣವನ್ನು ತೊರೆದು ಊರಿನಲ್ಲಿ ನಡೆಯುವ ನಾಟಕಗಳು. ಅದರಲ್ಲಿರುವ ಚಿತ್ರದ ಪರದೆಗಳನ್ನು ವೀಕ್ಷಿಸುತ್ತಾ ಚಿತ್ರಕಲೆಯನ್ನು ಚಿತ್ರಿಸಲು ಗೋಡೆಯನ್ನು ಸಾಧನವಾಗಿ ಮಾಡಿಕೊಂಡಿದ್ದರು.

ಆಗ ಇವರ ಸಹಜ ಕಲಾಪ್ರತಿಭೆಯನ್ನು ಮೆಚ್ಚಿಕೊಂಡ ಇಲಕಲ್ಲಿನ ಪ್ರಸಿದ್ಧ ಓರಿಯ ರಂಗ ಚಿತ್ರಕಲಾವಿದರಾದ ದಿ. ಶ್ರೀ 'ವೆಂಕಯ್ಯನವರ' ಕಲಾದೃಷ್ಟಿ ಇವರ ಮೇಲೆ ಆಕರ್ಷಿತಗೊಂಡು ಸದಾ ಇರತೊಡಗಿತು. ತುಕಾರಾಮ ಚಿಲ್ಲಾಳರು ಶ್ರೀ ವೆಂಕಯ್ಯನವರ ಶಿಷ್ಯರಾಗಿ ಗೌರವದಿಂದ ರಂಗ ಚಿತ್ರಕಲೆಯಲ್ಲಿ ಪರಿಣಿತಿ ಸಾಧಿಸಿದರು. ಹಾಗೂ ರಂಗ ಚಿತ್ರಕಲೆಯಲ್ಲಿಯೆ ಕೃಷಿ ಮಾಡಿದ ಇಲಕಲ್ಲಿನ ಶ್ರೀ ಮರೋಳ್, ಖೇಮರಾಜ್ ಕೆಂದೂಳಿ ಮತ್ತು ಶ್ರೀಧೋತ್ರೆಯಂಬ ಪೇಂಟರ್‌ರನ್ನು ಸೃಷ್ಟಿಸಿದ ಯಶಸ್ಸು ಇವರದಾಗಿದೆ. ನಾಡಿನ ಹಲವಾರು ಕಂಪನಿಗಳಿಗೆ ದೃಶ್ಯಾವಳಿಗಳನ್ನು ಹಾಗೂ ರಂಗಸಜ್ಜಿಕೆಯ ಸೆಟಿಂಗ್ಸ್‌ಗಳನ್ನು ಸೃಷ್ಟಿಸಿಕೊಟ್ಟಿದ್ದಾರೆ. ೧೯೪೦ರ ಸುಮಾರಿಗೆ ಅಂದರೆ ತಮ್ಮ ಚಿಕ್ಕ ವಯಸ್ಸಿನಲ್ಲಿಯೇ ಕೆರೂರ ಗೌಡರ ಕಂಪನಿ, ಈರಪ್ಪನವರ ಕಂಪನಿ ಹಾಗೂ ಗೋಗೇಶ್ವರ ಕಂಪನಿ ಮತ್ತು ರಡ್ಡಿ ಕಂಪನಿ ಇನ್ನೂ ಮುಂತಾದ ಹಲವಾರು ಕಂಪನಿಗಳಿಗೆ ಮತ್ತು ನಾಟಕ ಸಂಸ್ಥೆಗಳಿಗೆ ಕಲಾ ಪೂರ್ಣ ಪರದೆಗಳನ್ನು ಮತ್ತು ಸೆಟಿಂಗ್ಸ್‌ಗಳನ್ನು ತಯಾರಿಸಿಕೊಟ್ಟ ಹೆಗ್ಗಳಿಕೆ ಇವರದ್ದಾಗಿದೆ. ಒಟ್ಟಾರೆ. ಪ್ರೇಕ್ಷಕರ ಮನದಲ್ಲಿ ಪರದೆಗಳ ಮೂಲಕ ಸನ್ನಿವೇಷಗಳನ್ನು ಪಡಿಮೂಡಿಸುವಲ್ಲಿ ತಮ್ಮ ಕಲಾ ಪರಿಪೂರ್ಣತೆ ಅವಿಸ್ಮರಣಿಯ.

ಇವರು ದೃಶ್ಯಾವಳಿ ನಿರ್ಮಿಸುವಲ್ಲಿ ಪ್ರಕಾರ ಬಣ್ಣಗಳನ್ನು ಉಪಯೋಗಿಸದೆ ಕಣ್ಣಿಗೆ ಹಿತಕೊಡುವ ಸೌಮ್ಯ ಬಣ್ಣಗಳಿಂದ ವಿನ್ಯಾಸಗೊಳಿಸುವುದು ಇವರ ವಿಶೇಷ ಶೈಲಿಯಾಗಿತ್ತು. ಸಂಪ್ರದಾಯಿಕ ಸುಳುವುಗಳು ಬಿಡಿಸುವಲ್ಲಿ ಇವರು ಹೆಚ್ಚು ಕೃಷಿ ಮಾಡಿದ್ದರು. ಬೇಲೂರಿನ ಶಿಲಾಬಾಲಿಕೆ ಹಾಗೂ ಸುಳಿವಿನ ನಕ್ಷಾವಿನ್ಯಾಸದ ಕೆಲಸಗಳನ್ನು ದರ್ಭಾರ ಸೀನ್, ದೇವಾಲಯ ಸೀನ್, ಸೆಟಿಂಗ್ಸ್ ಇತ್ಯಾದಿಗಳಲ್ಲಿ ವಿಪುಲವಾಗಿ ಉಪಯೋಗಿಸಿದ್ದು ಕಂಡು ಬರುತ್ತದೆ. ಶ್ರೀ ಚಿಲ್ಲಾಳ ಪೇಂಟರ್‌ರವರು ನಿರಂತರವಾಗಿ ೨೫ ವರ್ಷಗಳ ಕಾಲ ನಾಟಕದ ಹಿನ್ನೆಲೆಯ ಪರದೆಯನ್ನು ರಚಿಸಿದರು. ಇದರ ಜೊತೆ ಸ್ವತಃ ಇಲಕಲ್ಲಿನಲ್ಲಿ ಸ್ವಂತ ವೃತ್ತಿಯಾದ ನೇಕಾರ ಕಸುಬನ್ನು ಮಾಡಿಕೊಂಡು ಬಂದರು. ಇವರ ಸಂಸಾರದ ಸಂಗಾತಿ ವಿಠುಬಾಯಿಯಾಗಿದ್ದರು. ಹೇಗೋ ನಾಟಕ ಕಂಪನಿಗಳಲ್ಲಿ ಕೆಲಸ ಮಾಡುತ್ತಾ ಇದ್ದರು. ಆದರೆ ನಾಟಕದ ಕಂಪನಿಗಳು ಒಂದೊಂದಾಗಿ ಮುಚ್ಚಲ್ಪಡುತ್ತಿದ್ದವು. ನಾಟಕ ಕಂಪನಿಗಳ ಪರಿಸ್ಥಿತಿ ಅನಿಶ್ಚಿತವಾದುದ್ದರಿಂದ ಆಗ ತುಕಾರಾಮ ಚಿಲ್ಲಾಳರು ಹವ್ಯಾಸಿಯಾಗಿ ಕಲಿತ ಛಾಯಾ ಚಿತ್ರಕಲೆಯನ್ನು ತಮ್ಮ ಸಂಸಾರದ ಜವಾಬ್ದಾರಿಯನ್ನು ಮುಂದುವರೆಸಿಕೊಂಡು ಹೋಗಲು ೧೯೫೦ರಲ್ಲಿ ಛಾಯಾಚಿತ್ರ ಮಾಧ್ಯಮ ಹಿಡಿಯಬೇಕಾಯಿತು. ಈ ಮಾಧ್ಯಮದಿಂದ ಚಿಲ್ಲಾಳರವರಿಗೆ ನಾಟಕ ಕಂಪನಿಗಳಲ್ಲಿ ತಿಂಗಳಿಗೆ ೨೦೦ರೂ ಸಂಬಳಕ್ಕಿಂತ ಫೋಟೋ ಗ್ರಾಫಿಯಲ್ಲಿ ಒಂದು ವಾರಕ್ಕೆ ಸಿಗುತ್ತಿತ್ತು. ಅದಕ್ಕೆ ಇವರು ಛಾಯಾ ಚಿತ್ರ ಮಾಧ್ಯಮವನ್ನು ಮುಂದುವರೆಸಿಕೊಂಡು ಬಂದರು.

ಶ್ರೀ ರಾಮಮೂರ್ತಿ ಪೇಂಟರ್

ಶ್ರೀ ರಾಮಮೂರ್ತಿ ಪೇಂಟರ್ ಇವರು ಇಲಕಲ್ಲಿನ ಮಹಾಂತಪ್ಪ ಗಜೇಂದ್ರಗಡರವರ ಏಳು ಜನ ಮಕ್ಕಳಲ್ಲಿ ರಾಮಮೂರ್ತಿಯವರು ಹಿರಿಯ ಮಗನಾಗಿ ಜನಿಸಿದರು. ಇವರು ಬಾಲ್ಯದಿಂದಲೇ ಚಿತ್ರಕಲೆಯಲ್ಲಿ ಆಸಕ್ತಿಯನ್ನು ಮೈಗೂಡಿಸಿಕೊಂಡು ಬಂದಿದ್ದಾರೆ. ಇವರು ಮೆಟ್ರಿಕ್‌ವರೆಗೆ ಶಿಕ್ಷಣ ಮುಗಿಸಿ ಇವರ ಮೂಲ ಉದ್ಯೋಗವಾದ ನೇಕಾರಿಕೆಯನ್ನು ತಮ್ಮ ತಂದೆಯೊಡನೆ ಮಾಡುತ್ತಾ ತಾವು ಕಲಿತರು. ಹೀಗೆ ನೇಕಾರಿಕೆಯ ಕೆಲವು ನಾಟಕ ಕಂಪನಿಯಲ್ಲಿ ಸೇರಿ ಅಲ್ಲಿ ಇವರ ತಂದೆಯವರ ಸ್ನೇಹಿತರಾದ ಕೆಂಧೂಳೀಯವರು ಗುರುಗಾಳಾಗಿ ರಾಮಮೂರ್ತಿಯವರಿಗೆ ಪರಿಚಯವಾದರು. ಅವರ ಜೊತೆಗೆ ಸೇರಿ ರಂಗಪರದೆಯ ಚಿತ್ರವನ್ನು ಬರೆಯುವಲ್ಲಿ ತಲ್ಲಿನರಾಗಿ ಹೆಚ್ಚಿನ ರಚನೆಯನ್ನು ಕಲಿತರು.

ಹುಬ್ಬಳ್ಳಿ, ರಾಣೆಬೆನ್ನೂರ, ಕಮತಗಿ ಗುಡಗೇರಿ ಕಂಪನಿ ಇತ್ಯಾದಿ ಕಂಪನಿಗಳಲ್ಲಿ ಗುರುಗಳ ಜೊತೆಗೂಡಿ ಚಿತ್ರಕಲೆಯಲ್ಲಿ ಇನ್ನೂ ಹೆಚ್ಚಿನ ವಿದ್ಯಯನ್ನು ಕಲಿತರು. ಹೀಗೆ ಇವರು ಹತ್ತಾರು ಕಂಪನಿಗಳಲ್ಲಿ ಸಾವಿರಾರು ರಂಗಪರದೆಗಳನ್ನು ರಚಸಿಕೊಟ್ಟಿದ್ದಾರೆ. ನಾಟಕ ಕಂಪನಿಗಳ ಪರದೆ ರಚಿಸು ತ್ತಿದ್ದಂಥಾ ಸಂದರ್ಭದಲ್ಲಿ ಇದರ ಜೊತೆ ಹತ್ತಿ ಮತ್ತು ಎಣ್ಣೆ ಕಾರ್ಖಾನೆಗಳಲ್ಲಿ ಕೆಲಸವನ್ನು ಮಾಡಿ ಕೊಂಡು ತಮ್ಮ ಸಂಸಾರದ ಜವಾಬ್ದಾರಿಯನ್ನು ಹೊತ್ತು ಹೇಗೋ ಸಂಸಾರದ ಜವಾಬ್ದಾರಿಯನ್ನು ನಿಭಾಯಿಸಿಕೊಂಡು ಬಂದರು. ಇಂತಹ ಸಂದರ್ಭದಲ್ಲಿ ಮೆಟ್ರಿಕ್ ವಿದ್ಯಾಭ್ಯಾಸ ಮುಗಿಸಿದ ಇವರಿಗೆ ಗುಮಾಸ್ತ (ಕ್ಲರ್ಕ್) ಹುದ್ದೆಯು ಲಭಿಸಿದ್ದರಿಂದ ತನ್ನ ಪರದೆಚಿತ್ರ ರಚನೆಯನ್ನು ಕೈ ಬಿಡಬೇಕಾದ ಸಂದರ್ಭವು ಒದಗಿತು. ಆದರೂ ಬಿಡುವಿನ ವೇಳೆಯಲ್ಲಿ ಚಿತ್ರ ಬರೆಯುತ್ತಿದ್ದು ಕೆಲವು ಮಣ್ಣಿನ ಗಣಪತಿಗಳನ್ನು ನಿರ್ಮಿಸುತ್ತಿದ್ದು ಪರದೆ ಬರೆಯುವಲ್ಲಿ ಗುರುಗಳಿಗೆ ರಾತ್ರಿ ವೇಳೆಯಲ್ಲಿ ಸಹಾಯ ಮಾಡಿಕೊಂಡು ಬರುತ್ತಿದ್ದರು. ಇವರ ನಂತರ ಸರಸ್ವತಿಯವರನ್ನು ಮದುವೆಯಾದರು. ಹಾಗೂ ಇವರಿಗೆ ಮೂರು ಗಂಡು ಒಂದು ಹೆಣ್ಣುಮಕ್ಕಳು ಜನಿಸಿದರು. ಇವರಿಗೆ ವಿದ್ಯಾಭ್ಯಾಸ ಹಾಗೂ ನೌಕರಿ ಕೊಡಿಸುಲ್ಲಿ ಹೆಚ್ಚು ಹಣದ ಕೊರತೆಯಿಂದಾಗ ನೌಕರಿ ಜೊತೆಗೆ ಪರದೆ ಕಲಾಕೃತಿಯನ್ನು ರಚಿಸುವ ಅನಿವಾರ್ಯ ಪರಿಸ್ಥಿತಿ ಇದ್ದಿದ್ದರಿಂದ ಇವರು ಇನ್ನೂ ಚಿತ್ರಕಲೆಯು ಮಾಸದಂತೆ ಪರದೆಯನ್ನು ಬರೆಯುವಲ್ಲಿ ತೊಡಗಿಕೊಂಡರು ಇವರಿಗೆ ಡಾ. ರಾಜಕುಮಾರ ಹಾಗೂ ನರಸಿಂಹರಾಜು ಇಂತಹ ಮಹಾನ ರಂಗಭೂಮಿ ಮತ್ತು ಚಿತ್ರರಂಗ ಕಲಾವಿದರ ಜೊತೆ ಇತ್ತೀಚಿನ ಕಲಾವಿದರಾದ ರವಿಚಂದ್ರನ್, ಶಿವರಾಜಕುಮಾರ ಇನ್ನಿತರ ಚಿತ್ರರಂಗದ ವ್ಯಕ್ತಿಗಳ ಪರಿಚಯ ಇವರಿಗೆ ಇತ್ತು.

ಶ್ರೀ ಕೆ. ಜಗದೀಶ, ಪೇಂಟರ

ನಾಟಕ ಪರದೆಯ ಪೇಂಟರ ಎಂದಾಕ್ಷಣ ನಮ್ಮ ಕಣ್ಮುಂದೆ ನಿಲ್ಲುವುದು ಬಾಗಲಕೋಟೆ ಜಿಲ್ಲೆಯ ಹುನಗುಂದ ತಾಲೂಕಿನ ಇಲಕಲ್ಲು ಶಹರು. ಇಲಕಲ್ಲಿನಲ್ಲಿ ನೆಲೆಸಿರುವ ಉತ್ತಮ ಪೇಂಟರಗಳಲ್ಲಿ ಬೆಳದ ಒಬ್ಬರಾಗಿದ್ದಾರೆ. ಹಿರಿಯ ಕಲಾವಿದರಾದ ಖೇಮರಾಜ ಕೆಂದೂಳಿಯವರ ಮಾರ್ಗದರ್ಶನದಲ್ಲಿ ಬೆಳೆದ ಕಲಾವಿದರಲ್ಲಿ ಶ್ರೀ ಜಗದೀಶ ಕೀರ್ತಪ್ಪ ಕೊಪ್ಪರದ, ಇವರೂ ಒಬ್ಬರು. ಶ್ರೀಕೀರ್ತಪ್ಪ ಮತ್ತು ಶ್ರೀಮತಿ ಲಕ್ಷ್ಮೀಬಾಯಿ ಇವರ ಗರ್ಭಸಂಜಾತ ಜಗದೀಶ ಕೊಪ್ಪರದರವರು ದಿನಾಂಕ ೧೮.೮.೧೯೪೭ರಲ್ಲಿ ಇಲಕಲ್ಲಿನಲ್ಲಿ ಜನಿಸಿದರು. ಇವರ ಮನೆಯ ಮೂಲ ಉದ್ಯೋಗ ನೇಕಾರಿಕೆ ಯಾಗಿದ್ದು. ಇವರ ಸ್ವಂತ ಊರು ಇಲಕಲ್ಲ ಆಗಿತ್ತು. ಇವರು ಚಿಕ್ಕಂದಿನಿಂದಲೆ ಚಿತ್ರಕಲೆಯ ಬಗ್ಗೆ ಆಸಕ್ತಿ ಇಟ್ಟುಕೊಂಡೆ ಪಿ.ಯು.ಸಿ.ವರೆಗೆ ಶಿಕ್ಷಣವನ್ನು ಮುಗಿಸಿದರು. ಅದೇ ಊರಿನ ಹಿರಿಯ ಕಲಾವಿದರ ಪರದೆಯ ಚಿತ್ರಗಳನ್ನು ಕಂಡು ಜಗದೀಶ ಇವರಿಗೆ ಚಿತ್ರಕಲೆಯಲ್ಲಿನ ಹೆಚ್ಚಿನ ಆಸಕ್ತಿ ಮಾಡಲು ಒಂದು ರೀತಿ ಕಾರಣವಾಯಿತು. ನಂತರ ಇವರು ಚಿತ್ರಕಲೆಯನ್ನೆ ವೃತ್ತಿಯನ್ನಾಗಿ ಬೆಳಸಿಕೊಂಡು ರಂಗ ಪರದೆಯ ಚಿತ್ರಗಳನ್ನು ಬರೆಯಲು ಆರಂಭಿಸಿದರು. ಅಷ್ಟೇ ಅಲ್ಲದೆ ಅವರಿಗೆ ಇನ್ನುಳಿದ ಕಲಾತ್ಮಕ ಹವ್ಯಾಸಗಳೂ ಇದ್ದವು.

ಶ್ರೀ ತುಕಾರಾಂ ಬೋರೆ ಪೇಂಟರ್

ಇಳಕಲ್ಲಿನ ಶ್ರೀತುಕಾರಾಂ, ಬೋರೆ ಇವರು ರಾಯಚೂರ ಜಿಲ್ಲೆಯ ಬೆಡಗಿನಹಾಳ ಗ್ರಾಮದಲ್ಲಿ ೧೯೪೬ರಲ್ಲಿ ಜನಿಸಿದರು. ನಂತರ ಹುನಗುಂದ ತಾಲೂಕೂ ತಮ್ಮ ಸ್ವಂತ ಊರಾದ ಇಳಕಲ್ಲಿಗೆ ಬಂದು ಬಾಲ್ಯ ಜೀವನವನ್ನು ಆರಂಭಿಸಿದರು. ಇವರಿಗೆ ಚಿಕ್ಕಂದಿನಿಂದಲೇ ಚಿತ್ರಕಲೆಯಲ್ಲಿ ಆಸಕ್ತಿ ಇತ್ತು. ಇವರ ಮೂಲ ಉದ್ಯೋಗ ನೇಕಾರಿಕೆ ಆಗಿತ್ತು. ಅಷ್ಟೇಅಲ್ಲದೇ ಇಳಕಲ್ ಶಹರು ಒಂದು ಕಲಾವಿದ ತಾಣವೆಂದೆ ಹೇಳಬಹುದು. ಇದಕ್ಕೆ ಕಾರಣ ವೇನೆಂದರೆ ಇಳಕಲ್ಲಿನಲ್ಲಿ ಚಿತ್ರ ಕಲಾವಿರಷ್ಟೇ ಅಲ್ಲದೆ ಇಲ್ಲಿ ರಂಗಭೂಮಿ ಮತ್ತು ರಂಭೂಮಿಯ ಪರದೆ ಕಲಾವಿದರು ಇದ್ದಾರೆ. ಇಷ್ಟೆಲ್ಲ ಕಲಾವಿದರನ್ನು ಬೆಳೆಸುತ್ತಿದ್ದ ಈ ಊರು ಶ್ರೀ ತುಕಾರಾಂ ಬೋರೆಯವರನ್ನು ಕೂಡಾ ಬೆಳೆಸಲು ಆರಂಭಿಸಿತು.

ಇವರು ಹಿರಿಯ ಕಲಾವಿದರ ಚಿತ್ರಗಳನ್ನು ನೋಡುತ್ತಾ ತಾವು ಆ ಚಿತ್ರಗಳನ್ನು ಹಾಳೆಯ ಇಲ್ಲವೇ ಗೊಡೆಯ ಮೇಲೆ ನಕಲು ಮಾಡಲು ಪ್ರಯತ್ನಿಸಲು ಆರಂಭಿಸಿದರು. ಮನೆಯಲ್ಲಿ ಇವರದು ಬಡಕುಟುಂಬ ಆರ್ಥಿಕ ಪರಿಸ್ಥಿತಿಯ ಅನಾನುಕುಲತೆಯಿಂದ ಇವರ ವಿದ್ಯಾಭ್ಯಾಸ ಎರಡನೆಯ

ತರಗತಿಯವರೆಗೆ ಮಾತ್ರ ಮುಗಿಸಿ ನಂತರ ಇವರ ವಿದ್ಯಾಭ್ಯಾಸ ಸ್ಥಗಿತಗೊಂಡಿತು. ಇವರ ತಂದೆಯವರಾದ ಹೊಣ್ಣಪ್ಪ ಮತ್ತು ತಾಯಿಯ ಜೊತೆ ಸೇರಿ ನೇಕಾರಿಕೆಯ ಕೆಲಸದಲ್ಲಿ ಕೈಗೂಡಿಸಲು ನೇರವಾದರು ಹೀಗೆ ಶ್ರೀತುಕಾರಾಂ ಬೋರೆಯವರು ನೇಕಾರಿಕೆ ಮತ್ತು ಚಿತ್ರಕಲೆ ಎರಡನ್ನು ಕಲೆಯುತ್ತಾ ಇರುವಾಗ ಆ ಸಮಯದಲ್ಲಿ ಇವರಿಗೆ ಚಿತ್ರಕಲೆಯನ್ನೆ ಮೂಲವಾಗಿ ಇಟ್ಟುಕೊಳ್ಳಬೇಕೆಂದು ಆಸೆಯಾಯಿತು. ಅದೇ ಊರಿನ ಹಿರಿಯ ನಾಟಕ ಪರದೆಯ ಚಿತ್ರಕಾಲಾವಿದ ಎಂದು ಹೆಗ್ಗಳಿಕೆಗೆ ಪಾತ್ರರಾದ ಶ್ರೀ ಖೇಮರಾಜ ಕೆಂಧೂಳಿಯವರ ಮಾರ್ಗದರ್ಶನ ಪಡೆದು ಅದೇ ಊರಲ್ಲಿ ಇವರು ಪರದೆಯ ಚಿತ್ರಗಳನ್ನು ರಚಿಸಲು ಪ್ರಾರಂಭಿಸಿದರು.

ಇವರು ಇಳಕಲ್ಲಿನಲ್ಲಿ ಚಿತ್ರಗಳನ್ನು ರಚಿಸುವುದಷ್ಟೇ ಅಲ್ಲದೇ ಹೊರಗಡೆಯ ದೊಡ್ಡ ದೊಡ್ಡ ನಾಟಕ ಕಂಪನಿಗಳಿಗೆ ಹೋಗಿ ಮೂರು ತಿಂಗಳೂ ಅಥವಾ ಆರು ತಿಂಗಳು ಗಟ್ಟಲೇ ಅಲ್ಲಿಯೇ ಇದ್ದು ಈ ಪರದೆಯ ಚಿತ್ರಗಳನ್ನು ಬರೆದುಕೊಟ್ಟು ಬರುತ್ತಿದ್ದರು.

ಶ್ರೀ ಕೆ. ಅಮೀನ್ ಪೇಂಟರ್ ಇಳಕಲ್

ಶ್ರೀ ಕೊಡಗಲಿ ಅಮೀನಸಾಬರ ಹೆಸರು ಶ್ರೀ ಮರೋಳ ಪೇಂಟರ್, ಶ್ರೀ ಚಿಲ್ಲಾಳ ಪೇಂಟರ್, ಶ್ರೀ ಧೋತ್ರೆ, ಶ್ರೀ ಕೆಂದೂಳೆ ಪೇಂಟರ್ ಎಂಬುದಾಗಿ ಮುಂತಾದವರ ಹೆಸರುಗಳೇ ರಂಗಭೂಮಿಯ ಪರಿಸರದಲ್ಲಿ ಕೇಳಬರುವ ಕಾಲ ಒಂದಿತ್ತು. ಆದರೆ ಈಗ ಕೆ. ಅಮೀನ್ ಪೇಂಟರ್ ಆ ಜಾಗೆಯನ್ನು ತುಂಬಿದ್ದಾರೆನ್ನಬಹುದು.

ಶ್ರೀ ದಾವಲಸಾಹೇಬರ ಮಗನಾದ ಇವರು ಮುಸಲ್ಮಾನ ಧರ್ಮದಲ್ಲಿ ಜನಿಸಿದರೂ ಧರ್ಮಾಂಧತೆ ಯಿಂದ ದೂರವಿದ್ದುಕೊಂಡು ಕಾಯಕದಲ್ಲಿಯೇ ಕೈಲಾಸ ಕಾಣುತ್ತಿರುವವರು. ಇವರು ಚಿಕ್ಕಂದಲೇ ಚಿತ್ರಕಲೆಯನ್ನು ರೂಢಿಸಿಕೊಂಡವರು. ಎಸ್.ಎಸ್.ಎಲ್.ಸಿ. ತರುವಾಯ ಗದುಗಿನ ವಿಜಯ ಕಲಾಮಂದಿರ ದಲ್ಲಿ ಚಿತ್ರಕಲೆಗೆ ಸಂಬಂಧಿಸಿದ ಹಲವು ಪರೀಕ್ಷೆಗಳನ್ನು ಮಾಡಿಕೊಂಡು ಕಮರ್ಷಿಯಲ್ ಡಿಪ್ಲೋಮಾ ಪರೀಕ್ಷೆಯಲ್ಲಿ ಒಳ್ಳೆಯ ಯಶಸ್ಸನ್ನು ಕಂಡುಕೊಂಡಿದ್ದಾರೆ. ಚಿತ್ರಕಲೆಯಲ್ಲಿ ಇಷ್ಟೊಂದು ಆಸಕ್ತಿ ಮತ್ತು ಸಾಧನೆಯನ್ನು ಮಾಡಿದ ಅಮೀನ ಇದಕ್ಕೊಂದು ಮೂರ್ತ ಸ್ವರೂಪ ಕಂಡುಕೊಂಡಿದ್ದು ತಮ್ಮ ಚಿತ್ರಕಲೆಯಲ್ಲಿ ರಂಗಚಿತ್ರಕಲೆಯನ್ನಾಗಿಸಿಕೊಂಡು ದುಡಿದರು.

ಇವರು ರಂಗಚಿತ್ರಕಲಾಗುರು ಶ್ರೀ ಖೇಮರಾಜ ಕೆಂದೂಳಿಯವರಿಗೆ ಶರಣು ಹೋಗಬೇಕಾಯಿತು. ಇಂತಹ ಶಿಷ್ಯರನ್ನೆ ಬಯಸಿದ್ದ ಗುರು ಕೆಂಧೂಳಿಯವರ ಶಿಷ್ಯ ಅಮೀನರಿಗೆ ತಮ್ಮ ಕಲೆಯನ್ನೆಲ್ಲಾ

ಧಾರೆಯರೆದುಕೊಟ್ಟರೆಂದು ಹೇಳಬಹುದು. ಗುರುವಿನ ಸೇವೆ ಮಾಡುತ್ತಾ ಅವರ ಮಾರ್ಗದರ್ಶನದಲ್ಲಿ ಅತ್ಯಂತ ಭಯ ಭಕ್ತಿಯಿಂದ ಆಶೀರ್ವಾದ ಪಡೆದು ಈಗ ಶ್ರೇಷ್ಠ ಕಲಾವಿದರಾಗಿ ರಂಗಭೂಮಿ ಸೇವೆಯಲ್ಲಿ ತೊಡಗಿದ್ದಾರೆ.

ಮುಖರಂಗಸಜ್ಜಿಕೆಯ ಪಾರ್ಶ್ವ ಚಿತ್ರಗಳಲ್ಲಿ ಬರುವ ಭಾವಚಿತ್ರಗಳನ್ನು ಹಿರಿಯ ಕಲಾವಿದರಾದ ರಾಜರವಿವರ್ಮನ ಶೈಲಿಯಲ್ಲಿಯೇ ಆಕರ್ಷಕವಾಗಿ ಚಿತ್ರಿಸಿಲು ರೂಡಿಸಿಕೊಂಡಿದ್ದಾರೆ. ಮುಖರಂಗಮಂಟಪದ ಚೌಕಟ್ಟಿನಲ್ಲಿ ಆದಿಲ್‌ಶಾಹಿಯ ಶಿಲ್ಪಕಲೆಯಲ್ಲಿ ಕಂಡುಬರುವ ಪರ್ಶಿಯನ್ ಮಾದರಿಯ ಸುಳುವಿನ ಚಿತ್ರಗಳನ್ನು ಚಿತ್ರಿಸಿ ಮೆರಗಿನ ಬಣ್ಣ ಕೊಡುವುದರಲ್ಲಿ ನೈಪುಣ್ಯತೆ ಪಡೆದವರಾಗಿದ್ದರು. ಹಾಗೂ ಸುಳುವು ಗಳಿಗೆ ತ್ರಿಗಾತ್ರ ಸ್ವರೂಪದ ನೆರಳು ಬೆಳಕನ್ನು ಪೂರೈಸಿ ಸ್ವಾಭಾವಿಕವಾಗಿ ಮೆರೆಗಳನ್ನು ಹೆಚ್ಚಿಸುತ್ತಿದ್ದರು. ದರ್ಬಾರ ಹಾಗೂ ಮಹಲ್ ಸೀನುಗಳನ್ನು ಸೃಷ್ಟಿಸುವಲ್ಲಿ ಇವರು ಅದ್ವಿತೀಯ ರಾಗಿದ್ದಾರೆ.

ಶ್ರೀ ಸನ್ನೂರ ಪೇಂಟರ್


ಬಾಗಲಕೋಟೆ ಜಿಲ್ಲೆಯ ತಾಲೂಕಿನ ಕೆರೂರ ಗ್ರಾಮದ ಶ್ರೀ ಸಂಗಪ್ಪ, ಧರ್ಮಪತ್ನಿ ಶ್ರೀ ಯಮನಮ್ಮ ಇವರೂ ಮೂಲತಃ ನೇಕಾರಿಕೆ ಕುಟುಂಬದವರು ಇವರ ಗರ್ಭಸಂಜಾತ ಶ್ರೀ ಸೋಮಣ್ಣ ಸನ್ನೂರರು ಕೆರೂರ ಗ್ರಾಮದಲ್ಲಿ ಜನಿಸಿದರು. ಇವರು ತಮ್ಮ ತಂದೆ-ತಾಯಿಯವರಿಗೆ ಒಬ್ಬನೆ ಮಗ ಇವರ ವಿದ್ಯಾಭ್ಯಾಸ ಕೇವಲ ಐದನೇ ತರಗತಿ ಇವರಿಗೆ ಮೂರನೇ ತರಗತಿಯಿಂದಲೇ ಚಿತ್ರಬರೆಯುವ ಹವ್ಯಾಸ ಇತ್ತು. ಕೆಲವು ಕಲಾವಿದರು ಚಿತ್ರಗಳನ್ನು ರಚಿಸುವುದನ್ನು ನೋಡಿ ತಾವು ಕಲಿಯಲು ಪ್ರಯತ್ನಿಸುತ್ತಿದ್ದರು. ತಮ್ಮ ಆರನೇಯ ವರ್ಷದಲ್ಲಿ ತಮ್ಮ ತಂದೆ-ತಾಯಿಯರನ್ನು ಕಳೆದುಕೊಂಡರು. ನಂತರ ಅವರು ತಮ್ಮ ಅತ್ತೆಯ ಊರಾದ ಇಳಕಲ್ಲಿಗೆ ಬಂದು ನೆಲೆಸಿದರು. ಇವರು ಪ್ರಾಥಮಿಕ ಹಂತದಲ್ಲಿ ಶಿಕ್ಷಣಕ್ಕೆ ವಿದಾಯ ಹೇಳಿದ್ದು ಇವರಿಗೆ ಕಲೆ ದೈವದತ್ತವಾಗಿತ್ತು. ತಮ್ಮ ಹದಿನಾಲ್ಕನೆಯ ವಯಸ್ಸಿನಲ್ಲಿಯೇ ಇವರು ಕಲೆ ಕರಗತ ಮಾಡಿಕೊಳ್ಳಬೇಕೆಂಬ ಮಹದಾಶೆಯಿಂದ ಇಳಕಲ್ಲಿನಲ್ಲಿಯೇ ಉಳಿದು ಆಗಿನ ಕಾಲದ ಪ್ರಸಿದ್ಧ ಪೇಂಟರುಗಳಾದ ತುಕಾರಾಮ ಚಿಲ್ಲಾಳ ಮತ್ತು ಖೇಮರಾಜ ಕೆಂಧೂಳಿ ಇವರಲ್ಲಿ ಸೇವೆಗೈಯಲು ಪ್ರಾರಂಭಿಸಿದರು. ಹೀಗೆ ಇಬ್ಬರು ಗುರುಗಳ ಮಾರ್ಗದರ್ಶನ ಇವರಿಗೆ ದೊರೆಯಿತು. ಆ ದೊರೆತ ಮಾರ್ಗದರ್ಶನಕ್ಕೂ ಮತ್ತು ತಮ್ಮ ಕಲೆಯನ್ನು ಕಲಿಯಬೇಕೆಂಬ ಮಹಾನ್ ಆಸೆಗೂ ಸಂಯೋಜನೆಗೊಂಡು ಇವರು ಒಳ್ಳೆಯ ರೀತಿಯಲ್ಲಿ ಚಿತ್ರಕಲೆಯನ್ನು ಕರಗತ ಮಾಡಿಕೊಂಡರು.

ಆ ನಂತರ ಛಲ ಬಿಡದೆ ಎಸ್.ಎನ್. ಸನ್ನೂರರು ಪೂರ್ಣಪ್ರಮಾಣದ ಅನುಭವದೊಂದಿಗೆ ಸ್ವಂತ ವೃತ್ತಿಯನ್ನು ತಮ್ಮ ಇಪ್ಪತ್ತೊಂದನೆಯ ವಯಸ್ಸಿನಲ್ಲಿಯೇ ಪ್ರಾರಂಭಿಸಿದರು. ಸೇವೆಯಲ್ಲಿ ಸದಾಶ್ರದ್ಧೆಯುಳ್ಳ ವರು ನೋಡಿದ ಚಿತ್ರಗಳನ್ನು ತದ್ರೂಪದಂತೆ ಕುಂಚದಿಂದ ಬಿಡಿಸುವ ಕುಶಲ ಕಲಾವಿದರಾಗಿದ್ದರು. ಕಲೆಗೆ ಹೆಸರಾದ ಇಳಕಲ್ಲ ನಗರದಲ್ಲಿ ಅಂದು ಸಸಿಯಾಗಿ ಬಂದ ಕಿರಿಯ ಕಲಾವಿದ ಇಂದು ಹೆಮ್ಮರವಾಗಿ ಬೆಳೆದು ನಿಂತ, ಎಸ್.ಎನಂ. ಸನ್ನೂರ ಇವರು ಸರಳ ಹಾಗೂ ಸಾದಾ ಜೀವಿಯಾಗಿದ್ದಾರೆ. ಇವರು ಸದಾ ಜನರೊಂದಿಗೆ ಬೆರೆತು ಜನತೆಯ ನಿಕಟ ಸಂಬಂಧಹೊಂದಿದ ಜನಪ್ರಿಯ ಕಲಾವಿದ ರಾಗಿದ್ದಾರೆ. ತಮ್ಮ ಬದುಕಿನೂದ್ದಕ್ಕು ಕುಂಚದೊಂದಿಗೆ ಸೆಣಸಾಡಿದ ಕಲಾವಿದನಿಗೆ ಯಾವ ಸರ್ಕಾರದ ಮಟ್ಟದಲ್ಲಿ ಪ್ರಶಸ್ತಿ ಗಿಟ್ಟಿಸಿಕೊಳ್ಳುವ ಹಂಬಲವಿಲ್ಲದೇ, ಪ್ರಚಾರದಿಂದ ದೂರವಿದ್ದು ಕಲೆಯ ಸೇವೆಯನ್ನು ಜೀವನದ ಮುಖ್ಯ ಕಾಯಕವೆಂದು ಅರಿತುಕೊಂಡು ಕಲಾಸೇವೆಗೈಯುತ್ತಿದ್ದಾರೆ.

ಕೌದಿ ಒಂದು ಸಂಪ್ರದಾಯಕ ಕಲೆ ಜನಪದ ಚಿತ್ತಾರ







ಇಲಕಲ್ಲಸೀರೆ ಮೇಲಿನ ಕಸೂತಿ ಚಿತ್ರಗಳು



ಕರಿಚಂದ್ರಕಾಳಿ ಸೀರೆಮೇಲೆ ಜಾನಪದ ಚಿತ್ತಾರ



ಗುಳೇದಗುಡ್ಡದ
ಕುಬಸದ ಖಣ ಧರಿಸಿದ ಗ್ರಾಮೀಣ ವೃದ್ಧೆ



ಇಲಕಲ್ಲ ಸೀರೆಮೇಲೆ ಸಾಂಪ್ರದಾಯಿಕ
ಚಿತ್ತಾರ ಬದಲು ಆಧುನಿಕ
ತಂತ್ರಜ್ಞಾನದ ನವ್ಯತೆ ಚಿತ್ರ



ಇಲಕಲ್ಲ ಸೀರೆಮೇಲೆ ಅಮೀನಗಡದ ನೇಕಾರ
ಮಲಕಪ್ಪ ಮುಸರಿ ಸ್ವಾತಂತ್ರ್ಯ ಸುವರ್ಣ ದಿನಾಚರಣೆಗಾಗಿ
ಗಾಂಧಿಜೀ ಭಾವಚಿತ್ರ ಸಮೇತ ನೇಯ್ದಚಿತ್ರ



ರಂಗೋಲಿ

ಅಕ್ಕಿಯೊಂದಿಗೆ, ಅಕ್ಕಿಇಲ್ಲದೆ,


ಅಲಂಕಾರ, ಸರಳಗ್ಗೆ , ಭಾವಚಿತ್ರ ಹಾಗೂ ನಿಸರ್ಗ ಚಿತ್ರದಲ್ಲಿ ರಂಗೋಲಿ
















ಮದರಂಗಿ (ಮೆಹಂದಿ)
ಕೈ ಹಾಗೂ ಕಾಲುಗಳ ಮೇಲೆ ಅಲಂಕಾರಿಕ ಚಿತ್ರಗಳು












ಹಚ್ಚೆ ಚಿತ್ರಗಳು



ಮುದುಕಿಯರ ಮುಂಗೈಮೇಲೆ



ಹಚ್ಚೆ ಸಾಮಾಗ್ರಿಗಳು









ಬಟ್ಟೆಯಮೇಲಿನ ಕಸೂತಿ ಚಿತ್ರಗಳು



ಮೇಟಿಬಟ್ಟೆಯಲ್ಲಿ ನಿಸರ್ಗಚಿತ್ರ



ದುಬಟಿ



ಮೂರುಪೈಸೆ ಆಕಾರದಲ್ಲಿ ದಾರದ ಹೆಣಿಕೆ



ಜಿಲ್ಲೆಯ ಗ್ರಾಮೀಣ ಪ್ರದೇಶದ ಕಸೂತಿ ವಿವಿಧ ಮಾದರಿಗಳಲ್ಲಿ



ನಾಟಕ ಪರದೆ ರಚಿಸುತ್ತಿರುವ ಕಲಾವಿದ






ನಾಟಕ ಪರದೆ ರಚಿಸುವ ಪರಿಕರಗಳು



ಜೈಲು ನಾಟಕದ ಪರದೆ



ಅರಮನೆ ದೃಶ್ಯ ನಾಟಕದ ಪರದೆ



ಕಾಕನೂರಿನ ತೊಗಲುಗೊಂಬೆ ಚಿತ್ರಕಲೆ



ಶೂರ್ಪನಕಿ



ರಾವಣ



ಕಾಳಿಕಾದೇವಿ



ಆಕಳು



ಸೀತಾ



ರಾಮ

ಕಾಕನೂರಿನ ತೊಗಲುಗೊಂಬೆ ಚಿತ್ರಕಲೆ


ಲಕ್ಷ್ಮಣ


ಕೃಷ್ಣ


ಅರ್ಜುನ


ಆನೆ


ಗರುಡ ಪಕ್ಷಿ


ರಾಕ್ಷಸ

ಅಧ್ಯಾಯ – ೫

ಭಿತ್ತಿ ಚಿತ್ರಕಲೆ

* ಬಾದಾಮಿ ನಾಡಿನ ಭಿತ್ತಿಚಿತ್ರಗಳು
* ಗುಳೇದ ಗುಡ್ಡದ ಭಿತ್ತಿ ಚಿತ್ರಗಳು
* ಜನಪದ ಭಿತ್ತಿ ಚಿತ್ತಾರಗಳು ಹಾಗೂ ಶಿಲ್ಪಗಳು
* ಮಹಾಲಿಂಗಪುರ ಭಿತ್ತಿ ಚಿತ್ರಗಳು
* ಜಮಖಂಡಿ ಅರಮನೆ ಭಿತ್ತಿಚಿತ್ರಗಳು

೫. ಭಿತ್ತಿ ಚಿತ್ರಕಲೆ

ಬಾದಾಮಿ ನಾಡಿನ ಭಿತ್ತಿಚಿತ್ರಗಳು

ಭಿತ್ತಿ ಚಿತ್ರಗಳು ಬಾದಾಮಿಯ ೩ನೆಯ ಗುಹಾಲಯದಲ್ಲಿ ಕಂಡುಬರುತ್ತವೆ. ಹಿಂದೂ ಧಾರ್ಮಿಕ ಪರವಾಗಿರುವ "ಈ ಚಿತ್ರಗಳು ಶೈಲಿಯಲ್ಲಿ ಅಜಂತಾದಲ್ಲಿಯ ಗುಹಾಲಯಗಳಲ್ಲಿಯ ಬೌದ್ಧಮತದ ವರ್ಣಚಿತ್ರಗಳನ್ನು ಹೋಲುತ್ತವೆ"[೧]. ಆದರೆ, ದುರಾದೃಷ್ಟ ಸಂಗತಿಯೆಂದರೆ ಇವು ಸರಿಯಾಗಿ ಗುರುತಿಸಲಾಗದಷ್ಟು ಹಾಳಾಗಿವೆ. ಇವು ಗುಹಾಲಯದ ಮುಂಭಾಗದ ಬಾಗಿದ ಛತ್ತಿನ (ಕಪೋತ) ಒಳ ಬದಿಯಲಿ ಇವೆ. ಈ ಒಳಬದಿಯ ಛತ್ತಿನ ಮಧ್ಯದಲ್ಲಿ ಶ್ರೀ ನೆಲವರಿ ಶಿಲ್ಪಿಯು ರಚಿಸಿದ ಸುಂದರವಾದ ಕೈಮುಗಿದುಕೊಂಡಿರುವ ಗರುಡನ ಉಬ್ಬುಶಿಲ್ಪವಿದೆ. ಇದರ ಬಲಬದಿಗೆ ಈ ಚಿತ್ರಗಳು ಇವೆ. ಈ ಚಿತ್ರಗಳ ರಚನೆಗೆ ಮೊದಲು ಭಿತ್ತಿಯನ್ನು ತಯಾರಿಸಿಕೊಂಡಿದ್ದಾರೆ. ಅದಕ್ಕಾಗಿ ಮೊದಲು ಉತ್ತಮ ಜಾತಿಯ ಅತಿ ಸಣ್ಣ ಮರಳು ಸಸ್ಯ ಕಾಂಡಗಳ ನಾರು, ಭತ್ತದ ಹೊಟ್ಟು, ಸುಣ್ಣ, ಸರಿಯಾಗಿ ಬೆರೆಸಿ, ಹದವಾದ ಮಿಶ್ರಣ ಮಾಡಿ, ಅದನ್ನು ಒಂದೇ ಪ್ರಕಾರವಾಗಿ ಕೆತ್ತಿ ಸರಿ ಮಾಡಿದ ವಿಧಾನಕ್ಕೆ ಈಗಿನ ಪಾಶ್ಚಿಮಾತ್ಯರು ಟೆಂಪೆರ್ ಎಂದು ಹೆಸರಿಸಿದ್ದಾರೆ. ಹೀಗೆ ಹಚ್ಚಿದ ಲೇಪನದಲ್ಲಿ ಎರಡು ಪದರುಗಳಿರುತ್ತವೆ. ಬಂಡೆಯ ಏರು, ತಗ್ಗುಗಳನ್ನು ಮುಚ್ಚಿ ಒಂದು ಸಮನಾದ ಮೇಲ್ಮೈಯನ್ನು ಸಿದ್ಧಮಾಡಲು ಸ್ವಲ್ಪ ಸಾಧಾರಣವಾದ ಮಿಶ್ರಣವನ್ನು ಬಂಡೆಯ ಮೇಲೆ ಲೇಪಿಸುತ್ತಾರೆ. ಸಮತಟ್ಟಾದ ಈ ಪದರಿನ ಮೇಲೆ ಅತ್ಯುತ್ತಮ ತರಗತಿಯ ಮಿಶ್ರಣವನ್ನು ಒಂದೇ ಪ್ರಕಾರವಾಗಿ ಬಳೆಯುತ್ತಾರೆ ಮತ್ತು ಇದರ ಮೇಲ್ಮೈಯನ್ನು ಹೊಳಪು ಬರುವಷ್ಟು ಸರಿಯಾಗಿ ನಯವಾಗಿ ತಿಕ್ಕುತ್ತಾರೆ. ಅನಂತರ ಸುಣ್ಣದಂತಹ ಬಿಳಿಯಾದ ಲೇಪನಕೊಟ್ಟು ಅದು ಆರಿದ ನಂತರ ರಚನೆ ಮಾಡುತ್ತಾರೆ.

---

೧. ಡಾ. ಯಾದಪ್ಪ ಪರದೇಶಿ, ಉತ್ತರ ಕರ್ನಾಟಕದ ಭಿತ್ತಿಚಿತ್ರ ಕಲೆ, ಅಪ್ರಕಟಿತ ಪಿಎಚ್.ಡಿ. ಮಹಾಪ್ರಬಂಧ, ಕನ್ನಡ ವಿಶ್ವವಿದ್ಯಾಲಯ, ಹಂಪಿ

ಹಲವಾರು ಬಣ್ಣಗಳನ್ನು ಚಿತ್ರಗಳ ವಿನ್ಯಾಸದಲ್ಲಿ ಬಳಸಲಾಗಿದೆ. ಸಾಮಾನ್ಯವಾಗಿ ಸೀಸದ ಕ್ರೋಮೆಟ್ ಮುಂತಾದ ಖನಿಜಗಳಿಂದ ಹಳದಿ, ಕೆಂಪು, ನೀಲಿ, ಬಿಳಿ, ಹಸಿರು ಮುಂತಾದ ಬಣ್ಣಗಳನ್ನು ತಯಾರಿಸಲಾಗಿದೆಯೆಂದು ತಜ್ಞರ ಅಭಿಪ್ರಾಯ, ಕಪ್ಪುಬಣ್ಣ ಬಹುಮಟ್ಟಿಗೆ ಕಾಡಿಗೆಯಿಂದ ಆದದ್ದು, ಇದರಲ್ಲಿ ಒಂದು ಮುಖ್ಯಾಂಶವೆಂದರೆ ನೀಲಿ ಬಣ್ಣವನ್ನು ಲಾಪೀಜ್ ಲಾಜೂಲಿ ಎಂಬ ನೀಲಿ ಹರಳಿನಿಂದ ಮಾಡಲಾಗಿದೆ. ಇದು ಸಾಮಾನ್ಯವಾಗಿ ಆಫಘಾನಿಸ್ಥಾನ, ಹತ್ತಿರ ಇರಾನ, ಮಧ್ಯ ಏಷ್ಯಗಳಲ್ಲಿ ಸಿಗುತ್ತದೆ. ಆದ್ದರಿಂದ ಇದನ್ನು ಆ ಪ್ರದೇಶದಿಂದ ಆಮದು ಮಾಡಿಕೊಂಡಿದ್ದರಬೇಕು. ಖನಿಜಗಳಿಂದ ಸಿದ್ಧಮಾಡಿದ ಬಣ್ಣಗಳಿಗೆ ಸಾದಾ ಅಂಟು ಮತ್ತು ಮರವ್ರಜವೆಂಬ ಅಂಟನ್ನು ಬೇಕಾದ ಪ್ರಮಾಣಗಳಲ್ಲಿ ಸೇರಿಸ ಲಾಗುತ್ತದೆ. ಚಿತ್ರಗಳನ್ನು ಅವುಗಳಲ್ಲಿಯ ದೃಶ್ಯಗಳ ಪ್ರಕಾರ ಅನುಕ್ರಮವಾಗಿ ಮೂರು ಭಾಗಗಳಾಗಿ ಮಾಡಬಹುದು.

ಮೊದಲನೆಯ ಭಾಗದಲ್ಲಿ ಅರಮನೆಯ ನೃತ್ಯಶಾಲೆಯನ್ನು ತೋರಿಸಲಾಗಿದೆ. ಇಲ್ಲಿ ಒಬ್ಬ ಮಹಾರಾಜನು ಮತ್ತು ಅವನ ರಾಣಿ ತಮ್ಮ ಸೇವಕ ಸೇವಕಿಯರೊಡನೆ ಪ್ರತ್ಯೇಕ ಆಸನಗಳಲ್ಲಿ ಕುಳಿತಿದ್ದಾರೆ. ಮುಂದೆ ಒಂದು ನೃತ್ಯ ಕಾರ್ಯಕ್ರಮ ನಡೆಯುತ್ತಿದೆ. ಸುತ್ತಲೂ ಕೊಳಲು, ಮೃದಂಗ ಮುಂತಾದ ವಿವಿಧ ವಾದ್ಯಗಳನ್ನು ನುಡಿಸುತ್ತಿರುವ ವಾದ್ಯಕಾರರಿದ್ದಾರೆ. ನೃತ್ಯದಲ್ಲಿ ರಾಜನು ಪೂರ್ಣ ತನ್ಮಯನಾಗಿದ್ದಾನೆ. ಹೆಜ್ಜೆ ಕುಣಿತಕ್ಕೆ ತಕ್ಕಂತೆ ತಾಳ ಹಾಕುತ್ತಿದ್ದಾನೋ ಎನ್ನುವ ಹಾಗೆ ಕೈಯನ್ನು ಮಾಡಿದ್ದಾನೆ. ಈ ಜನರ ಹಿಂಬದಿಯಲ್ಲಿ ಮರೆ ಮಾಡುವ ಪರದೆಯ ಚೌಕಟ್ಟಿನಲ್ಲಿ ಪರದೆ ಬಟ್ಟೆಯನ್ನು ಅಳವಡಿಸಲು ಮೇಲ್ಭಾಗದಲ್ಲಿ ಬಟ್ಟೆ ಭದ್ರವಾಗಿ ಅವುಚಿ ಹಿಡಿಯುವ ಸಣ್ಣ ಉಪಕರಣಗಳನ್ನು ಉಪಯೋಗಿಸಲಾಗಿದೆ ಇದು ಗಮನಾರ್ಹ. ಪರದೆ ಹಿಂಬದಿಯಿಂದ ಮತ್ತೇ ಕೆಲವು ಅರಮನೆ ಜನರು ಆಸಕ್ತಿಯಿಂದ ಇಣಕಿ ನೋಡುತ್ತಿದ್ದಾರೆ. ಮತ್ತೆ ಕೆಲವರು ನೃತ್ಯ ಶಾಲೆಯ ಹಿಂಬದಿಯಲ್ಲಿರುವ ಮಹಡಿಯ ಅಟ್ಟಣಿಗೆಯಲ್ಲಿ ಕುಳಿತು ಕಣ್ಣಗಲಿಸಿ ನೋಡುತ್ತ ತಮ್ಮ ಕೈಗಳ ಚಲನೆಯಿಂದ ಮೆಚ್ಚುಗೆಯನ್ನು ವ್ಯಕ್ತಪಡಿಸುತ್ತಿದ್ದಾರೆ.

ಮಧ್ಯದ ಪಟ್ಟಿಕೆಯಲ್ಲಿ ಒಂದು ರಾಜಸಭೆಯನ್ನು ಚಿತ್ರಸಲಾಗಿದೆ. ಮಹಾರಾಜನು ಸಿಂಹಾಸನದ ಮೇಲೆ ಸುಖವಾಗಿ ಕುಳಿತ್ತಿದ್ದಾನೆ. ಬದಿಯಲ್ಲಿ ಒಂದು ಪ್ರತ್ಯೇಕ ಆಸನದ ಮೇಲೆ ಮಹಾರಾಣಿಯು ಕುಳಿತ್ತಿದ್ದಾಳೆ. ಚಾಮರ ಸೇವಕಿಯರು ಹಾಗೂ ಇತರ ಸೇವಕಿಯರು ತಮ್ಮ ತಮ್ಮ ಕಾರ್ಯಗಳಲ್ಲಿ ನಿರತರಾಗಿದ್ದಾರೆ. ಮುಂಭಾಗದ ಸಭಾ ಶಾಲೆಯಲ್ಲಿ ಹಲವರು ಸಭಾಸದರು ಕುಳಿತ್ತಿದ್ದಾರೆ. ಮಹಾರಾಜನು ವಿಚಾರಮಗ್ನನಾಗಿ ಕುಳಿತ್ತಿದ್ದಾನೆ. ಮಹಾರಾಣಿಯು ಕುಳಿತ ಭಂಗಿ ಮನೋಹರವಾಗಿದೆ.

ಮೂರನೆಯ ಪಟ್ಟಿಕೆಯಲ್ಲಿ ಆಕರ್ಷಕ ಮೈಕಟ್ಟಿನ ಧೃಡಕಾಯದ ಒಬ್ಬ ರಾಜಪುರಷ ಗದೆಯನ್ನು ಹಿಡಿದು ನಿಂತಿದ್ದಾನೆ. ಆಕಾಶದಲ್ಲಿ ಅಪ್ಸರೆಯರು ಇವನ ಸೌಂದರ್ಯವನ್ನು ನೋಡಿ ಪರಸ್ಪರ ಮಾತನಾಡಿಕೊಳ್ಳುತ್ತಿರುವ ಹಾಗೆ ಕಾಣುತ್ತದೆ. ಮೊದಲನೆ ಪಟ್ಟಿಕೆಯ ಚಿತ್ರವನ್ನು ಹೆಸರಾಂತ ಕಲಾತಜ್ಞರಾದ ಡಾ. ಶಿವರಾಮ ಮೂರ್ತಿಯವರು ಅದು ಇಂದ್ರಸಭೆಯನ್ನು ಪ್ರತಿನಿಧಿಸುತ್ತದೆಂದು ಊಹಿಸಿದ್ದಾರೆ. ಎರಡನೆ ಪಟ್ಟಿಕೆಯ ಒಂದನೆಯ ಕೀರ್ತಿವರ್ಮನ ರಾಜಸಭೆ ಇರಬಹುದೆಂದು ತರ್ಕಿಸಿದ್ದಾರೆ.

ಈ ಚಿತ್ರಗಳಲ್ಲಿ ಮೊದಲನೇ ಪಟ್ಟಿಕೆಯಲ್ಲಿ ಪ್ರೌಢಿಮೆ ಮನರಂಜನೆ, ಅದರಲ್ಲಿ ತಲ್ಲೀನತೆ, ಮೆಚ್ಚುಗೆಯ ಭಾವವೊಂದಾದರೆ, ಎರಡನೆ ಪಟ್ಟಿಕೆಯಲ್ಲಿ ಅಷ್ಟೇ ಗಾಂಭೀರ್ಯ, ಘನತೆಯ ಭಾವ ತುಂಬಿದೆ. ಮೂರನ ಚಿತ್ರದಲ್ಲಿ ಆಯುಧ ಪಾಣಿಯಾದ ರಾಜಪುರುಷನ ವೀರ ರಸಭಾವ ಹೀಗೆ ವಿವಿಧ ರಸಗಳ ನಿರೂಪಣೆ ತುಂಬ ಸುಲಲಿತವಾಗಿದೆ. ಆಯಾ ವ್ಯಕ್ತಿಗಳಿಗೆ ತಕ್ಕಂತೆ ಅಂಗ ಸೌಷ್ಠವತೆ ಅಷ್ಟು ನೈಜವಾಗಿಲ್ಲ. ದೇಹದಾರ್ಡತೆ ಮೂಡಿಸುವುದಕ್ಕಿಂತ ಭಾವಪೋಷಕವಾದಿ ಲಾಲಿತ್ಯಕ್ಕೆ ಪ್ರಾಧಾನ್ಯ ಇಲ್ಲಿದೆ. ಆದರೂ ಮೈಮಾಟದಲ್ಲಿ ನೀಳತೆ ಪ್ರಮಾಣಬದ್ಧತೆ ಸಮತೋಲನದಲ್ಲಿದೆ. ಸ್ತ್ರೀ ಸಹಜ ಸೌಂದರ್ಯವನ್ನು ರೂಪಿಸುವುದರಲ್ಲಿ ಏನೂ ಸಂಕೋಚವಿಲ್ಲ. ವಿವಿಧ ವ್ಯಕ್ತಿಗಳ ಸ್ಥಾನಮಾನ ಪಂಗಡ ಗಳಿಗೆ ತಕ್ಕಂತೆ, ಬೇರೆ ಬೇರೆ ಬಣ್ಣಗಳನ್ನು ಬಳಸಲಾಗಿದೆ. ರಾಜರಾಣಿಯರಿಗೆ ಮನೋಹರವಾದ ನಸುಗೆಂಪು ಬಣ್ಣ, ಅರಮನೆಯ ಬೇರೆ ಬೇರೆ ವರ್ಗ ಸ್ತ್ರೀಯರಿಗೆ ಹಸಿರು ಇಲ್ಲವೇ ಕಪ್ಪುಬಣ್ಣಗಳನ್ನು ಬಳಸಲಾಗಿದೆ. ಚಿತ್ರಸೂತ್ರ ನಿಯಮಗಳಿಂದ ಈ ಚಿತ್ರಗಳನ್ನು ನೋಡಿದಾಗ ಇಲ್ಲಿ ರಾಜಸಭೆಯ ದೃಶ್ಯದಲ್ಲಿ ಸಭೆಯನ್ನು ಮುಂದೆ ನಿಂತು ನೋಡಿದಾಗ ದೂರದಲ್ಲಿ ಸಿಂಹಾಸನರೂಢನಾದ ರಾಜನು ಮತ್ತೊಂದು ತುದಿಯಲ್ಲಿರುವ ರಾಜನು ಅಸ್ಪಷ್ಟವಾಗಿ ಕಾಣಬೇಕು. ಆದರೆ, ಭಾರತೀಯ ಕಲಾವಿನ್ಯಾಸದಲ್ಲಿ ಈ ರೀತಿ ನೈಜತೆಗೆ ಶರಣು ಹೋಗುವುದಿಲ್ಲ. ಇಲ್ಲಿ ವ್ಯಕ್ತಿಗಳ ಘನತೆ ಪ್ರಧಾನ, ರಾಜ ಸಭೆಯಲಿ ರಾಜನೇ ಅತೀ ಮುಖ್ಯನಾದವನು. ಉಳಿದವರೆಲ್ಲರೂ ಅವರವರ ಸ್ಥಾನಗಳಿಗೆ ತಕ್ಕಂತೆ ಇರಬೇಕು. ಈ ತತ್ವದ ಆಧಾರದ ಮೇಲೆ ಇಂಥ ದೃಶ್ಯದಲ್ಲಿ ಇತರ ವ್ಯಕ್ತಿಗಳಿಗಿಂತ ರಾಜನನ್ನು ಸ್ಪಷ್ಟವಾಗಿ ದೊಡ್ಡವಾಗಿ ತೋರಿಸುತ್ತಾರೆ. ನೃತ್ಯ ದೃಶ್ಯದಲ್ಲಿ ನೃತ್ಯಗಾತಿಯ ಹಿಂಭಾಗ ಹಾಗೂ ಮುಂಭಾಗ ನೃತ್ಯ ಭಂಗಿಗಳನ್ನು ಒಂದರ ಪಕ್ಕದಲ್ಲೊಂದು ತೋರಿಸಲಾಗಿದೆ. ಈ ಒಂದು ಅನುಕ್ರಮ ರೂಪಣ ತಂತ್ರ ನಿಜವಾಗಿಯೂ ಪ್ರಶಂಸನೀಯ. ಅರಳಿದ ಕಣ್ಣು ಕೈಗಳ ಮುದ್ರೆಗಳಿಂದ ಮನಸ್ಸಿನ ಭಾವನೆಗಳನ್ನು ತೋರಿಸುವುದು ತುಂಬ ಸಹಜವಾಗಿದೆ. ಹೀಗೆ ೬-೭ನೇಯ ಶತಮಾನದ ಶ್ರೇಷ್ಠ ವರ್ಣಚಿತ್ರ ಕಲೆಯ ತಂತ್ರ, ಕುಶಲತೆ, ನಿರೂಪಣೆಯ ಶೈಲಿ ಪ್ರತಿಭೆಯನ್ನು ಈ ಚಿತ್ರಗಳಲ್ಲಿ ಕಾಣಬಹುದು.

ಈ ರೀತಿ ವೀಕ್ಷಕರಿಗೆ ಮೇಧಾವಿಗಳಿಗೆ ವಿವಿಧ ರಸದೌತನ ಮೂಡಿಸುವ ಶ್ರೀ ಸಾಮಾನ್ಯನ ಹಾಗೂ ಪ್ರೌಢ ಕಲಾಭಿಜ್ಞರನ್ನು ಆಕರ್ಷಿಸುವ ವರ್ಣ ಚಿತ್ರಗಳು ಇರುವ ಅಪರೂಪದ ಸ್ಥಳ ಬಾದಾಮಿ. ಕೇವಲ ವಾಸ್ತು ಹಾಗೂ ಶಿಲ್ಪಕಲೆಯ ಬಿಚ್ಚು ಮನಸ್ಸಿನ ಆವಿಷ್ಕಾರಕ್ಕೆ ಮಾತ್ರವಲ್ಲದೇ ವರ್ಣಚಿತ್ರಕಲೆಯ ವಿಶಿಷ್ಟ ವೈವಿದ್ಯಕ್ಕೂ ಅಷ್ಟೇ ಮಹತ್ವದ್ದಾಗಿವೆ. ನಿಜವಾಗಿಯೂ ಹೇಳುವುದಾದರೆ ಬಾದಾಮಿ ಕಲಾ ರಸಿಕರಿಗೆ ರಸದೌತಣ ನೀಡುವ ತಾಣ, ಇಂಥ ಒಂದು ಕಲಾಕೇಂದ್ರ ದಕ್ಷಿಣ ಭಾರತದಲ್ಲಿ ಮತ್ತೊಂದೆಡೆ ಯಿಲ್ಲವೆಂದರೆ ಅತಿಶಯೋಕ್ತಿಯಾಗಲಾರದು. ವರ್ಣಚಿತ್ರ ಕಲಾ ಪ್ರೇಮಿಗಳಿಗೆ ಬಾದಾಮಿ ಸ್ಫೂರ್ತಿದಾಯಕ ಪವಿತ್ರ ಯಾತ್ರಾಸ್ಥಳ. ಬಾದಾಮಿಯಲ್ಲಿರುವ ಪ್ರತಿಯೊಂದು ಸ್ಥಳಗಳು ನಿಜವಾಗಿಯೂ ನೋಡಲು ತುಂಬಾ ಅಂದವಾಗಿವೆ, ರಮಣೀಯವಾಗಿದೆ.

ಈ ಪ್ರಾಗೈತಿಹಾಸಿಕ ಭಿತ್ತಿ ಚಿತ್ರಗಳು ಉತ್ತಮ ಕಲಾಕಾರನಿಂದ ರಚನೆಗೊಂಡ ಕಲಾಕೃತಿಗಳಲ್ಲಿ ಆದಿಮಾನವರು ತಮ್ಮ ಜೀವನದಲ್ಲಿ ಅಳವಡಿಸಿಕೊಂಡ ನಂಬಿಕೆ ಮತ್ತು ಆಚರಣೆಯ ಉದ್ದೇಶದಿಂದಲೇ ತೆಗೆದ ಚಿತ್ರಗಳಾಗಿವೆ. ಇವೆಲ್ಲಾ ಸಾಮಾನ್ಯವಾಗಿ ಕೆಮ್ಮಣ್ಣಿನಿಂದ ರಚಿಸಲ್ಪಟ್ಟ ಕಲಾಕೃತಿಗಳಾಗಿವೆ. ಕೆಲವು ಬಿಳಿಯ ಬಣ್ಣದಲ್ಲಿವೆ, ಜನಸಾಮಾನ್ಯರು ನೇರವಾಗಿ ಬಂಡೆಗಳ ಮೇಲೆ ಈ ಬಣ್ಣಗಳಿಂದ ಬಿಡಿಸಿದ್ದಾರೆ. ಅದರಲ್ಲಿ ಅನೇಕ ರೀತಿಯ ಚಿತ್ರಗಳಿವೆ. ಅವುಗಳಲ್ಲಿ ಸಾಮಾನ್ಯವಾಗಿ ಪ್ರಾಣಿಗಳು, ಮನುಷ್ಯರ ಹಾಗೂ ವಿವಿಧ ರೇಕಾ ಚಿತ್ರಗಳಿವೆ. ಈ ಚಿತ್ರಗಳು ಪ್ರಮಾಣಬದ್ಧವಾಗಿಯೂ ಇವೆ. ತೀರ ಸರಳವಾಗಿಯೂ, ಅಸ್ಪಷ್ಟವಾಗಿದ್ದರೂ, ಅರ್ಥಗರ್ಭಿತವಾಗಿಯೂ, ಸಹಜವಾಗಿಯೂ ಇವೆ. ಕೇವಲ ಧಾರ್ಮಿಕ ಕಟ್ಟಳೆಗನು ಸಾರವಾಗಿ ಮಾಡಿದ್ದಾಗಿದ್ದರೂ ಅವುಗಳಲ್ಲಿ ಮೆಚ್ಚಿಕೊಳ್ಳುವಂಥ ಕಲಾವಂತಿಕೆಯೂ ಇದೆ. ಈ ಎಲ್ಲ ಚಿತ್ರಗಳನ್ನು ತಮ್ಮ ಆತ್ಮಸಂತೋಷಕ್ಕಾಗಿ ಪ್ರಾಚೀನರು ರಚಿಸಿದ್ದಾರೆ.

ಕಲಾಕೃತಿಗಳನ್ನು ನಿರ್ಮಿಸುವಲ್ಲಿ ಪ್ರಾಚೀನ ಕಾಲದ ಜನಸಾಮಾನ್ಯರು ಬಳಸುವ ಬಣ್ಣಗಳು ವಿಶೇಷವಾಗಿವೆ. ಕೆಮ್ಮಣ್ಣಿನ ಪುಡಿ ತಯಾರಿಸಲು ಪ್ರಾಣಿಗಳ ರಕ್ತ, ಪಕ್ಷಿಗಳ ಮೊಟ್ಟೆಯ ಬಿಳಿಯ ತಿರುಳು ಹಾಗೂ ಎಲುಬಿನ ಪುಡಿ ಇವುಗಳನ್ನು ಹದವಾಗಿ ಕಲಿಸಿ ತಮ್ಮ ಕಲಾಕೃತಿಗಳಿಗೆ ಬಳಸುತ್ತಿದ್ದ ರೆಂದು ಇತಿಹಾಸ ತಜ್ಞರು ತಿಳಿಸಿದ್ದಾರೆ. ಈ ಎಲ್ಲಾ ಚಿತ್ರಗಳು ಪ್ರಾಚೀನ ಕಾಲದಿಂದಲೂ ಇಂದಿಗೂ ಮಸುಕು ಮಸುಕಾಗಿ ಕಂಡುಬರುತ್ತವೆ. ಬಿಸಿಲು, ಗಾಳಿ, ಮಳೆ ಮುಂತಾದ ಪ್ರಕೃತಿಯ ಆಪತ್ತುಗಳಿಗೆ ಮೈಯೊಡ್ಡಿ ನಿಂತಿರುವ ಜನಸಾಮಾನ್ಯರ ವರ್ಣ ಚಿತ್ರ ಕಲಾಕೃತಿಗಳು ಇವತ್ತಿಗೂ ಪ್ರಾಚೀನ ಕಾಲದ ಬದುಕಿನ ವೈಶಿಷ್ಟ್ಯತೆಯನ್ನು ತಿಳಿಸಿಕೊಡುತ್ತಿವೆ.

ಬಾದಾಮಿ ಪ್ರದೇಶದ ಜನಪದರು ಹಲವಾರು ರೀತಿಯ ಭಿತ್ತಿ ಚಿತ್ರಗಳನ್ನು ರಚಿಸುತ್ತ ಬಂದಿದ್ದಾರೆ. ರಂಗವಲ್ಲಿಯ ನಾನಾ ನಮೂನೆಯ ಚಿತ್ತರಗಳು ಸಹೃದಯಿಗಳ ಮನಸ್ಸನ್ನು ಆಕರ್ಷಿಸುತ್ತವೆ. ಹಾಗೆ ಇಲ್ಲಿಯ ಜನರು ಮದರಂಗಿಯನ್ನು ಹಚ್ಚಿಕೊಳ್ಳುತ್ತಾರೆ. ವಿಶೇಷವಾದ ಹಬ್ಬ ಹರಿದಿನಗಳಲ್ಲಿ ಹಾಗೂ ಸಭೆ ಸಮಾರಂಭಗಳಲ್ಲಿ ಈ ಮದರಿಂಗಿಯ ವಿಶೇಷತೆ ಎದ್ದುಕಾಣುತ್ತದೆ. ಈ ಮದರಂಗಿ ಬಳಸುವುದರಲ್ಲಿ ಅನೇಕ ರೀತಿಯ ಸಲಕರಣೆಗಳಿವೆ ಹಾಗೂ ಅದನ್ನು ನುರಿತ ಮದರಂಗಿ ಹಚ್ಚುವ ವ್ಯಕ್ತಿಗಳಿಂದ ಲೇಪಿಸಿಕೊಳ್ಳಬಹುದು. ಈ ಬಾದಾಮಿ ನಗರದ ಸುತ್ತ ಮುತ್ತಲಿನ ಪ್ರದೇಶದಲ್ಲಿ ಇನ್ನೊಂದು ವಿಶೆಷತೆ ಯೆಂದರೆ ಕೌದಿ ಹೊಲೆಯುವುದು, ಇಲ್ಲಿಯ ಕೌದಿಗಳು ಬೇರೆ ಪಟ್ಟಣಗಳಿಗೆ ಹಾಗೂ ಹೊರ ರಾಜ್ಯಗಳಿಗೆ ಮಾರಾಟ ಮಾಡುತ್ತಾರೆ. ಇವುಗಳನ್ನು ಉತ್ತರ ಕರ್ನಾಟಕದ ರಗ್ಗುಗಳೆಂದೇ ಕರೆಯುತ್ತಾರೆ. ಬಣ್ಣ ಬಣ್ಣದ ಅರಿವೆ ತುಂಡುಗಳನ್ನು ಹಚ್ಚಿ ಹಳೆಯ ಹೊಸದು ಎನ್ನದೇ ಅವುಗಳನ್ನು ಬಳಸುವುದರ ಮೂಲಕವಾಗಿ ಕೌದಿಯನ್ನು ನಿರ್ಮಿಸುತ್ತಾರೆ. ಹೊರನಾಡಿನಲ್ಲಿ ಅವುಗಳಿಗೆ ಅಪಾರವಾದ ಬೇಡಿಕೆ ಇದೆ ಎನ್ನಬಹುದು.

ಶಿಷ್ಟಪದ ಭಿತ್ತಿ ಚಿತ್ರಕಲೆ ಚಾಲುಕ್ಯರ ಆಳ್ವಿಕೆಯಲ್ಲಿ ಕಂಡುಬರುವುದು. ಈ ಶಿಷ್ಟಪದ ಭಿತ್ತಿ ಚಿತ್ರಕಲೆ ಚಾಲುಕ್ಯರು ನಿರ್ಮಿಸಿದ ವಾಸ್ತು ಶಿಲ್ಪಗಳು ಅರಳಿ ನಿಂತಿದೆ. ಪ್ರೌಢನಾದ ಕಲಾಕಾರ ತನ್ನ ಪರಿಸರದ ಎಲ್ಲಾ ಆಯಾಮಗಳನ್ನು ಅರಗಿಸಿಕೊಂಡು ಅಂದಿನ ಕಾಲದ ವೈಶಿಷ್ಟತೆಗಳನ್ನು ವರ್ಣ ಚಿತ್ರಕಲೆಯಲ್ಲಿ ಎತ್ತಿತೋರಿಸಿದ್ದಾನೆ. ಈ ಕಾಲದಲ್ಲಿ ಚಿತ್ರಕಲೆಯ ಒಂದು ಪರಂಪರೆಯೇ ಬೆಳೆದು ಬಂದಿತು. ಬಾದಾಮಿ ಚಾಲುಕ್ಯರು ನಿರ್ಮಿಸಿದ ಗುಹಾಂತರ ದೇವಾಲಯಗಳಲ್ಲಿ ಸ್ತ್ರೀ ಪುರುಷ ಚಿತ್ರಗಳನ್ನು ಬಿಡಿಸಿದ್ದಾರೆ. ಅಂದಿನ ಕಾಲದ ಉಡುಗೆ, ತೊಡುಗೆ, ನಯ, ನಾಜೂಕು, ಆಭರಣ, ಅಲಂಕಾರ ಮುಂತಾದವುಗಳನ್ನು ವರ್ಣ ಚಿತ್ರಕಲೆಯಲ್ಲಿ ಎದ್ದು ಕಾಣುತ್ತವೆ. ಸಂಪ್ರದಾಯ ಬದ್ಧವಾದ ಕಲಾಕೃತಿಗಳು ಕಲಾಸಕ್ತರ ಮನಸ್ಸನ್ನು ಸೆರೆಹಿಡಿಯುತ್ತವೆ.

ಗುಳೇದ ಗುಡ್ಡದ ಭಿತ್ತಿ ಚಿತ್ರಗಳು

ಕರ್ನಾಟಕದ ಉತ್ತರ ಭಾಗದಲ್ಲಿರುವ ಬಾದಾಮಿ ತಾಲ್ಲೂಕಿನ ಗುಳೇದಗುಡ್ಡದಲ್ಲಿ ಹಂಪೆ, ಮೈಸೂರಿನ ಮೇಲ್ಮಹಡಿಯ, ನರಗುಂದದ ವಾಡೆದ ಮೇಲ್ಮಹಡಿಯ ಚಿತ್ರಕೃತಿಗಳನ್ನೇ ಹೋಲುವ ಗೋಡೆಯ ಮೇಲಿನ ಚಿತ್ರಗಳು ನಗರದ ಮಧ್ಯದಲ್ಲಿರುವ ಶ್ರೀ ಶೇಖರಪ್ಪಾ, ಶಂಕ್ರಪ್ಪಾ, ಹೊಸಮನಿಗೌಡ್ರ ಎಂಬವರ ಮನೆಯ ಮೆಲ್ಮಹಡಿಯ ಗೋಡೆಗಳ ಮೇಲೆ ಕಾಣಸಿಗುತ್ತವೆ. ಇವರ ಅಜ್ಜ ನಾಗಣ್ಣಪ್ಪಾ ಅವರ ಹೇಳಿಕೆಯ ಪ್ರಕಾರ ಎರಡು ಶತಮಾನದಷ್ಟು ಹಳೆಯ ಚಿತ್ರಗಳು ಇವಾಗಿವೆ. ಆದರೆ ಸದ್ಯ

ಒಂದು ಗೋಡೆಯ ಮೇಲಿನ ಅಲ್ಪ ಸ್ವಲ್ಪ ಕಾಣುವ ಚಿತ್ರಗಳನ್ನು ಮಾತ್ರ ನೋಡಬಹುದು. ಉಳಿದ ಮೂರು ಗೋಡೆಗಳ ಮೇಲಿನ ಚಿತ್ರಗಳನ್ನು ಮದುವೆಯ ಸಮಾರಂಭದಲ್ಲಿ ಗೋಡೆಯ ಗಚ್ಚನ್ನು ಕೆತ್ತಿ ತೆಗೆದು ಸುಣ್ಣ ಸಾರಿಸಲಾಗಿದೆ. ಸದ್ಯ ಕಾಣುತ್ತಿರುವ ಚಿತ್ರಕೃತಿಗಳು ಎಂದು ಮಾಯವಾಗುತ್ತಿವೆಯೋ ಗೊತ್ತಿಲ್ಲ. ಹದಿನಾಲ್ಕು ವರ್ಷಗಳ ಹಿಂದೆಯೇ ಪೋಸ್ಟರ್ ಬಣ್ಣಗಳಿಂದ ಮರುಪ್ರತಿ ಮಾಡಿಕೊಂಡಿದ್ದಾರೆ.

ಚಿತ್ರಗಳು ಧಾರ್ಮಿಕ ಗ್ರಂಥಗಳ ತಳಹದಿಯ ಮೇಲೆ ರಚಿಸಲ್ಪಟ್ಟಿವೆ. ಮಯೂರರೂಢಳಾದ ವೀಣಾಧಾರಿ ಸರಸ್ವತಿ ಗುಡಿಯಲ್ಲಿ ಪ್ರತಿಷ್ಠಿತ ಆಂಜನೇಯ: ರಾಕ್ಷಸರ ಸಂಹಾರ ಮಾಡುವ ದೇವಿ; ರಾಕ್ಷಸನನ್ನು ವಧೆ ಮಾಡುತ್ತಿರುವ ಹನುಮಂತ ಶ್ರೀಕೃಷ್ಣಲೀಲೆಯ ಚಿತ್ರಗಳು, ಶೇಷಶಯನ ವಿಷ್ಣು ಹಾಗೂ ಲಕ್ಷ್ಮಿ ಗಣಪತಿ ನಾಗಗಳನ್ನು ಹಿಡಿದಿರುವ ಗರುಡ ಇವುಗಳಲ್ಲಿ ಕೆಲವು ಚಿತ್ರಗಳನ್ನು ಇಂದು ಸಹ ಸ್ಪಷ್ಟವಾಗಿ ನೋಡಬಹುದು. ಪ್ರತಿ ಚಿತ್ರಕ್ಕೂ ಬಾರ್ಡರ್ ಹಾಕಲಾಗಿದೆ. ಸೂಕ್ಷ್ಮ ಕಪ್ಪುವರ್ಣದ ರೇಖೆಯಿಂದ ಹೊರರೇಖೆಗಳನ್ನು ಹಾಕಲಾಗಿದೆ. ಬಾರ್ಡರ್‌ಗಳಲ್ಲಿ ಸುಂದರ ನಕ್ಷೆಗಳನ್ನು ಹಾಕಲಾಗಿದೆ. ಚಿತ್ರದಿಂದ ಚಿತ್ರಕ್ಕೆ ಮಧ್ಯದಲ್ಲಿ ಬರುವ ಸ್ಥಳವನ್ನು ಹೂದಾನಿ ಎಲೆಬಳ್ಳಿ ನಕ್ಷೆಗಳಿಂದ ಮತ್ತು ಆನೆ, ಸವಾರಿ ಮಾಡುವ ಚಿಕ್ಕಗಾತ್ರದ ಚಿಕಣಿ ಚಿತ್ರಗಳನ್ನು ನೋಡುತ್ತಾ ನಿಂತರೆ, ಪ್ರಾಚೀನ ಹಸ್ತಗ್ರಂಥಗಳ ಚಿತ್ರಕೃತಿಗಳನ್ನು ನೋಡಿದಷ್ಟು ಆನಂದವಾಗುತ್ತದೆ.

ಮನೆಯ ಮೇಲ್ಮಹಡಿಯ ಗಾತ್ರ ಅಂದಾಜು ೧೨x೨೨ ಫೂಟುಗಳು. ಅದಕ್ಕೆ ಚಿಕ್ಕ ಚಿಕ್ಕ ಗಾತ್ರದ ಸುಂದರ ಕಿಟಕಿಗಳಿವೆ. ಅವುಗಳಿಂದಲೇ ಪ್ರಕಾಶ ಚಿತ್ರ ಕೃತಿಗಳ ಮೇಲೆ ಬೀಳುವಂತೆ ಇವೆ. ಈ ಕಲಾ ಕೋಣೆಗೆ ಪ್ರವೇಶಿಸಲು ಪಶ್ಚಿಮಕ್ಕೆ ಚಿಕ್ಕದಾದ ಬಾಗಿಲು, ಈ ಬಾಗಿಲಿಗೆ ಬರಬೇಕಾದ ಬಾದಾಮಿಯ ಮೇಣಬಸದಿಗಳ ಮೆಟ್ಟಿಲುಗಳನ್ನು ಹತ್ತುವಂತೆ ದೊಡ್ಡ ದೊಡ್ಡ ಮೆಟ್ಟಿಲುಗಳನ್ನು ಹತ್ತಿ ಒಳಗೆ ಪ್ರವೇಶಿಸಬೇಕು. ಚಿತ್ರರಚನಾತಂತ್ರ ಪುರಾತನದಂತಿದೆ. ಗೋಡೆಗೆ ಬಿಳಿ ನಯವಾದ ಗಾರೆ (ಗಚ್ಚು) ಲೇಪಿಸಿ, ಅದರ ಮೇಲೆ ಕಂದಿ ಬಣ್ಣದಿಂದ ಚಿತ್ರಗಳನ್ನು ರಚಿಸಿಕೊಂಡು, ಒಂದೇ ಆಯಾಮ ಕಾಣುವಂತೆ ಬಣ್ಣ ಹಚ್ಚಿದಂತೆ ಕಾಣುತ್ತದೆ. ಪ್ರತಿ ಆಕೃತಿಗೂ ಬಣ್ಣ ಲೇಪನದ ನಂತರ ಕೆಂಪು ಮಿಶ್ರಿತ ಕಪ್ಪು ಬಣ್ಣದಿಂದ ಹೊರ ರೇಖೆಗಳನ್ನು ಹಾಕಿದ್ದಾರೆ. ಅಲಂಕಾರಿಕ ರೇಖಾವಿನ್ಯಾಸಕ್ಕೆ ಹೆಚ್ಚಿನ ಮಹತ್ವ ಕೊಟ್ಟಿದ್ದಾರೆ. ಪ್ರಮಾಣ ಬದ್ಧತೆಯಲ್ಲಿ ಕೊರತೆ ಕಂಡುಬಂದರೂ ಕಲಾಕೃತಿಯ ಆನಂದ ಅನುಭವಿಸುವಾಗ ಗೊತ್ತಾಗುವುದಿಲ್ಲ. ಪ್ರತಿ ಚಿತ್ರದಲ್ಲಿಯು ಆಭರಣಗಳನ್ನು ಹೇರಳವಾಗಿ ತೊಡಿಸಿದ್ದಾರೆ. ಅವುಗಳಲ್ಲಿ ಸೂಕ್ಷ್ಮವಾದ ನಕ್ಷೆಗಳಿವೆ. ಚಿತ್ರಗಳಲ್ಲಿ ಎದ್ದು ಕಾಣುವ ವಿಶೇಷತೆ ಎಂದರೆ ಪ್ರತಿ ಚಿತ್ರದ ಮಧ್ಯ ಅಲ್ಲಲ್ಲಿ ಹೂವು ಎಲೆಗಳ ಅಲಂಕಾರಿಕ ರೂಪಗಳನ್ನು ಸಂಯೋಜಿಸಲಾಗಿದೆ. ಪ್ರತಿ ಚಿತ್ರಗಳ

ಅಂಚನ್ನು ಕೆಂಪು, ನೀಲಿ ಬಣ್ಣಗಳಿಂದ ಬಾರ್ಡರ್ ಹಾಕಿ ಮಧ್ಯದಲ್ಲಿ ಸೂಕ್ಷ್ಮ ಹೂವು ಎಲೆಗಳ ನಕ್ಷೆಗಳನ್ನು ಹಾಕಿದ್ದಾರೆ. ಆದರೆ ಯಾವ ಚಿತ್ರಕ್ಕೂ ಕಲಾವಿದನ ಹೆಸರಾಗಲಿ ರುಜುವಾಗಲಿ ಕಂಡು ಬರುವುದಿಲ್ಲ. ಅಲೌಕಿಕ ಆಧ್ಯಾತ್ಮವಾದಿ ಚಿತ್ರಕಲಾವಿದನಾಗಿರಬಹುದು ಈ ಚಿತ್ರಗಳು ಮಬ್ಬಾಗಿರುವುದನ್ನು ಕಂಡರೆ ಚಿತ್ರಗಳ ರಕ್ಷಣೆಗಾಗಿ ಅವುಗಳ ಮೇಲೆ ಪಾರದರ್ಶಕ ತೈಲ ಲೇಪಿಸಿದಂತೆ ಕಾಣುತ್ತದೆ.

ಚಿತ್ರ ನಂ. ೧ರ ಗಣಪತಿಯ ಚಿತ್ರವನ್ನು ನೋಡಿದರೆ, ಅದರಲ್ಲಿಯ ಆಭರಣಗಳಾದ ಕಿರೀಟ, ತೋಳಬಂದಿ, ಕೈಯಾಭರಣಗಳು, ಕಂಠಾಭರಣಗಳು ತೀಕ್ಷ್ಣ ಹಳದಿ ಬಣ್ಣಗಳಿಂದ ರಚಿಸಿ ಹಾಕಿದೆ. ಸೂಕ್ಷ್ಮತೆಯ ನಕ್ಷಾರೇಖೆಗಳು ಅದರಲ್ಲಿವೆ. ವಸ್ತ್ರಗಳ ಮೇಲೆ ನಿರ್ಮಿಸಿದ ಅತೀ ಸೂಕ್ಷ್ಮ ವರ್ಣ ಬಿಂದುಗಳು, ವಸ್ತ್ರದ ಅಂಚಿನಲ್ಲಿ ಬಳಸಿದ ಸುವರ್ಣದ ಸುನೇರಿ ಬಣ್ಣ ಹಾಗೂ ಕೈಕಾಲು ಬೆರಳು, ಕಿವಿ, ಕಣ್ಣುಗಳಿಂದ ಅಲಂಕಾರ ಶೈಲಿಯ ಕಲ್ಪನೆ ಬರುತ್ತದೆ. ಅಕ್ಕಪಕ್ಕದಲ್ಲಿ ಒಂದೊಂದು ಟೆಂಗಿನ ಗಿಡಗಳು ಹಾಗೂ ಮೋದಕಧಾರಿಮೂಷಕ, ಪೀತಾಂಬರವಸ್ತ್ರದ ಮೇಲೆ ಸೂಕ್ಷ್ಮ ಅಲಂಕಾರಿಕ ರೇಖೆಗಳು, ಪೀಠದ ಮೇಲೆ ಅನೇಕ ಸೂಕ್ಷ್ಮ ನಕ್ಷೆಗಳನ್ನು ಸುಂದರ ವರ್ಣ ಸಂಯೋಜನೆಯೊಂದಿಗೆ ಗಣಪತಿಯ ಒಂದು ಕೈಯಲ್ಲಿ ಶಿವಲಿಂಗವಿರುವುದು ಕಂಡುಬರುತ್ತದೆ. ಚಿತ್ರದ ಗಾತ್ರ ಅಂದಾಜು ಎರಡು ಫೂಟು ಚೌರಸಾಕಾರದಲ್ಲಿದೆ.

ಭಾಗವತ ಪುರಾಣದ ಶ್ರೀ ಕೃಷ್ಣಲೀಲೆಯ ಚಿತ್ರಗಳಲ್ಲಿ ಗೋಪಾಲ ಶ್ರೀಕೃಷ್ಣನ ಅಂಗಾಲು ನೆಕ್ಕುತ್ತಿರುವ ಶ್ವೇತ ಬಣ್ಣದ ಆಕಳು, ಅಕ್ಕಪಕ್ಕದಲ್ಲಿ ಸಖಿಯರು ನಿಂತಿದ್ದಾರೆ. ಸಖಿಯರ ವಸ್ತ್ರಗಳಲ್ಲಿ ಅತೀ ಸೂಕ್ಷ್ಮವಾದ ನಕ್ಷೆಗಳು ಹಾಗೂ ವರ್ಣ ಬಿಂದುಗಳು ಹಾಗೂ ಕೇಶಾಲಂಕಾರ ಅಲಂಕಾರಾತ್ಮಕವಾದ ಅವಯವಗಳು ವಿಶೇಷ ರೂಪದಲ್ಲಿ ತೊಟ್ಟುಕೊಂಡಂಥ ಕಚ್ಚೆ ಸೀರೆಯನ್ನು ನೋಡಬಹುದು. ಚಿತ್ರ ನಂ. ೨ರಲ್ಲಿ ಪ್ರಣಯ ಸಂದರ್ಭ ಅಲಂಕಾರ ಶೈಲಿಯಲ್ಲಿ ನೋಡಬಹುದು. ಚಿತ್ರ ನಂ. ೩ಕ್ಕೆ ಕಮಾನಿನ ಆಕಾರ ಹಾಕಿ ವಿಶೇಷ ಭಿತ್ತಿಚಿತ್ರ ಎನ್ನುವಂತೆ ಒಂದೇ ಬಣ್ಣದಲ್ಲಿ ರಚಿಸಿದ್ದಾರೆ.

ಅನೇಕ ಹೆಡೆಗಳುಳ್ಳ ನಾಗ ಜಲದಲ್ಲಿ ದೀರ್ಘ ವೃತ್ತಾಕಾರದಲ್ಲಿ ಸುತ್ತಿಕೊಂಡಿರುವುದು ಅದಕ್ಕೆ ತಿಳಗೋದಿ ಬಣ್ಣ ಲೇಪಿಸಿಲಾಗಿದೆ. ಅದರ ಮೈಮೇಲಿನ ಸೂಕ್ಷ್ಮ ಚಿಕ್ಕಿಗಳನ್ನು ನೋಡಿದರೆ ವಾಸ್ತವಿಕ ಸರ್ಪದ ಕಲ್ಪನೆ ಬರುತ್ತದೆ. ಅದರ ಮೇಲೆ ವಿಷ್ಣು ಶಯನಾಸನದಲ್ಲಿದ್ದಾನೆ. ಪಾದದ ಹತ್ತಿರ ಲಕ್ಷ್ಮೀ ವಿಷ್ಣುವಿನ ನಾಭಿಯಿಂದ ಹಸಿರು ಬಣ್ಣದ ದೇಟು ಅದರ ತುದಿಗೆ ಗುಲಾಬಿವರ್ಣದ ಕಮಲ, ಅದರಲ್ಲಿ ಬ್ರಹ್ಮದೇವನಿರುವುದು ಸುಂದರ ವರ್ಣಚಿತ್ರವಾಗಿದೆ. ನೀರಿಗೆ ಆಕಾಶಕ್ಕೆ ಉತ್ತಮ ವರ್ಣ ಸಂಯೋಜನೆಯಾಗಿದೆ.

ಹನುಮಂತನ ಮಹಿಮೆಯನ್ನು ತೋರುವಂತಿರುವ ಇನ್ನೊಂದು ಚಿತ್ರದಲ್ಲಿ ಒಬ್ಬ ಅರ್ಚಕರ ಎದುರುಗಡೆ ಏನೋ ಹೇಳುತ್ತಿರುವ ಒಬ್ಬಳು ತಾಯಿ ತನ್ನ ಮಗುವಿನೊಂದಿಗೆ ನಿಂತಿದ್ದಾಳೆ. ವಿಕಾರ ರೂಪದಲ್ಲಿ ತಲೆಗೂದಲುಗಳು, ಕಪ್ಪು ಮೈ ಬಣ್ಣವುಳ್ಳ ಒಬ್ಬ ರಾಕ್ಷಸ ತನ್ನ ವಿಕೃತ ಕೋರೆ ಹಲ್ಲುಗಳನ್ನು ಹಾಗೂ ಕಣ್ಣುಗಳನ್ನು ಹೊರತೆಗೆದು, ಖಡ್ಗ ಢಾಲುಧಾರಿಯಾಗಿ ಕೆಳಗೆ ಬಿದ್ದಿದ್ದಾನೆ. ಆ ರಾಕ್ಷಸನನ್ನು ಹನುಮಂತ ವಧೆ ಮಾಡುತ್ತಿರುವ ಚಿತ್ರ ನೋಡುಗರಿಗೆ ಏನೋ ಕಥೆ ಹೇಳುವಂತಿದೆ. ಹನುಮನಿಗೆ ಆಭರಣ ಅಲಂಕಾರ ಹಾಗೂ ಬಾಲಕ್ಕೆ ಪ್ರಾಣದೇವರಿಗೆ ಗಂಟೆಕಟ್ಟಿರುವಂತೆ ಗಂಟೆ ಇದೆ. ಹನುಮನ ಮುಖದ ಕೆಲಭಾಗ ಕೆಂಪುವರ್ಣ ಲೇಪಿಸಲ್ಪಟ್ಟಿದೆ. ಈ ಕೆಂಪುವರ್ಣದ ಸಂಯೋಜನೆ ಆ ಹೆಣ್ಣುಮಗಳ ರವಿಕೆಗೂ ಹಾಗೂ ಹನುಮನ ಚಡ್ಡಿಗೂ ಆಗಿದೆ. ಈ ಚಿತ್ರದ ವಾದ್ಯ ಗಿಡಗಳನ್ನು ಹಾಗೂ ತೆಂಗಿನಗಿಡಗಳನ್ನು ಒಳ್ಳೆಯ ಅಲಂಕಾರಿಕ ರೀತಿಯಲ್ಲಿ ಸಂಯೋಜಿಸಲಾಗಿದೆ.

ಗರುಡನ ಚಿತ್ರದಲ್ಲಿ ಗರುಡ ತನ್ನ ಕೈಯಲ್ಲಿ ನಾಗಗಳನ್ನು ಹಿಡಿದಿದ್ದಾನೆ. ನಾಗಗಳು ಹೆಡೆ ಎತ್ತಿವೆ. ನಾಟ್ಯ ಭಂಗಿಯಲ್ಲಿರುವ ಗರುಡನ ಮೂಗು ಚೂಪಾಗಿದೆ. ಸುಂದರ ವರ್ಣಸಂಯೋಜನೆ, ಅಲಂಕಾರಿಕ ರೇಖೆಗಳಿಂದೊಡಗೂಡಿದೆ. ಈ ಚಿತ್ರ.

ದೇವಿಯು ಕೋಣದ ಮೇಲೆ ಕುಳಿತುಕೊಂಡು ರಾಕ್ಷಸರ ಸಂಹಾರ ಮಾಡುತ್ತಿರುವ ಚಿತ್ರ ಚೆನ್ನಾಗಿ ಮೂಡಿ ಬಂದಿದೆ. ತೀಕ್ಷ್ಣ ರೇಖೆಗಳು, ದೇವಿಗೆ ಅನೇಕ ಕೈಗಳು, ರಾಕ್ಷಸರ ಭಯಾನಕ ಕೇಶಾಲಂಕಾರ ಹಾಗೂ ರಕ್ತಸಿಕ್ತನಾಗಿ ಬಿದ್ದ ರಾಕ್ಷಸರನ್ನು ನೋಡಿದರೆ ಕೆಟ್ಟದ್ದನ್ನು ಕೊನೆಗಾಣಿಸಲು ಒಂದು ಶಕ್ತಿ ಇದೆ ಎನ್ನುವುದನ್ನು ಈ ಚಿತ್ರ ತೋರಿಸುತ್ತದೆ.

ನವಿಲಿನ ಮೇಲೆ ಸರಸ್ವತಿ ವೀಣಾಧಾರಿಯಾಗಿ ಕುಳಿತಿರುವುದು ಒಳ್ಳೆಯ ಸಂಯೋಜನೆಯಾಗಿದೆ. ನವಿಲಿನ ಕಾಲು, ಗರಿ ಬೆರಳುಗಳು ಹಾಗೂ ಚುಂಚ ಅಲಂಕಾರಿಕ ಶೈಲಿಯಲ್ಲಿವೆ. ದೇವಿ ಸರಸ್ವತಿ ಹಿಡಿದಿರುವ ವೀಣಾ ಜ್ಞಾನದ ಸಂಕೇತವಾಗಿದೆ. ಎಲ್ಲರಿಗೂ ಜ್ಞಾನ ಕೊಡುವುದಕ್ಕಾಗಿ ಹೊರಟ ಸರಸ್ವತಿ ವಸ್ತ್ರ ಶಾಂತ ತಿಳಿನೀಲಿಯದಾಗಿದೆ. ಸುಂದರ ಮುಕುಟವಿದೆ.

ಬೇಡಿದ್ದನ್ನು ಕೊಡುವ ಕಾಮಧೇನುವಿನ ಚಿತ್ರದಲ್ಲಿ ಸ್ತ್ರೀಮುಖ, ಆಕಳದೇಹ, ಸ್ತನಪಾನ ಮಾಡುತ್ತಿರುವ ಕರು, ಆಕಳಿಗೆ ಮೂರು ಬಾಲ ಕುಣಿಯುತ್ತಿರುವ ಕರು, ಸುಂದರ ಹೆಣ್ಣಿನ ಮುಖ ಇದೆಲ್ಲವೂ ಒಂದು ಕಾಲ್ಪನಿಕ ಕಾಮಧೇನುವಿನ ಚಿತ್ರ ಇದಾಗಿದೆ. ಕಾಮಧೇನುವಿನ ಚಿತ್ರ ನೋಡಿದರೆ ಮತ್ತೆ ಮತ್ತೆ ನೋಡಬೇಕೆನಿಸುತ್ತದೆ.

ಈ ಚಿತ್ರಕಲಾ ಮಹಲಿನ ಮೇಲ್ಛಾವಣಿಯ ಕಟ್ಟಿಗೆ ಹಲಗೆಗಳ ಮೇಲೆಯೂ ಇದೇ ಶೈಲಿಯಿಂದ ಬಿಡಿಸಲ್ಪಟ್ಟ ಚಿತ್ರಗಳಿದ್ದವಂತೆ ಅವುಗಳು ಮಳೆ ನೀರಿನಿಂದ ಹಾಳಾದಾಗ ಅವುಗಳನ್ನು ತೆಗೆಸಿ ಬಿದಿರಿನಿಂದ ಮೇಲ್ಮದ್ದಿಯನ್ನು ಹಾಕಿಸಲಾಗಿದೆ.

ಗರಡಿ ಮನೆಗಳ ಗೋಡೆಯ ಮೇಲಿನ ಚಿತ್ರಗಳು

ಈ ಊರಿನಲ್ಲಿ ನಾಲ್ಕು ಗರಡಿ ಮನೆಗಳಿವೆ. ೧. ಕಂಠೀಪೇಟೆಯ ಗರಡಿಮನೆ. ೨. ಶಿವಪ್ಪಯ್ಯನ ಗರಡಿ ಮನೆ. ೩. ಹೊಸಗರಡಿ ಮನೆ. ೪. ಹೊಸಪೇಟೆಯಲ್ಲಿರುವ ಸಾಲೇಶ್ವರ ಗರಡಿಮನೆ, ಇವುಗಳಲ್ಲಿ ಕಂಠೀಪೇಟೆಯ ಗರಡಿ ಮನೆಯ ಬಾಗಿಲದ ಎಡ ಬಲಕ್ಕಿರುವ ಗೋಡೆಗಳ ಮೇಲೆ ದೊಡ್ಡಗಾತ್ರದ ತೈಲ ಚಿತ್ರಗಳಿವೆ. ಇವು ಬಹಳ ಹಳೆಯ ಚಿತ್ರಗಳಿದ್ದವಂತೆ

ಜನಪದ ಭಿತ್ತಿ ಚಿತ್ತ್ತಾರಗಳು ಹಾಗೂ ಶಿಲ್ಪಗಳು

ಗೋಡೆಗಳ ಗಾರೆಗೆ ಗಚ್ಚಿದೆ. ಅದರ ಮೇಲೆ ಬಲಗಡೆ ಖಡ್ಗವರಸೆ ಚಿತ್ರವಿದ್ದರೆ ಎಡಗಡೆ ಗಾಥಯುದ್ಧದ ಚಿತ್ರಗಳಿವೆ. ಇವು ಬಹಳ ಹಳೆಯ ಚಿತ್ರಗಳಿದ್ದವಂತೆ. ಇವುಗಳ ಕ್ಷೀಣತೆ ಕಂಡು ಪದ್ಮದ ಸ್ಥಳೀಯ ಪೇಂಟರರೊಬ್ಬರಿಂದ ಮರು ಬಣ್ಣ ಲೇಪನ ಮಾಡಿಸಿದ್ದಾರೆ. ಅವುಗಳು ಕೂಡಾ ತಮ್ಮ ಅಸ್ತಿತ್ವವನ್ನು ಕಳೆದುಕೊಳ್ಳಹತ್ತಿವೆ. ಇನ್ನುಳಿದ ಗರಡಿ ಮನೆಯ ಎದುರುಗಡೆಯ ಗೋಡೆಗಳ ಮೇಲೆ ಹಾಗಾಗಿ ಸುಣ್ಣಸಾರಿಸಿ ಚಿತ್ರಗಳನ್ನು ಬಿಡಿಸುತ್ತಿದ್ದರು. ಅಲ್ಲಿ ಬಿಡಿಸುವ ಚಿತ್ರಗಳೆಂದರೆ ಕುಸ್ತಿ ಆಡುತ್ತಿರುವ ಜಟ್ಟಿಗಳು, ಪರ್ವತವನ್ನು ಹೊತ್ತುನಿಂತ ಆಂಜನೇಯ (ಹನುಮಂತ) ಮುಂತಾದವುಗಳು. ಈ ದೊಡ್ಡಗಾತ್ರದ ಚಿತ್ರಗಳು ದುಷ್ಟಶಕ್ತಿಗಳನ್ನು ಸಂಹಾರ ಮಾಡಲು ಹಾಗೂ ಶಕ್ತಿ ಸಂಪಾದಿಸುವ ಕುಸ್ತಿ ಕಲೆಯನ್ನು ಪ್ರದರ್ಶಿಸುವ ಸಂಕೇತಗಳಾಗಿ ಕಾರ್ಯನಿರ್ವಹಿಸುತ್ತಿದ್ದವು.

ತೈಲ ಬಣ್ಣಗಳಿಂದ ಬಿಡಿಸಿದ ಇತ್ತೀಚಿನ ಚಿತ್ರಗಳು ಶ್ರೀ ಠಾಕೂಸಾ ಪವಾರ ಅವರ ಮನೆಯ ಗೋಡೆಗಳ ಮೇಲೆ ದೇವಿ ದೇವತೆಯರ ಹಾಗೂ ಪ್ರಕೃತಿ ಚಿತ್ರಗಳು ಕಂಡುಬಂದರೆ, ಶ್ರೀ ಘನಶ್ಯಾಮ್‌ಜಿ ರಾಠಿಯವರ ಮನೆಯಲ್ಲಿ ಸನಾತನ ಸಂಸ್ಕೃತಿಯಾದ ಹಿಂದೂಧರ್ಮಕ್ಕೆ ಸಂಬಂಧಿಸಿದ ದೊಡ್ಡ ಗಾತ್ರದ ಚಿತ್ರಕೃತಿಗಳು ಕಂಡುಬರುತ್ತವೆ. ಶ್ರೀ ಪರ್ವತಿಕರ ಮನೆಯಲ್ಲಿ ಶ್ರೀ ರಾಘವೇಂದ್ರರ ಭಿತ್ತಿ ಚಿತ್ರವಿದೆ. ಶ್ರೀ ಝುಂವರ ಹಾಗೂ ಶ್ರೀ ರಾಠಿ, ಶ್ರೀ ಘಟ್ಟಿ ಶ್ರೀ ಸಂಪಗಾವಿಯವರ, ಶ್ರೀ ಶಿವಮೂರ್ತೆಪ್ಪಾ ನಿಲವಾಣಿ ಯವರ ಮನೆಗಳ ಗೋಡೆಗಳ ಮೇಲೆ ದೇಶ ಭಕ್ತರ ಭಾವಚಿತ್ರಗಳಿಂದೊಡಗೂಡಿರುವ ಬಾರ್ಡರ್ ಡಿಝೂಯಿನ್‌ಗಳು, ಹಾಗೂ ಶಬರ ಶಂಕರ ವಿಲಾಸ ಗ್ರಂಥವನ್ನಾಧರಿಸಿದ ಶಿವ ಪಾರ್ವತಿಯರ ೩x೨

ಫೂಟಿನ ಚಿತ್ರಗಳಿವೆ. ಶ್ರೀ ರಕಾಮಬಿಲಾಸಜಿ ಧೂತ ಅವರ ಮನೆಯ ಗೋಡೆಗಳ ಮೇಲ್ತುದಿಗೆ ಮೂಲೆಗೆ ತಾಗಿ ಕೈಯಾರೆ ಬಿಡಿಸಿದ ಜಲವರ್ಣ ಮಾಧ್ಯಮದ ಧಾರ್ಮಿಕ ಚಿತ್ರಗಳನ್ನು ಚೆನ್ನಾಗಿ ಫ್ರೇಮ್‌ಮಾಡಿ ತೂಗುಹಾಕಲ್ಪಟ್ಟಿದೆ. ತಮ್ಮವಂಶದ ಚಿತ್ರ 'ವಂಶವೃಕ್ಷ' ಇಲ್ಲಿ ಇತ್ತೀಚಿನ ತೈಲ ಬಣ್ಣಗಳನ್ನು ಉಪಯೋಗಿಸಿ ಇತ್ತೀಚೆಗೆ ರಚಿಸಲ್ಪಟ್ಟವುಗಳಾಗಿವೆ. ಪೆಂಟರ್ ಸೋನಾರ, ಎರಿಕೋಳ, ಬಸವರಾಜ ಎಂಬುವರ ಹೆಸರುಗಳಿವೆ.

ಗುಳೇದಗುಡ್ಡದ ಮನೆ-ಮಹಲು ಗುಡಿ-ಗುಂಡಾರ, ಮಠ-ಮಂದಿರಗಳಲ್ಲಿ ಆಸ್ತಿಕನ ಪವಿತ್ರ ಭಾವನೆ ಗಳಿಗೆ ಪ್ರೋತ್ಸಾಹನೆ ದಯಪಾಲಿಸುತ್ತಿರುವ ಈ ಸಾಂಪ್ರದಾಯಿಕ ಚಿತ್ರಕೃತಿಗಳನ್ನು ಉಳಿಸಿಕೊಂಡು ಬೆಳೆಸಿ ಕೊಂಡು ಹೋಗುವುದು ನಮ್ಮ ನಿಮ್ಮೆಲ್ಲರ ಆದ್ಯ ಕರ್ತವ್ಯವಾಗಿದೆ.

ಮಹಾಲಿಂಗಪುರ ಭಿತ್ತಿ ಚಿತ್ರಗಳು

ಮಹಾಲಿಂಗಪುರ ಶ್ರೀಮಹಾಲಿಂಗೇಶ್ವರ ಮಠದಲ್ಲಿ ಪೂರ್ವಗೋಡೆ ಮತ್ತು ದಕ್ಷಿಣ ಗೋಡೆಯಲ್ಲಿ ಮಾತ್ರ ಕೆಲವು ಚಿತ್ರಗಳು ಉಳಿದುಕೊಂಡಿವೆ.

೧. ಶಿವದಕ್ಷಿಣಾಮೂರ್ತಿಯಾಗಿ

ಸಂಗೀತ, ನೃತ್ಯ ಯೋಗ, ವಿದ್ಯೆಗಳ ಉಪದೇಶಕನಾಗಿ ಶಿವನು ದಕ್ಷಿಣಾಮೂರ್ತಿ ಎಂದು ಹೆಸರಾ ಗಿದ್ದಾನೆ. ಈ ಹೆಸರು ಹೇಗೆ ಬಂತೆಂಬುದಕ್ಕೆ ಒಂದು ವಿವರಣೆಯನ್ನು ಹೇಳುತ್ತಾರೆ. ಋಷಿಗಳಿಗೆ ಶಿವನು ಯೋಗ ಮತ್ತು ಜ್ಞಾನಗಳನ್ನು ಭೋಧಿಸುವಾಗ ದಕ್ಷಿಣಾಭಿಮುಖವಾಗಿ ಕುಳಿತ್ತಿದ್ದರಿಂದ ದಕ್ಷಿಣಾಮೂರ್ತಿ ಎಂದು ಕರೆಯಲ್ಪಟ್ಟನಂತೆ. ದಕ್ಷಿಣಾಮೂರ್ತಿಯನ್ನು ನಾಲ್ಕು ವಿವಿಧ ರೂಪಗಳಲ್ಲಿ ಚಿತ್ರಿಸಲಾಗುತ್ತದೆ. ನಾಲ್ಕರಲ್ಲಿ ವ್ಯಾಖ್ಯಾನ ಮೂರ್ತಿ ರೂಪವನ್ನು ನಾವು ದೇವಾಲಯಗಳಲ್ಲಿ ಬಹು ಸಾಧಾರಣವಾಗಿ ಕಾಣುತ್ತೇವೆ. ಶೈವ ಅಥವಾ ವೈಷ್ಣವ ದೇವಾಲಯ ಮಠ ಮಾನ್ಯಗಳಲ್ಲಿ ಪ್ರಧಾನವಾಗಿ ಮಧ್ಯ ದಕ್ಷಿಣ ಗೋಡೆಗಳಲ್ಲಿ ದಕ್ಷಿಣಾಮೂರ್ತಿ ಶಿವನಿಗಾಗಿ ಒಂದು ಭಾಗವು ಕಾಯ್ದಿರಿಸಿ ಅಲ್ಲಿ ದಕ್ಷಿಣಾಮೂರ್ತಿಯನ್ನು ಚಿತ್ರಿಸಲಾಗುತ್ತದೆ ಎಂಬ ವಿವರಗಳು ದೊರೆಯುತ್ತವೆ. ಮಹಾಲಿಂಗಪುರದ ಈ ಮಠದಲ್ಲಿಯೂ ದಕ್ಷಿಣಾಮೂರ್ತಿಯ ಶಿವನ ಚಿತ್ರವನ್ನು ದಕ್ಷಿಣಗೋಡೆಯಲ್ಲಿಯೇ ರಚಿಸಲಾಗಿದೆ. ಈ ಚಿತ್ರದಲ್ಲಿ ಶಿವನು ಹುಲಿಯ ಚರ್ಮದ ಮೇಲೆ ಕುಳಿತಿದ್ದು ಆತನ ಎಡ ತೊಡೆಯ ಮೇಲೆ ಪಾರ್ವತಿಯೂ ಬಲತೊಡೆಯ ಮೇಲೆ ಗಣಪತಿಯೂ ಚಿತ್ರಿತರಾಗಿದ್ದಾರೆ. ಅಕ್ಕಪಕ್ಕದಲ್ಲಿ ಕೆಳಗಡೆಗೆ ಅನೇಕ ಋಷಿಗಳು ಚಿತ್ರಿತರಾಗಿದ್ದಾರೆ. ದಕ್ಷಿಣಾಮೂರ್ತಿ ಶಿವನ ಸುತ್ತಲೂ ನೆರೆದಿರುವ ಋಷಿಗಳಲ್ಲಿ

ನಾರದ, ಜಮದಗ್ನಿ, ವಶಿಷ್ಠ, ಭೃಗು, ಭಾರದ್ವಾಜ, ಸನಕ ಮತ್ತು ಅಗಸ್ತ್ಯರು ಪ್ರಮುಖರಾಗಿರುತ್ತಾರೆ. ಎಂದು ಕಾಶ್ಯಪ ಶಿಲ್ಪ ಶಾಸ್ತ್ರದಲ್ಲಿ ಹೇಳಿದ್ದಾರೆ. ಕೌಶಿಕ, ಕಾಶ್ಯಪ, ಭಾರದ್ವಾಜ, ಅತ್ರಿ ಮತ್ತು ಗೌತಮ ಪ್ರಮುಖರು ಎಂದು ಕಾಮಿಕಾಗಮವು ಹೇಳಿದೆ. ಕಾರಣಾಗಮದಲ್ಲಿ ಅಗಸ್ತ್ಯ, ಪುಲಸ್ತ್ಯ, ವಿಶ್ವಾಮಿತ್ರ ಮತ್ತು ಅಂಗೀರಸ ಋಷಿಗಳ ಹೆಸರು ಮಾತ್ರ ಇವೆ. ಈ ಚಿತ್ರದಲ್ಲಿ ಸಪ್ತರ್ಷಿಗಳ ಜೊತೆಗೆ ಬೇರೆ ಬೇರೆ ಮುಖಗಳು ಶಿವನ ಸುತ್ತ ನೆರೆದಿದ್ದಾರೆ. ಈ ಚಿತ್ರದಲ್ಲಿ ಶಿವ ಭಕ್ತನಾದ ರಾವಣನೂ ಇರುವುದು ವಿಶೇಷವಾಗಿದೆ. ಆತನಿಗೆ ಆರುಮುಖ ಹನ್ನೆರಡು ಕೈಗಳನ್ನು ಚಿತ್ರಿಸಿದ್ದಾರೆ. ಆತನು ಎದ್ದು ನಿಂತು ಕೈಯಲ್ಲಿ ದಂಡಕಮಂಡಲಗಳನ್ನು ಹಿಡಿದು ಶಿವನಾಮ ಸ್ಮರಣೆಯಲ್ಲಿ ತೊಡಗಿದ್ದಾನೆ. ರಾವಣನಿಗೆ ಹತ್ತು ತಲೆಗಳು ಇಪ್ಪತ್ತು ಕೈಗಳು ಚಿತ್ರಿಸಬೇಕಾಗಿದ್ದು ಅಲ್ಲಿನ ಸ್ಥಳದ ಅಭಾವದಿಂದ ಕಡಿಮೆ ಸಂಖ್ಯೆಯ ತಲೆ ಕೈಗಳನ್ನು ಚಿತ್ರಿಸಿರಬಹುದು. ಒಟ್ಟು ಮೂರು ಸಾಲುಗಳಲ್ಲಿ ಋಷಿಗಳು ಚಿತ್ರಿತರಾಗಿದ್ದಾರೆ. ಎರಡನೆಯ ಸಾಲಿನಲ್ಲಿ ಮಧ್ಯದಲ್ಲಿ ಶಿವನ ಬಲಕ್ಕೆ ನಂದಿಯೂ ಎಡಕ್ಕೆ ಸಿಂಹವೂ ಮಲಗಿಕೊಂಡಿದೆ. ನಂದಿಯ ಪಕ್ಕದಲ್ಲಿ ಕಪ್ಪು ಮೈಬಣ್ಣದ, ಕೈಯಲ್ಲಿ ಖಡ್ಗ ಹಿಡಿದು ಕೊಂಡಿರುವ ಕಿರೀಟಧಾರಿ ರಾಕ್ಷಸನೊಬ್ಬ ಚಿತ್ರಿತವಾಗಿದ್ದಾನೆ. ಕೆಳಗಿರುವ ಮೂರನೆಯ ಸಾಲಿನಲ್ಲಿ ಒಟ್ಟು ಎಂಟು ಜನ ಋಷಿಗಳು ಚಿತ್ರಿಸಿದ್ದಾರೆ. ಅವರಲ್ಲಿ ಕೆಲವರು ಎದ್ದು ನಿಂತು ಶಿವನ ಸ್ಮರಣೆ ಮಾಡುತ್ತಿದ್ದರೆ ಇನ್ನೂ ಹಲವರು ಕುಳಿತು ಆತನನ್ನು ಭಜಿಸುತ್ತಿದ್ದಾರೆ. ಇಡೀ ಚಿತ್ರ ಸಂಯೋಜನೆಯಲ್ಲಿ ಶಿವನ ಆಕೃತಿಯೇ ಅತ್ಯಂತ ದೊಡ್ಡದಾಗಿದೆ. ನಾಲ್ಕು ಕೈಗಳನ್ನು ಹೊಂದಿದ ಶಿವನು ತ್ರಿಶೂಲ, ಶಂಖ, ಢಮರುಗಳನ್ನು ಹಿಡಿದುಕೊಂಡಿದ್ದಾನೆ. ಆತನ ಕೊರಳಿನಲ್ಲಿ ಹಾವು ಹೆಡೆ ಬಿಚ್ಚಿ ಆಡುತ್ತಿದ್ದರೆ ಆತನ ಜಟೆಯ ಮೇಲೆ ಐದು ಹೆಡೆಗಳ ಸರ್ಪವು ಸುರಳಿಯಾಗಿ ಸುತ್ತಿಕೊಂಡು ಕುಳಿತಿದೆ. ಜಟೆಯ ತುದಿಯಿಂದ ಗಂಗೆ ಕಾರಂಜಿಯಂತೆ ಚಿಮ್ಮಿ ಬರುತ್ತಿದ್ದಾಳೆ. ಶಿವನ ಎಡಬಲಗಳಲ್ಲಿ ದೊಡ್ಡ ದೊಡ್ಡ ಮರಗಳಿದ್ದು ಅವುಗಳಲ್ಲಿ ಹೂಗಳು ಅರಳಿವೆ. ಮರದ ರೆಂಬೆ, ಕೊಂಬೆಗಳಲ್ಲಿ ಅಸಂಖ್ಯಾತ ಗಿಳಿಗಳು, ಮಂಗಗಳು ಕುಳಿತುಕೊಂಡಿದ್ದರೆ, ಇನ್ನೂ ಕೆಲವು ಮಂಗಗಳು ಗಿಡದಿಂದ ಗಿಡಕ್ಕೆ ಜಿಗಿದಾಡುತ್ತಲಿವೆ. ಸಿಂಧೂರ ವರ್ಣದ ಆಕಾಶದಲ್ಲಿ ಅಲ್ಲಲ್ಲಿ ಇಡಿ ಆಕಾಶ ಗಿಳಿಗಳಿಂದಲೇ ತುಂಬಿ ಹೋಗಿದೆ. ಹೊರ ಚೌಕಟ್ಟಿಗೆ ಅಂದವಾದ ಹೂ ಬಳ್ಳಿಯ ನಕ್ಷೆಯನ್ನು ಮೂರು ಪಟ್ಟಿಗಳಲ್ಲಿ ರಚಿಸಲಾಗಿದೆ. ಆಕಾಶದ ಬಣ್ಣ ಸಿಂಧೂರ ಕೆಂಪಾಗಿದ್ದರೆ, ನೆಲದ ವರ್ಣ ತೆಳುಹಳದಿಯಾಗಿದ್ದು ಅಲ್ಲಲ್ಲಿ ಹಸಿರು ನೀಲಿ ಮಿಶ್ರಣ ಮಾಡಲಾಗಿದೆ. ರೇಖಾ ವಿನ್ಯಾಸದಿಂದ ಅಷ್ಟೊಂದು ಶಕ್ತಿಶಾಲಿ ಚಿತ್ರವಾಗಿರದಿದ್ದರೂ ಚಿತ್ರ ಸಂಯೋಜನೆ, ವರ್ಣ ವಿನ್ಯಾಸಗಳಿಂದ ಅದ್ಭುತ ಎನ್ನುವ ಕಲ್ಪನೆಯನ್ನು ಕೊಡುತ್ತದೆ.

೩. ಶ್ರೀ ವೀರಭದ್ರೇಶ್ವರ

ದಕ್ಷಿಣಾಮೂರ್ತಿ ಶಿವನ ಚಿತ್ರದ ಬಲಗಡೆಗೆ ಇರುವ ಒಂದು ಚೌಕಾಕಾರದ ಮಂಟಪದಲ್ಲಿ ವೀರಭದ್ರನ ಚಿತ್ರವೊಂದಿದೆ. ಕಡುಕೆಂಪು ವರ್ಣದ ಹಿನ್ನೆಲೆಯನ್ನು ಹೊಂದಿದ ಈ ಚಿತ್ರದಲ್ಲಿ ವೀರಭದ್ರನ ಗುಂಡಾದ ದೊಡ್ಡದಾದ ಹೊಳೆಯುವ ಕಣ್ಣುಗಳು. ದಪ್ಪನಾದ ಗಲ್ಲಕ್ಕೆ ಅಂಟಿಕೊಂಡ ಚಪ್ಪಟೆ ಮೀಸೆ. ಅವನ ಭೀಕರತೆಯನ್ನು ಇನ್ನೂ ಹೆಚ್ಚಿಸಿವೆ. ತಲೆಯ ಮೇಲೆ ಬಂಗಾರ ವರ್ಣದ ಕಿರೀಟವನ್ನು ಧರಿಸಿದ್ದು ಕೊರಳಲ್ಲಿಯೂ ಅದೇ ವರ್ಣದ ಆಭರಣಗಳಿವೆ. ಮಾಸಲು ಹಸಿರು ವರ್ಣದ ಪಂಚೆ ಉಟ್ಟಿದ್ದರೆ, ಹಳದಿ ವರ್ಣದ ಶಾಲನ್ನು ಮೈಮೇಲೆ ಹೊದ್ದುಕೊಂಡಿದ್ದಾನೆ. ಈತನಿಗೆ ಆರು ಕೈಗಳನ್ನು ಚಿತ್ರಿಸಲಾಗಿದ್ದು, ಆ ಕೈಗಳಲ್ಲಿ ತ್ರಿಶೂಲ, ಖಡ್ಗ, ಶಂಖ, ಢಮರುಗ, ಹಾವುಗಳನ್ನು ಎಡ ಕೈಯೊಂದರಲ್ಲಿ ದಕ್ಷಬ್ರಹ್ಮನ ರುಂಡವನ್ನು ಹಿಡಿದುಕೊಂಡಿದ್ದಾನೆ. ವೀರಭದ್ರನು ಹಳದಿ ವರ್ಣದ ಒಂದು ಪೀಠದ ಮೇಲೆ ನಿಂತಿದ್ದು ಆತನ ಎಡಬಲಗಳಲ್ಲಿ ಒಂಭತ್ತು ಎಲೆಗಳನ್ನು ಹೊಂದಿದ ಎರಡು ಹಸಿರು ಗಿಡಗಳಿವೆ. ಚಿತ್ರದ ಚೌಕಟ್ಟನ್ನು ಸಾಲಾದ ಎಲೆಗಳನ್ನು ಚಿತ್ರಸುವ ಮೂಲಕ ಅಲಂಕರಿಸಿದ್ದಾರೆ. ಚಿತ್ರದಲ್ಲಿ ಮುಖ್ಯವಾಗಿ ಕೆಂಪು, ಕಂದು, ಕಪ್ಪು ವರ್ಣದಲ್ಲಿ ಚಿತ್ರದ ಹೊರ ರೇಖೆ ಎಳೆದಿದ್ದಾರೆ. ಚಿತ್ರವು ಗ್ರಾಮೀಣ ಶೈಲಿಯನ್ನು ಹೋಲುತ್ತಿದ್ದು, ರೇಖೆಗಳು ಶಕ್ತಿಯುತವಾಗಿಲ್ಲ.

೨. ಹೂ ಕುಂಡ

ವೀರಭದ್ರನ ಚಿತ್ರದ ಕೆಳಗಿನ ಒಂದು ಚಿಕ್ಕ ಚೌಕದಲ್ಲಿ ಅಲಂಕಾರಿಕ ಹೂ ಕುಂಡ ಒಂದನ್ನು ರಚಿಸಿದ್ದಾರೆ. ಸಾಮಾನ್ಯವಾಗಿರುವ ಅತ್ಯಂತ ಸರಳತೆಯಿಂದ ಕೂಡಿದ ಒಂದು ಹಳದಿ ವರ್ಣದ ಕುಂಡದಲ್ಲಿ ವರ್ಣದ ದೊಡ್ಡ ಎಲೆಗಳ ಗಿಡಗಳನ್ನು ಚಿತ್ರಿಸಲಾಗಿದೆ. ಅದರಲ್ಲಿ ಸೂರ್ಯಕಾಂತಿ ಹೂಗಳನ್ನು ಹೋಲುವ ಹಳದಿ ಹೂಗಳನ್ನು ರಚಿಸಿಲಾಗಿದೆ. ಒಟ್ಟು ಐದು ದೊಡ್ಡ ಹೂಗಳಿದ್ದರೆ ಮೇಲೆ ಎರಡು ಮೊಗ್ಗೆಗಳಿವೆ. ಹೂ ಕುಂಡದ ಎಡ ಬಲಗಳಲ್ಲಿ ಎರಡು ಮಂಗಗಳು ನೆಲದ ಮಾನವರ ಹಾಗೆ ನಿಂತು ಹೂವಿನ ಗಿಡದಿಂದ ಏನನ್ನೋ ಕಿತ್ತು ತಿನ್ನುತ್ತಿವೆ. ಚಿತ್ರದ ಹೊರ ರೇಖೆಗಳು ಕಪ್ಪು ವರ್ಣದಲ್ಲಿ ರಚನೆಯಾಗಿದ್ದು, ಅಷ್ಟೊಂದು ಶಕ್ತಿಶಾಲಿಯಾಗಿ ಮೂಡಿಬಂದಿಲ್ಲ.

ಪೂರ್ವ ಗೋಡೆಯಲ್ಲಿ ಕೇವಲ ಒಂದು ಚಿತ್ರ ಪಟ್ಟಿಕೆ ಮಾತ್ರ ಉಳಿದಿದ್ದು ಈ ಪಟ್ಟಿಕೆ ಯೊಂದರಲ್ಲೇ ಅನೇಕ ವಿಷಯಗಳಿಗೆ ಸಂಬಂಧಿಸಿದ ಚಿತ್ರಗಳನ್ನು ರಚಿಸಲಾಗಿದೆ. ಈ ಚಿತ್ರ ಪಟ್ಟಿಕೆಯು ಅತ್ಯಂತ ವಿಶಾಲವಾಗಿದ್ದು ಆಯುತಾಕಾರದಲ್ಲಿ ಸುಮಾರು ೧೨x೫ಫೂಟುಗಳು ಅಳತೆಯಲ್ಲಿದೆ. ಈ ಪಟ್ಟಿಕೆಯಲ್ಲಿ ಇರುವ ಚಿತ್ರಗಳು ಬೇರೆ ಬೇರೆ ವಿಷಯಕ್ಕೆ ಸಂಬಂಧಿಸಿದಂತೆ ಇರುವುದಲ್ಲದೇ ಬೇರೆ

ಬೇರೆ ಶೈಲಿಯಲ್ಲಿಯೂ ಇವೆ. ಹಾಗಾಗಿ ಒಂದೇ ಪಟ್ಟಿಕೆಯಲ್ಲೇ ಹಲವು ಕಲಾವಿದರು ಕೂಡಿ ಚಿತ್ರರಚನೆ ಮಾಡಿದ್ದಾರೆ. ತ್ರಿಮೂರ್ತಿಗಳಾದ ಬ್ರಹ್ಮ, ವಿಷ್ಣು, ಮಹೇಶ್ವರರಿಗೆ ಸಂಬಂಧಿಸಿದ ಚಿತ್ರಗಳಲ್ಲದೇ ಗಣಪತಿ, ಸರಸ್ವತಿ, ಲಕ್ಷ್ಮೀ, ಕೃಷ್ಣ, ಇಂದ್ರ, ದತ್ತಾತ್ರೇಯ ಮುಂತಾದ ದೇವತೆಗಳು, ಋಷಿಮುನಿಗಳ ಚಿತ್ರಗಳು ಅಲ್ಲದೇ ಮಠದ ಸ್ವಾಮಿಗಳು ಮಹಿಮೆಯನ್ನು ಸಾರುವ ಅನೇಕ ಘಟನಾವಳಿಗಳ ಚಿತ್ರಗಳೂ ಇಲ್ಲಿವೆ. ಈ ಚಿತ್ರ ಪಟ್ಟಿಕೆಯಲ್ಲಿ ಎಷ್ಟೊಂದು ಆಕೃತಿಗಳಿವೆ ಎಂದರೆ ಕಣ್ಣು ಹಾಯಿಸಿದ ಪ್ರತಿಯೊಂದು ಭಾಗದಲ್ಲೂ ಇರುವೆಗಳ ಗುಂಪಿನಂತೆ ಮಾನವಾಕೃತಿಗಳೇ ಕಾಣುವವು. ಮಾನವಾಕೃತಿಗಳಂತೆ ಅಲ್ಲಲ್ಲಿ ವಿಷಯಕ್ಕೆ ಸಂಬಂಧಪಟ್ಟಂತೆ ಪ್ರಾಣಿಗಳು, ಪಕ್ಷಿಗಳು, ಗಿಡಮರಗಳು, ಬೆಟ್ಟಗುಡ್ಡಗಳು, ಗವಿಗಳೂ ರಚನೆಗೊಂಡಿವೆ. ಈ ಚಿತ್ರ ಪಟ್ಟಿಕೆಯಲ್ಲಿರುವ ಚಿತ್ರಗಳನ್ನು ಕೆಳಗಿನಂತೆ ವಿವರಿಸಬಹುದು.

೧. ಬ್ರಹ್ಮ ಮತ್ತು ಸರಸ್ವತಿ

ಚಿತ್ರ ಪಟ್ಟಿಕೆಯಲ್ಲಿ ಅತ್ಯಂತ ಮೇಲೆ ಮೊದಲ ಸಾಲಿನಲ್ಲಿ ಬಲಭಾಗದ ಮೂಲೆಯಲ್ಲಿ ಚತುರ್ಮುಖ ಬ್ರಹ್ಮನು ಚಿತ್ರಿತನಾಗಿದ್ದಾನೆ. ಇಲ್ಲಿ ಬ್ರಹ್ಮನು ಕಮಲದ ಮೇಲೆ ಚಿತ್ರಿಸಿರದೇ ಅಲಂಕೃತ ಪೀಠದ ಮೇಲೆ ಕುಳಿತು ಹಿಂದಿನ ದಿಂಬಿಗೆ ಆನಿಸಿದಂತೆ ಚಿತ್ರಿಸಿದ್ದಾರೆ. ಆತನ ಪಕ್ಕದಲ್ಲಿ ಒಂದು ಅಲಂಕೃತ ಗಿಡವೂ ಬಲಭಾಗದಲ್ಲಿದೆ. ಇನ್ನೂ ಬಲಕ್ಕೆ ಮೂವರು ಋಷಿಗಳು ಕೈಮುಗಿದು ಬ್ರಹ್ಮನನ್ನು ಪ್ರಾರ್ಥಿಸುತ್ತಿದ್ದಾರೆ. ಋಷಿಗಳು ಹಳದಿ ವರ್ಣದ ಪಂಚೆ ತೊಟ್ಟು ಜಾಕೀಟಿನಂತಹ ಮುಸ್ಲಿಂ ಶೈಲಿಯ ಅಂಗಿಯನ್ನು ತೊಟ್ಟಿದ್ದಾರೆ. ಅದರಲ್ಲಿ ಒಬ್ಬ ಋಷಿಯ ಅಂಗಿ ಕಪ್ಪು ವರ್ಣದಲ್ಲಿದೆ. ಈ ಮೊದಲು ಸಾಲಿನ ಎಡಭಾಗದ ಕೊನೆಯಲ್ಲಿ ಮತ್ತೆ ಸರಸ್ವತಿಯರನ್ನು ಚಿತ್ರಿಸಿದ್ದಾರೆ. ಆತನ ಬಲಗಡೆಗೆ ಸರಸ್ವತಿಯ ವೀಣೆನುಡಿಸುತ್ತಿದ್ದಾಳೆ. ಸರಸ್ವತಿಗೆ ಹಸಿರು ಸೀರೆ ಚಿತ್ರಿಸಲಾಗಿದೆ. ಬ್ರಹ್ಮನ ಎಡಕ್ಕೆ ಒಂದು ಸರಸ್ವತಿಯ ಬಲಕ್ಕೊಂದು ಹಸಿರು ತುಂಬಿದ ಗಿಡಗಳಿವೆ. ಈ ಚಿತ್ರಗಳ ಹೊರ ರೇಖೆಗಳು ಕಂದು ವರ್ಣದಲ್ಲಿದ್ದು ಜೀವಂತಿಕೆಯಿಂದ ಕೂಡಿದೆ.

೧. ಕಂಸನನ್ನು ಕೊಲ್ಲುತ್ತಿರುವ ಕೃಷ್ಣ

ಪೂರ್ವ ಗೋಡೆಯ ಚಿತ್ರ ಪಟ್ಟಿಕೆಯಲ್ಲಿ ಬಲಭಾಗದಲ್ಲಿ ಒಂದು ಕಡೆಗೆ ಕೃಷ್ಣನು ಕಂಸನನ್ನು ಕೊಲ್ಲುತ್ತಿರುವ ದೃಶ್ಯ ಚಿತ್ರಣಗೊಂಡಿದೆ. ಚಿತ್ರದಲ್ಲಿ ಕೃಷ್ಣನು ಕಂಸನನ್ನು ಕೆಳಕ್ಕೆ ಹಾಕಿ ಆತನ ಕಾಲನ್ನು ತನ್ನ ಒಂದು ಕಾಲಿನಿಂದ ಮೆಟ್ಟಿ ನಿಂತು ಮತ್ತೊಂದು ಕಾಲನ್ನು ಹಿಡಿದು ಆತನನ್ನು ಸೀಳುತ್ತ ಬಲಗೈಯಲ್ಲಿರುವ ಗಧೆಯಿಂದ ಪ್ರಹರ ಮಾಡುತ್ತಿದ್ದಾನೆ. ಕಂಸನು ಕೈಯಲ್ಲಿ ಖಡ್ಗ ಢಾಲುಗಳನ್ನು ಹಿಡಿದು ಕೊಂಡಿದ್ದರೂ ಕೃಷ್ಣನ ಪ್ರಹಾರ ರಭಸಕ್ಕೆ ನೆಲಕ್ಕೊರಗಿ ಬಿದ್ದಿದ್ದಾನೆ. ಚಿತ್ರದ ಮೇಲ್ಭಾಗದಲ್ಲಿ ಎರಡು

ಪಕ್ಷಿಗಳನ್ನು ರಚಿಸಿದ್ದರೆ, ಕೆಳಭಾಗದಲ್ಲಿ ನಾಲ್ಕು ಗಿಡಗಳು ಚಿತ್ರಣಗೊಂಡಿವೆ. ಚಿತ್ರದ ಹಿನ್ನೆಲೆ ವರ್ಣವು ಕೆಂಪಾಗಿವೆ.

೩. ವೀಣೆ ನುಡಿಸುತ್ತಿರುವ ಸರಸ್ವತಿ

ಈ ಚಿತ್ರದಲ್ಲಿ ಸರಸ್ವತಿಯು ಸಿಂಹಾಸನದಂತಿರುವ ಅಲಂಕೃತ ಪೀಠವೊಂದರ ಮೇಲೆ ಕುಳಿತು ವೀಣೆ ಬಾರಿಸುತ್ತಿದ್ದಾಳೆ. ಒಂದು ಕಾಲನ್ನು ಮೇಲೆ ಮಾಡಿಕೊಂಡು ಇನ್ನೊಂದು ಕಾಲನ್ನು ಮಡಚಿಕೊಂಡು ಕುಳಿತ ಭಂಗಿ ಆಕರ್ಷಕವಾಗಿದೆ. ಬಲಗೈಯಿಂದ ವೀಣೆ ಬಾರಿಸುತ್ತಿದ್ದು ಎಡಗೈಯಲ್ಲಿ ಪುಷ್ಪ ಒಂದನ್ನು ಹಿಡಿದು ಮೂಸುತ್ತಿದ್ದಾಳೆ. ಕುಳಿತ ಪೀಠವು ಸುಂದರವಾಗಿದ್ದು ಎಡಗಡೆಗೆ ಕೆಂಪು ವರ್ಣದ ದಿಂಬಿನಂತಹ ಲೋಡು ಇದೆ. ಹಿಂದೆ ಹಸಿರು ವರ್ಣದ ಪ್ರಭಾವಳಿಯ ಮಂಟಪವಿದ್ದು ಆ ಮಂಟದ ತುದಿಯಲ್ಲಿರುವ ಕೊಡೆಯಕಾರದ ಅಲಂಕಾರಯುಕ್ತವಾದ ವೃತ್ತದ ತುದಿಗೆ ಈ ಮಠದ ಮೂಲ ದೈವವಾದ ಮಹಾಲಿಂಗೇಶ್ವರರ ಸಂಕೇತದ ಮುಖವಿದೆ. ಇಂತಹುದೆ ಮುಖವನ್ನು ಮಠದಲ್ಲಿರುವ ಗರ್ಭಗೃಹದಲ್ಲಿಯೂ ಬೆಳ್ಳಿಯಲ್ಲಿ ಮಾಡಿ ಇಟ್ಟಿರುವುದನ್ನು ನೋಡಬಹುದು. ವೀಣೆ ಬಾರಿಸುತ್ತಿರುವ ಸರಸ್ವತಿಯು ದಟ್ಟ ಹಸಿರು ವರ್ಣದ ಸೀರೆ ಉಟ್ಟಿದ್ದಾಳೆ. ಈ ಸೀರೆಯು ಕೆಂಪು ಹಳದಿ ಧಡಿಯನ್ನು ಹೊಂದಿದ್ದು ಮಧ್ಯದಲ್ಲಿ ಹೂವಿನ ನಕ್ಷೆಗಳನ್ನು ಹೊಂದಿದೆ. ತಲೆಗೂದಲನ್ನು ತುರುಬಾಗಿ ಕಟ್ಟಿದ್ದು ಆ ತುರುಬು ಮುಚ್ಚುವಂತೆ ಅರ್ಧ ತಲೆಗೆ ಸೆರಗನ್ನು ಹೊದ್ದುಕೊಂಡಿದ್ದಾಳೆ. ಮೀನಿನಾಕಾರದ ಕಣ್ಣು, ಕಾಮನ ಬಿಲ್ಲಿನಂತರಿರುವ ಹುಬ್ಬು, ಮೂಗಿನಲ್ಲಿರುವ ರಂಗಿನಾಕಾರದ ಮೂಗುತಿ ಅವಳ ಮುಖಕ್ಕೆ ಹೆಚ್ಚಿನ ಅಂದವನ್ನು ಕೊಟ್ಟಿದೆ. ಕುಂಕುಮವನ್ನು ಹಣೆಯಲ್ಲಿ ಅಡ್ಡ ಪಟ್ಟಿಯಾಗಿ ಹಚ್ಚಿಕೊಂಡಿದ್ದಾಳೆ. ಇವಳು ಮುಂದುಗಡೆ ನವಿಲೊಂದು ಸಂತೋಷದಿಂದ ಆಡುತ್ತಲಿದ್ದು ಕತ್ತು ತಿರುವಿ ನೋಡುತ್ತಲಿದೆ. ವೀಣಾಪಾಣಿ ಸರಸ್ವತಿಯು ಎಡಬಲಗಳಲ್ಲಿ ಮಹಿಳೆಯರಿಬ್ಬರು ಚಾಮರ ಬೀಸುತ್ತ ನಿಂತಿದ್ದಾರೆ. ಅವರ ಪಕ್ಕದಲ್ಲಿ ದೊಡ್ಡ ಹಳದಿ ಹೂಗಳ ಗಿಡ ಬೆಳೆದಿದೆ. ಎಡಗಡೆಯ ಮಹಿಳೆಯ ಸೀರೆ ಪಾರದರ್ಶಕವಾಗಿದೆ. ಇಬ್ಬರೂ ಸ್ತ್ರೀಯರು ಹೊಕ್ಕುಳವರೆಗೂ ಇಳಿಬಿದ್ದ ಕೊರಳ ಸರವನ್ನು ಧರಿಸಿದ್ದಾರೆ. ವೀಣೆ ನುಡಿಸುತ್ತಿರುವ ಮಹಿಳೆಯ ಮೇಲ್ಭಾಗದಲ್ಲಿ ಮುಖಕ್ಕೆ ಎದುರಾಗಿ ಆರತಿ ತಟ್ಟೆಯನ್ನು ಚಿತ್ರಿಸಲಾಗಿದ್ದು ಅದರಲ್ಲಿ ಫಲತಾಂಬೂಲ ಕಳಶಗಳು ಇವೆ. ಈ ಒಟ್ಟು ಚಿತ್ರವನ್ನು ಗಮನಿಸಿದಾಗ ಇದು ವೀಣಾಪಾಣಿ ಸರಸ್ವತಿಯ ಚಿತ್ರವಾಗಿದೆ ಎಂದು ಹೇಳಬಹುದು. ಬ್ರಹ್ಮನು ಕಮಲದ ಮೇಲೆ ಕುಳಿತಿರದೇ ನೆಲದ ಮೇಲೆ ಕುಳಿತಿರುವುದು, ಮೇಲಿನ ಸಾಲಿನ ಚಿತ್ರದಲ್ಲಿ ಕಾಣಬಹುದು. ಸರಸ್ವತಿ ಚಿತ್ರವು ವರ್ಣ ವಿನ್ಯಾಸ, ಚಿತ್ರ ಸಂಯೋಜನೆ, ರೇಖಾವಿನ್ಯಾಸದಿಂದ ಅತ್ಯಂತ ಉತ್ತಮವಾದ ಕೃತಿಯಾಗಿದೆ. ಚಿತ್ರದ ಹೊರ

ರೇಖೆಗಳು ಅತ್ಯಂತ ಶಕ್ತಿಯುತವಾಗಿದ್ದು ಜೀವಂತಿಕೆಯಿಂದ ಕೂಡಿವೆ. ಆಕೃತಿಗಳೂ ಪ್ರಮಾಣಬದ್ಧವಾಗಿ ರಚಿಸಿವೆ. ಚಿತ್ರಗಳ ಭಾವಭಂಗಿ ಆಕರ್ಷಕವಾಗಿದೆ. ಈ ಚಿತ್ರವು ಈ ಇಡೀ ಪಟ್ಟಿಕೆಯಲ್ಲಿ ಅಲ್ಲದೇ ಮಹಾಲಿಂಗಪುರದ ಚಿತ್ರಗಳಲ್ಲೇ ಅತ್ಯಂತ ಉತ್ಕೃಷ್ಟ ಕೃತಿಯಾಗಿದೆ. ಕಿರುರೂಪ ಶೈಲಿಯ ಚಿತ್ರಗಳ ವಿಸ್ತೃತ ರೂಪದಂತಿರುವ ಈ ಕೃತಿ ಪೇಶ್ವೆ ಶೈಲಿಯಲ್ಲಿದೆ.

೪. ವಿಭಿನ್ನ ಗಣೇಶ

ಇನ್ನೊಂದು ಸುಂದರವಾದ ಗಣಪತಿಯ ಚಿತ್ರವೊಂದಿದೆ. ಗಣಪತಿಯು ಅಲಂಕೃತ ಪೀಠವೊಂದರ ಮೇಲೆ ಹಿಂದಿರುವ ದಿಂಬಿಗೆ ಒರಗಿಕೊಂಡು ಕುಳಿತ್ತಿದ್ದಾನೆ. ಪೀಠದ ಹಿಂದಿರುವ ಪ್ರಭಾವಳಿ ಇಲ್ಲಿಯೂ ವೀಣಾಪಾಣಿ ಮಹಿಳೆಯ ಚಿತ್ರದಂತೆಯೆ ಇದ್ದು ಅದರ ಮೇಲ್ಭಾಗದಲ್ಲಿ ಮಠದ ದೈವವಾದ ಮಹಾಲಿಂಗೇಶ್ವರರ ಸಾಂಕೇತಿಕ ಮುಖವಿದೆ. ಗಣಪತಿಯು ಕಂದು ವರ್ಣದ ಚುಕ್ಕೆಗಳಿರುವ ಉದ್ದ ತೋಳಿನ ಪೇಶ್ವೆ ಶೈಲಿಯ ಅಂಗಿಯನ್ನು ತೊಟ್ಟುಕೊಂಡಿದ್ದಾನೆ. ಹೊಟ್ಟೆಯು ಅಂಗಿಯನ್ನು ಮೀರಿ ಹೊರ ಬಂದಿದೆ. ನಾಲ್ಕು ಕೈಗಳ ಗಣಪತಿಯು ಪದ್ಮಾಸನ ಹಾಕಿ ಕುಳಿತಿದ್ದಾನೆ. ಈ ಗಣಪತಿಯ ಚಿತ್ರದ ಎದುರಿಗೆ ಓರ್ವ ಮಹಿಳೆ ಆರತಿ ಬೆಳಗುತ್ತ ನಿಂತಿದ್ದರೆ ಎಡ ಭಾಗದಲ್ಲಿ ಇನ್ನೋರ್ವ ಮಹಿಳೆ ಚಾಮರ ಬೀಸುತ್ತ ನಿಂತಿದ್ದಾಳೆ. ಇಬ್ಬರೂ ಮಹಿಳೆಯರು ತೆಳು ಹಳದಿ ವರ್ಣದ ಸೀರೆ ಉಟ್ಟುಕೊಂಡು ಕೆಂಪು ವರ್ಣದ ಕುಪ್ಪಸ ತೊಟ್ಟಿದ್ದಾರೆ. ಗಣಪತಿಯ ಮೇಲ್ಭಾಗದಲ್ಲಿ ಆತನ ಮುಖಕ್ಕೆ ಎದುರಾಗಿ ಒಂದು ಪಾತ್ರೆಯ ತುಂಬ (ಮೋಧಕ ಆಹಾರ ಪದಾರ್ಥ) ತುಂಬಿ ಇಟ್ಟಿದ್ದು ಅವುಗಳನ್ನು ಗಿಳಿಗಳೆರಡು ಕುಕ್ಕಿ ತಿನ್ನುತ್ತಿವೆ. ವರ್ಣ ವಿನ್ಯಾಸ, ರೇಖಾ ವಿನ್ಯಾಸಗಳಿಂದ ಚಿತ್ರವು ಉತ್ತಮವಾಗಿದೆ. ವರ್ಣ ವಿನ್ಯಾಸವು ಪ್ರಖರವರ್ಣಗಳಿಂದ ಕೂಡಿದ್ದರೂ ಅವುಗಳನ್ನು ಮಿಶ್ರ ಮಾಡುವ ರೀತಿ ಹದವರಿತು ಸಂಯಮದಿಂದ ಅವುಗಳನ್ನು ಬಳಸಿದ ರೀತಿಯಿಂದ ವರ್ಣಗಳು ಕಣ್ಣಿಗೆ ತಂಪಾದ ಅನುಭವ ಕೊಡುತ್ತವೆ.

೫. ನಂದಿ ಆರೋಹಿ ಶಿವ

ಮಧ್ಯದಲ್ಲಿ ಶಿವನು ನಂದಿಯ ಮೇಲೆ ಕುಳಿತು ಬರುತ್ತಾದ್ದಾನೆ. ಅಲಂಕೃತವಾದ ನಂದಿಯ ಮೇಲೆ ಕುಳಿತು ಬರುತ್ತಿರುವ ಶಿವನು ಹಸನ್ಮುಖನಾಗಿದ್ದಾನೆ. ಶಿವನ ಹಿಂದೆ ಶಿವ ಗಣಗಳು ಛತ್ರ ಚಾಮರ ಹಿಡಿದು ಬರುತ್ತಿದ್ದಾರೆ. ಗಣಗಳ ಹಿಂದೆ ಗಣಪತಿ, ನಾರದ, ವೀರಭದ್ರರೂ ಅವರೊಂದಿಗೆ ನಡೆಯುತ್ತಿದ್ದಾರೆ. ನಡೆದು ಬರುತ್ತಿರುವ ಗಣಪತಿ ಕಿರೀಟ ಧರಿಸಿದ್ದು, ಹಳದಿ ವರ್ಣದ ಪಂಚೆ ಉಟ್ಟುಕೊಂಡು ಪೇಶ್ವೆ ಶೈಲಿಯಲ್ಲಿ ಉದ್ದ ತೋಳಿನ ಕೆಂಪಂಗಿಯನ್ನು ತೊಟ್ಟಿದ್ದಾನೆ.

೬. ದೇವತಾ ಪುರುಷರು

ಶಿವನ ಎದುರಿನಲ್ಲಿ ಎಂಟು ಮಂದಿ ಕಿರೀಟ ಧರಿಸಿದ ದೇವತೆಗಳು ಕೈ ಮುಗಿದು ಆತನನ್ನು ಬರಮಾಡಿಕೊಳ್ಳುತ್ತಿದ್ದಾರೆ. ಇವರಲ್ಲಿ ಒಬ್ಬನು ಎರಡು ಮುಖಗಳನ್ನು ಧರಿಸಿದ್ದಾರೆ. ಮಸ್ತಿ ಅಂಗಿಯ ಮೇಲೆ ಜಾಕೀಟನಂತಹ ಕಿರು ಅಂಗಿಗಳನ್ನು ಎಲ್ಲರೂ ಧರಿಸಿದ್ದಾರೆ. ಇವರೆಲ್ಲ ಎಡಗಾಲನ್ನು ಮೇಲೆತ್ತಿ ಬಲಗಾಲನ್ನು ಒಂದು ಅಗಲವಾದ ಹೂವಿನ ಮೇಲೆ ಇಟ್ಟು ಒಂದೇ ಕಾಲಿನ ಮೇಲೆ ನಿಂತಿದ್ದಾರೆ. ಮಹಾಲಿಂಗಪುರದ ದೇವತಾ ಚಿತ್ರಗಳು ವೇಷಭೂಷಣ, ವಸ್ತ್ರ ವಿನ್ಯಾಸಗಳು ಸಹಜ ಮನುಷ್ಯರ ಹಾಗಿದ್ದು ಇಲ್ಲಿ ದೇವತೆಗಳನ್ನು ಮನುಷ್ಯರಿಂದ ಪ್ರತ್ಯೇಕಿಸುವ ಪ್ರಯತ್ನವಿಲ್ಲ. ದೇವತೆಗಳೆಂದರೆ ಅತೀತ ವೆನಿಸುವ ಭಾವನೆಯ ಬದಲಾಗಿ ಮನುಷ್ಯತ್ವ, ಮಾನವೀಯತೆ, ಪ್ರೀತಿ ಮಮತೆಗಳಂತಹ ಮಾನವೀಯ ಮೌಲ್ಯಗಳು ಹೊಂದಿದ ವ್ಯಕ್ತಿಯೇ ದೇವತಾ ಸ್ವರೂಪ ಎನ್ನುವ ೧೨ನೇ ಶತಮಾನದ ಶರಣರ ತತ್ವ ಆದರ್ಶಗಳಿಗನುಸಾರವಾಗಿ ಮನುಷ್ಯ ರೂಪದಲ್ಲೇ ದೇವತೆಗಳನ್ನು ಕಾಣುವ ಸಾಂಕೇತಿಕ ನಿರೂಪಣೆ ಇಲ್ಲಿನ ಚಿತ್ರಗಳಲ್ಲಿವೆ.

೭. ಮುಸ್ಲಿಂ ಚಿತ್ರಗಳು

ಈ ಚಿತ್ರಗಳಲ್ಲಿ ಮೇಲಿನಿಂದ ಎರಡನೆಯ ಸಾಲಿನಲ್ಲಿ ಬಲಭಾಗದಲ್ಲಿ ಐದು ಜನ ಮುಸ್ಲಿಂ ವ್ಯಕ್ತಿಗಳು ಚಿತ್ರಿತರಾಗಿದ್ದಾರೆ. ಇವರು ಟೊಪ್ಪಿಗೆ ಧರಿಸಿದ್ದು ಗಡ್ಡ ಬಿಟ್ಟಿದ್ದಾರೆ. ಕೊರಳಲ್ಲಿ ರುದ್ರಾಕ್ಷಿಯೂ ಇದ್ದು, ಮುಸ್ಲಿಂ, ಸಂತರಾದ ಸೂಫಿಗಳು ಮತ್ತು ಫಕೀರರಂತೆ ಕಾಣುತ್ತಾರೆ. ಇವರೂ ಸಹಿತ ಜಾಕೀಟ ನಂತಹ ಕಿರು ಅಂಗಿಯನ್ನು ತೊಟ್ಟಿದ್ದು ಹಣೆಯಲ್ಲಿ ವಿಭೂತಿ ಧಾರಣ ಮಾಡಿದ್ದಾರೆ. ಈ ಮಠಕ್ಕೆ ಹಿಂದಿನಿಂದಲೂ ಮುಸ್ಲಿಂ ಧಾರ್ಮಿಕರೂ ಸಹಿತ ಭಕ್ತಿ ತೋರುತ್ತಿದ್ದರೆಂದು ಈ ಚಿತ್ರಗಳಿಂದ ಹೇಳಬಹುದು. ಅಲ್ಲದೇ ಈಗಲೂ ಅನೇಕ ಜನ ಮುಸ್ಲಿಂಮರು ಈ ಮಠಕ್ಕೆ ಭಕ್ತಿಯಿಂದ ನಡೆದುಕೊಳ್ಳುತ್ತಾರೆ. ವಿಜಾಪುರದ ಸುಲ್ತಾನರು ಸಹಿತ ಈ ಮಠದ ಬಗ್ಗೆ ಗೌರವುಳ್ಳವರಾಗಿದ್ದರಲ್ಲದೇ ಮಠಕ್ಕೆ ಸನದ ಕೊಟ್ಟಿರುವುದು ತಿಳಿದುಬರುತ್ತದೆ.

೮. ಸ್ವಾಮಿಜಿ ಹಾಗೂ ತಪಸ್ಸು ಚಿತ್ರ

ಈ ಚಿತ್ರದಲ್ಲಿ ಮಹಾಲಿಂಗೇಶ್ವರರು ತಪಗೈಯುತ್ತಿರುವ ಅನೇಕ ಚಿತ್ರಗಳಿವೆ. ಮಹಲಿಂಗಪುರದ ಸಮೀಪವಿರುವ ಚೆನ್ನಗಿರಿ ಎಂಬ ಚಿಕ್ಕ ಬೆಟ್ಟ ಪ್ರದೇಶದಲ್ಲಿ ಮಹಾಲಿಂಗ ಸ್ವಾಮಿಗಳು ತಪ್ಪಸ್ಸನ್ನಾಚರಿಸಿದ್ದು ಅವರ ತಪಸ್ಸಿನ ವಿವಿಧ ಭಂಗಿಗಳು ಇಲ್ಲಿ ಚಿತ್ರಿಸಲ್ಪಟ್ಟಿವೆ. ಹಿನ್ನೆಲೆಯಲ್ಲಿ ಕಲ್ಪನೆ ಕೊಡುತ್ತಿವೆ. ಸ್ವಾಮಿಗಳು ತಪಸ್ಸನ್ನಾಚರಿಸುತ್ತಿರುವ ವಿವಿಧ ಭಂಗಿಗಳು ಹೀಗಿವೆ. ಜಡಧಾರಿಯಾದ ಗಡ್ಡ ಮೀಸೆಗಳನ್ನು

ಬಿಟ್ಟುಕೊಂಡಿರುವ ಮುನಿಯು ಬರೀ ಕೌಪೀನ ಧರಿಸಿಕೊಂಡಿದ್ದು ಲಿಂಗಪೂಜೆಯಲ್ಲಿ ತೊಡಗಿದ್ದಾನೆ. ನೀಲವರ್ಣದ ಈಶ್ವರ ಲಿಂಗಕ್ಕೆ ತನ್ನ ಕಮಂಡಲದಿಂದ ನೀರನ್ನು ಹಾಕಿ ಹೂಗಳನ್ನು ಸಮರ್ಪಿಸುತ್ತಿದ್ದಾನೆ. ಪಕ್ಕದಲ್ಲಿ ಬಾಳೆಗಿಡ ಮತ್ತಿತ್ತರ ಗಿಡಗಂಟೆಗಳು ಬೆಳೆದಿದ್ದು ವಿವಿಧ ಬಗೆಯ ಪಕ್ಷಿ ಸಮೂಹ ಅಲ್ಲಿ ಚಿಲಿಪಿಲಿ ಗುಟ್ಟುತ್ತಿವೆ. ಮತ್ತೊಂದು ಕಡೆಗೆ ಮುನಿಯು ಕೌಪೀನ ಧಾರಿಯಾಗಿದ್ದು ತಲೆ ಕೆಳಗೆ ಮಾಡಿ ನಿಂತಿರುವ ಭಂಗಿಯಲ್ಲಿ ತಪಸ್ಸನ್ನಾಚರಿಸುತ್ತಿದ್ದಾನೆ. ಇಲ್ಲಿಯೂ ಹಿನ್ನೆಲೆಯಲ್ಲಿ ಗಿಡ ಮರಗಳಿಂದ ಕೂಡಿ ತಪೋಭೂಮಿಯ ವಾತಾರಣವಿದ್ದು ಕೋತಿಗಳೆರಡು ಮುನಿಯ ತಪಸ್ಸನ್ನು ಕುತೂಹಲದಿಂದ ವೀಕ್ಷಿಸು ತ್ತಲಿದೆ.

ತಪಸ್ಸಿನಲ್ಲಿ ಕುಳಿತ ಋಷಿಯ ಚಿತ್ರವೊಂದು ಬಲಭಾಗದಲ್ಲಿ ರಚನೆಯಾಗಿದೆ. ಗಿಡಗಳಿಂದ ಆವೃತವಾದ ಒಂದು ಪ್ರದೇಶದ ಬುಡದಲ್ಲಿ ಮುನಿಯ ಜಪಮಾಲೆ ಹಿಡಿದುಕೊಂಡು ತಪಸ್ಸಿನಲ್ಲಿ ಕುಳಿತ್ತಿದ್ದಾನೆ. ಆತ ಕುಳಿತ ರೀತಿ ಆಶ್ಚರ್ಯವಾಗಿದೆ. ಎರಡು ಕಾಲುಗಳನ್ನು ಕೂಡಿಸಿಕೊಂಡು ಪಾದಗಳನ್ನು ನೆಲಕ್ಕೂರಿ ಕುಳಿತ್ತಿದ್ದಾನೆ. ಋಷಿಯ ಹಿಂದೆ ಹುಲಿಯೊಂದು ಮಲಗಿಕೊಂಡಿದೆ. ಋಷಿಯ ಬಲಬದಿಯಲ್ಲಿ ಹಾಗೂ ಎಡಬದಿಯಲ್ಲಿ ನಾಯಿಗಳು ಕುಳಿತುಕೊಂಡಿವೆ. ಈ ಚಿತ್ರವು ತೀರ ಗ್ರಾಮೀಣ ಶೈಲಿಯಲ್ಲಿದ್ದು ರೇಖೆಗಳು ಬಹಳ ಕಳಪೆಯಾಗಿವೆ. ಅದೇ ತಾನೇ ಕಲಿಯುತ್ತಿರುವ ವಿದ್ಯಾರ್ಥಿಯು ಇದನ್ನು ಬರೆದಂತೆ ಇದೆ.

ಸ್ವಾಮಿಗಳ ತಪಸ್ಸಿನ ಭಂಗಿಯ ಇನ್ನೊಂದು ಚಿತ್ರದಲ್ಲಿ ಕೌಪೀನ ಧರಿಸಿದ ಮುನಿಯು ಎರಡೂ ಕಾಲುಗಳನ್ನು ಕತ್ತರಿ ಹಾಗೆ ಜೋಡಿಸಿಕೊಂಡು ಯೋಗ ಪೀಠದಲ್ಲಿ ಕುಳಿತ್ತಿದ್ದು, ಕೈಯಲ್ಲಿ ರುದ್ರಾಕ್ಷಿ ಮಾಲೆ ಹಿಡಿದುಕೊಂಡು ಜಪದಲ್ಲಿ ತೊಡಗಿದ್ದಾನೆ. ಹುಲಿಯ ಚರ್ಮದ ಮೇಲೆ ಕುಳಿತ ಮುನಿಯ ಎಡ ಬಲಗಳಲ್ಲಿ ಅಲಂಕಾರಿಕ ವಿನ್ಯಾಸದಲ್ಲಿ ಗಿಡಗಳು ಚಿತ್ರಿಸಿವೆ. ಈ ರೀತಿಯ ಮುನಿಗಳ ತಪಸ್ಸಿನ ಚಿತ್ರಗಳು ಮಹಾಲಿಂಗೇಶ್ವರ ಮುನಿಗಳು ಚೆನ್ನಗಿರಿ ಬೆಟ್ಟದಲ್ಲಿ ತಪಸ್ಸು ಮಾಡಿದ ವಿವಿಧ ಭಂಗಿಗಳನ್ನು ತೋರಿಸುತ್ತಿದ್ದು, ಮಹಾಲಿಂಗೇಶ್ವರ ಮುನಿಗಳ ಕಠಿಣ ತಪಸ್ಸಿನ ನಿಲುವುಗಳ ಭಕ್ತಿ ಭಾವಗಳು ಇಲ್ಲಿ ವ್ಯಕ್ತಗೊಂಡಿವೆ.

ಪವಾಡಗಳು: ಮಹಾಲಿಂಗ ಮುನಿಗಳ ತಪಸ್ಸಿನ ಚಿತ್ರಗಳಲ್ಲದೆ ಮಹಾಲಿಂಗ ಮುನಿಗಳ ಪವಾಡವನ್ನು ನಿರೂಪಿಸುವ ಚಿತ್ರಗಳೂ ಇಲ್ಲಿ ರಚನೆಯಾಗಿವೆ. ಅವುಗಳನ್ನು ಹೀಗೆ ಹೆಸರಿಸಬಹುದು.

* ಸತ್ತ ಬಾಲಕನನ್ನು ಬದುಕಿಸಿದ್ದು.

* ಮಾಲೋಜಿ ರಾಜನ ಕುಮಾರ ಗೋವಿಂದರಾಜನನ್ನು ಮಲರೋಗದಿಂದ ನಿವಾರಣೆ ಮಾಡಿದ್ದು.
* ಶಿವಲಿಂಗದ ಮೇಲಿನ ಬಟ್ಟೆ ಕದ್ದೊಯ್ಯುವ ಕಳ್ಳನನ್ನು ಕ್ಷಮಿಸಿದ್ದು.
* ನಾಗಯ್ಯ ಮುಪ್ಪಿನಾಂಬೆ ದಂಪತಿಗಳ ವೀರ ವ್ರತ ಪೂರೆಸಿದ್ದು.
* ಮಾಲೋಜಿ ರಾಜನು ನರಗಟ್ಟಿ ಗ್ರಾಮದಲ್ಲಿ ಅಷ್ಟಲಿಂಗಗಳನ್ನು ಸ್ಥಾಪಿಸಿದ್ದು.

೯. ಸತ್ತ ಬಾಲಕನನ್ನು ಬದುಕಿಸಿದ್ದು

ಮೋದಪುರದ ಈಗಿನ ಮುಧೋಳದ ರಾಜನಾದ ಮಲೋಜಿರಾವ್ ಘೋರ್ಪಡೆಯು ಮಹಾಲಿಂಗೇಶ್ವರರ ಪರಮ ಭಕ್ತನಾಗಿದ್ದನು. ಒಂದು ದಿನ ರಾಜನು ತನ್ನ ಚದುರಂಗ ಸೇನೆಯ ಸಡಗರದೊಂದಿಗೆ ಮಹಾಲಿಂಗ ಮುನಿನಾಥನನ್ನು ಕಾಣಲು ಹೊರಟನು ನರಗಟ್ಟಿ ಊರಿನಲ್ಲಿ ಹೊರಟ ಈ ವೈಭವದ ಮೆರವಣಿಗೆ ನೋಡಲು ಮುದುಕರಾದಿಯಾಗಿ ಅನೇಕ ಸ್ತ್ರೀಪುರುಷರು ನೆರೆದರು. ಅದರಲ್ಲಿ ಒಬ್ಬ ಬಾಲಕ ಪಟ್ಟಧಾರೆಯ ವೈಭವಕ್ಕೆ ಬೆರಗಾಗಿ ಅದನ್ನು ಹತ್ತಿರದಿಂದ ವೀಕ್ಷಿಸಲು ತೆರಳಿದಾಗ, ತನ್ನೆದುರಾಗಿ ಬಂದ ಬಾಲಕನನ್ನು ಆನೆಯು ಸಿಟ್ಟಿನಿಂದ ಸೊಂಡಿಲಿನಲ್ಲಿ ಎತ್ತಿ ಅಪ್ಪಳಿಸಿಕೊಂಡು ಹಾಕಿತು. ಈ ಘಟನೆಯಿಂದ ಮನನೊಂದ ಮಹಾಲಿಂಗೇಶ್ವರರ ಮೊರೆ ಹೋಗಲು ಮುನಿಗಳು ಕೃಪೆ ಮಾಡಿ ಸತ್ತ ಬಾಲಕನನ್ನು ಮತ್ತೆ ಬದುಕಿಸಿದರೆಂದು, ಮಹಾಲಿಂಗೇಶ್ವರ ಮಹಿಮೆ ಸಾರುತ್ತದೆ. ಇಲ್ಲಿ ರಚನೆಯಾದ ಚಿತ್ರದಲ್ಲಿ ಸತ್ತ ಬಾಲಕನನ್ನು ರಾಜನು ಮಹಾಲಿಂಗೇಶ್ವರ ಮುನಿಯ ಮುಂದೆ ತಂದು ಹಾಕಿದ್ದರು ನೀನೇ ಕಾಪಾಡಬೇಕೆಂದು ಮೊರೆ ಇಡುತ್ತಿದ್ದಾನೆ. ಅವನ ಹಿಂದೆ ಇಬ್ಬರು ಬಾಲಕರೂ ಓಡುತ್ತಾ ಬಂದು ನಿಂತಿದ್ದಾರೆ. ಮಹಾಲಿಂಗೇಶ್ವರ ಮುನಿಗಳು ತಮ್ಮ ತಪೋದಂಡದಿಂದ ಅಭಿಮಂತ್ರಿಸಿ ಬಾಲಕನನ್ನು ಜೀವಂತ ಮಾಡುತ್ತಿರುವಂತೆ ಚಿತ್ರಿಸಲಾಗಿದೆ. ವರ್ಣ ವಿನ್ಯಾಸದಲ್ಲಿ ಸತ್ತ ಬಾಲಕನ ತಾಯಿಯು ಕೆಂಪು ಬಣ್ಣದ ಸೀರೆ ಉಟ್ಟುಕೊಂಡಿದ್ದು ತಲೆಯ ಮೆಲೆ ಸೆರಗು ಹೊದ್ದುಕೊಂಡಿದ್ದಾಳೆ. ಸೀರೆಗೊಪ್ಪುವ ಹಸಿರು ಬಣ್ಣದ ಹೂವಿನ ಕುಪ್ಪಸ ತೊಟ್ಟಿದ್ದು, ಅಂಚುಗಳನ್ನು ಹೊಂದಿದೆ. ಮೂಗಿನಲ್ಲಿ ದೊಡ್ಡದಾದ ನಾಗಾಭರಣ ಕಂಗೊಳಿಸುತ್ತಿದೆ. ಮಹಿಳೆಯ ಹಿಂದಿರುವ ಬಾಲಕರು ಚಡ್ಡಿಯನ್ನು ಮಾತ್ರ ಧರಿಸಿದ್ದು ಬರೀ ಮೈಮೇಲೆಯೇ ಚಿತ್ರಸಲ್ಪಟ್ಟಿದ್ದಾರೆ. ಘಟನೆಗೆ ಸಂಬಂಧಿಸಿದಂತೆ ಇನ್ನೂ ಹೆಚ್ಚಿನ ವಿವರಗಳು ಬೇಕೆನಿಸುತ್ತದೆಯಾದರೂ ಇದು ಸಾಂಕೇತಿಕ ರೂಪದಲ್ಲಿದೆ.

ಜಮಖಂಡಿ ಅರಮನೆ ಭಿತ್ತಿಚಿತ್ರಗಳು

"ಜಮಖಂಡಿ ಸಂಸ್ಥಾನಿಕರು ಕಲಾಪ್ರೀಯರಾಗಿದ್ದು ತಮ್ಮ ಅರಮನೆ ತಾವು ಪೂಜಿಸುತ್ತಿದ್ದ ದೇವಾಲಯ ಸಾರ್ವಜನಿಕ ಕಟ್ಟಡಗಳು ಮುಂತಾದ ನೆಲೆಗಳಲ್ಲಿ ಚಿತ್ರಗಳನ್ನು ಬರೆಸಿದ್ದಾರೆ"[೨]. ಕೆಲವು ಸಂದರ್ಭದಲ್ಲಿ ಚಿತ್ರದ ಜೊತೆಗೆ ಶಿಲ್ಪಗಳನ್ನು ರಚನೆ ಮಾಡಿ ಅಲಂಕಾರಣಗೊಳಿಸಿದ್ದಾರೆ. ಜಮಖಂಡಿ ಅರಮನೆಯ ಸುಂದರ ವಾಸ್ತು ವಿನ್ಯಾಸದಲ್ಲಿ ಅದರ ಸೌಂದರರ್ಯವನ್ನು ವೃದ್ಧಿಸುವಲ್ಲಿ ಚಿತ್ರಕಲೆಯು ಪ್ರಮುಖ ಪಾತ್ರ ವಹಿಸಿದೆ. ಈ ಸಂಸ್ಥಾನಿಕರು ತಮ್ಮ ಅರಮನೆಯ ವಿಶ್ರಾಂತಿ ಕೊಠಡಿ, ಶಯನ ಗ್ರಹ, ಪೂಜಾ ಕೊಠಡಿ ಮುಂತಾದ ಕಡೆಗಳಲ್ಲಿ ಚಿತ್ರಗಳನ್ನು ಬರೆಸಿದ್ದಾರೆ. ಅದೇ ರೀತಿಯಾಗಿ ಅರಮನೆಯ ಆವರಣದಲ್ಲಿರುವ ದೇವಾಲಯಗಳಲ್ಲಿ ಚಿತ್ರಗಳನ್ನು ರಚನೆ ಮಾಡಿದ್ದಾರೆ. ಇವಲ್ಲದೆ ಅರಮನೆಯ ರಂಗ ಮಂದಿರ, ಅಧಿಕಾರಿಗಳ ಮನೆಗಳಲ್ಲಿ ಚಿತ್ರಗಳು ಕಂಡುಬರುತ್ತವೆ. ಇವುಗಳ ಜೊತೆಗೆ ಅರಮನೆಯ ಪರಿಸರದಲ್ಲಿರುವ ವಿವಿಧ ಕಟ್ಟಡಗಳಲ್ಲಿ ಚಿತ್ರದ ಕುರುಹುಗಳು ಮತ್ತು ಬಣ್ಣದ ಲೇಪನ ಕಂಡುಬರುತ್ತವೆ.

ಕೆಲವು ಕಟ್ಟಡಗಳಲ್ಲಿ ಒಳ ಭಾಗ ಮತ್ತು ಹೊರ ಭಾಗವನ್ನು ಸಂಪೂರ್ಣವಾಗಿ ಬಣ್ಣದಿಂದ ಲೇಪನ ಮಾಡಲಾಗಿದ್ದು ಪೂರಕವಾಗಿ ವರ್ಣ ಪಟ್ಟಿಗಳನ್ನು ಎಳೆದಿದ್ದಾರೆ. ಇಂಥಹ ಅಂಶಗಳನ್ನು ಸಹಿತ ಇಲ್ಲಿ ಗಮನಿಸಲಾಗಿದೆ. ಮತ್ತೆ ಕೆಲವು ಕಡೆಗೆ ಅಳವಡಿಸಲಾದ ಮರದ ಫಲಕಗಳ ಮೇಲೆ ಮತ್ತು ಸಂಗಮವರಿ ಕಲ್ಲಿನ ಮೇಲೆ ಬಣ್ಣದ ಲೇಪನ, ಬಣ್ಣದ ನಕ್ಷೆಯ ವಿನ್ಯಾಸಗಳಿವೆ. ಗಣೇಶನ ಗುಡಿಯ ಒಳಭಾಗದಲ್ಲಿ ಅಳವಡಿಸಲಾಗಿರುವ ಮರದ ಫಲಕದ ಮೇಲೆ ಬಣ್ಣದ ಲೇಪನದಿಂದ ಹೂವಿನ ನಕ್ಷೆ ಚಿತ್ರಿಸಿದ್ದಾರೆ. ಈ ರೀತಿಯಲ್ಲಿ ಒಟ್ಟು ಜಮಖಂಡಿ ಅರಮನೆಯ ಕಟ್ಟಡದ ಪರಿಸರವು ವರ್ಣಚಿತ್ರ ಕಲೆ ಮತ್ತು ವರ್ಣ ಲೇಪನದಿಂದ ಕಂಗೊಳಿಸುತ್ತದೆ.

೧. ಜಮಖಂಡಿ ಅರಮನೆಯ ಚಿತ್ರಕಲೆ.

ಈಗಾಗಲೇ ಗಮನಿಸಿದಂತೆ ಜಮಖಂಡಿ ಅರಮನೆಯ ಪರಿಸರದಲ್ಲಿ ಇರುವಂತಹ ಚಿತ್ರಗಳಿರುವ ಕಟ್ಟಡಗಳಲ್ಲಿ ರಾಮಿಯ ಶಯನಗ್ರಹ, ದೇವಾಲಯಗಳು, ಸಭಾ ಭವನ, ಕೊಠಡಿಗಳು, ರಂಗಮಂದಿರ, ಮುಖ್ಯವಾಗಿವೆ. ಇಲ್ಲಿನ ಚಿತ್ರಕಲೆ ಮುಖ್ಯವಾಗಿ ವಿವಿಧ ಮಾಧ್ಯಮಗಳ ಮೇಲೆ ರಚನೆಯಾಗಿವೆ. ಈ ಹಿನ್ನೆಲೆಯಲ್ಲಿ ಇಲ್ಲಿನ ಚಿತ್ರಕಲೆಯನ್ನು ಈ ಕೆಳಗಿನಂತೆ ವಿಂಗಡಿಸಿಕೊಂಡು ಅಧ್ಯಯನ ಮಾಡಲಾಗಿದೆ.

---

೨. ಮಹಾದೇವ ಖಾಡಿಲಕರ್., ಜಮಖಂಡಿ ಸಂಸ್ಥಾನ,

೧. ಗಾರೆ ಮೇಲಿನ ಚಿತ್ರಗಳು   ೨. ಶಿಲೆಯ ಮೇಲಿನ ಚಿತ್ರಗಳು

೩. ಗಾಜಿನ ಮೇಲಿನ ಚಿತ್ರಗಳು   ೪. ಮರದ ಫಲಕದ ಮೇಲಿನ ಚಿತ್ರಗಳು

೫. ರಾಜವಂಶಸ್ಥರ ಕೈ ಬರಹದ ಚಿತ್ರಗಳು.

೧. ಗಾರೆ ಮೇಲಿನ ಚಿತ್ರಗಳು

ಗಾರೆ ಮೇಲೆ ಚಿತ್ರ ರಚಿಸುವ ಪದ್ಧತಿಯು ಪ್ರಾಚೀನ ಕಾಲದಿಂದಲೇ ಜಗತ್ತಿನ ಹಲವಾರು ಭಾಗಗಳಲ್ಲಿ ಕಂಡುಬರುತ್ತದೆ. ಈಜಿಪ್ಟಿನ ನಾಗರಿಕತೆಯ ಕಾಲದಲ್ಲಿ ಅಲ್ಲಿನ ಜನರು ತಮ್ಮ ದೇವಾಲಯ ಅರಮನೆಯಂಥಹ ವಾಸ್ತು ರಚನೆಗಳು ಎಲ್ಲಕ್ಕಿಂತ ಮುಖ್ಯವಾಗಿ ಪಿರಾಮಿಡ್‌ಗಳಲ್ಲಿ ಗಾರೆ ಲೇಪಿಸಿ ಅದರ ಮೇಲೆ ಚಿತ್ರ ರಚನೆ ಮಾಡಿದ್ದಾರೆ. ರೋಮ ನಗರದ ಪುರಾತನ ಹಂಪಿ ಸಂಸ್ಕೃತಿಯಲ್ಲಿ ಉತ್ಖನನ ಸಂದರ್ಭದಲ್ಲಿ ದೊರೆತ ವಾಸ್ತು ರಚನೆಗಳಲ್ಲಿ ಗಾರೆ ಮೇಲೆ ರಚಿಸಿದ ಚಿತ್ರಗಳು ಕಂಡು ಬಂದಿವೆ. ಇನ್ನೂ ಹಲವಾರು ಉದಾಹರಣೆಗಳನ್ನು ಕೊಡಬಹುದಾಗಿದೆ.

ಗಾರೆ ಮೇಲೆ ಚಿತ್ರ ರಚಿಸುವ ವಿಧಾನವು ತನ್ನದೇಯಾದ ಕ್ರಮಗಳನ್ನು ಹೊಂದಿದೆ. ವಿವಿಧ ವಸ್ತುಗಳನ್ನು ಬಳಸಿ ಗಾರೆಯನ್ನು ತಯಾರಿಸುತ್ತಾರಲ್ಲದೆ. ಅದರ ಮೇಲೆ ಜಿಗುಟಾದ ಹಿನ್ನೆಲೆ ಲೇಪನ ಕೊಡಲಾಗುತ್ತದೆ. ನಂತರ ಗಾರೆಯನ್ನು ನುಣುಪುಗೊಳಿಸಿ ಅದರ ಮೇಲೆ ಸುಣ್ಣ ಲೇಪಿಸಿ ಚಿತ್ರ ಬರೆಯಲಾಗುತ್ತದೆ. ಈ ಕುರಿತು ಅರಮನೆಯ ಗಾರೆ ಚಿತ್ರಗಳನ್ನು ರಚಿಸಲಾಗಿದೆ.

ಜಮಖಂಡಿ ಅರಮನೆಯ ಪರಿಸರದಲ್ಲಿ ಅನೇಕ ಕಟ್ಟಡಗಳಲ್ಲಿ ಗೆರೆಯ ಮೇಲೆ ಚಿತ್ರ ರಚಿಸಲಾಗಿದೆ. ಅರಮನೆಯ ಖಜಾನೆಯ ಕೊಠಡಿ, ಗಣಪತಿ ದೇವಾಲಯ ತ್ರಿಪುರ ಸುಂದರಿ ದೇವಸ್ಥಾನ, ಈಶ್ವರ ದೇವಸ್ಥಾನ, ಪಾರ್ವತಿ ದೇವಸ್ಥಾನಗಳಲ್ಲಿ ಚಿತ್ರಗಳಿಂದ್ದು ಖಜಾನೆಯ ಕೊಠಡಿಯ ಚಿತ್ರಗಳನ್ನು ಹೊರತು ಪಡಿಸಿ ಉಳಿದೆಲ್ಲ ಕಡೆ ಇರುವ ಚಿತ್ರಗಳು ನಾಶವಾಗಿವೆ. ಇವುಗಳ ಸ್ಥೂಲ ನೋಟವನ್ನು ಒಂದೊಂದಾಗಿ ವಿವರಿಸಿದೆ.

ಖಜಾನೆ ಕೊಠಡಿಯ ಚಿತ್ರಗಳು

ಅರಮನೆಯ ಬಲಭಾಗದಲ್ಲಿ ಪೂರ್ವ ದಿಕ್ಕನಲ್ಲಿರುವ ಖಜಾನೆಯ ಕೊಠಡಿಯು ಸುರಕ್ಷತೆಯ ದೃಷ್ಟಿಯಿಂದ ಭದ್ರವಾದ ಸ್ಥಳವಾಗಿದೆ. ಎರಡು ಅಂತಸ್ತುಗಳನ್ನು ಹೊಂದಿದ ಈ ಕಟ್ಟಡವು ಹಲವಾರು ಪ್ರತ್ಯೇಕ ಕೋಣೆಗಳನ್ನು ಹೊಂದಿದೆ. ಇಲ್ಲಿರುವ ಕೆಲವು ಕೋಣೆಗಳಲ್ಲಿ ಚಿತ್ರಗಳನ್ನು ರಚನೆ ಮಾಡಲಾಗಿದೆ.

ಮಾಡುಗಳಲ್ಲಿ ಚಿತ್ರಗಳು

ಈ ಕಟ್ಟಡದ ಅನೇಕ ಕೋಣೆಗಳಲ್ಲಿರುವ ವಿವಿಧ ಗಾತ್ರದ ಮಾಡುಗಳಲ್ಲಿ ಚಿತ್ರಗಳನ್ನು ರಚಿಸಿರುವ ಸಾಧ್ಯತೆಗಳಿದ್ದರೂ ಸಹಿತ ಇಂದು ಕೇವಲ ಎರಡು ಕೋಣೆಗಳಲ್ಲಿ ಇರುವಂತಹ ಮಾಡುಗಳಲ್ಲಿ ಮಾತ್ರ ಚಿತ್ರಗಳು ಕಂಡುಬರುತ್ತವೆ. ಇಲ್ಲಿಯೂ ಸಹಿತ ಹೆಚ್ಚಿನ ಚಿತ್ರಗಳು ನಾಶವಾಗಿದ್ದು ಕೆಲವೇ ಚಿತ್ರಗಳು ಉಳಿದುಕೊಂಡಿವೆ.

ಲಕ್ಷ್ಮೀಯ ಚಿತ್ರಗಳು

ಕೆಳ ಅಂತಸ್ತಿನ ಕೋಣೆಯೊಂದರಲ್ಲಿರುವ ಒಂದು ಮಾಡಿನಲ್ಲಿ ಎರಡು ಭಾಗಗಳನ್ನು ಮಾಡಿ ಮೇಲ್ಭಾಗದಲ್ಲಿ ಗಣಪತಿಯ ಚಿತ್ರವಿದ್ದರೆ, ಲಕ್ಷ್ಮೀಯ ಚಿತ್ರವು ಕೆಳಭಾಗದ ಮಾಡಿನಲ್ಲಿ ರಚನೆಯಾಗಿದೆ. ಇಲ್ಲಿರುವ ಲಕ್ಷ್ಮೀ ಚಿತ್ರವು ಆಕರ್ಷಕ ವಿನ್ಯಾಸದಿಂದ ಸಂಯೋಜನೆಗೊಂಡಿದೆ. ಮಾಡಿನ ಒಳಭಾಗ ದಲ್ಲಿರುವ ಪ್ರಭಾವಳಿಯ ವಿನ್ಯಾಸದ ಸ್ಥಳಾವಕಾಶದಲ್ಲಿ ಲಕ್ಷ್ಮೀಯ ಚಿತ್ರ ರಚನೆ ಮಾಡಲಾಗಿದೆ. ಸರೋವರದ ತಿಳಿ ನೀರಿನಲ್ಲಿ ಕಮಲದ ಹೂ ಅರಳಿದ್ದು ಅದರ ಮೇಲೆ ಲಕ್ಷ್ಮೀಯು ಪದ್ಮಾಸನ ಹಾಕಿ ಆಸೀನಳಾಗಿದ್ದಾಳೆ. ನಾಲ್ಕು ಕೈಗಳನ್ನು ಹೊಂದಿದ ಲಕ್ಷ್ಮೀಯ ಹಿಂಭಾಗದ ಎರಡು ಕೈಗಳಲ್ಲಿ ಕಮಲದ ಹೂಗಳನ್ನು ಹಿಡಿದುಕೊಂಡಿದ್ದರೆ ಇನ್ನೆರಡು ಕೈಗಳಲ್ಲಿ ಒಂದು ಆಶೀರ್ವಾದ ಮುದ್ರೆಯನ್ನು ಹೊಂದಿದ್ದರೆ ಮತ್ತೊಂದು ಕೈಯಲ್ಲಿ ಗ್ರಂಥವನ್ನು ಹಿಡಿಕೊಂಡಿದ್ದಾಳೆ. ಕೆಂಪು ಬಣ್ಣದ ಸೀರೆ ಉಟ್ಟು ಕೊಂಡಿದ್ದು ಹಸಿರು ರೇಖೆಗಳುಳ್ಳ ಕುಪ್ಪಸವನ್ನು ಧರಿಸಿದ್ದಾಳೆ. ತಲೆಯ ಮೇಲೆ ಕಿರೀಟ, ಕೈ ಬಳೆಗಳು, ಬಂಗಾರವರ್ಣ ಲೇಪನದಿಂದ ರಚನೆಗೊಂಡಿವೆ. ಲಕ್ಷ್ಮೀಯ ಎಡ ಮತ್ತು ಬಲ ಭಾಗದಲ್ಲಿ ಎರಡು ಆನೆಗಳನ್ನು ಚಿತ್ರಿಸಲಾಗಿದ್ದು ಕಮಲದ ಮೊಗ್ಗನ್ನು ತಮ್ಮ ಸೊಂಡಿಲಿನಿಂದ ಹಿಡಿದು ಮೇಲಕ್ಕೆತ್ತಿದ ದೇವಿಗೆ ನಮಿಸುತ್ತಿವೆ.

ಲಕ್ಷ್ಮೀದೇವಿಯ ಚಿತ್ರವು ಕರ್ನಾಟಕದ ಅನೇಕ ನೆಲೆಗಳಲ್ಲಿ ಕಂಡುಬಂದಿವೆ. ಹಲವು ಉದ್ದೇಶ ಮತ್ತು ಸೌಂದರ್ಯದ ಹಿನ್ನೆಲೆ ಹಾಗೂ ಧಾರ್ಮಿಕ ಭಾವನೆಯಿಂದ ರಚನೆಗೊಂಡ ಈ ಚಿತ್ರವು ಇಲ್ಲಿ ಸಂಪತ್ತಿನ ಹಿನ್ನೆಲೆಯಲ್ಲಿ ರಚನೆಗೊಂಡಿದೆ. ಖಜಾನೆ ಕೊಠಡಿಯು ಮುಖ್ಯವಾಗಿ ಅರಮನೆಯ ಸಂಪತ್ತನ್ನು ಕಾಯ್ದಿಡುವ ಸ್ಥಳವಾಗಿದ್ದು ಸಂಪತ್ತಿಗೆ ಅಧಿ ದೇವತೆಯಾದ ಲಕ್ಷ್ಮೀಯನ್ನು ಚಿತ್ರಿಸಿರುವುದು ಸಾಂಕೇತಿಕವಾಗಿಯೂ ಧಾರ್ಮಿಕವಾಗಿಯೂ ಈ ರಾಜನ ದೂರ ದೃಷ್ಟಿ ಮತ್ತು ನಂಬಿಕೆಯ ಹಿನ್ನೆಲೆಯನ್ನು ಸೂಚಿಸುತ್ತದೆ.

ಈ ಚಿತ್ರದಲ್ಲಿ ಕಂಡು ಬರುವ ಅನೇಕ ಹೊರ ನೋಟಗಳಲ್ಲಿ ವಸ್ತ್ರ ವಿನ್ಯಾಸವು ಗಮನಾರ್ಹ ವಾಗಿದೆ. ಲಕ್ಷ್ಮೀದೇವಿ ಧರಿಸಿರುವ ಹಸಿರು ಗೆರೆಗಳುಳ್ಳ ಕುಪ್ಪಸ ಮತ್ತು ಕೆಂಪು ಬಣ್ಣಹಳದಿ ಬಣ್ಣದ ದಡಿಯುಳ್ಳ ಸೀರೆಯು ಪ್ರಾದೇಶಿಕ ಗುಣಲಕ,ಣಗಳನ್ನೇ ಬಿಂಬಿಸುತ್ತದೆ. ಜಮಖಂಡಿಗೆ ಸಮೀಪವಿರುವ ರಬಕವಿ, ಬನಹಟ್ಟಿ, ಮಹಾಲಿಂಗಪುರ ಹಾಗೂ ಜಮಖಂಡಿಯಲ್ಲಿಯೂ ಕೈ ಮಗ್ಗದ ಉದ್ದಿಮೆಯು ಪ್ರಾಚೀನ ಕಾಲದಿಂದಲೂ ಪ್ರಖ್ಯಾತವಾಗಿದ್ದು ಅಲ್ಲಿ ತಯಾರಿಸುವ ಬಟ್ಟೆಯ ವಿನ್ಯಾಸವನ್ನು ಈ ಚಿತ್ರ ಗಳಲ್ಲಿ ನಾವು ಕಾಣಬಹುದು.

ಜಯ ವಿಜಯ

ವಿಷ್ಣುವಿನ ದ್ವಾರ ಪಾಲಕರಾದ ಜಯ-ವಿಜಯರ ಚಿತ್ರ ಶಿಲ್ಪಗಳು ಭಾರತದಾದ್ಯಂತ ಅನೇಕ ಭಾಗಗಳಲ್ಲಿ ಕಂಡು ಬರುತ್ತವೆ. ಸಾಮಾನ್ಯವಾಗಿ ವೈಷ್ಣವ ಸಂಬಂಧಿ ದೇವಾಲಯ, ಮಠ ಮಂದಿರಗಳಲ್ಲಿ ರಚನೆಯಾಗಿರುತ್ತವೆ. ಜಮಖಂಡಿ ಅರಮನೆಯ ಈ ಭಿತ್ತಿಚಿತ್ರಗಳಲ್ಲಿ ಜಯ ವಿಜಯರ ಚಿತ್ರಗಳನ್ನು ವಿಷ್ಣುವಿನ ಹೆಂಡತಿ ಸಂಪತ್ತಿನ ಅಧಿದೇವತೆ ಲಕ್ಷ್ಮೀಯ ಎಡ ಬಲಗಳಲ್ಲಿ ರಚನೆ ಮಾಡಲಾಗಿದೆ. ಜಯ-ವಿಜಯರ ಮೂಲದಲ್ಲಿ ರಾಕ್ಷಸರಾಗಿದ್ದು ಮಹಾವಿಷ್ಣುವಿನ ಅಭಿಷ್ಮೆಯಿಂದ ಆತನ ಸೇವಕರಾಗಿ ದ್ವಾರ ಪಾಲಕರಾಗಿ, ಪರಿವರ್ತನೆ ಹೊಂದುತ್ತಾರೆ. ಇಲ್ಲಿರುವ ಜಯ-ವಿಜಯರ ಚಿತ್ರಗಳನ್ನು ಸಹಿತ ಮಾಡಿನಲ್ಲಿರುವ ಚಿಕ್ಕ ಪ್ರಭಾವಳಿಗಳಲ್ಲಿ ರಚನೆ ಮಾಡಲಾಗಿದೆ. ಜಯ-ವಿಜಯರ ಚಿತ್ರಗಳು ಒಂದೇ ವಿನ್ಯಾಸದಲ್ಲಿದ್ದು ಮುದ್ರಣ ವಿನ್ಯಾಸ ಪ್ರತಿ ರೂಪದಂತಿದೆ.

ಗಣಪತಿಯ ಚಿತ್ರ

ಕೋಣೆಯಲ್ಲಿರುವ ಇನ್ನೊಂದು ಮಾಡಿನಲ್ಲಿ ಮೇಲ್ಭಾಗದಲ್ಲಿ ಇರುವ ಮಾಡಿನಲ್ಲಿ ರಚನೆ ಮಾಡಲಾಗಿದೆ. ಈ ಗಣಪತಿ ಚಿತ್ರವಿರುವ ಕೆಳಭಾಗದ ಮಾಡಿಲ್ಲಿ ದೊಡ್ಡದಾದ ಲಕ್ಷ್ಮೀ ಚಿತ್ರವಿದೆ. ಗಣಪತಿಯ ಚಿತ್ರವು ಆಯತಾಕಾರದ ಸ್ಥಳ ವಿನ್ಯಾಸದಲ್ಲಿ ರಚನೆಗೊಂಡಿದೆ. ಸಾಲಾಗಿರುವ ಮೂರು ಪ್ರಭಾವಳಿಯ ಮಂಟಪಗಳನ್ನು ರಚನೆ ಮಾಡಿ ಮಧ್ಯದ ಮಂಟಪದಲ್ಲಿ ಗಣಪತಿಯ ಚಿತ್ರ ರಚಿಸಲಾಗಿದೆ. ಅಲಂಕೃತವಾದಂತಹ ಪೀಠ ಒಂದನ್ನು ರಚಿಸಿ ಅದರ ಮೇಲೆ ಗಣಪತಿಯನ್ನು ಮತ್ತು ಸಿದ್ಧಿ-ಬುದ್ಧಿ ಯರನ್ನು ರಚಿಸಲಾಗಿದೆ. ಮಧ್ಯದಲ್ಲಿ ಗಣಪತಿಯು ಕುಳಿತುಕೊಂಡಿದ್ದಾನೆ. ನಾಲ್ಕು ಕೈಗಳನ್ನು ಹೊಂದಿದ್ದು ಹಿಂಭಾಗದ ಎರಡು ಕೈಗಳಲ್ಲಿ ಪರಶು ಆಯುಧಗಳನ್ನು ಹಿಡಿದುಕೊಂಡಿದ್ದಾನೆ. ಮುಂದಿರುವ ಎರಡು ಕೈಗಳಲ್ಲಿ ಎಡಗೈಯಿಂದ ಮೊದಕವನ್ನು ಹಿಡಿದುಕೊಂಡಿದ್ದರೆ ಬಲಭಾಗದ ಕೈ ಆಶೀರ್ವಾದ ಭಂಗಿಯಲ್ಲಿದೆ ಕೆಂಪು ಬಣ್ಣದ ಶಾಲನ್ನು ಹೆಗಲ ಮೇಲೆ ಹೊದ್ದಿಕೊಂಡಿದ್ದು ಇದಕ್ಕೆ ಹಳದಿ ಬಣ್ಣದ ಅಂಚುಗಳಿವೆ

ನೇರಳೆ ಬಣ್ಣದ ಪಂಚೆಯನ್ನು ಚಿತ್ರಿಸಲಾಗಿದ್ದು ಇಲ್ಲಿಯೂ ಸಹಿತ ಹಳದಿ ಬಣ್ಣದ ಅಂಚು ರಚಿಸಲಾಗಿದೆ. ಕೊರಳಲ್ಲಿರುವ ಆಭರಣ ತಲೆಯ ಮೇಲಿನ ಕಿರೀಟ ಬಂಗಾರ ವರ್ಣದಿಂದ ರಚಿಸಲಾಗಿದ್ದು ಈತ ಧರಿಸಿರುವ ಜನಿವಾರವು ಧಾರ್ಮಿಕ ಪ್ರಭಾವವನ್ನು ಸೂಚಿಸುತ್ತದೆ.

ಗಣಪತಿಯ ಹಿಂಭಾಗದಲ್ಲಿ ರಚನೆ ಮಾಡಲಾಗಿರುವ ಅಲಂಕೃತ ಪ್ರಭಾವಳಿ ಅದರ ಮೇಲೆ ರಚಿಸಲಾಗಿರುವ ಛತ್ರಿಯು ಆಕರ್ಷಕವಾಗಿದೆ. ಕೆಂಪು ಬಣ್ಣ ಹಳದಿ ಅಂಚನ್ನು ಹೊಂದಿದ ಛತ್ರಿಯು ನಕ್ಷೆಯ ಮಾದರಿಯಲ್ಲಿದೆ ನೆರಳು-ಬೆಳಕಿನ ವಿನ್ಯಾಸದಿಂದ ಕೂಡಿದ ಇದರ ರಚನೆಯು ಕಲಾವಿಧನ ಪ್ರೌಢಿಮೆಗೆ ಸಾಕ್ಷಿಯಾಗಿದೆ. ಗಣಪತಿಯ ಎಡಭಾಗದಲ್ಲಿ ಆತನ ವಾಹನ ಇಲಿಯನ್ನು ರಚನೆ ಮಾಡಲಾಗಿದೆ. ಎಡಬಲಗಳಲ್ಲಿ ವಿವಿಧ ಬಗೆಯ ಹೂವುಗಳು ಚಿತ್ರಿಸಲ್ಪಟ್ಟಿವೆ.

ಲಕ್ಷ್ಮೀ

ಖಜಾನೆಯ ಒಂದನೆಯ ಕೋಣೆಯಲ್ಲಿ ಇರುವ ಮಾಡಿನಲ್ಲಿ ಮತ್ತೊಂದು ಲಕ್ಷ್ಮೀಯ ಚಿತ್ರವಿದೆ. ಈ ಚಿತ್ರವು ಇನ್ನುಳಿದ ಚಿತ್ರಗಳಿಗಿಂತ ಕಲಾತ್ಮಕ ದೃಷ್ಟಿಯಿಂದ ಉತ್ತಮವಾಗಿದ್ದು ಆಕರ್ಷಕ ವರ್ಣ ವಿನ್ಯಾಸ ಹೊಂದಿದೆ. ಇಲ್ಲಿನ ಚಿತ್ರದಲ್ಲಿಯೂ ಸಹಿತ ಲಕ್ಷ್ಮೀ ಕಮಲದ ಹೂವಿನ ಮೇಲೆ ಕುಳಿತು ಕೊಂಡಿದ್ದು ನಾಲ್ಕು ಕೈಗಳನ್ನು ಹೊಂದಿದ್ದಾಳೆ. ಹಿಂದಿನ ಕೈಗಳಲ್ಲಿ ಹೂವುಗಳನ್ನು ಹಿಡಿದುಕೊಂಡಿದ್ದು ಮುಂದಿನ ಕೈಗಳಲ್ಲಿ ಒಂದರಲ್ಲಿ ಪುಸ್ತಕ ಹಿಡಿದಿದ್ದರೆ. ಮತ್ತೊಂದು ಆಶೀರ್ವಾದ ಭಂಗಿಯಲ್ಲಿದೆ ಮೊದಲಿನ ಲಕ್ಷ್ಮೀಯ ಚಿತ್ರವು ಬಿಳಿ ಕಮಲದ ಮೇಲೆ ರಚನೆಯಾಗಿದ್ದರೆ ಈ ಚಿತ್ರವನ್ನು ಕೆಂಪು ಕಮಲದ ಮೇಲೆ ಲಕ್ಷ್ಮೀ ಕುಳಿತಂತೆ ಚಿತ್ರಿಸಲಾಗಿದೆ.

ನಕ್ಷೆಗಳು

ಖಜಾನೆ ಕಟ್ಟಡದ ಒಳಭಾಗದ ಗೋಡೆಗಳಲ್ಲಿ ನಿರ್ಮಿಸಲಾಗಿರುವ ಮಾಡುಗಳಲ್ಲಿ ಮಾಡುಗಳಲ್ಲಿ ಚಿತ್ರಗಳನ್ನು ಬರೆದಿದ್ದರೆ ಹೊರಭಾಗ ಗೋಡೆಯಲ್ಲಿ ಕೆಳಮಟ್ಟದಲ್ಲಿ ಅಲಂಕೃತವಾದ ಹೂ ಬಳ್ಳಿಯ ನಕ್ಷೆಯನ್ನು ರಚಿಸಲಾಗಿದೆ. ನೆಲದಿಂದ ಸುಮಾರು ಎರಡು ಫೂಟಗಳ ಅಂತರದಷ್ಟು ಬಣ್ಣದ ಪಟ್ಟಿಗಳನ್ನು ರಚಿಸಿ ಅವುಗಳಲ್ಲಿ ನಕ್ಷೆಯ ಮಾದರಿಗಳನ್ನೇ ರಚನೆ ಮಾಡಲಾಗಿದೆ. ಎಲ್ಲಕ್ಕಿಂತ ಕೆಳಭಾಗದಲ್ಲಿ ನೀಲಿ ಬಣ್ಣದ ಪಟ್ಟಿ ಅದರ ಮೇಲೆ ದಟ್ಟ ಹಳದಿ ಬಣ್ಣದ ಪಟ್ಟಿ, ಅದರ ಮೆಲೆ ತಿಳಿ ಹಳದಿ, ಅದರ ಮೇಲೆ ಕೆಂಪು ಬಣ್ಣ ಪಟ್ಟಿಯನ್ನು ರಚಿಸಲಾಗಿದೆ. ಹೀಗೆ ನಾಲ್ಕು ಬಣ್ಣದ ಪಟ್ಟಿಗಳನ್ನು ರಚಿಸಿ ಅವುಗಳಲ್ಲಿ ನಕ್ಷೆಯ ಮಾದರಿಗಳನ್ನು ಗೋಡೆಯ ಸುತ್ತಲೂ ರಚಿಸಲಾಗಿದ್ದು ಅದನ್ನೆಲ್ಲ ನಾಶಪಡಿಸಲಾಗಿದೆ ಸಧ್ಯದಲ್ಲಿ ಎರಡು ಕಡೆಗೆ ಮಾತ್ರ ಮಸುಕಾದ ನಕ್ಷಾ ವಿನ್ಯಾಸಗಳು ಬಣ್ಣದ ಲೇಪನ ಉಳಿದುಕೊಂಡಿದೆ.

ನಕ್ಷಾ ವಿನ್ಯಾಸದ ಈ ಮಾದರಿಯನ್ನು ಗೋಡೆಗಳ ಅಲಂಕಾರಕ್ಕಾಗಿ ಒಟ್ಟು ಹೊರನೋಟದ ಸೌಂದರ್ಯ ವೃದ್ಧಿಗಾಗಿ ರಚನೆ ಮಾಡಿಲಾಗಿದ್ದು ಅಂತಹ ಮಹತ್ವವನ್ನು ತಿಳಿದುಕೊಳ್ಳದ ಆಧುನಿಕರು ಅವುಗಳನ್ನು ನಾಶಮಾಡಿ ನಿರ್ವೀಕೃತಗೊಳಿಸುವ ನಿಟ್ಟಿನಲ್ಲಿ ಪ್ರಾಚೀನ ಕಲಾ ಸಂಪ್ರದಾಯವನ್ನು ನಾಶಪಡಿಸಿದ್ದಾರೆ. ಕೆಲವು ನಕ್ಷೆಗಳು ಮತ್ತು ಬಣ್ಣದ ಪಟ್ಟಿಗಳು ಸ್ವಾಭಾವಿಕವಾಗಿರುವ ಪ್ರಕೃತಿ ಪ್ರಭಾವದಿಂದ ನಾಶಗೊಂಡು ಮಸುಕಾಗಿವೆ. ಇದಕ್ಕೆ ಮುಖ್ಯ ಕಾರಣ ಇಲ್ಲಿ ಬಳಸಲಾದ ಬಣ್ಣದ ವಿಧಾನವಾಗಿದೆ ಎಂದರೆ ತಪ್ಪಲ್ಲ ಕಾರಣ ಇಲ್ಲಿ ಈ ನಕ್ಷಾ ಚಿತ್ರಗಳಿಗೆ ಟೆಂಪರಾ ವಿಧಾನದಲ್ಲಿ ಹುಡಿ ಬಣ್ಣಗಳನ್ನೇ ಮರದ ಅಂಟಿನಲ್ಲಿ ಕಲಸಿ ಚಿತ್ರಕ್ಕೆ ಬಳಸಲಾಗಿದೆ. ಹಾಗಾಗಿ ಈ ಚಿತ್ರಗಳು ಬೇಗ ನಾಶಹೊಂದಿವೆ.

ಗಣಪತಿ ಗುಡಿ ಚಿತ್ರ

ಇಲ್ಲಿ ಉಬ್ಬು ಶಿಲ್ಪ ಮತ್ತು ವರ್ಣ ಲೇಪನಕ್ಕೆ ಹೆಚ್ಚಿನ ಪ್ರಾಧ್ಯಾನತೆ ಕೊಡಲಾಗಿದ್ದು ಚಿತ್ರ ವಿನ್ಯಾಸಗಳು ಕಡಿಮೆ ಪ್ರಮಾಣದಲ್ಲಿ ಕಂಡುಬರುತ್ತವೆ. ಇಲ್ಲಿ ಯಾವುದೇ ವ್ಯಕ್ತಿ ಚಿತ್ರಗಳು ಪ್ರಾಣಿ ಪಕ್ಷಿ ಚಿತ್ರಗಳು ರಚನೆಯಾಗಿರದೇ ಕೇವಲ ಬಣ್ಣದ ಪಟ್ಟಿಕೆಗಳು ಮತ್ತು ಸುಳುವಿನ ವಿನ್ಯಾಸವನ್ನು ರಚನೆ ಮಾಡಿಲಾಗಿದೆ. ಕೆಳಭಾಗದಲ್ಲಿರುವ ಗೋಡೆಯಲ್ಲಿ ರಚಿಸಿದ ನಕ್ಷೆಯ ವಿನ್ಯಾಸಗಳು ನಾಶವಾಗಿದ್ದು ಈ ಕಟ್ಟಡದ ಕೆಲವು ಭಾಗಗಳಲ್ಲಿ ಬಣ್ಣದ ಪಟ್ಟಿಯ ವಿನ್ಯಾಸಗಳು ಮಾತ್ರ ಕಂಡುಬರುತ್ತವೆ. ದೇವಾಲಯದ ಪ್ರತಿಯೊಂದು ಬಾಗಿಲುಗಳು, ಕಿಟಕಿಗಳು ಮಾಡುಗಳ ಸುತ್ತಲೂ ಅಲ್ಲದೆ ಮೇಲ್ಛಾವಣಿಯ ಮೇಲೆ ಹಾಗೂ ಕಟ್ಟಡದ ಹೊರಭಾಗದಲ್ಲಿ ಕೆಳ ಮತ್ತು ಮೇಲಂತಸ್ಥಿನ ಗೋಡೆಯಲ್ಲಿ ಬರುವ ಪ್ರತಿಯೊಂದು ಬಾಗಿಲ ಹಾಗೂ ಕಿಟಕಿಯ ಸುತ್ತಲೂ ಬಣ್ಣದ ಪಟ್ಟಿಗಳನ್ನು ಬರೆದು ಅಲಂಕರಿಸಲಾಗಿದೆ.

ತ್ರಿಪುರ ಸುಂದರಿ ದೇವಾಲಯ ಚಿತ್ರಗಳು

ದೇವಾಲಯವು ಸಂಪೂರ್ಣವಾಗಿ ಜೀರ್ಣಾವಸ್ಥೆ ತಲುಪಿದ್ದು ಒಳಗಿನ ಚಿತ್ರಗಳು ಸಹಿತ ನಾಶವಾಗಿ ಹೋಗಿವೆ. ಈ ದೇವಾಲಯದ ಒಳಭಾಗದ ನಾಲ್ಕು ಗೋಡೆಗಳನ್ನು ಚಿತ್ರಗಳಿಂದ ತುಂಬಿಸಲಾಗಿದ್ದು ಅವೆಲ್ಲವೂ ಈಗ ಹಾಳಾಗಿವೆ. ಈಗ ಅಲ್ಲಲ್ಲಿ ಬಣ್ಣದ ಲೇಪನ ಅಸ್ಪಷ್ಟ ಆಕಾರಗಳು ಉಳಿದುಕೊಂಡಿವೆ. ಕೆಲವು ಕಡೆಗೆ ಗೋಡೆಗೆ ಲೇಪಿಸಿದ ಭಿತ್ತಿಯ ಪದರು ಕಳಚಿ ಬಿದ್ದಿದ್ದರೆ ಮತ್ತೆ ಕೆಲವು ಕಡೆಗೆ ಬಣ್ಣವು ಅಳಸಿ ಹೋಗಿದೆ. ಇದರ ಒಟ್ಟು ಸ್ವರೂಪವನ್ನು ಚಿತ್ರಕಲೆಯ ಹಿನ್ನೆಲೆಯಿಂದ ಗಮನಿಸಿದಾಗ ನಮ್ಮ ನಾಡಿನ ಬಹು ದೊಡ್ಡ ಕಲಾ ಸಂಪತ್ತು ಕಳೆದು ಹೋದಂತೆ ಭಾಸವಾಗುತ್ತದೆ. ಈಗಾಗಲೇ ವಿವರಿಸಲಾಗಿರುವ ಖಜಾನೆ ಕೊಠಡಿಯ ಚಿತ್ರಗಳಿಗಿಂತ ಇಲ್ಲಿನ ಚಿತ್ರಗಳು ಪ್ರಾಚೀನವಾಗಿದ್ದು ಉತ್ಕೃಷ್ಟ

ಮಟ್ಟದಲ್ಲಿದ್ದವು. ಎಂಬುದಕ್ಕೆ ಅಲ್ಲಿನ ಬಣ್ಣದ ಲೇಪನದ ಪಳಯುಳಕೆಯಂಥಹ ಮಾದರಿಯು ಉದಾಹರಣೆಯಾಗಿದೆ. ಇಲ್ಲಿನ ಚಿತ್ರಗಳನ್ನು ಕೆಂಪು ಬಣ್ಣದ ಹಿನ್ನೆಲೆಯ ಮೇಲೆ ರಚನೆ ಮಾಡಲಾಗಿದ್ದು ದಟ್ಟ ಕೆಂಪು ಬಣ್ಣವು ಗೋಡೆಯ ಮೇಲೆ ಇನ್ನೂ ಳಿದುಕೊಂಡಿದೆ. ದೇವಾಲಯದ ಒಳಭಾಗದಲ್ಲಿರುವ ಗೋಡೆಗಳಲ್ಲದೇ ಅಲ್ಲಿರುವ ಮಾಡುಗಳು ಕಮಾನುಗಳ ಒಳಭಾಗದಲ್ಲಿಯೂ ಸಹಿತ ಚಿತ್ರ ರಚನೆ ಮಾಡಲಾಗಿದೆ.

ಪಾರ್ವತಿ ದೇವಾಲಯದ ಚಿತ್ರ

ದೇವಾಲಯವು ತ್ರಿಪುರ ಸುಂದರಿ ದೇವಾಲಯದ ಪಕ್ಕದಲ್ಲಿ ರಚನೆಯಾಗಿದ್ದು ವಾಸ್ತು ವಿನ್ಯಾಸದಲ್ಲಿ ಸ್ವಲ್ಪ ಮಟ್ಟಿನ ಹೋಲಿಕೆ ಕಂಡುಬರುತ್ತದೆ. ಪ್ರಮಾಣದಲ್ಲಿ ಅದಕ್ಕಿಂತ ಸ್ವಲ್ಪ ಚಿಕ್ಕದಾಗಿದ್ದು ಇಲ್ಲಿನ ಚಿತ್ರಗಳೂ ಸಹಿತ ಸಂಪೂರ್ಣವಾಗಿ ನಾಶವಾಗಿವೆ. ಇಲ್ಲಿಯೂ ಸಹಿತ ಒಳಭಾಗದ ನಾಲ್ಕು ಗೋಡೆಗಳನ್ನು ಚಿತ್ರಗಳಿಂದ ಅಲಂಕರಿಸಲಾಗಿದ್ದು ಸದ್ಯದಲ್ಲಿ ಅಲ್ಲಿ ಯಾವುದೇ ಚಿತ್ರವು ಉಳಿದು ಬಂದಿಲ್ಲ. ತ್ರಿಪುರ ಸುಂದರಿ ಗುಡಿಯಲ್ಲಿ ಅಲ್ಲಲ್ಲಿ ಬಣ್ಣದ ಲೇಪನ ಮತ್ತು ಅಸ್ಪಷ್ಟ ಆಕಾರಗಳು ಕಂಡುಬಂದರೆ ಈ ದೇವಾಲಯದ ಒಳಭಾಗದ ಗೋಡೆಯನ್ನೆಲ್ಲ ಕೆತ್ತಿ ಹಾಳು ಮಾಡಲಾಗಿದೆ ಆದರೆ ಹೊರಭಾಗದ ನಾಲ್ಕು ಬದಿಯ ಗೋಡೆಗೆ ಬಣ್ಣದ ಲೇಪನ ಮತ್ತು ವರ್ಣ ಪಟ್ಟಿಕೆಗಳನ್ನು ಇನ್ನೂ ಉಳಿದುಕೊಂಡು ಬಂದಿವೆ.

ಕಡುನೀಲಿ ಹಾಗೂ ಹಳದಿ ಬಣ್ಣಗಳನ್ನು ಬಹಳಷ್ಟು ಬಳಸಿ ವಿನ್ಯಾಸ ರಚಿಸಲಾಗಿದೆ. ಇದು ಇಂದಿಗೂ ಕಾಣಸಿಗುವದೊಂದು ಆರೋಗ್ಯಕರ ಸಂಗತಿ. ಆದರೆ ಸಾಂಸ್ಕೃತಿಕ ಮನಸ್ಸುಗಳ ಕೊರತೆಯಿಂದ ಪ್ರಾಚ್ಯವಸ್ತು ಇಲಾಖೆಯಾಗಲಿ ನಾಗರಿಕರಾಗಲೀ ಅದರ ಅಂದವನ್ನು ಉಳಿಸಿಕೊಂಡು ಹೋಗುವಲ್ಲಿ ಆಸಕ್ತರಾಗಿಲ್ಲವೆಂದೇ ಹೇಳಬಹುದು.



ಬಾದಾಮಿ ಗುಹೆಯಲ್ಲಿರುವ ಭಿತ್ತಿಚಿತ್ರ



ಬಾದಾಮಿ ಮೂರನೆಯ ಗುಹೆಯ
ಕಂಭದ ಮೇಲಿರುವ ಭಿತ್ತಿಚಿತ್ರ

ಬಾದಾಮಿ ಮೂರನೆಯ ಗುಹೆ
ತೊಲೆಯ ಮೇಲಿರುವ ಭಿತ್ತಿ ಚಿತ್ರ








ಬಾದಾಮಿ ಗುಹೆಯಲ್ಲಿರುವ
ಭಿತ್ತಿಚಿತ್ರ



ಎಂ.ವಿ.ಮಿಣಜಗಿಯವರ
ಭಿತ್ತಿಚಿತ್ರ ಪ್ರತಿಕೃತಿ




ಬಾದಾಮಿ ಗುಹೆಯಲ್ಲಿರುವ
ಭಿತ್ತಿಚಿತ್ರ





ಮಹಾರಾಣಿ
ಅಪ್ಸರೆಯರು



ಗಂಧರ್ವರು



ಚಾಮರ ಬಾಲಕಿಯರು





ಬಾದಾಮಿ ಗುಹೆಯ
ಭಿತ್ತಿಚಿತ್ರ



ಬಾದಾಮಿ ಗುಹೆಯ
ಭಿತ್ತಿಚಿತ್ರ



ಕುಟಕನಕೇರಿಯ ಬಂಡಿಯ
ಮೇಲಿರುವ ಕೆಂಪು ವರ್ಣದ ಚಿತ್ರ






ಮಹಾರಾಣಿ ಮತ್ತು
ಸೇವಕಿಯರು



ಸಾಬರ ಪಡೆಯ ಮೇಲಿರುವ
ರೇಖಾ ಚಿತ್ರ



ಸಾಬರ ಪಡೆಯ ಮೇಲಿರುವ
ರೇಖಾ ಚಿತ್ರ






ಬಾದಾಮಿ ಗುಹೆಯಲ್ಲಿರುವ
ಭಿತ್ತಿಚಿತ್ರ



ಬಾದಾಮಿ ಗುಹೆಯ
ತೊಲಿಯ ನಕ್ಷಾಚಿತ್ರ



ಮಹಾರಾಣಿ
ಸೇವಕಿಯರು




ಬಾದಾಮಿ ಗುಹೆಯ
ಭಿತ್ತಿಚಿತ್ರಗಳು





ಬಾದಾಮಿ ಗುಹೆಯ
ಭಿತ್ತಿಚಿತ್ರಗಳು

ಬಾದಾಮಿ ಗುಹೆಯ
ಭಿತ್ತಿಚಿತ್ರಗಳು











ತಪೋನಿರತ
ಮಹಾಲಿಂಗೇಶ್ವರರು






ಸತ್ತ ಬಾಲಕನ್ನು ಬದುಕಿಸುತ್ತಿರುವ
ಮಹಾಲಿಂಗೇಶ್ವರರು

ನಂದಿಯ ಮೇಲಿನ ಶಿವ








ಋಷಿಮುನಿಗಳು



ಹೂಕುಂಡದ ಅಲಂಕಾರಿಕ ಚಿತ್ರಗಳು



ಕಮಾನು ಅಲಂಕಾರ ನಕ್ಷೆ



ಬೇಟೆ ನಾಯಿಗಳು



ಬೇಟೆಗಾರರು



ವೀರಭದ್ರೇಶ್ವರ


ಸತ್ತ ಬಾಲಕನನ್ನು ಸ್ವಾಮಿಗಳ
ಹತ್ತಿರ ಕರೆದೊಯ್ಯುತ್ತಿರುವುದು





ಕಿರಾತಾರ್ಜುನ ಪ್ರಸಂಗ

ಅರ್ಜುನ ಶಿವನನ್ನು
ಪೂಜಿಸುತ್ತಿರುವುದು







ದಕ್ಷ ಮತ್ತು ಪ್ರಮುಖರು
ಶಿವನನ್ನು ಎದುರುಗೊಳ್ಳುತ್ತಿರುವ ದೃಶ್ಯ



ಮಹಾಲಿಂಗೇಶ್ವರರ ಪಾವಾಡ
ಬಿಂಬಿಸುವ ಚಿತ್ರ



ಮಠದ ಮಹಾತ್ಮೆ
ತೋರುವ ಚಿತ್ರ





ಬ್ರಹ್ಮ ಮತ್ತು ಋಷಿಮುನಿಗಳು



ಮುಸ್ಲಿಂ ಸಂತರು



ಕಿರಾತಾರ್ಜುನ ಪ್ರಸಂಗ





ಅರಮನೆ ಕೊಠಡಿ ಒಳಗಿನ ಭಿತ್ತಿಚಿತ್ರ



ಅರಮನೆ ಕೊಠಡಿ
ಒಳಗಿನ ಭಿತ್ತಿಚಿತ್ರ







ಅರಮನೆ ಕೊಠಡಿ ಒಳಗಿನ ಭಿತ್ತಿಚಿತ್ರ






ಅರಮನೆ ಕೊಠಡಿ ಒಳಗಿನ ಭಿತ್ತಿಚಿತ್ರ



ಅರಮನೆ ಕೊಠಡಿ ಒಳಗಿನ ಭಿತ್ತಿಚಿತ್ರ





ಅರಮನೆ ಕೊಠಡಿ
ಒಳಗಿನ ಭಿತ್ತಿಚಿತ್ರ



ಜಮಖಂಡಿ ಅರಮನೆ



ಅರಮನೆ ಕೊಠಡಿ ಒಳಗಿನ
ಭಿತ್ತಿಚಿತ್ರ





ಅಧ್ಯಾಯ – ೬

ಹಸ್ತಪ್ರತಿ ಚಿತ್ರಕಲೆ

* ಪತ್ರಮಾಧ್ಯಮದ ವರ್ಣಚಿತ್ರಗಳು
* ಜಿಲ್ಲೆಯ ಶಿವಯೋಗ ಮಂದಿರದ ಹಸ್ತಪ್ರತಿಗಳ ಮೇಲಿನ ಚಿತ್ರಗಳ ವಿವರ

ಹಸ್ತಪ್ರತಿ ಚಿತ್ರಕಲೆ

ಬಾಗಲಕೋಟೆ ಜಿಲ್ಲೆಯ ಶಿವಯೋಗ ಮಂದಿರಲ್ಲಿ ಹಾಗೂ ಇತ್ತೀಚೆಗೆ ಮುಧೋಳ ತಾಲೂಕಿನ ಹೊಳಿಬಸವೇಶ್ವರ ಕ್ಷೇತ್ರ ಮಾಚಕನೂರಿನಲ್ಲಿ ದೊರೆತ ಹಸ್ತಪ್ರತಿಗಳು ಬಾಗಲಕೋಟೆಯ ಬಸವೇಶ್ವರ ಕಲಾ ಮಹಾವಿದ್ಯಾಲಯದ ಸಂಗ್ರಹದಲ್ಲಿ ಅಪರೂಪದ ಚಿತ್ರಗಳು ಲಭ್ಯವಾಗಿವೆ. "ಕನ್ನಡ ನಾಡಿನ ಜನತೆಯು ಬರೆಯಿಸುವುದರ ಮೂಲಕ ಪೋಷಕರಾಗಿ ಬರೆಯುವುದರ ಮೂಲಕ ಬರಹಗಾರರಾಗಿ ಹಸ್ತಪ್ರತಿ ನಿರ್ಮಾಣ ಕಾರ್ಯವನ್ನು ಜೀವಂತವಾಗಿಟ್ಟು ನಮ್ಮ ನಾಡನ್ನು ಅಪಾರವಾದ ಹಸ್ತಪ್ರತಿ ಭಂಡಾರವನ್ನಾಗಿಸಿದ್ದಾರೆ"[೧]. ಇದು ವ್ಯಕ್ತಿಯಿಂದ ವ್ಯಕ್ತಿಗೆ, ಜನಾಂಗದಿಂದ ಜನಾಂಗಕ್ಕೆ ತಲೆಮಾರಿನಿಂದ ತಲೆಮಾರಿಗೆ ಬಳುವಳಿಯಾಗಿ ಧರ್ಮಧತ್ತಿಯಾಗಿ ಉಳಿದುಕೊಂಡು ಬಂದಿದೆ. ಇಂಥ ಹಸ್ತ ಪ್ರತಿಗಳನ್ನು ಇಂದಿನವರೆಗೂ ಕನ್ನಡಿಗರೂ ಅವುಗಳನ್ನು ಪೂಜ್ಯಭಾವನೆಯಿಂದ ಸಂರಕ್ಷಿಸಿಕೊಂಡು ಬಂದಿದ್ದಾರೆ.

ನಾಗರೀಕತೆ ಹೆಚ್ಚಾದಂತೆ ಪಾಶ್ಚಾತ್ಯ ಸಂಸ್ಕೃತಿಯ ಪ್ರಭಾವದಿಂದ ಬದುಕಿನ ಮೌಲ್ಯಗಳು ತಮ್ಮ ಮಹತ್ವವನ್ನು ಕಳೆದುಕೊಂಡವು. ನಮ್ಮ ಪೂರ್ವಜರು ಉಳಿಸಿಕೊಂಡು ಬಂದಿದ್ದ ಸಾಂಸ್ಕೃತಿಕ ಸಂಪತ್ತು ನಾಶವಾಗತೊಡಗಿದವು. ಅಂಥವುಗಳಲ್ಲಿ ಹಸ್ತಪ್ರತಿ ಸಂಪತ್ತು ಒಂದಾಗಿದೆ.

ವಿದೇಶಿ ನಾಗರೀಕತೆಯ ಪ್ರಭಾವದಿಂದ ಮುದ್ರಣ ಯಂತ್ರಗಳು ಮುದ್ರಿಸಿ ಕೃತಿಗಳು ಹೊರಬಂದು ಹಸ್ತಪ್ರತಿಗಳು ತಮ್ಮ ಸ್ಥಾನವನ್ನು ಕಳೆದುಕೊಂಡವು. ಇವುಗಳನ್ನು ಕಾಪಾಡಿಕೊಂಡು ಬರುವುದು ವ್ಯರ್ಥ ವೆಂದು ಕೆಲವೊಂದು ಮಠಮಾನ್ಯಗಳು ಭಾವಿಸಿದವು.

---

೧. ಡಾ. ಬಿ.ಕೆ. ಹಿರೇಮಠ, ಕರ್ನಾಟಕದ ಹಸ್ತಪ್ರತಿಗಳು ಒಂದು ಅಧ್ಯಯನ, ಪಿಎಚ್.ಡಿ. ಮಹಾಪ್ರಬಂಧ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

ಮನೆತನಗಳು ಹಸ್ತಪ್ರತಿಗಳ ಮಹತ್ವ ತಿಳಿಯದೇ ಅದರ ಯಜಮಾನರೆನಿಸಿಕೊಂಡವರು ಅಲ್ಲಲ್ಲಿ ಮನೆಯ ಅಟ್ಟಗಳಲ್ಲಿ ಕಟ್ಟಿಗೆಯ ಕಬ್ಬಿಣದ ಪೆಟ್ಟಿಗೆಗಳಲ್ಲಿ ಹಾಕಿ ಕಿರಿಯಾದಾಗ ನೀರು ಕಾಯಿಸಿಕೊಂಡು ಸ್ನಾನಮಾಡಿದ ಹಾಗೂ ಚಹಾಕಾಯಿಸಿಕೊಂಡು ಕುಡಿದ ನಿರ್ದಶನಗಳಿವೆ.

ಅಲಕ್ಷಕ್ಕೆ ಒಳಗಾದ ಕೆಲವೊಂದು ಹಸ್ತಪ್ರತಿಗಳನ್ನು ರಕ್ಷಿಸಲು ಕೆಲವೊಂದು ವಿಶ್ವವಿದ್ಯಾಲಯಗಳು, ಮಠಮಾನ್ಯಗಳು, ವಿದ್ವಾಂಸರು ಮುಂದಾದರು. ಹಲವಾರು ಕೃತಿಗಳನ್ನು ಶಾಸ್ತ್ರೀಯವಾಗಿ ಸಂಪಾದಿಸಿ ಕನ್ನಡಿಗರ ಪ್ರೀತಿಗೆ ಪಾತ್ರರಾಗಿದ್ದಾರೆ.

ಈಗ ಈ ಹಸ್ತಪ್ರತಿಗಳಿಂದ ಕನ್ನಡ ನಾಡಿನ ಇತಿಹಾಸಕ್ಕೆ ಪ್ರಯೋಜನವಿದೆ. ಕನ್ನಡಿಗರ ಸಾಂಸ್ಕೃತಿಕ ಜೀವನದ ವಿಧಾನಗಳು, ಜೀವನ ವೃತ್ತಿ, ಹಸ್ತಪ್ರತಿ ನಿರ್ಮಾಣ ವಿಧಾನಗಳ ಬಗ್ಗೆ ತಿಳಿಯಬಹುದಾಗಿದೆ. ಈ ಹೊಸ ವಿಚಾರಗಳಿಂದ ಮುಂದೆ ಸ್ವರೂಪ ತಾಳಲಿರುವ ಹಸ್ತಪ್ರತಿಯ ಬಗ್ಗೆ ತಿಳಿದುಕೊಳ್ಳಲು ಸಹಾಯವಾಗಿದೆ.

ಪತ್ರಮಾಧ್ಯಮದ ವರ್ಣಚಿತ್ರಗಳು

ಕರ್ನಾಟಕದಲ್ಲಿ ಸಿಕ್ಕಿರುವ ತಾಳೆಗರಿಯ ಮೇಲೆ ಬರೆದ ಗ್ರಂಥಗಳು ಸಿಗುವುದು ಅಪರೂಪ. ಮೂಡಬಿದರೆಯ ಧವಲಾ ಗ್ರಂಥಗಳು ಓಲೆಗರಿಗಳ ಮೇಲಿನ ವರ್ಣಚಿತ್ರಗಳ ಏಕೈಕ ಉದಾಹರಣೆ.

ಕೆಲವು ಗರಿಗಳ ಎರಡೂ ಅಂಚುಗಳಲ್ಲಿ ಚಿತ್ರಿಸಲಾಗುವ ವರ್ಣಚಿತ್ರಗಳು ತುಂಬಾ ಸೊಗಸಾದವುಗಳು ನಾಗ ಪೀಠದ ಮೇಲೆ ಯೋಗಮುದ್ರೆಯಲ್ಲಿ ಕುಳಿತ ಪಾರ್ಶ್ವನಾಥ ಆತನ ಎಡಬಲಗಳಲ್ಲಿ ವಿಧೇಯರಾಗಿ ಕೈಮುಗಿದು ಕೊಂಡು ಕುಳಿತ ಮುನಿಗಳು ಎರಡು ಪಕ್ಷಗಳಲ್ಲಿರುವ ಚಾವರ ಧಾರಿಗಳ ಮಧ್ಯ ಸಿಂಹ ಪೀಠದ ಮೇಲೆ ಧ್ಯಾನಸ್ಥನಾಗಿ ಕುಳಿತ ತೀರ್ಥಂಕರ. ಪೀಠದ ಆಚೀಚೆ ಚಾಮರಗಳು ಪೀಠದ ಮೇಲ್ಗಡೆಯ ಅಲಂಕಾರವಾಗಿ ಕಾಣಿಸುವುದರ ಮುನ್ನತೆಯಲ್ಲಿ ಸ್ಥಿರಸನಸ್ಥನನಾಗಿ ಕುಳಿತ ಜೀವಮುನಿ ಆ ಜೀವಮುನಿಯ ಪಕ್ಕದಲ್ಲಿ ಕೈಮುಗಿದುಕೊಂಡು ಕುಳಿತು ಮುನಿಶಿಷ್ಯ ಮುಂತಾದವುಗಳು ಸಮಾನಾಂಶವುಳ್ಳ ಸರಿಯೋಜನೆಯ ಒಂದು ಗುಂಪಾದರೆ ಸಮಭಂಗಿಯಲ್ಲಿ ನಿಂತ ಪಾರ್ಶ್ವನಾಥ ಹಾಗೆಯೇ ನಿಂತ ಬಾಹುಬಲಿ ಬಾಹುಬಲಿಯ ಎಡಬಲಗಳಲ್ಲಿ ನಿಂತ ಸಾಲಕೃತರಾದ ಅಂಗನೆಯರು ಮರದಡಿಯಲ್ಲಿ ತನ್ನ ವಾಹನ ಗಜ ಸಮೇತ ಕುಳಿತ ಯಕ್ಷ ಹಂಸ, ಮಯೂರ ಸಮೇತರಾದ ಯಕ್ಷಿಯರು ಪೀಠಸ್ಥೆಯಾದ ಶ್ರುತದೇವಿ ಅವಳ ಬದಿಗಳಲ್ಲಿ ಸೇವೆಗಾಗಿ ವಯ್ಯಾರದಿಂದ ನಿಂತ ಚಾವರ ಧರಿಸಿದ ಹೆಂಗಳೆಯರು ಇವು ಸಂಯೋಜನಾ ಚಿತ್ರಗಳ ಇನ್ನೊಂದು ಗುಂಪು.

ಒಂದೊಂದು ಚಿತ್ರದ ಹಿಂದಿರುವ ಬಣ್ಣವನ್ನು ಗಮನಿಸಿ ಅದಕ್ಕೆ ಹೊಂದಿಕೆಯಾಗುವ ಬಣ್ಣಗಳಿಂದ ಹಾಕಲಾದ ರೇಖಾ ವಿನ್ಯಾಸ ಚಿತ್ರಕಾರನ ಸೌಂದರ್ಯ ಪ್ರಜ್ಞೆ ಒಟ್ಟು ವರ್ಣ ಕ್ರಮದ ಅಂದವನ್ನು ಹೆಚ್ಚಿಸುತ್ತದೆ. ಈ ಸಂಯೋಜನೆಗಳಿಗೆ ಅರ್ಥಪೂರ್ಣವಾಗಿ ತುಂಬಿದ ಕೆಂಪು, ಹಸಿರು, ಹಳದಿ, ಬಿಳಿ, ಕರಿ, ಬಣ್ಣಗ ತೂಕಬದ್ಧ ಹರಡುವಿಕೆ ಚಿತ್ರಗಳ ಎರಡೂ ಬದಿಗೆ ಬರೆದ ಅಂಚಿನ ನಕ್ಷೆಗಳು ಒಂದಕ್ಕೊಂದು ಪೂರಕ ಎನಿಸಿದೆ. ಇವುಗಳ ಜೊತೆಗೆ ತ್ರಿಜ್ಯದ ಸಹಾಯದಿಂದ ತೆಗೆದ ಸುಂದರ ನಕ್ಷೆಗಳು ವಿಶಿಷ್ಟವಾದವುಗಳಾಗಿವೆ. ಒಟ್ಟಾರೆ ಧರ್ಮಗ್ರಮಥಗಳಲ್ಲಿನ ತಾಳೆಗರಿಗಳ ಮೇಲಿನ ವರ್ಣಚಿತ್ರಗಳ ಇತಿಹಾಸದಲ್ಲಿರುವುದು ವಿಶೇಷವಾದವುಗಳು ಆಗಿವೆ. ಈ ಚಿತ್ರದಲ್ಲಿಯ ಯಕ್ಷ ಯಕ್ಷಿಯರ ಆಕೃತಿಗಳು ಅವರ ಕೇ ರಚನೆ ತೀರ್ಥಂಕರ, ಪಕ್ಷಿ ಪ್ರಾಣಿ ಮುಂತಾದವು ವಿಶಿಷ್ಟವಾಗಿವೆ.

ಚಿಕಣಿ ಚಿತ್ರಗಳ ರೇಖಾ ವಿನ್ಯಾಸ ಅತೀ ಸೂಕ್ಷ್ಮ ಹಾಗೂ ವಿಶಿಷ್ಟವಾದುದು ಆಗಿದೆ. ಮೂಡು ಬಿದರೆಯ ಧವಲಾ ಗ್ರಂಥಗಳಲ್ಲಿನ ಚಿತ್ರ ಶೈಲಿಗಿಂತ ಶ್ರವಣಬೆಳಗೊಳದ ಚಿತ್ರ ಶೈಲಿ ವಿಶೇಷವಾಗಿದೆ. ಶಾಂತಿಕೀರ್ತಿಯ ಚತುರ್ವಿಸತಿ ತೀರ್ಥಂಕರ ಚರಿತ್ರೆಯೊಂದಿಗೆ ಚಿತ್ರರಚನೆಯೂ ವಿಶೇಷವಾಗಿದೆ.

ಶ್ರೀಮತಿ ಸರಯು ದೋಶೆಯವರು ಅಭಿಪ್ರಾಯಪಡುವಂತೆ ಮರಾಠಾ ಶೈಲಿಯ ಫಲಕ ಮಾಧ್ಯಮದ ವರ್ಣಚಿತ್ರಗಳು ಬೆಂಗಳೂರು ವಿಶ್ವವಿದ್ಯಾಲಯದ ಹಸ್ತಪ್ರತಿ ಸಂಗ್ರಹದಲ್ಲಿರುವ ತಾಳಿಗೆರಿಯ ಜೈನ ಗ್ರಂಥಸ್ವಾಶ ಭಾರತಕ್ಕೆ (೧೦೪೭) ಆವರಣವಾಗಿರುವ ಫಲಕಗಳು ೨೪ನೇ ತೀರ್ಥಂಕರ ಲಕ್ಷಣವಾದ ಚಿತ್ರ ರಚನೆಗಳನ್ನು ಹೊಂದಿವೆ. ಇಳಿಜಾರುಗೊಳಿಸಲಾದ ಅಂಚಿನ ಫಲಕಗಳಲ್ಲಿ ಒಂದೊಂದು ಫಲಕದ ಮೇಲ್ಗಡೆಯಲ್ಲಿ ಹಳದಿ ವರ್ಣದಿಂದ ಒಟ್ಟು ಹದಿನಾಲ್ಕು ಅರ್ಧ ವರ್ತುಲಾಕಾರದ ಕಮಾನುಗಳನ್ನು ಚಿತ್ರಿಸಿ ಅದರ ಮೇಲೆ ಸಣ್ಣ ಹೂ ಬಳ್ಳಿಗಳನ್ನು ಚಿತ್ರಿಸಲಾಗಿದೆ. ಈ ಕಮಾನುಗಳ ಮಾಧ್ಯಭಾಗದಲ್ಲಿ ವಿಶೇಷವಾಗಿ ಹಳದಿ ವರ್ಣದಿಂದಲೇ ಚಿತ್ರಿಸಲಾದ ಪರ್ಯಂಕಾ ಪದ್ಧತಿ ತೀರ್ಥಂಕರರಿದ್ದಾರೆ. ಸುಮಾರು ೪೫ ತೀರ್ಥಂಕರರ ಮೈಬಣ್ಣ ನೀಲಿಮಿಶ್ರ ಹಸಿರಿನಿಂದ ತುಂಬಲಾಗಿದೆ. ಬಹುಶಃ ಆಯಾ ತೀರ್ಥಂಕರರ ಅಂಗಸ್ಥಾಷವ ಆಯಾ ವರ್ಣದಿಂದಲೇ ಚಿತ್ರಿಸುವ ಪ್ರಯತ್ನವನ್ನು ಚಿತ್ರಕಾರನು ಮಾಡಿರುವಂತಿದೆ. ಫಲಕದ ವರ್ಣಗಳು ಮಾಸಿದ ಕಾರಣ ವರ್ಣವೈವಿದ್ಯ ಗುರುತಿಸುವುದು ಕಷ್ಟವಾಗುತ್ತದೆ.

ಕಮಾನಿನ ಹಾಗೂ ತೀರ್ಥಂಕರರ ಆಕೃತಿಗಳಿಗೆ ಕಪ್ಪು ವರ್ಣದಿಂದ ಹಾಕಲಾಗಿದೆ. ಬಾಹ್ಯ ರೇಖೆಯಲ್ಲಿ ಕಲಾವಿದನ ಪರಿಶ್ರಮದ ಸಾಧನೆ ವ್ಯಕ್ತವಾಗಿದ್ದು, ಒಂದೊಂದು ಫಲಕದಲ್ಲಿ ೧೨ ಜನ ತೀರ್ಥಂಕರರನ್ನು ಚಿತ್ರಿಸಿರುವ ಈ ಫಲಕಗಳಲ್ಲಿ ೫ನೇಯ ಮತ್ತು ೧೦ನೇ ಕಮಾನಿನಲ್ಲಿ ಜಿನ

ಭಕ್ತೆಯರನ್ನು ಚಿತ್ರಿಸಲಾಗಿದೆ. ಅವರು ಮಧ್ಯದಲ್ಲಿ ಬರುವ ತೀರ್ಥಂಕರರತ್ತ ಮುಖಮಾಡಿ ನಿಂತಿರುವಂತೆ ಚಿತ್ರಿಸಿದೆ. ಪೀಠಸ್ಥ ತೀರ್ಥಂಕರರ ಕೆಳಗಡೆ ಆಯಾ ತೀರ್ಥಂಕರರ ಲಾಂಛನಗಳು ಚಿತ್ರಿಸಲ್ಪಟ್ಟಿವೆ. ತೀರ್ಥಂಕರರ ಸುತ್ತಲಿನ ಹಿನ್ನಲೆಯು (Background) ಕೆಂಪುವರ್ಣದಿಂದ ಭರಿತವಾಗಿದೆ.

ಜಿಲ್ಲೆಯ ಶಿವಯೋಗ ಮಂದಿರದ ಹಸ್ತಪ್ರತಿಗಳ ಮೇಲಿನ ಚಿತ್ರಗಳ ವಿವರ

ಕನ್ನಡ ಅಧ್ಯಯನ ಸಂಸ್ಥೆಯ ಸಂಗ್ರಹದಲ್ಲಿನ "ಮಾಚೀದೇವ ಮನೋವಿಲಾಸ"ವೆಂಬ ಕೃತಿಯ ಮೊದಲ ಎರಡು ಹಾಗೂ ಕೊನೆಯ ಒಂದು ಹಾಳಿಯಲ್ಲಿ ಚಿತ್ರರಚನೆ ಇವೆ. ಇವುಗಳಲ್ಲಿ ಮಸಿಯನ್ನು ಬಳಸಿಕೊಂಡು ಲೆಕ್ಕಣಿಕೆಯಿಂದಲೇ ಶಿವನ ಓಲಗದ ದೃಶ್ಯ ಗಮನಾರ್ಹವಾಗಿದೆ. ಪತ್ರಮಾಧ್ಯಮದ ವರ್ಣಚಿತ್ರಗಳು ವೀರಶೈವ ಹಸ್ತಪ್ರತಿಗಳಲ್ಲಿನ ಪತ್ರ ಮಾಧ್ಯಮದ ವರ್ಣಚಿತ್ರ ರಚನೆಗಳು ಕಾಗದ ಪ್ರತಿಗಳಲ್ಲಿ ಮಾತ್ರ ಕಂಡುಬರುತ್ತದೆ.

ಹಾಳೆಯ ಮಧ್ಯದಲ್ಲಿ ಶಿವಲಿಂಗದ ಪೀಠದಂತಿರುವ ಆಸನದದಲ್ಲಿ ಶಿವ-ಪಾರ್ವತಿ ಸಮೇತನಾಗಿ ವಿರಾಜಮಾನನಾಗಿದ್ದು, ಆತನ ಬಲಬದಿಗೆ ಭೃಂಗಿಯ ತನ್ಮಯನಾಗಿ ನರ್ತಿಸುತ್ತಿದ್ದಾನೆ. ಕೀರಿಟಧಾರಿ ಯಾದ ಒಬ್ಬನು ಮಾಚಿದೇವನಿರಬಹುದ್ದಾಗಿದ್ದು ಶಂಖವನೂ ಊದುತ್ತಿದ್ದಾನೆ. ಎಡಗಡೆಯಲ್ಲಿ ನಾರದ ಅವನ ಹಿಂದುಗಡೆ ಮನುಷ್ಯ ಮುಖ ಮತ್ತು ಪ್ರಾಣಿದೇಹವನ್ನು ಹೊತ್ತ ಕಾಮಧೇನುವಿನ ಚಿತ್ರಣವಿದೆ. ಹಾಳೆಯ ಸುತ್ತಲೂ ಶಿಲ್ಪದಲ್ಲಿ ಕಂಡುಬರುವ ಬಿಚ್ಚಿಕೊಂಡ ನಾಲ್ಕು ಎಸಳಿನ ಪುಷ್ಪಾ ಕೃತಿಯನ್ನೊಳ ಗೊಂಡ ಚಾಕುಗಳನ್ನು ಅಂಚಿನ ಗುಂಟ ಬಿಡಿಸಿ ಚೌಕಟ್ಟೊಂದನ್ನು ನಿರ್ಮಿಸಿಕೊಂಡು ಅದರ ಒಳಗಡೆ ಶಿವನ ಓಲಗದ ಚಿತ್ರ ಬರೆಯಲಾಗಿದೆ. ಆಕೃತಿಗಳ ಮಧ್ಯದ ಮತ್ತು ಹಿಂದಿನ ಔಗವನ್ನು ನಕ್ಷೆಗಳಿಂದ ತುಂಬಲಾಗಿದೆ. ಶಿವನಿಗೆ ಗಡ್ಡ ಮೀಸೆಗಳಿರುವುದು ಇನ್ನುಳಿದವರಿಗೆ ಮೀಸೆಯಿರುವುದು ಗಮನಾರ್ಹ ಬಹುಶಃ ಹಸ್ತಪ್ರತಿ ಬರಹಗಾರನೇ ಚಿತ್ರಿಸಿರಬಹುದಾದ ಈ ಚಿತ್ರದಲ್ಲಿ ಚಿತ್ರರಚನೆಯಲ್ಲಿನ ಪರಿಶ್ರಮದ ಕೊರತೆ ಕಂಡುಬಂದರೂ ಇರಬೇಕಾದ ಕಲ್ಪನಾಶಕ್ತಿ ಈತನಿಗಿದ್ದುದು ಸ್ಪಷ್ಟವಾಗಿದೆ.

ಬೆಂಗಳೂರು ವಿಶ್ವವಿದ್ಯಾಲಯದಲ್ಲಿನ ಸಿದ್ಧಲಿಂಗಯತಿಯ ವರ್ಣಚಿತ್ರವು ಲಳ ತುಂಬಾ ಮಹತ್ವ ದ್ದಾಗಿದೆ. ಸೋಪಾನಗಳಂತೆ ಚಿತ್ರಿಸಲಾದ ಹುತ್ತಿನ ಪ್ರತಿಯೊಂದು ಹಂತದಲ್ಲಿಯೂ ಎರಡೂ ಬದಿಗೆ ಮುಖಮಾಡಿ ಹೆಡೆಯತ್ತಿನಿಂತ ಸರ್ಪಗಳು, ಹುತ್ತಿನ ಮೇಲ್ಬದಿಯಲ್ಲಿ ನಿಂತು ಹಾಲೆರೆದ ಗೋವು, ಕೆಂಪು (Irdiased) ವರ್ಣದಿಂದ ಚಿತ್ರಿಸಲಾದ ಹುತ್ತಿನ ಮಧ್ಯದಲ್ಲಿ ಹಳದಿ ವರ್ಣದಿಂದ ಚಿತ್ರಿಸಿ ದಟ್ಟಗೆಂಪು ವರ್ಣದಿಂದ ಬಾಹ್ಯರೇಖೆಗಳನ್ನೂ ಕರಿಬಣ್ಣದಿಂದ ಮೀಸೆ, ಗಡ್ಡ ತೆಲೆಗೂದಲೂ ಕಣ್ಣುಗಳನ್ನೂ

ಬರೆದ ಲಿಂಗಪೂಜಾ ನಿರತ ತೋಂಟದ ಸಿದ್ಧಲಿಂಗದುಲೆಯ ಚಿತ್ರವು ಲಕ್ಷಣವಾದುದಾಗಿದೆ. ಲಿಂಗಕ್ಕೆ ಪುಷ್ಪ ಅರ್ಪಿಸುತ್ತಿರುವ ಯತಿಯ ಚಿತ್ರ ಆಕರ್ಷಕವಾಗಿದೆ.

ಉಟ್ಟ ಬಿಳಿಧೋತರ ಮೇಲಿನ ಬಿಳಿ ಆಕಳು ಚಿತ್ರದ ವರ್ಣ ಸಮತೋಲನಕ್ಕೆ ಕಾರಣವಾಗಿವೆ. ಕಪ್ಪು ವರ್ಣದಲ್ಲಿ ಬರೆದ ಕಣ್ಣು, ಅವುಗಳಲ್ಲಿನ ನೆಟ್ಟ ನೋಟ, ಗಡ್ಡ-ಮೀಸೆ, ತಲೆಯ ಮೇಲೆ ಚಿತ್ರಿಸಲು ಪೋಷಕವಾಗಿವೆ ಅಲ್ಲಲ್ಲಿ ತೆಳು ವರ್ಣಗಳ ಕುಂಚದಿಂದ ಆಡಿಸಿ ಬಟ್ಟೆಯ ಮಡಿಕೆ, ಮೈಯ ಗಾತ್ರತೆಯನ್ನು ಚಿತ್ರಕಾರನು ತೋರಿಸಿದ್ದಾನೆ. ಈ ವರ್ಣಚಿತ್ರದ ವಿಶೇಷವೆಂದರೆ ಚಿತ್ರಿಸಲಾದ ಸಿದ್ಧಲಿಂಗ ಯತಿಯ ಒಟ್ಟು ಚಿತ್ರದ ಸಾಂಕೇತಿಕತೆಯನ್ನು ಅವರ ಮೆಗ್ಗೆಲಲ್ಲಿಯೇ ಸರ್ಪಾಕೃತಿ ಮತ್ತು ನವಚಕ್ರಗಳನ್ನು ಚಿತ್ರಿಸುವ ಮೂಲಕ ಸ್ಪಷ್ಟಪಡಿಸಿದ್ದಾಗಿದೆ. ಸರ್ಪಾಕೃತಿಯ ಉದ್ದಕ್ಕೂ ಆಯಾ ಚಕ್ರಗಳಿಗೆ ಇರಬೇಕಾದ ದಳಸಂಖ್ಯೆ ವರ್ಣ ಇತ್ಯಾದಿಗಳನ್ನು ಚಿತ್ರಕಾರನು ತುಂಬಾ ಆಸಕ್ತಿಯಿಂದ ಚಿತ್ರಿಸಿದ್ದಾನೆ. ತೋಂಟದ ಸಿದ್ಧಲಿಂಗಯತಿಗಳು ಲಿಂಗಪೂಜಾನಿರತರಾಗಿದ್ದಾಗ ಅವರ ಸುತ್ತಹುತ್ತ ಬೆಳೆಯಿತು ದಿನವೂ ಈ ಹುತ್ತಿನ ಮೇಲೆ ಒಂದು ಗೋವು ಒಂದು ಹಾಲುಕರೆಯುತ್ತಿತ್ತು ಎಂಬುದಾಗಿ ಹೇಳುವ ಇತಿಹಾಸಕ್ಕೂ ಅದರ ಹಿಂದಿರುವ ಗೂಢಾರ್ಥಕ್ಕೂ ಚಿತ್ರಕಾರನು ಸೇತುವೆ ಕಟ್ಟಿದುದನ್ನು ಈ ವರ್ಣಚಿತ್ರದಲ್ಲಿ ಕಾಣಬಹುದು. ಇಂತಹದೇ ಕೆಲವು ಸಾಂಕೇತಿಕ ಚಿತ್ರಗಳನ್ನೊಳಗೊಂಡ ಹಸ್ತಪ್ರತಿಯೊಂದು ಪೂ.ಜಿ.ಎಂ. ಉಮಾಪತಿ ಶಾಸ್ತ್ರಿಯವರ ಸಂಗ್ರಹದಲ್ಲಿ ಇವೆ. ಇವರಲ್ಲಿ ಅಲ್ಲಮಪ್ರಬುದೇವರ ಚಿತ್ರಣವನ್ನು ಚಿತ್ರಕಾರನು ಅತ್ಯಂತ ಅಮೋಘವಾಗಿ ಚಿತ್ರಿಸಿದ್ದಾನೆ. ಹಾಳೆಯ ಮೇಲೆ ಪ್ರಧಾನವಾಗಿ ಕಾಣುವುದು ಹರಡಿನಿಂತ ಒಂದು ಕದಳಿವೃಕ್ಷ, ಈ ವೃಕ್ಷದಲ್ಲೆ ಪ್ರಭುವಿನ ಅಂಗಾಂಶಗಳು ಅಡಕಗೊಂಡಿವೆ. ಕದಳಿಯ ಮಧ್ಯದಲ್ಲಿ ಪ್ರಭುದೇವರ ಮುಖವನ್ನು ಮಾತ್ರ ಕಾಣುವಂತೆ ಚಿತ್ರಿಸಲಾಗಿದೆ. 'ಕಾಯವೆಂಬುದೊಂದು ಕದಳಿ', ಎಂಬ ಶರಣರ ಚಿತ್ರರೂಪ ತಾಳಿ ನಿಂತಿರುವುದನ್ನು ಇಲ್ಲಿ ಕಾಣಬಹುದು. ಈ ಹಸ್ತಪ್ರತಿಯಲ್ಲಿ ಮೇಲೆ ವರ್ಣಿಸಲಾದ ಸಿದ್ಧಲಿಂಗಯತಿಯ ಸಾಂಕೇತಿಕ ವರ್ಣಚಿತ್ರವನ್ನು ಹೋಲುವ ಚಿತ್ರವೂ ಇದ್ದು ಅದರೊಟ್ಟಿಗೆ ಮಹದೇವಿಯಕ್ಕ ಮೊದಲಾದ ಶರಣ ಶರಣೆಯರ ಚಿತ್ರಗಳು ಇದ್ದುದ್ದು ಕಂಡುಬರುತ್ತದೆ. ಇವುಗಳಂತೆ 'ವೃಷಭೇಂದ್ರವಿಲಾಸ'ವೆಂಬ ಯಕ್ಷಗಾನ ಗ್ರಂಥದಲ್ಲಿ ಬಸವಣ್ಣನವರು ಜೀವನವೇ ಚಿತ್ರರೂಪದಲ್ಲಿ ಸಾಕಾರಗೊಂಡದ್ದು ತಿಳಿದುಬರುತ್ತದೆ. ಡಾ. ತಿಪ್ಪೆರುದ್ರಸ್ವಾಮಿಯರು ಹೇಳುವಂತೆ. "ಈ ಗ್ರಂಥದ ಗಮನಾರ್ಹವಾದ ಅಂಶವೆಂದರೆ ಶ್ರೀ ತತ್ವನಿಧಿಯಲ್ಲಿರುವಂತೆ ಪುಟಪುಟಗಳಲ್ಲಿಯೂ ಮೈವೆತ್ತುನಿಂತಿರುವ ಅಸಂಖ್ಯಾತ ವರ್ಣಚಿತ್ರಗಳು" ಎನ್ನುತ್ತಾ "ದಪ್ಪವಾದ ಹಳೆಯ ಕಾಗದದಲ್ಲಿ ರಚಿತವಾದ ಈ ಗ್ರಂಥ, ಆಕಾರದಲ್ಲಿ ಸುಮಾರು ಒಂದಡಿಗಿಂತಲೂ ಸ್ವಲ್ಪ ಹೆಚ್ಚು ಉದ್ದವಾಗಿಯೂ ಮತ್ತು ಅರ್ಧ ಅಡಿಗಿಂತಲೂ

ಸ್ವಲ್ಪ ಹೆಚ್ಚು ಅಗಲವಾಗಿಯೂ ಇದೆ. ಒಂದೊಂದು ಪುಟದ ಸುತ್ತಲೂ ಹಳದಿಯ ಬಣ್ಣದ ಅಂಚನ್ನು ಕಟ್ಟಲಾಗಿದೆ. ಪ್ರತಿ ಪುಟದಲ್ಲಿಯೂ ಕಥಾ ನಿರೂಪಣೆಯ ಒಂದೋ ಎರಡೋ ಪದ್ಯಗಳಿದ್ದು ಅದಕ್ಕೆ ಸಂಬಂಧಪಟ್ಟ ಚಿತ್ರಗಳೇ ಪ್ರಧಾನವಾಗಿ ಕಂಗೋಳಿಸುತ್ತಿವೆ" ಎಂದು ಮುಂತಾಗಿ ವಿವರಣೆ ನೀಡಿದ್ದಾರೆ. ಕನ್ನಡ ಅಧ್ಯಯನ ಪೀಠದಲ್ಲಿ ಹದಿನೆಳನೆಯ ಶತಮಾನದ ಕೊನೆಯ ಭಾಗದಲ್ಲಿ ಪ್ರತಿಮಾಡಿರಬಹುದಾದ ರಾಘವಾಂಕ ಚರಿತೆಯ ಒಂದು ಕಾಗದ ಪ್ರತಿ (ನಂ. ೧೧೭೪) ಇದೆ. ಕವಿ ರಾಘವಾಂಕನ ಜೀವನಕ್ಕೆ ಸಂಬಂಧಪಟ್ಟ ಕೆಲವು ವರ್ಣಚಿತ್ರಗಳಿರುವ ಇದರಲ್ಲಿ ಪ್ರಭುದೇವ ಸಿದ್ಧರಾಮ, ರಾಘವಾಂಕ-ಹರಿಹರ, ಚಿಕ್ಕನಂಜಾರ್ಯ-ಚೆನ್ನವೀರಾಂಬಿಕೆ, ಮಹಾದೇವ-ರುದ್ರಾಣಿ, ವಿರುಪಾಕ್ಷಪಂಡಿತ, ಕೆರೆಯ ಪದ್ಮರಸ ಮೊದಲಾದವರ ಸುಂದರ ವರ್ಣಚಿತ್ರಗಳಿದ್ದು, ರಾಘವಾಂಕ ಚಾರಿತ್ರೆಯ ಪ್ರತಿಯೊಂದು ಘಟನೆಯನ್ನು ನೆನಪಿಸುತ್ತದೆ. "ರಾಘವಾಂಕನ ಬಗೆಗೆ ಪುರಾತನ ಇಲ್ಲವೆ ಆಧುನಿಕವಾದ ಯಾವ ಚಿತ್ರಗಳೂ ಪ್ರಕಟವಾಗ ದಿರುವಾಗ ಕವಿಯ ವ್ಯಕ್ತಿತ್ವವನ್ನು ಹೆಚ್ಚು ಸ್ಫುಟಗೊಳಿಸಬಹುದಾದ ಚಿತ್ರ ಇದಾಗಿದೆ. ಎಂದು ಸಂಪಾದಕರು ಅಭಿಪ್ರಾಯಪಟ್ಟಿರುವುದು ಈ ವರ್ಣಚಿತ್ರಗಳ ಮಹತ್ವವನ್ನು ಎತ್ತಿ ಹೇಳುತ್ತವೆ. ವರ್ಣಚಿತ್ರಗಳುಳ್ಳ ಹಸ್ತಪ್ರತಿ ಎಂಬ ದೃಷ್ಟಿಯಿಂದ ತುಂಬಾ ಮಹತ್ವದೆನಿಸಿದೆ. ಈ ಹಸ್ತಪ್ರತಿ ಚಿತ್ರಕಾರನ ಕಲಾಕೌಶಲವನ್ನು ಸಾರಿಹೇಳುವ ಇಲ್ಲಿನ ನಯವಾದ ರೇಖಾವಿನ್ಯಾಸ, ಸಾಂಪ್ರದಾಯಿಕ ಕಲಾಪೌಡಿಮೆ ಮೆಚ್ಚಬೇಕಾದವುಗಳು. ಇದು ಎಲ್ಲರ ದೃಷ್ಟಿಯಿಂದಲೂ ಶ್ರೇಷ್ಠ ಕಲಾವಸ್ತುವಿನ ಸ್ಥಾನ ಪಡೆಯುತ್ತದೆ.

ಚಿತ್ರದ ತಲೆಬರಹವನ್ನು ಬರೆಯಲಾದ ಮೊದಲಪುಟದಲ್ಲಿನ ವೈಭವಪೂರ್ಣ ಸಾಂಪ್ರದಾಯಿಕ (Comvemtional forms) ನಕ್ಷೆ ಮನಸೂರೆಗೊಳ್ಳುವಂತಹದ್ದು. ಇವನ್ನೊಳಗೊಂಡು ಇನ್ನೂ ೮೫ ಚಿತ್ರಿತ ಕಾಗದಗಳಿವೆ. ಅವೆಲ್ಲ ಬೇರೆ ಬೇರೆ ಉದ್ದರಣೆಗಳೂ ಶಿವ ನೊಲಗದ ದೇವತೆಗಳ ಕೆಲವು ಚಿತ್ರಗಳೊಂದಿಗೆ ಲಿಂಗದ್ದೂರಣೆ. ವೃಷಭೋದ್ಧರಣೆ ಊರ್ಧ್ವ ಕುಂಡಲಿನಿ, ಅಧೂಕುಂಡಲಿನಿ ಉದ್ಧರಣೆ ಮುಂತಾದವುಗಳನ್ನು ಅತ್ಯಂತ ನೈಪುಣ್ಯದಿಂದ ಚಿತ್ರಿಸಲಾಗಿದೆ. ಜಾನಪದ ಕ್ಷೇತ್ರದಲ್ಲಿ ಮೊನ್ನೆ ತನಕ ಪ್ರಾಚೀನ ಕಾಲದ ಶುದ್ಧರೂಪದ ಮೂಲಜಾನಪದ ಪಠ್ಯವೊಂದು ಕಾಲಾನುಕಾಲಕ್ಕೆ ಕೈಗಾರಿಕೀಕರಣ ನಗರೀಕರಣ ಹಾಗೂ ಸಾಂಸ್ಕೃತಿಕ ಸಮ್ಮಿಶ್ರಣದ ಮೂಲಕ ಅಪಮೌಲೀಕರಣಕ್ಕೆ ಒಳಗಾಗುತ್ತಿದೆ. ಎಂಬ ಹಳಹಳಿಕೆ ಚಾಲ್ತಿಲ್ಲಿತ್ತು. ಗ್ರಂಥ ಸಂಪಾದನೆಯ ಶಾಸ್ತ್ರವನ್ನು ಜಾನಪದಕ್ಕೆ ಬೆಸೆದು ಅಶಿಕ್ಷಿತರೂ ತಿಳುವಳಿಕೆ ಇಲ್ಲದವರೂ ಆದ ಜಾನಪದರೂ ಕಿವಿಯಿಂದ ಕೇಳಿಸಿದುದನ್ನು ಬಾಯಿಯ ಮೂಲಕ ಒಪ್ಪಿಸುವಾಗ ವಿಕಾರಗೊಳಿಸುತ್ತಾರೆಂದೂ ಅವರ ಜಾನಪದವನ್ನು ತಿದ್ದಿ ತಿದ್ದಿ ಪರಿಷ್ಕರಿಸಿ ಪ್ರಕಟಿಸ ಬೇಕೆಂದೂ ಆಶಾವಾದಿಗಳು ಭಾವಿಸಿದರು. ಅಷ್ಟೇ ಅಲ್ಲ ಕೆಲವರು ಭಾಷೆಯನ್ನು ತಿದ್ದಿ ಛಂದಸ್ಸಿಗೆ ಹೊಂದಿಸಿ ಪ್ರಕಟಿಸಿದರು. ಇದುವೇ ಸಾಧುವಾದ ಮಾರ್ಗವೆಂದು ಹಟ ಹಿಡಿದರು.

ಹಿಂದಿನ ಜನಪದ ಕವಿಗಳು, ಗಾಯಕರು, ಕಲಾವಿದರು ಮಾನಸಿಕ ರೂಪದಲ್ಲಿ ತಮ್ಮಲ್ಲಿ ಕಳೆಗೊಂಡ ಜನಪದ ಪಠ್ಯವನ್ನು ಯಾವುದೇ ಬದಲಾವಣೆಯಿಲ್ಲದೇ ಪ್ರದರ್ಶನದಿಂದ ಪ್ರದರ್ಶನಕ್ಕೆ ಪುನರಾವರ್ತಿಸುತ್ತಾರೆ ಎಂದೂ ಹಾಗೇನಾದರೂ ಬದಲಾವಣೆ ಆದರೆ ಆದಕ್ಕೆ ಮರೆವು ಆಲಸ್ಯಕ್ಕೆ ಕಾರಣವೆಂದು ತಿಳಿಯಲಾಗುತ್ತಿತ್ತು. ಅವರೂ ತಾವು ಪರಂಪರೆಯಿಂದ ಪಡೆದುದ್ದನ್ನು ಯಥಾಪ್ರಕಾರ ಒಪ್ಪಿಸುತ್ತೇವೆ. ಎನ್ನುವುದುಂಟು ಆದರೆ ಇತ್ತೀಚೀನ ತಿಳುವಳಿಕೆಯಿಂದಾಗಿ ಈ ಪಠ್ಯದ ಪರಿಕಲ್ಪನೆ ಬದಲಾಗಿದೆ. ಜನಪದ ಕವಿ ಕಲಾವಿದ ಕತೆಗಾರರಲ್ಲಿ ಪಠ್ಯದ ರೂಪದಲ್ಲಿದ್ದ ಜನಪದ ಪ್ರದರ್ಶನವೊಂದರ ತನ್ನ ಅವತಾರದ ಕ್ರಿಯೆಯ ವಿಶಿಷ್ಟ ಮಹೂರ್ತ ಹಾಗೂ ಎದುರಿನ ಪ್ರೇಕ್ಷಕ ಶ್ರೋತೃ ವರ್ಗಕ್ಕನುಸರಿಸಿ ಭಿನ್ನ ಭಿನ್ನ ಆಕಾರವನ್ನು ಪಡೆಯುತ್ತದೆ. ಜಾನಪದ ಪಠ್ಯವೊಂದರ ಸ್ವರೂಪ ಅದು ಮೂರ್ತಗೊಳ್ಳುವ ಸಂದರ್ಭ ತಂತ್ರ ಪಡೆದುಕೊಳ್ಳುವ ಆಕಾರ ಹಾಗೂ ಕಾರ್ಯ ಲಿಖಿತ ಸ್ಥಿರ ಪಠ್ಯಕ್ಕಿಂತ ಬೇರೆಯಾದುದು. ಹೀಗಾಗಿ ಜಾನಪದ ಪ್ರಕಾರ ಹೊಂದಿದ ಪಠ್ಯೀಕರಣ ಅಥವಾ ಸಂಪಾದನಕ್ಕೆ ಲಿಖಿತ ಪಠ್ಯ ಸಂಪಾದನ ಕ್ಕಿಂತ ಭಿನ್ನವಾದ ವಿಧಿವಿಧಾನ ಹಾಗೂ ಮಾನದಂಡಗಳನ್ನು ಅಳವಡಿಸುವುದು ಅಗತ್ಯ ಹಾಗೂ ಸಾಧನವೂ ಆಗಿದೆ. ಈ ಪೂರ್ವ ಪ್ರಮೇಯವನ್ನು ಇರಿಸಿಕೊಂಡೇ ನನ್ನ ಬರವಣಿಗೆ ಸಾಗಿದೆ. ಅಕ್ಷರ ಲೋಕಕ್ಕೆ ಹೊರತಾದ ಜಾನಪದ ಲೋಕದ ಕೆಲವೊಂದು ಪಾರಿಭಾಷಿಕ ಪದಗಳನ್ನು ಮೊದಲು ನಿರ್ವಚಿಸಿಕೊಳ್ಳ ಬೇಕಾಗಿದೆ. ಜಾನಪದ ಅಧ್ಯಯನದಲ್ಲಿ ಪಠ್ಯ ಎಂದರೇನು? ಅದರ ಸ್ವರೂಪ ಏನು ಎಂಬುದು ನೋಡಲು ಮೊದಲು ಖಚಿತಪಡಿಸಿಕೊಳ್ಳಬೇಕು. ಅಕ್ಷರ ಪ್ರಪಂಚದಲ್ಲಿ ಇತ್ತೀಚಿನವರೆಗೆ ಪಠ್ಯ ಎಂದರೆ ಬರವಣಿಗೆ ರೂಪದಲ್ಲಿ ದಾಖಲೆಗೊಂಡದ್ದು ಎಂಬ ಅರ್ಥವಿತ್ತು ಮತ್ತು ಇದೊಂದೇ ಪಠ್ಯ ಎಂಬ ಅಭಿಪ್ರಾಯವಾಗಿತ್ತು. ಜಾನಪದ ವಲಯದಲ್ಲಿ ಇತ್ತೀಚಿನವರೆಗೂ ಹೀಗೆ ತಿಳಿಯಲಾಗುತ್ತಿತ್ತು. ಗಿನ್ನೀಸ ಚಾರಿತ್ರಿಕ ಭೌಗೋಳಿಕ ವಿಧಾನದಲ್ಲಿ ಪಠ್ಯದ ಮೂಲರೂಪದವನ್ನು ಕಂಡುಕೊಳ್ಳುವ ಪ್ರಯತ್ನ ನಡೆಯಿತು.

ಭಾರತೀಯ ಗ್ರಂಥಸಂಪಾದಕರ ಶಾಸ್ತ್ರದಲ್ಲಿ ಒಬ್ಬ ಕವಿಯ ಪಠ್ಯದಲ್ಲಿ ಅತ್ಯಂತ ಪ್ರಾಚೀನವಾದ ಪಠ್ಯವೇ ಮೂಲಪಠ್ಯ ಕಾಮಾನುಕ್ರಮದಲ್ಲಿ ಪ್ರತೀಕಾರರ ದೋಷದಲ್ಲಿ ಬದಲಾವಣೆಗೆಗೆ ಒಳಗಾಗುತ್ತದೆ. ಈ ಪಾಠಾಂತರಗಳ ತೌಲನಿಕ ಅಧ್ಯಯನದ ಮೂಲಕ ಮೂಲಪಾಠ ಅಥವಾ ಕವಿ ಪಾಠಕ್ಕೆ ಸಮೀಪವಾದ ಪಾಠವನ್ನು ಪ್ರಾರಂಭಿಸುವುದಕ್ಕೆ ಎಲ್ಲ ವಿಧಾನಗಳನ್ನು ರೂಪಿಸಲಾಯಿತು. ಪ್ರಾಚೀನವಾದ ಒಂದು ಪಠ್ಯ ಅಧಿಕೃತವಾದುದೆಂದೂ ಉಳಿದ ಪಠ್ಯಗಳೂ ಅದರ ಭಿನ್ನರೂಪ ಅಥವಾ ರೂಪಾಂತರಗಳೆಂದೂ ತಿಳಿಯ ಲಾಯಿತು. ಒಂದೇ ಪಠ್ಯವನ್ನು ವಿಭಿನ್ನ ಸಾಮಾಜಿಕ ಸಾಂಸ್ಕೃತಿಕ ಹಿನ್ನಲೆಯಿಂದ ಬಂದವರು ವಿಭಿನ್ನ ಸಂದರ್ಭಗಳಲ್ಲಿ ಪ್ರದರ್ಶಿಸಿದಾಗ ಹಾಗೂ ಒಂದೇ ಪಠ್ಯವನ್ನು ಒಬ್ಬನೇ ಕವಿ ಅಥವಾ ಕಲಾವಿದ

ಬೇರೆ ಬೇರೆ ಸಂದರ್ಭಗಳಲ್ಲಿ ವಿಭಿನ್ನ ಪ್ರೇಕ್ಷಕ ಅಥವಾ ಶ್ರೋತೃಗಳ ಎದುರು ಸಾದರಪಡಿಸಿದಾಗ ಪಠ್ಯದ ಸ್ವರೂಪ ಚಲನಶೀಲವಾದುದು ಎಂಬ ನಿಲುಮೆ ಪ್ರಕಟವಾಯಿತು.

ತನ್ನ ಕಲಾಭಿವ್ಯಕ್ತಿಗೆ ಸಾಕಷ್ಟು ಅವಕಾಶವನ್ನು ಕಲ್ಪಿಸಿಕೊಂಡು ಈ ಚಿತ್ರಕಾರನು ಉದ್ಧರಣೆಗಳ ಮೂಲ ಉದ್ದೇಶವನ್ನು ಮರೆಯದೇ ಚಿತ್ರಿಸಿರುವುದೊಂದು ಹೆಗ್ಗಳಿಕೆ ಎನಿಸುತ್ತವೆ. ಇದನ್ನು ಇನ್ನಷ್ಟು ಖಚಿತವಾಗಿ ಹೀಗೆ ಸ್ಪಷ್ಟಪಡಿಸಬೇಕು. ಕಲಾವಿದನೊಬ್ಬನು ಪ್ರಬುದ್ಧ ಕಲಾವಿದನಾಗಿ ಬೆಳೆದು ಸಾರ್ವಜನಿಕ ಪ್ರದರ್ಶನಕ್ಕೆ ಸನ್ನದ್ಧವಾಗುವ ಹೊತ್ತಿಗಾಗಲೇ ಪರಂಪರೆಯ ಬಳುವಳಿಯ ಫಲವಾಗಿ ಒಂದು ಮಾನಸಿಕ ಪಠ್ಯವನ್ನು ತನ್ನಲ್ಲಿ ರೂಪಿಸಿಕೊಂಡಿದ್ದಾನೆ. ಅದನ್ನು ಪ್ರಯೋಗ ಅಥವಾ ಪ್ರದರ್ಶನದ ಸಂದರ್ಭದಲ್ಲಿ ಪಾರಂಪರಿಕ ಪರಿಕರಗಳ ನೆರವಿನೊಂದಿಗೆ ಪುನಃ ಸಂಯೋಜಿಸುತ್ತಾ ಹೋಗುತ್ತಾನೆ. ಅಂದರೆ ಅವನು ಅಥವಾ ಅವಳು ತಾನು ಕಲಿತಿದ್ದನ್ನು ಯಥಾಪ್ರಕಾರ ತಪ್ಪಿಸುವುದಿಲ್ಲ. ಪುನರಾವರ್ತನೆಗೊಳ್ಳುವುದು ಸೂತ್ರ ರೂಪದ ಪದಗಳು ವಾಕ್ಯ ಖಂಡಗಳಂತಹ ಬಹುರೂಪಗಳ ಮೂಲಕ ಪುನಃ ಸಂಯೋಜನೆ ಗೊಳ್ಳುತ್ತ ಹೋಗುತ್ತದೆ. ಹೀಗೆಯೇ ಪ್ರದರ್ಶನದ ಸಂದರ್ಭದಲ್ಲಿ ಸಾಕಾರಗೊಂಡು ಕಿವಿಗೆ ಕೇಳಿಸುವ ಪ್ರಕ್ರಿಯೆಯನ್ನು ಮೂಲಪಠ್ಯೀಕರಣ (Prianary dexdua)ಎಂದೂ, ಮುಂದೆ ಅದನ್ನು ಅಕ್ಷರ ಸಂಕೇತ ಹೇಳಬಹುದು ಹೀಗೆ ಅಕ್ಷರ ಸಂಕೇತ ಧಾರಣೆ ಮಾಡಿದಾಗಲೇ ಜಾನಪದ ಪಠ್ಯ ನಿರ್ಮಾಣವಾಗುತ್ತದೆ ಎನ್ನುವ ಸಾಂಪ್ರದಾಯಿಕ ನಿಲುವೇ ಬದಲಾಯಿತು.

ಮೂಲವರ್ಣಗಳ ಮಿಶ್ರಣವನ್ನು ಸಿದ್ಧಪಡಿಸಿಕೊಂಡು ಹಲವಾರು ಅಂದರೆ ನೇರಳೆ, ಕೇಸರಿ, ಪಾಟಿಲ, ಹಸುರಿನ ಭಿನ್ನ ಭಿನ್ನ ವರ್ಣಛಾಯೆ ಮುಂತಾದ ವರ್ಣಗಳನ್ನು ಬಳಸಿಕೊಂಡಿದ್ದಾನೆ. ಅಲ್ಲದೆ ಇಲ್ಲಿನ ಪ್ರತಿಯೊಂದು ಚಿತ್ರದ ಒಪ್ಪ, ಓರಣಗಳು ಪ್ರಶಂಸಿಸಬೇಕಾದವುಗಳು ಉಷ್ಣ ವರ್ಣಗಳನ್ನು ಬಳಸಿ ಕೊಂಡರು ಕೂಡ ಒಟ್ಟು ಚಿತ್ರದಲ್ಲಿನ ವರ್ಣ ಹಂಚಿಕೆಯಿಂದಾಗಿ ಇಡೀ ಚಿತ್ರ ಕಣ್ಣಿಗೆ ತಂಪೊಡ್ಡುವಂತೆ ಚಿತ್ರಿಸಿದ್ದು ಗಮನಾರ್ಹ. ಮೂಲವರ್ಣಗಳನ್ನೇ ಹೆಚ್ಚು ಕಡಿಮೆ ನೇರವಾಗಿ ಬಳಸಿರುವುದು ಹಸ್ತಪ್ರತಿ ವರ್ಣಚಿತ್ರಗಳಲ್ಲಿ ಸಾಮಾನ್ಯವಾಗಿ ಕಂಡುಬರುವ ಅಂಶ. ಆದರೆ ಈ ಪ್ರತಿಯ ಚಿತ್ರಕಾರನು ಸಾಧ್ಯವಾದ ಮಟ್ಟಿಗೆ ಹಾಗೆ ಮಾಡಿಲ್ಲ.

ಸಾಂದರ್ಭಿಕ ವರ್ಣಚಿತ್ರರಚನೆಯಲ್ಲಿ ಉದ್ಧರಣೆಯ ಚಿತ್ರಗಳನ್ನು ಶಾಸ್ತ್ರಸಂಬಂಧಿ ಚಿತ್ರರಚನೆಗಳೆಂದೇ ಪರಿಗಣಿಸಬೇಕಾಗುತ್ತವೆ. ಉದ್ಧರಣೆಯ ಚಿತ್ರ ರಚನೆಗಳನ್ನೊಳಗೊಂಡ ಪ್ರತಿಗಳು ವೀರಶೈವ, ಅಷ್ಟೇ ಏಕೆ ಪತ್ರಮಾಧ್ಯಮದ ವರ್ಣಚಿತ್ರಗಳನ್ನೊಳಗೊಂಡ ಹಸ್ತಪ್ರತಿಗಳಲ್ಲಿಯೇ ಅದ್ವಿತೀಯವಾಗಿ ನಿಲ್ಲುವ ಕಲಾವಸ್ತುಗಳಾಗಿವೆ. ಟಿಬೇಟದ ಲಾಮಾಗಳು ಧ್ಯಾನಕ್ಕಾಗಿ ಬಳಸಿಕೊಳ್ಳುವ 'ಟಂಕಾ' ಚಿತ್ರಪಟು

ಗಳಂತಿರುವ ಇವು ಸೌಂದರ್ಯದ ದೃಷ್ಟಿಯಿಂದಲೂ ಆಧ್ಯಾತ್ಮದ ದೃಷ್ಟಿಯಿಂದಲೂ ತುಂಬಾ ಮಹತ್ವ ವೆನಿಸಿವೆ.

ಈ ಅಭಿಪ್ರಾಯವನ್ನು ಗಮನಿಸಿದರೆ ಮಠ ಮಾನ್ಯಗಳಲ್ಲಿರುತ್ತಿದ್ದ ಸಾಧಕರು, ಸಿದ್ಧರು, ಯತಿಗಳು, ಶರಣರು ತಮ್ಮ ಆಧ್ಯಾತ್ಮ ಸಾಧನೆಯ ಸವಿಯನ್ನುಂಡು, ಆ ಅವ್ಯಕ್ತ ಅನುಭವಕ್ಕೆ ವ್ಯಕ್ತರೂಪವನ್ನು ಕೊಡಬಯಸಿ ರಚಿಸಿದ ಚಿತ್ರ ಸಾಹಿತ್ಯ ಅಥವಾ ತಮ್ಮ ಅನುಭವಗಳನ್ನು ಸಮರ್ಥನಾದ ಸಾತ್ವಿಕ ಚಿತ್ರಕಾರನಿಗೆ ಎರೆದಾಗ ಅವರಿಂದ ರಚನೆಗೊಂಡ ಅಪೂರ್ವ ಚಿತ್ರ ಸಾಹಿತ್ಯದ ಹಸ್ತಪ್ರತಿಗಳಿವು ಎನ್ನುಬೇಕಾಗುತ್ತದೆ. ಡಾ. ಜ.ಚ.ನಿ.ಯವರು ಅಭಿಪ್ರಾಯಪಡುವಂತೆ ಹಿಂದಿನ ಐದನೇ ಶತಮಾನದಿಂದೀಚೆಗೆ ಉದ್ಧರಣೆಗಳು ಹೆಚ್ಚಾಗಿ ಬೆಳೆದು ಬಂದಿವೆ. ಹೊಸ ಹೊಸದಾಗಿ ಇದನ್ನು ರೂಪಿಸುವುದೇ ಒಂದು ಕಲೆಯಾಗಿ, ಒಂದು ತಪಸ್ಸಾಗಿ, ಮನಸ್ಸಿನ ತಾಳ್ಮೆಯ ಯೋಗವಾಗಿ ಪರಿಣಮಿಸಿದಂತಿದೆ ಎಂಬುದಾಗಿ ಅಭಿಪ್ರಾಯವನ್ನು ವ್ಯಕ್ತಪಡಿಸುತ್ತಾರೆ. ನಿದರ್ಶನಕ್ಕಾಗಿ ಕುಂಡಲಿನಿ ಶಕ್ತಿಯುದ್ಧರಣೆ ಚಿತ್ರ ಸಂಕೇತಗಳ ವಾಚ್ಯ ಅಥವಾ ವಿವರಣೆಯೊಂದನ್ನಿಲ್ಲಿ ಪರಿಶೀಲಿಸಬಹುದು. ಉದ್ಧರಣೆಗಳು ಕರ್ನಾಟದ ಚಿತ್ರಕಲೆಯ ಹಲವಾರು ಪದ್ಧತಿಗಳನ್ನು ಬಿಂಬಿಸುವ ಮಹತ್ವ ಪೂರ್ಣ ಆಸ್ತಿಗಳು ಇವುಗಳಲ್ಲಿ ಚಿತ್ರಕಲೆಯು ತಾನು ಸಾಧಿಸಬೇಕಾದ, ಮುಟ್ಟಬೇಕಾದ ಗುರಿಯನ್ನು ತಲುಪಿದ್ದು ಕಂಡುಬರುತ್ತದೆ. ನಿಶ್ಚಿತ ಸ್ಥಾನಗಳಲ್ಲಿ ಮಂತ್ರಾಕ್ಷರ ಸಮನ್ವಿತವಾಗಿ ಶೋಭಿಸುವ, ಲಿಂಗೋದ್ಧರಣೆ, ವೃಷಭೋದ್ಧರಣೆ, ಜಂಗಮೋದ್ಧರಣೆ ವಾರ್ಧ್ವ, ಅಥೋಕುಂಡಲಿನಿ ಶಕ್ತಿಯುದ್ಧರಣೆ ಮುಂತಾದವುಗಳು ಅನುಭವ ನೀಡುವ ಚಿತ್ರಕೃತಿಗಳೆನಿಸಿವೆ.

ಜಿ.ಎಂ. ಉಮಾಪತಿ ಶಾಸ್ತ್ರಿಗಳವರ ಸಂಗ್ರಹದಲ್ಲಿನ ಉದ್ಧರಣೆಯಲ್ಲಿ ಕೆಂಪು ಅಪರಸ್ಥಲದ ಮೇಲೆ ಹಳದಿ, ಹಸಿರು, ನೀಲಿ ವರ್ಣಗಳನ್ನು ತುಂಬಿ ಚಿತ್ರಸಲಾದ ಆಧೋಕುಂಡಿಲಿನಿ, ವಾರ್ಧ್ವ ಕುಂಡಿಲಿನಿ ಉದ್ಧರಣೆಯ ವರ್ಣಚಿತ್ರಗಳು ತುಂಬಾ ಕುತೂಹಲಜನ್ಯವಾಗಿವೆ. ಜಿಂಕೆಯ ಮುಖ, ಎದೆಯಿಂದ ನಡುವಿನವರೆಗೆ ಸ್ತ್ರೀದೇಹ, ನಡುವಿನಿಂದ ಕೆಳಗೆ ಪ್ರಾಣಿಯಾಕಾರ ಹೊಂದಿರುವ ಈ ಚಿತ್ರದಲ್ಲಿ ಖಡ್ಗ, ರುಂಡಗಳು, ಜಲಚರಗಳು, ಮೀನು, ವ್ಯಾಘ್ರ, ಸಿಂಹ, ಆಕಳು, ಹರಿಣ ಈ ಎಲ್ಲವುಗಳೂ ಅರ್ಥಪೂರ್ಣ ವಾದ ಸಾಂಕೇತಿಕ ಚಿತ್ರಣಗಳಾಗಿವೆ.

ಹೀಗೆ ಉದ್ದರಣೆಯ ಚಿತ್ರಗಳಲ್ಲಿನ ಪ್ರತಿಯೊಂದು ರಚನೆಗೂ, ಆಕೃತಿಗಳಿಗೂ ಇರುವ ಅರ್ಥವತ್ತಾದ ವಿವರಣೆಯನ್ನು ಗಮನಿಸಿದರೆ ಇಲ್ಲಿನ ಸಂಕೇತನಗಳ ಶರಣರ ಬೆಡಗಿನ ವಚನಗಳಿಗೆ ಚಿತ್ರವಾಗಿ ಮೂಡಿನಿಲ್ಲುವ ಈ ಕೃತಿಗಳು ಕಣ್ಣಿಗೆ ಒರಟಗಾಗಿ ಕಂಡರೂ ಇವು ಕೇವಲ ಕಲ್ಪನೆ ಅಥವಾ ಭ್ರಮೆಯ ಚಿತ್ರಗಳಲ್ಲ ಇವುಗಳನ್ನು ಅನುಭವದ ನಿಲುಗನ್ನಡಿಗಳೆಂದೇ ತಿಳಿಯಬೇಕಾಗುತ್ತದೆ.

ಡಾ. ಜ.ಚ.ನಿ.ಯವರು ಉದ್ಧರಣೆ ಚಿತ್ರಕ್ಕೆ ಚಿತ್ರವೂ ಅಹುದು. ಸಾಹಿತ್ಯಕ್ಕೆ ಸಾಹಿತ್ಯವೂ ಅಹುದು. ಶಾಸ್ತ್ರಕ್ಕೆ ಶಾಸ್ತ್ರವೂ ಅಹುದು. ಗಣಿತಕ್ಕೆ ಗಣಿತವು ಜ್ಯೋತಿಷ್ಯಕ್ಕೆ ಜ್ಯೋತಿಷ್ಯವೂ ಆಗಿವೆ. ಗಣತನಾಗದೆ ವರ್ಣಕ(ಜ್ಞ)ನಾಗದೆ ವಸ್ತು ವಿವೇಕವುಳ್ಳವನಾಗದೆ ಉದ್ಧರಣೆಯನ್ನು ರೂಪಿಸಲು ಸಾಧ್ಯವಿಲ್ಲ. ದೃಷ್ಟಿಮನ ಬುದ್ಧಿ ಭಾವಗಳ ಕೇಂದ್ರಿಕರಣವೇ ಉದ್ಧರಣೆಗಳ ಉದ್ದೇಶ ಎಂಬುದಾಗಿ ವ್ಯಕ್ತಪಡಿಸಿದ ಅಭಿಪ್ರಾಯದಲ್ಲಿ ಇಂತಹ ವರ್ಣಚಿತ್ರಗಳಿರುವ ಅಪಾರವಾದ ಮಹತ್ವ ಹಾಗೆಯೇ ಇಂಥ ಹಸ್ತಪ್ರತಿ ಚಿತ್ರಕಾರನಾದವನು ಹೊಂದಿರಬೇಕಾಗುತ್ತಿದ್ದ ಉನ್ನತ ಅಧ್ಯಯನ ಪವಿತ್ರ ಸಂಸ್ಕಾರ, ಸಾತ್ವಿಕ ಮನೋಧರ್ಮಗಳ ಕಲ್ಪನೆ ಬಾರದಿರದು.

ಶಿವನ ಓಲಗದ ದೃಶ್ಯವನ್ನೇ ಫಲಕಗಳ ಮೇಲೆ ಚಿತ್ರಿಸಿದ ಹಲವಾರು ಹಸ್ತಪ್ರತಿಗಳು ಸಿಕ್ಕುತ್ತಿದ್ದರೂ ಒಂದೊಂದೂ ವೈಶಿಷ್ಟ್ಯ ಪೂರ್ಣ ಮಾದರಿಗಾಗಿ ಅಂತಹದೊಂದನ್ನು ಕುರಿತು ಇಲ್ಲಿ ವಿವರಿಸಬಹುದು. ಫಲಕ ಮಾಧ್ಯಮದ ವರ್ಣಚಿತ್ರಗಳು ವೀರಶೈವ ಹಸ್ತಪ್ರತಿಗಳಲ್ಲಿನ ಫಲಕ ಮಾಧ್ಯಮದ ವರ್ಣಚಿತ್ರಗಳ ರಚನೆಯಲ್ಲಿ 'ಶಿವನೋಲಗ'ದ ಅಥವಾ 'ಶಿವಪಂಚಾಯತನ'ದ ವರ್ಣಚಿತ್ರಗಳು ವೈಶಿಷ್ಟ್ಯ ಪೂರ್ಣವಾದವುಗಳು. ಇದೊಂದೇ ವಸ್ತುವನ್ನು ಚಿತ್ರಿಸಿದ ಫಲಕಗಳು ಅಧಿಕ ಸಂಖ್ಯೆಯಲ್ಲಿವೆ. ಅದೊಂದನ್ನೇ ಅಧ್ಯಯನ ಕೈಗೊಳ್ಳುವಷ್ಟು ಈ ಚಿತ್ರರಚನೆಗಳು ಅಧಿಕ ಸಂಖ್ಯೆಯಲ್ಲಿವೆ. ಓಲಗದ ಚಿತ್ರಗಳಲ್ಲಿ ಶಿವನ ಅಂಕವನ್ನೇರಿ ಕುಳಿತ ಪಾರ್ವತಿ, ಇವರು ನಂದಿವಾಹನರಾಗಿ, ಪೀಠಸ್ಥರಾಗಿ ಕುಳಿತುದ್ದೂ ಇದೆ. ಇವರು ಮಕ್ಕಳು ಗಣಪತಿ, ವೀರಭದ್ರ, ಶಿವನ ಗಣಧರರು, ಭೃಂಗಿ, ನರ್ತಿಸುವ ಭೃಂಗಿ ಅದಕ್ಕೆ ಸಂಗೀತವನ್ನು ಸಮ್ಮೇಳಿಸುವ ನಾರದ, ತುಂಬುರ, ನಂದಿ, ಶುಕ ಮುನಿಗಳು ಹಲವೆಡೆಗಳಲ್ಲಿ ಈ ಪರಿವಾರದೊಂದಿಗೆ ಬ್ರಹ್ಮ ವಿಷ್ಣುಗಳೂ ಭಕ್ತರು, ಸೇವಕರು ಮುಂತಾದವರು ಕಾಣಿಸಿಕೊಂಡದ್ದು ಇದೆ.

ಅಂಚು ಇಳಿಜಾರಾಗಿರುವ ಈ ಫಲಕವು ಪೂರ್ಣವಾಗಿ ಕರಿಗೆಂಪು ವರ್ಣದ ತಳಹದಿಯದಾಗಿದೆ. ಫಲಕದ ಅಂಚು ನಕ್ಷೆಯು ಬಿಳಿಸು ನೇರಿಗಳು ಮಧ್ಯದಲ್ಲಿ ಚಿನ್ನದ ಸರಪಳಿಯಂತೆ ಆಕರ್ಷಕವಾಗಿ ಚಿತ್ರತವಾಗಿದ್ದು ತನ್ಮಧ್ಯ ಸಣ್ಣ ಸಣ್ಣ ಬಿಳಿಗುಲಾಬಿ ವರ್ಣದ ಅಲಂಕಾರಗೊಂಡಿದೆ. ಹೂವು ಹಾಗೂ ಸುನೇರಿ ವರ್ಣದ ಎಲೆಗಳಿಂದ ಅಲಂಕಾರಗೊಂಡಿದೆ. ಇಂಥ ಚೌಕಟ್ಟಿನ ಮಧ್ಯದಲ್ಲಿ ಸಾಲಂಕೃತ ನಂದಿಯನ್ನೇರಿ ಕುಳಿತ ಶಿವ-ಪಾರ್ವತಿಯರ ಚಿತ್ರಣವಿದ್ದು, ಇದು ಪುಲಿಗೆರೆಯ ಸೋಮನಾಥ ಮೂರ್ತಿಯನ್ನು ನೆನಪಿಗೆ ತರುವಂತಿದೆ. ಈತನ ವೇಷಭೂಷಣ, ವಿಶೇಷವಾಗಿ ಈತನು ಧರಿಸಿದ ಕಿರೀಟ ಗ್ರೀಕ ದೇವತೆಗಳ ಶಿರೋಭೂಷಣದಂತಿದೆ. ಕುದುರೆಯ ಗೋಣನ್ನೇ ಕಿರೀಟದಂತೆ ಧರಿಸಲಾಗಿದೆ. ಇವರ ಎಡಗಡೆಯಲ್ಲಿ ಕೈಯಲ್ಲಿ ತಳಿಗೆಯನ್ನು ಹಿಡಿದುನಿಂತ ಸ್ತ್ರೀ, ಅವಳ ಹಿಂದುಗಡೆಯಲ್ಲಿ ಶಿವನಿಗೆ ಧವಳ

ಛತ್ರವನ್ನು ಹಿಡಿದು ಸೇವೆಸಲ್ಲಿಸುತ್ತಿರುವ ಧೋತರ ಬರಿಮೈ, ಕಿರೀಟ ಧಾರಿಯಾದ ಸೇವಕನಿದ್ದಾನೆ. ಶಿವನ ಇನ್ನೊಂದು ಬದಿಗೆ ಅಂಚಿನಲ್ಲಿ ಒಬ್ಬ ಸ್ತ್ರೀ ಅವಳ ಮುಂದೆ ನರ್ತಿಸುತ್ತಿರುವ ಭೃಂಗಿಯು ಎರಡು ಕಾಲಗಳನ್ನೂರಿ ಒಂದು ಕಾಲನ್ನು ಹಿಂದಕ್ಕೆ ತೂರಿ ನರ್ತಿಸುತ್ತಲಿರುವುದು ತುಂಬಾ ಆಕರ್ಷಣೀಯ ವಾಗಿ ಚಿತ್ರಿತವಾಗಿದೆ.

ಇವಿಷ್ಟು ಆಕೃತಿ (Figures) ಬಿಟ್ಟು ಉಳಿದ ಭಾಗದಲ್ಲಿ ಸುನೇರಿ, ಬಿಳಿ, ಗುಲಾಬಿ ವರ್ಣಗಳಿಂದ ರಚಿಸಿದ ಹೂದೇಟುಗಳು ಇದ್ದು ಇಡೀ ಚಿತ್ರಕ್ಕೆ ಸಮಗ್ರತೆಯನ್ನು ತಂದಿದ್ದರೂ ಅವುಗಳ ದಟ್ಟತೆ ಅತಿಯೆನಿಸುತ್ತದೆ. ವರ್ಣಚಿತ್ರವು ಬಹಳಷ್ಟು ಮಾಸಿರುವುದರಿಂದ ಅಲ್ಲಲ್ಲಿ ವರ್ಣಗಳು ಕೆದರಿ ಹೋಗಿರು ವುದರಿಂದಲೂ ಚಿತ್ರದ ರೇಖಾವಿನ್ಯಾಸದ ಸೂಕ್ಷ್ಮಗಳನ್ನು ಕಂಡುಕೊಳ್ಳುವುದು ಕಷ್ಟವಾಗಿದೆ.

ವೀರಶೈವ ಹಸ್ತ ಪ್ರತಿಗಳಲ್ಲಿನ ಪತ್ರ ಮಾಧ್ಯಮದ ವರ್ಣಚಿತ್ರಗಳು ದೇವಾನುದೇವತೆ, ಪಾರಾಣಿಕ ವ್ಯಕ್ತಿ-ಸಂದರ್ಭಗಳನ್ನು ಮೊದಲ್ಗೊಂಡು ಶಿವಶರಣರ ಶಿವಕವಿಗಳ ಕಾಲ್ಪನಿಕ ಸ್ವರೂಪ ಚಿತ್ರ ಹಾಗೂ ಜೀವನದ ಘಟನೆಗಳನ್ನು ಚಿತ್ರಣದ ವ್ಯಾಪ್ತಿಯನ್ನು ಹೊಂದಿರುವಂತೆ ಫಲಕ ಮಾಧ್ಯಮದ ಚಿತ್ರಗಳೂ ಇವುಗಳೊಟ್ಟಿಗೆ ಆಯಾ ಮಠಗಳ ಪರಂಪರೆಯಲ್ಲಿ ಪ್ರಖ್ಯಾತರಾಗಿ ಪ್ರಭಾವ ಬೀರಿದ ಸ್ವಾಮಿಗಳ ಅವರ ಶಿಷ್ಯರ, ಭಕ್ತರ ಚಿತ್ರಣಗಳೂ ಕಂಡು ಬರುತ್ತಿರುವುದು ಐತಿಹಾಸಿಕ ದೃಷ್ಟಿಯಿಂದ ತುಂಬಾ ಮಹತ್ವದ್ದೆನಿಸುತ್ತದೆ. ಇಂತಹ ವರ್ಣಚಿತ್ರಗಳ ಪ್ರಾತಿನಿಧಿಕವಾದ ಒಂದೆರಡು ನಿದರ್ಶನಗಳನ್ನು ಇಲ್ಲಿ ಕೊಡಮಾಡಿದೆ.

ಶಿವಯೋಗಮಂದಿರ ಹಸ್ತಪ್ರತಿ ಸಂಗ್ರಹದ (ಗ್ರಂ.ಸಂ.೧) ಕರಣ ಹಸಿಗೆ, ಮಂತ್ರಗೋಪ್ಯ ವ್ಯಾಖ್ಯಾನದ ಓಲೆಗರಿ ಗ್ರಂಥದ ಫಲಕಗಳಲ್ಲಿನ ವರ್ಣಚಿತ್ರಗಳು ಉಲ್ಲೇಖನಾರ್ಹವೆನಿಸಿವೆ.

ಈ ಹಸ್ತಪ್ರತಿಯ ಒಂದು ಫಲಕದ ಮೇಲ್ಪದಿಯಲ್ಲಿನ ಚಿತ್ರದ ಒಟ್ಟು ಸ್ವರೂಪ ವಿವರಣೆ ಇಂತಿದೆ. ಕಪ್ಪು ಮಿಶ್ರಿತ ಕೆಂಪುವರ್ಣದ ಹಿನ್ನೆಲೆಯ ಮೇಲೆ ತಿಳಿಹಸಿರು ಹಾಗೂ ಹಳದಿ ವರ್ಣದ ಕುಳಿತ, ನಿಂತ ವ್ಯಕ್ತಿ ಚಿತ್ರಗಳನ್ನು ಬರೆಯಲಾಗಿದೆ. ನಿಂತ ಇಬ್ಬರು ವ್ಯಕ್ತಿಗಳೂ ಸೇವಕ ಇಲ್ಲವೆ ಭಟುಗಳಿರಬೇಕು. ಕೌಪೀನಧಾರಿಗಳಾದ ಇವರು ಒಂದು ಕೈಯಲ್ಲಿ ನವಿಲುಗರಿ ಗುಚ್ಚವನ್ನು ಇನ್ನೊಂದು ಚಾಚೀರ ಕೈಯಲ್ಲಿ ದುಂಡಾದ ವಸ್ತುವೊಂದನ್ನು ಹಿಡಿದಿದ್ದಾರೆ. ಒಂದೊಂದು ವ್ಯಕ್ತಿ ಚಿತ್ರಣದ ಮಧ್ಯ ಮೇಲ್ಪದಿಗೆ ಬಾಳೆ ಹೂವಿನಂತಹ ನಕ್ಷೆಯಿದೆ. ರಂಧ್ರಗಳ ಸುತ್ತಲೂ ಹೂವಿನ ಚಿತ್ರಣವಿದೆ. ಸೇವಕರ ಕೊರಳಲ್ಲಿ ಕರಡಿಗೆ, ತೋಳು ಮುಂಗೈಗಳಲ್ಲಿ ರುದ್ರಾಕ್ಷಿ ಮಾತಿಗಳಿವೆ ಇನ್ನು, ಆಸನಸ್ಥರಾದ ವ್ಯಕ್ತಿಗಳ

ಚಿತ್ರಣವು ಈ ರೀತಿ ಇದೆ. ನೀಲಿ ಛಾಯೆಯ ತಿಳಿಹಸಿರು ಮೈಬಣ್ಣವುಳ್ಳ ಕಾವಿಧರಿಸಿದ ವ್ಯಕ್ತಿಯಿದ್ದು ಆತನಿಗೆ ತಲೆಗೂದಲು ಗಡ್ಡ ಮೀಸೆಗಳಿವೆ. ಕಾವಿ? ಬಣ್ಣದ ಮೇಲ್ಹೊದಿಕೆಯನ್ನು ಎದೆಯ ಮೇಲೆ ಅಡ್ಡವಾಗಿ ಹಾಕಿಕೊಂಡಿದ್ದು ಕೈಯಲ್ಲಿ ಓಲೆಗರಿ ಕಟ್ಟು ಹಿಡಿದ್ದಾಗೆ. ಈತನ ಆಸನದ ಮಗ್ಗಲಲ್ಲಿಯೂ ಓಲೆಯ ಕಟ್ಟಿದೆ. ಅದನ್ನು ಬಿಳಿವರ್ಣದಿಂದ ಚಿತ್ರಿಸಿದೆ. ಎದುರಿನ ವ್ಯಕ್ತಿಗೆ ಓಲೆಗರಿ ಕಟ್ಟನ್ನು ಕೊಡುತ್ತ ಏನನ್ನೋ ಸೂಚಿಸಲಿದ್ದಂತಿದೆ. ಎದುರಿನ ವ್ಯಕ್ತಿಯ ಮೈಬಣ್ಣ ಹಳದಿ, ತೋಳು, ಮುಂಗೈಗಳಲ್ಲಿ ರುದ್ರಾಕ್ಷಿ, ಒಂದು ಕೈಯಲ್ಲಿ ಎದುರಿನ ವ್ಯಕ್ತಿಯು ಕೊಟ್ಟಿರುವ ಓಲೆಗಳನ್ನು ಪಡೆದು ಕೊಂಡಂತಿದೆ. ಕಾವಿ? ಧೋತರವನ್ನುಟ್ಟು ಈ ವ್ಯಕ್ತಿಯು ಮೈಮೇಲೆ ಹೊದ್ದಿರುವ ಬಟ್ಟೆ ಮಾತ್ರ ಹಳದಿ, ಮುಖದ ಮೇಲೆ ಗಡ್ಡ ಮೀಸೆಗಳಿಲ್ಲದಿರುವುದು ಗಮನಾರ್ಹ.

ನಂತರದ್ದು ಇನ್ನೊಂದು ಪ್ರತ್ಯೇಕ ಸಂದರ್ಭದ ಚಿತ್ರದಂತಿದೆ. ರಂಧ್ರದ ಈಚೆಗೆ ಸೇವಕನಿದ್ದಾನೆ. ಆನಂತರದಲ್ಲಿ ಚಿತ್ರಿಕ ವ್ಯಕ್ತಿಯ ಲಕ್ಷಣ, ಮೈಮೇಲೆ ಹೊದ್ದಿರುವ ಬಟ್ಟೆ ಕುಳಿತಿರುವ ಭಂಗಿ ಎಲ್ಲವೂ ಮೊದಲ ಆಕೃತಿಯಂತೆಯೇ ಇದೆ. ಈತನ ಎದುರಿಗೆ ಕುಳಿತಿರುವ ವ್ಯಕ್ತಿಯ ಕೈಯಲ್ಲೂ ಓಲೆಕಟ್ಟಿದೆ. ಮುಖದಲ್ಲಿ ಮೀಸೆ, ಗಡ್ಡಗಳಿದ್ದರೂ ಎದುರಿಗಿನ ಕುಳಿತಿರುವ ವ್ಯಕ್ತಿಯ ಕೈಯಲ್ಲೂ ಓಲೆಕಟ್ಟಿದೆ. ಮುಖದಲ್ಲಿ ಮೀಸೆ ಗಡ್ಡಗಳಿದ್ದರೂ ಎದುರಿಗಿನ ವ್ಯಕ್ತಿಗಿಂತ ಭಿನ್ನವಾದ ಮುಖಲಕ್ಷಣವಿದೆ. ಮೈಮೇಲೆ ಅಡ್ಡವಾಗಿ ಹೊದ್ದುಕೊಂಡು ಬಿಳಿ ಅರಿವೆಯು ತಲೆಯಮೇಲೆ ಕೂಡ ಇದೆ. ಕೊರಳು ತೋಳುಗಳಲ್ಲಿ ರುದ್ರಾಕ್ಷಿಗಳಿವೆ. ಅನಂತರದಲ್ಲಿ ಸೇವಕ ಅವನ ಹಿಂದುಗಡೆಯಲ್ಲಿ ರಂಧ್ರವಿದೆ.

ಈ ಮುಂದೆ ಚಿತ್ರಿಸಿದ ಚಿತ್ರ ಕೂಡ ಪ್ರತ್ಯೇಕವಾದ ಒಂದು ಸಂದರ್ಭದ ಚಿತ್ರಣವಿದು ಆಗಿದೆ. ಇಲ್ಲಿ ಆಸನಸ್ಥ ವ್ಯಕ್ತಿಯು ಸ್ವಲ್ಪ ಬಾಗಿ ಬಲಗೈ ಮುಂದೆ ಮಾಡಿ ಓಲೆಕಟ್ಟನ್ನು ಎದುರಿಗಿನ ವ್ಯಕ್ತಿಗೆ ಕೊಡುವಂತಿದೆ. ಈತನ ಮೈಬಣ್ಣ ಹಳದಿ, ಹೊದ್ದ ಬಟ್ಟೆಯು ಕಾವಿ? ಹೊದಿಕೆ ತಲೆಯ ಮೇಲಿರದೆ ಹೆಗಲ ಮೇಲಿಂದ ಅಡ್ಡವಾಗಿ ಹಾಕಿಕೊಳ್ಳಲಾಗಿದೆ. ಐಡಗೈಯನ್ನು ಮುಂದಕ್ಕೆ ಚಾಚಿದೆ, ಮುಖಲಕ್ಷಣ ಭಿನ್ನವಾಗಿದೆ. ಮೀಸೆಯಿಲ್ಲ ಎದುರುಗಡೆ ವ್ಯಕ್ತಿಯ ಮೈಬಣ್ಣವೂ ಹಳದಿಯಾಗಿದ್ದು ಮುಖಲಕ್ಷಣವೂ ಭಿನ್ನವಾಗಿದೆ. ಉದ್ದವಾದ ಮೀಸೆ, ನವುರಾದ ಗಡ್ಡಗಳಿವೆ. ಬಿಳಿ ಧೋತರ ಕಾವಿ? ಹೊದಿಕೆಯನ್ನು ತಲೆಯ ಮೇಲಿಂದ ಹೊದ್ದುಕೊಳ್ಳಲಾಗಿದೆ. ಈ ವ್ಯಕ್ತಿಚಿತ್ರದ ಬಹಳಷ್ಟು ಭಾಗವು ಉಳಿದಿದೆ.

ಈ ಕಟ್ಟಿನ ಇನ್ನೊಂದು ಫಲಕದ ಮೇಲಿನ ವ್ಯಕ್ತಿ ಚಿತ್ರಣದ ವಿವರ ಈ ರೀತಿಯಾಗಿದೆ. (ಫಲಕದ ಎಡಬದಿಯಿಂದ ಬಲಬದಿಯತ್ತ) ತಿಳಿಹಸಿರು ಮೈಬಣ್ಣದ ವ್ಯಕ್ತಿಯೊಬ್ಬ ಬಾಗಿ ಓಲೆಕಟ್ಟನ್ನು

ಎದುರಿಗೆ ಕುಳಿತ ವ್ಯಕ್ತಿಗೆ ತೋರಿಸುವಂತಿದೆ. ಕೊರಳು, ತೋಳು ಮುಗೈಯಲ್ಲಿ ರುದ್ರಾಕ್ಷಿಗಳಿವೆ. ಕಾವಿ? ವಸ್ತ್ರವನ್ನು ತಲೆಯ ಮೇಲೆ ಮತ್ತು ಎದೆಗೆ ಅಡ್ಡವಾಗಿ ಹಾಕಿಕೊಳ್ಳಲಾಗಿದೆ. (ಹಿನ್ನೆಲೆಯ ವರ್ಣ, ನಕ್ಷೆ ಒಂದೊಂದಾಗಿ ಮೂರು ಪ್ರತ್ಯೇಕ ಸಂದರ್ಭಗಳನ್ನು ಚಿತ್ರಿಸಿದ್ದು ಈ ಮೊದಲು ವಿವರಿಸಿದ ಫಲಕದಂತೆಯೇ ಇವೆ). ಹಿನ್ನೆಲೆಯ ಬಣ್ಣ ಬಹಳಷ್ಟು ಕಡೆಯಲ್ಲಿ ಕಿತ್ತುಹೋಗಿದೆ. ಇಲ್ಲಿನ ವ್ಯಕ್ತಿಗಳು ಕುಳಿತಿರುವ ಆಸನಗಳು ಮಣೆಗಳಂತಿದ್ದು ಹಳದಿ ವರ್ಣದವಾಗಿವೆ. ಈ ವ್ಯಕ್ತಿಯ ಎದುರಿಗಿನ ವ್ಯಕ್ತಿಯು ತೋರುಬೆರಳು ಮಾಡಿ ಏನನ್ನೋ ಸೂಚಿಸುತ್ತಲಿದ್ದಾನೆ. ಈತನಿಗೆ ಉದ್ದ ಮೀಸೆಗಳಿವೆ. (ರಂಧ್ರ) ಸೇವಕ ವಟು ಹಿಂದಿನಂತೆಯೇ.

ಅನಂತರದ ಚಿತ್ರಣದಲ್ಲಿ ತಿಳಿಹಸಿರು ವರ್ಣದ ವ್ಯಕ್ತಿ ಎಡಗೈ ಮುಂದೆಮಾಡಿ ತೋರುಬೆರಳಿನಿಂದ ಸೂಚನೆ ನೀಡುತ್ತಿದ್ದುದರ ಜೊತೆಗೆ ಬಲಗೈಯಲ್ಲಿ ಓಲೆಕಟ್ಟಿದೆ. ಕಾವಿ ಧರಿಸಿದ್ದಾನೆ. ಉದ್ದವಾದ ಮೀಸೆ ಹುಲುಸಾದ ಗಡ್ಡಗಳಿವೆ. ಕೊರಳು ರಟ್ಟೆಗಳಲ್ಲಿ ರುದ್ರಾಕ್ಷಿಗಳಿವೆ. ಎದುರಿಗಿನ ವ್ಯಕ್ತಿಯ ಮೈಬಣ್ಣ ಹಳದಿ, ಕಾವೀ ವಸ್ತ್ರ ಬಂದಿದೆ. ಎಡಗೈ ತೊಡೆಯ ಮೇಲಿದ್ದು ಬಲಗೈಯಲ್ಲಿ ಓಲೆಕಟ್ಟಿದೆ. ಮುಖದಲ್ಲಿ ಮೀಸೆಯಿಲ್ಲ.

ರಂಧ್ರದ ನಂತರದ ಚಿತ್ರದಲ್ಲಿ ತಿಳಿಹಸಿರು ಮೈಬಣ್ಣ ತಲೆಯಮೇಲೆ, ಎದೆಗೆ ಅಡ್ಡವಾಗಿ ತೊಡೆಯ ಮೇಲೆವಿದ್ದ ಕಾವೀ ಬಟ್ಟೆಯಿಂದೆ. ಧೋತರ ಹಳದಿ, ಬಲಹೆಗಲ ಮೇಲೆ ಕಪ್ಪು ಬಣ್ಣದ ಅರಿವೆ (ಕಂಬಳಿ) ಹಾಕಿಕೊಂಡಂತಿದೆ. ಮುಖದ ಮೇಲೆ ದಪ್ಪ ಮೀಸೆಯಿದೆ. ಎದುರಿಗೆ ಕುಳಿತ ವ್ಯಕ್ತಿಯು ಎಡದ ಕೈಯಲ್ಲಿ ಓಲೆಕಟ್ಟನ್ನು ಹಿಡಿದಿದ್ದು ಬಲಗೈ ತೊಡೆಯ ಮೇಲಿದೆ. ಮೈಮೇಲೆ ಹೊದ್ದುಕೊಂಡ ಕಾವೀ ವಸ್ತ್ರವು ತಲೆಮೇಲೆ, ಎದೆಯ ಮೇಲಿಂದ ಬೆನ್ನನ್ನು ಹೊದ್ದಿಸಿದಂತಿದ್ದು ಬಲಗೈಯ ಭುಜದ ಮೇಲೆ ಕಾಣಿಸುತ್ತದೆ. ಕೊರಳಲ್ಲಿ ರಟ್ಟೆಯಲ್ಲಿ ರುದ್ರಾಕ್ಷಿಗಳಿದ್ದು ಕರಡಿಗೆಯೂ ಇದೆ. ಬಹುಶಃ ಇಲ್ಲಿನ ಎಲ್ಲ ವ್ಯಕ್ತಿ ಚಿತ್ರಗಳಲ್ಲಿಯೂ ಕರಡಿಗೆ ಇದ್ದಂತಿದೆ. ಆದರೆ ಎದೆಗೆ ಅಡ್ಡವಾಗಿ ಚಿತ್ರಿಸಲಾದ ಬಟ್ಟೆ ಯಿಂದಾಗಿ ಮುಚ್ಚಿದಂತಿದೆ. ಈ ಫಲಕದ ಹಿಂಬದಿಯಲ್ಲಿ ಕೆಂಪು ವರ್ಣವನ್ನು ಬಳಿಯಲಾಗಿದೆ. ಫಲಕದ ಮೇಲ್ಗಡೆಯಲ್ಲಿ ಇಳಿಬಿದ್ದ ಬಾಳೆಹೂವಿನ ಆಕೃತಿಗಳನ್ನು ಒಳಗೊಂಡು ಇಲ್ಲಿನ ಚಿತ್ರಗಳಿಗೆ ಕೆಂಪು, ಹಳದಿ, ವರ್ಣದ ಸುತ್ತುರೇಖೆ (Coul lines)ಗಳನ್ನು ಎಳೆಯಲಾಗಿದೆ. ಅಂಚಿನಲ್ಲಿಯ ಹಳದಿ ರೇಖೆಗಳ ಮಧ್ಯೆ ಕಪ್ಪು ಕೆಂಪು ಚಿಕ್ಕ ವರ್ತುಲಗಳ ಸಾಲು ರಚನೆಗಳೂ ಎರಡೂ ಫಲಕಗಳಿಗೂ ಸಾಮಾನ್ಯವಾದ ಅಂಶಗಳಾಗಿವೆ.

ಕರಣ ಹಸಿಗೆ, ಮಂತ್ರಗೋಪ್ಯ ಈ ಕಟ್ಟಿನ ಎರಡೂ ಫಲಕಗಳಲ್ಲಿ ಈ ಗ್ರಂಥಗಳ ಜ್ಞಾನ ಪರಂಪರೆಯು ಯಾರಿಂದ ಯಾರಿಗೆ ಪ್ರವಹಿಸುತ್ತ ಬಂತು? ಅದನ್ನು ನಿರೂಪಿತ ಪರಂಪರೆ ಹೇಗೆ ಮುಂದುವರಿದುಕೊಂಡು ಬಂದಿದೆ. ಎಂಬುದನ್ನು ಚಿತ್ರಿಸಲು ಪ್ರಯತ್ನಿಸಿದಂತಿದೆ. ಗ್ರಂಥಾಂತ್ಯದ ಬರಹದಲ್ಲಿ ಸೂಚಿತವಾಗಿರುವಂತೆ ಅನುಭಾವಮೂರ್ತಿ ಅಲ್ಲಮಪ್ರಭುವಿನಿಂದ ಬಸವಣ್ಣನಿಗಾದ ಜ್ಞಾನಕರುಣೆ, ಬಸವಣ್ಣನಿಗೆ ಸಾಧ್ಯವಾದ ಕರುಣೆಯನ್ನು ಷಟಸ್ಥಲ ಜ್ಞಾನ ಚಕ್ರವರ್ತಿಯೆನಿಸಿದ ಚನ್ನ ಬಸವಣ್ಣ ೭೭೦ ಅಮರಗಣಂಗಳಿಗೆ ಹಾಲು ಉಕ್ಕಿದ ಮೇಲೆ ಹರಿಯುವ ರೀತಿಯಲ್ಲಿ ಬೋಧಿಸಿದ್ದು, ಚನ್ನಬಸವೇಶ್ವರ ಈ ನಿರೂಪವನ್ನು ಮಹಾಪ್ರಸಾದವೆಂದು ಕೈಕೊಂಡು ಯೇಕೋತ್ತರ ದೇವರ ಮಠದ ತೋಟದ ಸ್ವಾಮಿಗಳು ಕಾಶಿ ಶಿವಲಿಂಗ ದೇಶಿಕೇಂದ್ರರಿಂದ ಬರೆಯಸಿದ್ದೇ ಪ್ರಸ್ತುತ ಗ್ರಂಥವಾಗಿರಬೇಕೆನಿಸುತ್ತದೆ. ಇಂಥ ವೈಭವಪೂರ್ಣವಾದ ಪರಂಪರೆಯನ್ನೇ ಚಿತ್ರಕಾರನು ಚಿತ್ರಿಸಲು ಮುಂದಾದಂತಿದೆ. ಅಂದರೆ ಈ ಎರಡು ಫಲಕಗಳಲ್ಲಿ ಒಂದರಮೇಲೆ ಪ್ರಭುದೇವ-ಬಸವಣ್ಣ, ಬಸವಣ್ಣ-ಚೆನ್ನಬಸವಣ್ಣ, ಚೆನ್ನಬಸವಣ್ಣ-ವರತೆಯ ರಾಮಯ್ಯ, ಇನ್ನೊಂದರ ಮೇಲೆ ಇದರ ಮುಂದುವರಿಕೆ ಎಂಬಂತೆ ಚೆನ್ನಬಸವಣ್ಣ-ವರತೆಯ ರಾಮಯ್ಯ, ವರತೆಯ ರಾಮಯ್ಯ-ಏಕೋತ್ತರ ಮಠದ ತೋಟದ ಸ್ವಾಮಿ ಕಾಶಿ ಶಿವಲಿಂಗ ದೇಶಿಕೇಂದ್ರರು ಹೀಗೆ ಇವರುಗಳ ಸ್ವರೂಪ ಚಿತ್ರಗಳನ್ನೂ ಅದರೊಟ್ಟಿಗೆ ಒಬ್ಬರಿಂದ ಒಬ್ಬರಿಗೆ ಹರಿದುಬಂದ ಜ್ಞಾನ ಪರಂಪರೆಯ ಚಿತ್ರಣವನ್ನೂ ಬಿಡಿಸಿದಂತಿದೆ. ಈ ಚಿತ್ರಗಳಲ್ಲೆಲ್ಲ ಕಂಡುಬರುವ ಹಸ್ತಪ್ರತಿಗಳ ಚಿತ್ರವು ಕರಣ ಹಸಿಗೆ, ಮಂತ್ರಗೋಪ್ಯಗಳಿವೆ ಎಂಬುದು ಈ ಹಿನ್ನೆಲೆಯಲ್ಲಿ ಸ್ಪಷ್ಟವಾಗುತ್ತದೆ.

ಕಡುಗೆಂಪು ವರ್ಣದ ಪ್ರಾಬಲ್ಯವಿರುವ ಈ ಚಿತ್ರಗಳು ವೀರಶೈವ ಪರಂಪರೆಯ ಹಿನ್ನೆಲೆಯುಳ್ಳ ನುರಿತ ಚಿತ್ರಕಾರನಿಂದಲೇ ರಚನೆಗೊಂಡಿರಬೇಕು ಸೂಕ್ಷ್ಮವಾದ ಕುಂಚದಿಂದ ಎಳೆಯಲಾದ ಕಪ್ಪು ವರ್ಣದ ಬಾಹ್ಯ ರೇಖೆಯುಳ್ಳ ಈ ಚಿತ್ರಗಳಲ್ಲಿ ಬೇರೆ ಬೇರೆ ಶರಣರನ್ನು ಭಿನ್ನ ಭಿನ್ನವಾಗಿ ತೋರಿಸಲು ಪ್ರಯತ್ನಿಸಿದ ವರ್ಣಚಿತ್ರಕಾರನ ಕಲ್ಪನೆ ಸಮೃದ್ಧವಾದುದು. ವಿಶೇಷವಾದ ನಕ್ಷೆಗಳ ಗೋಜಿಲ್ಲದೆ ತಾನು ಚಿತ್ರಿಸಲು ಬಯಸಿದ ವಸ್ತುವಿಗೆ ಆದ್ಯತೆ ನೀಡಿರುವುದು ಗಮನಿಸುವಂಥದ್ದಾಗಿದೆ. ಇದು ಗ್ರಂಥದ ಬರಹವನ್ನಾಧರಿಸಿ ಚಿತ್ರಗಳನ್ನು ಅರಿತುಕೊಳ್ಳಲು ಮಾಡಿದ ಒಂದು ಪ್ರಯತ್ನ. ಇಂತಹ ಇನ್ನು ಕೆಲವು ನಿದರ್ಶನಗಳು ದೊರೆತು ಇಲ್ಲಿ ಚಿತ್ರಿತವಾದ ವ್ಯಕ್ತಿಗಳು ಇಂಥವರೇ ಎಂಬುದು ಖಚಿತವಾಗಿ ಹೇಳು ವಂತಾದರೆ ಅವುಗಳಿಗೆ ಸಲ್ಲಬೇಕಾದ ಐತಿಹಾಸಿಕ ಮಹತ್ವದ ಬಗೆಗೆ ಬೇರೆ ಹೇಳಬೇಕಾದುದೇ ಇಲ್ಲ.

ಜಿಲ್ಲೆಯ ಮುಧೋಳ ತಾಲೂಕಿನ ಮಾಚಕನೂರಲ್ಲಿ
ದೊರಕಿದ ಹಸ್ತಪ್ರತಿಗಳ ಕಟ್ಟಿಗೆ ಮುಖಪಟ ಅಲಂಕಾರಿಕ ಸುಳುವು ವಿನ್ಯಾಸಗಳು







ಜಿಲ್ಲೆಯ ಮುಧೋಳ ತಾಲೂಕಿನ ಮಾಚಕನೂರಲ್ಲಿ
ದೊರಕಿದ ಹಸ್ತಪ್ರತಿಗಳ ಕಟ್ಟಿಗೆ ಮುಖಪಟ ಕೃಷ್ಣ ಲೀಲಾ ದೃಶ್ಯ



ಜಿಲ್ಲೆಯ ಮುಧೋಳ ತಾಲೂಕಿನ ಮಾಚಕನೂರಲ್ಲಿ ದೊರಕಿದ ಹಸ್ತಪ್ರತಿ ಚಿತ್ರ



ಜಿಲ್ಲೆಯ ಮುಧೋಳ ತಾಲೂಕಿನ ಮಾಚಕನೂರಲ್ಲಿ ದೊರಕಿದ ಹಸ್ತಪ್ರತಿ ಚಿತ್ರ



ಜಿಲ್ಲೆಯ ಮುಧೋಳ ತಾಲೂಕಿನ ಮಾಚಕನೂರಲ್ಲಿ ದೊರಕಿದ ಗಿರಿಜಾ ಕಲ್ಯಾಣ ಹಸ್ತಪ್ರತಿ ಚಿತ್ರ


ಶಿವಯೋಗ ಮಂದಿರದ ಸಂಗ್ರಹದಲ್ಲಿನ ಹಸ್ತಪ್ರತಿಗಳಲ್ಲಿ
ವರ್ಣ ಚಿತ್ರಗಳು











ಶಿವಯೋಗ ಮಂದಿರದ ಸಂಗ್ರಹದಲ್ಲಿನ ಹಸ್ತಪ್ರತಿಗಳಲ್ಲಿ
ವರ್ಣ ಚಿತ್ರಗಳು







ಶಿವಯೋಗ ಮಂದಿರದ ಸಂಗ್ರಹದಲ್ಲಿನ ಹಸ್ತಪ್ರತಿಗಳಲ್ಲಿ ವರ್ಣ ಚಿತ್ರಗಳು













ಶಿವಯೋಗ ಮಂದಿರದ ಸಂಗ್ರಹದಲ್ಲಿನ ಹಸ್ತಪ್ರತಿಗಳಲ್ಲಿ
ವರ್ಣ ಚಿತ್ರಗಳು








ಶಿವಯೋಗ ಮಂದಿರದ ಸಂಗ್ರಹದಲ್ಲಿನ ಹಸ್ತಪ್ರತಿಗಳಲ್ಲಿ
ವರ್ಣ ಚಿತ್ರಗಳು










ಶಿವಯೋಗ ಮಂದಿರದ ಸಂಗ್ರಹದಲ್ಲಿನ ಹಸ್ತಪ್ರತಿಗಳಲ್ಲಿ
ರೇಖಾ ಚಿತ್ರಗಳು














ಶಿವಯೋಗ ಮಂದಿರದ ಸಂಗ್ರಹದಲ್ಲಿನ ಹಸ್ತಪ್ರತಿಗಳಲ್ಲಿ ರೇಖಾ ಚಿತ್ರಗಳು

















ಶಿವಯೋಗ ಮಂದಿರದ ಸಂಗ್ರಹದಲ್ಲಿನ ಹಸ್ತಪ್ರತಿಗಳಲ್ಲಿ
ರೇಖಾ ಚಿತ್ರಗಳು














ಶಿವಯೋಗ ಮಂದಿರದ ಸಂಗ್ರಹದಲ್ಲಿನ ಹಸ್ತಪ್ರತಿಗಳಲ್ಲಿ
ರೇಖಾ ಚಿತ್ರಗಳು













ಅಧ್ಯಾಯ - ೭

ಗಾಜಿನ ಮೇಲಿನ ಚಿತ್ರಕಲೆ

* ಜಿಲ್ಲೆಯ ಗಾಜಿನ ಮೇಲಿನ ಚಿತ್ರಗಳು
* ಗುಳೇದಗುಡ್ಡ ಸಾಂಸ್ಕೃತಿಕ ಪರಿಸರ
* ಗಾಜಿನ ಚಿತ್ರಗಳ ಸಂರಕ್ಷಣೆ
* ಗಾಜಿನ ಮೇಲಿನ ಚಿತ್ರಗಳ ರಚನಾ ವಿಧಾನ ಮತ್ತು ಪರಿಕರಗಳು
* ಗಾಜಿನ ಮೇಲಿನ ಚಿತ್ರಗಳ ವಸ್ತು ವಿಷಯ

ಗಾಜಿನ ಮೇಲಿನ ಚಿತ್ರಕಲೆ

ಜಿಲ್ಲೆಯ ಗಾಜಿನ ಮೇಲಿನ ಚಿತ್ರಗಳು

ಬಾಗಲಕೋಟಿ ಜಿಲ್ಲೆಯಲ್ಲಿ ಪ್ರಮುಖ ವ್ಯಾಪಾರ ಕೇಂದ್ರ ಗುಳೇದಗುಡ್ಡದಲ್ಲಿ ಅಪರೂಪದ ಹೇರಳ ಗಾಜಿನ ಚಿತ್ರಗಳನ್ನು ಕಾಣಬಹುದು. "ಬಾಗಲಕೋಟೆ ಜಿಲ್ಲೆಯ ಗುಳೇದಗುಡ್ಡ ಪಟ್ಟಣದಲ್ಲಿರುವಂತಹ ಗಾಜಿನ ಕಲಾಕೃತಿಗಳು ಕರ್ನಾಟಕದಲ್ಲಿ ಯಾವುದೇ ಮೂಲೆಯಲ್ಲಿಯೂ ಕಾಣಸಿಗುವುದಿಲ್ಲ"[೧]. ಇಂತಹ ಗಾಜಿನ ಅದ್ಭುತವಾದ ಚಿತ್ರಕಲಾಕೃತಿಗಳು ಗುಳೇದಗುಡ್ಡದ ಕೆಲವು ಕಲಾಸಕ್ತರ ಮನೆತನಗಳಲ್ಲಿ ನಾವು ಕಾಣಬಹುದು. ಈ ರೀತಿಯ ಕಲಾಕೃತಿಗಳನ್ನು ಕರ್ನಾಟಕದಲ್ಲಿ ವಿವಿಧ ಭಾಗಗಳಲ್ಲಿ ಸಿಕ್ಕಬಹುದಾದರೂ ಗುಳೇದಗಡ್ಡ ಪಟ್ಟಣದಲ್ಲಿ ಸುಮಾರು ನಾಲ್ಕು ತಲೆಮಾರುಗಳಿಂದ ಕಾಯ್ದಿರಿಸಿಕೊಂಡು ಬಂದಿದ್ದಾರೆ. ಈ ಸುಂದರವಾದ ಗಾಜಿನ ಚಿತ್ರಕಲಾಕೃತಿಗಳನ್ನು ನೋಡಬೇಕಾದರೆ ಶ್ರೀ ಬಸವಪ್ರಭಪ್ಪಾ ಗಂಗಾವತಿ ನಿವೃತ್ತ ತಹಶೀಲ್ದಾರರು, ಶ್ರೀ ವೀರಸಂಗಪ್ಪ ಈಶ್ವರಪ್ಪ ಬಾವಿ. ಶ್ರೀ ಶೀಲವಂತ, ಶ್ರೀ ಸಂಗಪ್ಪ ಮುಪ್ಪಣ್ಣಪ್ಪ, ಶೀಲವಂತ, ಶ್ರೀ ಚಂದ್ರಶೇಖರ ಸಿದ್ಧರಾಮಯ್ಯ ತಟ್ಟಿಮಠ, ಶ್ರೀ ಈರಪ್ಪ ಬಸವಲಿಂಗಪ್ಪ ಕರಡಿ, ಶ್ರೀ ಫಕೀರಸಾ ಹೀರಾಸಾ ಪವಾರ, ಶ್ರೀ ರವಿ ಉದ್ನೂರ, ಶ್ರೀ ಪಂಪಣ್ಣ ಗಟಗಟಿ, ಶ್ರೀ ವಿರಪ್ಪ ಚಟ್ನಾಳ, ಇಂತಹ ಮನೆತನಗಳಲ್ಲಿ ಗಾಜಿನ ಮೇಲೆ ಬಂಗಾರವನ್ನು ಕರಗಿಸಿ ಚಿತ್ರಿಸಿದ ಕಲಾಕೃತಿ ಗಳನ್ನು ವೀಕ್ಷಸಬಹುದು. ಗಾಜಿನ ಮೇಲಿನ ಕಲಾಕೃತಿಗಳು ಮೇಲ್ಕಂಡ ಕೆಲವು ಮನೆಗಳಲ್ಲಿ ಲಭ್ಯವಾಗಿ ರುವುದಿಲ್ಲ. ಮೊದಲು ಗುಳೇದಗುಡ್ಡದಲ್ಲಿ ವಾಸವಾಗಿರತಕ್ಕಂತಹ ರಾಜಸ್ಥಾನಿ' ಜನಾಂಗದವರ ಮನೆಯಲ್ಲಿ ಅಂದರೆ ಶ್ರೀ ಶಂಕರಲಾಲ್ ಮಾಲಪಾನಿ, ಶ್ರೀರಾಮ್ ದಯಾಳ ಮೊಹನಲಾಲ್, ಕಾಬ್ರಾ, ಇವರ ಮನೆಯಲ್ಲಿ ರಾಜಸ್ಥಾನಕ್ಕೆ ಸಂಬಂಧಪಟ್ಟ ಶೈಲಿಯನ್ನು ಕಾಣಬಹುದಿತ್ತು. ಈಗ ಚಿತ್ರಕಲಾಕೃತಿಗಳು ಆ

---

೧. ಬಿ.ಆರ್. ಹೀರೆಮಠ ಸಂ. ನಿಜದ ನೆಲೆ, ಡಾ. ಬಿ.ಕೆ. ಹೀರೆಮಠರವರ ಅಭಿನಾಂದನ ಗ್ರಂಥ

ರಾಜಸ್ಥಾನಿ ಜನಾಂಗದವರ ಮನೆಯಲ್ಲಿ ಲಭ್ಯವಿರುವುದಿಲ್ಲ ಮತ್ತು ಕೆಲವೊಂದು ಮನೆತನಗಳಲ್ಲಿ ಗಾಜಿನ ಮೇಲಿನ ಕಲಾಕೃತಿಗಳು ಕೆಳಗಡೆ ಬಿದ್ದು ಸಮಾಧಿಗೊಂಡಿವೆ. ಶ್ರೀ ತಿಪ್ಪಾ ಶ್ರೀಲವಂತ, ಶ್ರೀ ಬಸವ ಪ್ರಭಪ್ಪ ಗಂಗಾವತಿವರ ಮನೆಯಲ್ಲಿ ದೊಡ್ಡಗಾತ್ರದ ೩x೮ ಸೆಂ.ಮೀ. ಚಿಕ್ಕಗಾತ್ರದ ೨x೨ ಸೆಂ.ಮೀ. ಗಾತ್ರದ ಗಾಜಿನ ಮೇಲಿನ ಕಲಾಕೃತಿಗಳನ್ನು ಕಾಣಬಹುದು. ೩೫x೪೮ ಸೆಂ.ಮೀ. ೯ ಚಿತ್ರಗಳು. ೫೫x೫೭ ಸೆಂ.ಮೀ. ೧ ಚಿತ್ರ. ೪೫x೩೬ ಸೆಂ.ಮೀ. ೨ ಚಿತ್ರಗಳು. ೫೬x೩.೭ ಸೆಂ.ಮೀ. ೩ ಚಿತ್ರಗಳು ೫೫x೪೫ ಸೆಂ.ಮೀ. ೧ ಚಿತ್ರ ೫೮x೪೯ ಸೆಂ.ಮೀ. ೨ ಚಿತ್ರಕಲಾಕೃತಿಗಳು ಲಭ್ಯವಿರುತ್ತದೆ. ಬಸವ ಪ್ರಭು ಮಹಾದೇವಪ್ಪ ಗಂಗಾವತಿಯವರ ಮನೆಯಲ್ಲಿ ಒಟ್ಟು ೨೦ ಚಿತ್ರಗಳಿದ್ದು ಅದರಲ್ಲಿ ಕಾಪಾಡಿಕೊಂಡು ಬಂದಿದ್ದಾರೆ. ಬಸವಪ್ರಭು ಗಂಗಾವತಿಯವರ ಮನೆಗೆ ಸುಮಾರು ಒಂದನೂರು ಐವತ್ತು ವರ್ಷಗಳಾಗಿದ್ದು, ಈ ಮನೆಗೆ ಮಹಾಮನೆ ಎಂದು ಕರೆಯುವರು. ಈ ಮನೆಯಲ್ಲಿ ಸುಮಾರು ೮೧ ಕಂಬಗಳು ಉಂಟು. ಈ ಮನೆಯೊಳಗಡೆ ಪ್ರವೇಶಿಸಿದಾಗ ಕಾಣವುದೇ ೪ ದೊಡ್ಡ ಗಾತ್ರದ ಗಾಜಿನ ಚಿತ್ರಕಲಾಕೃತಿಗಳು. ಕೆಲವು ಗಾಜಿನ ಚಿಕ್ಕಗಾತ್ರದ ಕಲಾಕೃತಿಗಳನ್ನು ಒಂದೆಡೆ ಜೋಪಾನವಾಗಿ ಒಂದು ಬಟ್ಟೆಯೊಳಗೆ ಕಟ್ಟಿಕಾಯ್ದಿರಿದ್ದಾರೆ. “ಇಂತಹ ಕಲಾಕೃತಿಗಳನ್ನು ಸಾಂಪ್ರದಾಯಿಕ ಹಬ್ಬಗಳಲ್ಲಿ ಅವುಗಳನ್ನು ಹೊರತೆಗೆದು ಅವುಗಳಿಂದಲೇ ಮಂಟಪವನ್ನು ಸಿದ್ಧಪಡಿಸಿ, ಅಲಂಕರಿಸಿ ಪೂಜೆಯನ್ನು ಪ್ರಾರಂಭಿಸುತ್ತಾರೆ”[೨]. ಶ್ರೀ ವೀರಸಂಗಪ್ಪ ಬಾವಿ ಅವರ ಮನೆಯಲ್ಲಿನ ಇವರ ಮನೆಯಲ್ಲಿ ೨೧ ಗಾಜಿನ ಕಲಾಕೃತಿಗಳು ಲಭ್ಯವಿರುತ್ತದೆ. ಈ ಗಾಜಿನ ಕಲಾಕೃತಿಗಳನ್ನು ಖರೀದಿಸಿದರು. ೧೮೮೩ರಲ್ಲಿ ಸ್ವರ್ಗಸ್ತರಾದ ಶ್ರೀ ಗೌರಪ್ಪ ಬಾವಿಯವರು. ಈ ಗಾಜಿನ ಕಲಾಕೃತಿಗಳನ್ನು ಖರೀದಿಸಿದವರು. ಈ ಗಾಜಿ ಕಲಾಕೃತಿಗಳನ್ನು ನಾಲ್ಕನೆಯ ತಲೆಮಾರಿನವರು ಇಂದಿಗೂ ಅವುಗಳು ಜೋಪಾನವಾಗಿ ಕಾಯ್ದಿರಿಸಿಕೊಂಡು ಬಂದಿದ್ದಾರೆ. ಇರಸಂಗಪ್ಪ ಗೌರಪ್ಪ ಭಾವಿಯವರು ಗುಳೇದಗುಡ್ಡದಿಂದ ಖಣದ ವ್ಯಾಪರಕ್ಕಾಗಿ ಮುಂಬೈಗೆ ಹೋದಾಗ ಗಾಜಿನ ಚಿತ್ರಕಲಾಕೃತಿಗಳನ್ನು ಕೇವಲ ೫, ೧೦ ರೂಪಾಯಿಗಳನ್ನು ಕೊಟ್ಟು, ಖರೀದಿಸಿದ್ದಾರೆಂದು ಈಗಿನ ಪೀಳಿಗೆಯವರು ಹೇಳುತ್ತಾರೆ. ಶ್ರೀ ವೀರಸಂಗಪ್ಪ ಭಾವಿಯವರ ಮನೆಯಲ್ಲಿ ಕೆಲವು ಕಲಾಕೃತಿಗಳನ್ನು ಮನೆಯಲ್ಲಿ ಪ್ರದರ್ಶಿಸಿದ್ದಾರೆ. ಇನ್ನು ಕೆಲವು ಕಲಾಕೃತಿಗಳನ್ನು ದೊಡ್ಡ ಗಾತ್ರದ ಎರಡು ಸಂದಕದಲ್ಲಿ ಕಾಯ್ದಿರಿಸಿದ್ದಾರೆ. ಅವುಗಳಲ್ಲಿ ಕೆಲವು ಕಲಾಕೃತಿಗಳು ಸೀಳಿಹೋಗಿವೆ. ಗಾಜಿನ ಕೆಲವೊಂದಿಷ್ಟು ಕಲಾಕೃತಿಗಳ ವರ್ಣವು ಅಳಿಸಿಹೋಗಿವೆ. ಗಾಜಿಗೆ ಹಾಕಿದ ಚೌಕಟ್ಟಿನ ಕಟ್ಟಿಗೆಗಳ ಒಡೆದು ಹೋಗಿವೆ. ಇನ್ನು ಕೆಲವು ಕಲಾಕೃತಿಗಳು ಹಾಳಾಗದಂತೆ ಉಳಿಸಿಕೊಂಡು ಬಂದಿದ್ದಾರೆ. ಇವರ ಮನೆಯಲ್ಲಿ ಇನ್ನೊಂದು ವಿಶೇಷ

---

೨. ಮಹಾದೇವ ಜಗತಾಪ., ಅಚ್ಚರಿ ಮೂಡಿಸುವ ಗಾಜಿನ ಚಿತ್ತಾರ ಲೇಖನ, ಸಂಯುಕ್ತ ಕರ್ನಾಟಕ, ೨೧.೧೧.೨೦೦೪

ವೆನೆಂದರೆ ಇವರೂ ಸಹ ಗಂಗಾವತಿಯವರ ಮನೆಯಲ್ಲಿ ನಡೆಸುವ ಸಾಂಪ್ರದಾಯಿಕ ಹಬ್ಬಗಳಲ್ಲಿ ಅವುಗಳನ್ನು ಹೊರತೆಗೆದು ಅವುಗಳಿಂದ ಮಂಟಪವನ್ನು ಕಟ್ಟಿ ಅಲಂಕರಿಸುತ್ತಾರೆ. ಉದಾಹರಣೆಗೆ ವಿಜಯದಶಮಿ ದಿವಸದಿಂದ ಸೀಗಿ ಹುಣ್ಣಿಮೆಯವರೆಗೆ ಸಾಂಪ್ರದಾಯಿಕವಾಗಿ ಮಂಟಪವನ್ನು ಕಟ್ಟಿ ಅಲ್ಲಲ್ಲಿ ಗಾಜಿನ ಚಿತ್ರಕಲಾ ಕೃತಿಗಳನ್ನು ತೂಗುಹಾಕಿ ಮಂಟಪವನ್ನು ಅಲಂಕೃತಗೊಳಿಸುತ್ತಾರೆ. ದೀಪಾವಳಿ ಅಮವಾಸ್ಯೆ ಆದ ಐದು ದಿನಕ್ಕೆ ಅಂತಿಮ ಪಂಚಮಿ ದಿವಸದಿಂದ ಹನ್ನೊಂದು ದಿನಗಳವರೆಗೆ ಶ್ರೀ ವೀರಸಂಗಪ್ಪ ಬಾವಿ ಅವರ ಮನೆಯಲ್ಲಿ ಗೌರಿ ಹುಣ್ಣಿಮೆಯವರೆಗೂ ಅತೀ ವಿಜೃಂಣೆಯಿಂದ ಪೂಜಾ ಉತ್ಸವವು ನಡೆಯುತ್ತದೆ. ಪೂಜಾ ಆರಂಭವಾಗುವ ಸಮಯವು ಸಾಯಂಕಾಲ ೭ ರಿಂದ ೯ ಘಂಟೆಯ ವರೆಗೂ ಭಾರತೀಯ ಸಾಂಪ್ರದಾಯದ ಪ್ರಕಾರ ಗುಳೇದಗುಡ್ಡದ ಮುತ್ತೈದೆಯರು ಹಣೆಯ ಮೇಲೆ ಸಿಂಧೂರ ಬಿಂದುವನ್ನಿಟ್ಟು ಕೊಂಡು ಹೊಸ ಸೀರೆಯನ್ನುಟ್ಟು ಕೈಯಲ್ಲಿ ಸಕ್ಕರೆ ಆರತಿಯ ತಟ್ಟೆಯನ್ನು ಹಿಡಿದುಕೊಂಡು ಸಾಲು ಸಾಲಾಗಿ ನಿಂತು ಶ್ರೀ ವೀರಸಂಗಪ್ಪ ಭಾವಿ ಅವರ ಮನೆಯಲ್ಲಿ ಆರಂಭವಾದ ಗೌರಿ ಪೂಜೆಗೆ ಆರತಿಯನ್ನು ಮಾಡುತ್ತದೆ. ಆ ಗೌರಿಪೂಜೆಗೆ ಆರತಿಯನ್ನು ಬೆಳಗಿ ಹೋಗುವ ದೃಶ್ಯವಂತೂ ಕಣ್ಣಿಗೆ ಹಬ್ಬವನ್ನುಂಟು ಮಾಡುತ್ತಾರೆ. ಆ ಗೌರಿ ಹುಣ್ಣಿಮೆಯ ಬೆಳದಿಂಗಳಲ್ಲಿ ಗಾಜಿನ ಕಲಾಕೃತಿಗಳಿಂದ ಮಂಟಪವನ್ನು ಅಲಂಕರಿಸಿದ್ದು ಕಂಡರೆ ಮನೋಲ್ಲಾಸ ಇನ್ನೂ ಹೆಚ್ಚುತ್ತದೆ. ಈ ಸುಂದರವಾದ ಮಂಟಪವನ್ನು ಏಕಾದಶಿಯಿಂದ ಕಾರ್ತಿಕ ಶುದ್ಧ ಏಕಾದಶಿಯವರೆಗೆ ಮಂಟಪವನ್ನು ಅಲಂಕರಿಸುವರು. ಈ ಬೆಳದಿಂಗಳಲ್ಲಿ ಅಲ್ಲಿಯ ಜನರು ಸುತ್ತಲೂ ಕುಳಿತು ಊಟಮಾಡುವುದು, ಹೆಣ್ಣುಮಕ್ಕಳ ಕೋಲಾಟ, ಕಣ್ಣು ಮುಚ್ಚಾಲೆ ಮುಂತಾದ ಆಟಗಳನ್ನಾಡಿ ಸಂಭ್ರಮಿಸುತ್ತಾರೆ. ಇದು ಗೌರಿಹಬ್ಬದ ವಿಶೇಷವಾಗಿದೆ. ಆ ನಾಲ್ಕು ಬೆಳಗಿನ ಜಾವದವರೆಗೂ ಜನರೆಲ್ಲರೂ ದೇವಿಯ ದರ್ಶನಕ್ಕೆ ಬರುವರು ಆ ಕಲಾಕೃತಿಗಳನ್ನು ನೋಡಿ ಅವುಗಳನ್ನು ವರ್ಣಿಸಿ ಆನಂದಪಟ್ಟು ಆ ಬೆಳದಿಂಗಳ ಅಂಗಳದಲ್ಲಿ ಗುಂಪು ಗುಂಪಾಗಿ ಹೋಗುವ ದೃಶ್ಯವಂತೂ ಕಂಗೊಳಿಸುತ್ತದೆ.

ಶಿವಲಿಂಗಪ್ಪ ಲಿಂಗಪ್ಪ ತಿಪ್ಪಾ ಇವರ ಮನೆಯಲ್ಲಿ ಗಾಜಿನ ಕಲಾಕೃತಿಗಳನ್ನು ಇವರೂ ಸಹ ಜೋಪಾನವಾಗಿ ಕಾಯ್ದಿರಿಸಿಕೊಂಡು ಬಂದಿದ್ದಾರೆ. ಇವರ ಮನೆಯೊಳಗೆ ಪ್ರವೇಶಿಸಿದಾಗ ಗೋಡೆಗಳ ಮೇಲೆ ಕಂಡು ಬರುವ ಕಲಾಕೃತಿಗಳು ಕಲಾ ಗ್ಯಾಲರಿಯ ಕಲ್ಪನೆಯನ್ನು ಕಣ್ಣು ಮುಂದೆ ತರುತ್ತದೆ. ಇವರ ಮನೆಯಲ್ಲಿಯೂ ಕೆಲವು ಗಾಜಿನಕಲಾಕೃತಿಗಳು ಸೀಳಿಹೋಗಿವೆ. ಇನ್ನುಳಿದೆಲ್ಲವನ್ನು ಅತೀ ಸೂಕ್ಷ್ಮ ವಾಗಿ ಕಾಪಾಡಿಕೊಂಡು ಬಂದಿದ್ದಾರೆ. ಇವರ ಮನೆಯ ಕಲಾಕೃತಿಗಳ ವಿಶೇಷತೆಯೇನೆಂದರೆ ಉತ್ತಮವಾದ ವರ್ಣಗಳಿಂದ, ಭಾರತೀಯ ವಸ್ತ್ರಾಭರಣಗಳು, ಸೂಕ್ಷ್ಮವಾದ ರೇಖೆಗಳು ಅತ್ಯುತ್ತಮವಾದ

ಸಂಯೋಜನೆಯ ಒಳಗೊಂಡ ಕಲಾಕೃತಿಗಳು ಇವರ ಮನೆಯಲ್ಲಿ ಜೋಪಾನವಾಗಿವೆ. ರಾಜಶೇಖರ ಶೀಲವಂತರ ಅಂಗಡಿಯಲ್ಲಿ ನಾಲ್ಕು ಚಿತ್ರಕಲಾಕೃತಿಗಳು ಪ್ರದರ್ಶಿತಗೊಂಡಿವೆ.

ಈ ಚಿತ್ರಕಲಾ ಕೃತಿಗಳ ವಿಶೇಷತೆಯೇನೆಂದರೆ ತಿಳಿ ನೀಲಿ ಮುಖವುಳ್ಳ ಶ್ರೀ ಕೃಷ್ಣನ ಸುರಕ್ಷೆಗಾಗಿ ಕಾಯುತ್ತಿದ್ದ ಪಂಚಮುಖದ ನಾಗ ಸರ್ಪ ಹೆಡೆ ಬಿಚ್ಚಿದ ದೃಶ್ಯವನ್ನು ಕಾಣಬಹುದು. ಈ ಚಿತ್ರದಲ್ಲಿ ಮೇಲುಗಡೆ ಶೃಂಗಾರಗೊಂಡ ಗಿಳಿಗಳು, ಆಕಳುಗಳು, ಶ್ರೀಕೃಷ್ಣನ ಕೆಂದುಟಿಯಲ್ಲಿ ಮುಗುಳ್ನಗೆ, ಬಣ್ಣ ಬಣ್ಣದ ವಸ್ತ್ರವಿನ್ಯಾಸ ರಾಜ ಮಹಲ್ ಸೂಚಿಸುವಂತೆ ಇರುವ ಹಿನ್ನೆಲೆ ಭದ್ರಕೋಟೆಯ ಲಕ್ಷಣ ತೋರಿಸುವ ಚಿಕ್ಕ ಬಾಗಿಲು, ಮೆಟ್ಟಿಲುಗಳು, ಹೂದಾನಿಗಳು, ಶ್ರೀಕೃಷ್ಣನ ಹಿಂದುಗಡೆ ಪಿಟೀಲು ನುಡಿಸುತ್ತಿರುವ ಮಹಿಳೆ ಇವುಗಳು ರಾಜಶೇಖರ ಶೀಲವಂತರ ಅಂಗಡಿಯಲ್ಲಿಯ ಕಲಾಕೃತಿಗಳಾಗಿವೆ. ಈ ಚಿತ್ರಕಲಾ ಕೃತಿಗಳನ್ನು ಕಿಂಚಿತ್ತೂ ಯಾವುದೇ ರೀತಿಯಲ್ಲಿ ಚ್ಯುತಿಯಾಗದಂತೆ ಬಹಳ ಜೋಪಾನವಾಗಿ ತಮ್ಮ ಆಭರಣದ ಅಂಗಡಿಯಲ್ಲಿ ತೂಗುಹಾಕಿದ್ದಾರೆ.

ಗುಳೇದಗುಡ್ಡದ ಗ್ರಾಮದಲ್ಲಿ ಈ ಗಾಜಿನ ಕಲಾಕೃತಿಗಳು ಹೆಚ್ಚಾಗಿ ಉಳಿದುಬಂದಿವೆ. ಈ ಸೂಕ್ಷ್ಮವಾದ ವಸ್ತುವನ್ನು ಸೂಕ್ಷ್ಮವಾಗಿ ಕಾಪಾಡಿಕೊಂಡು ಅವುಗಳನ್ನು ದೊಡ್ಡ ದೊಡ್ಡ ಹಬ್ಬದಲ್ಲಿ ಪೂಜಿಸಿ ಅವುಗಳನ್ನು ಕಲಾಕೃತಿಗಳ ಸೌಂದರ್ಯವನ್ನು ಜೋಡಿಸಿ ಕಟ್ಟಿಗೆಯ ಚೌಕಟ್ಟು ಹಾಕಿ. ಅಂತಹ ಕಲೆಗಳಿಗೆ ಮರಳಿ ಜೀವವನ್ನು ತುಂಬಿರುತ್ತಾರೆ.

ಗುಳೇದಗುಡ್ಡ ಸಾಂಸ್ಕೃತಿಕ ಪರಿಸರ

ಈ ಊರಿನ ಹಿಂಭಾಗದಲ್ಲಿನ ಗುಡ್ಡವನ್ನು ದಾಟಿ ಹೋದರೆ ಕೋಟೆಕಲ್ ಜಲಪಾತ ಅಥವಾ ಹಿರೋದಿಡುಗು ಎಂದು ಕರೆಯಲಾಗುವ ಪ್ರವಾಸಿ ಕೇಂದ್ರವಿದೆ. ಮೊದಲಿಗೆ ಈ ಊರು ಸಮೀಪವಿರುವ ಬೆಟ್ಟದ ತುದಿಯಲ್ಲಿತ್ತೆಂಬ ಅಭಿಪ್ರಾಯವಿದ್ದು ಈಗಲೂ ಹಳೆಯ ಪಟ್ಟಣದ ಅವಶೇಷಗಳು ಅಲ್ಲಿ ಕಾಣಸಿಗುತ್ತವೆ. "ಗುಳೇದ ಗುಡ್ಡವೆಂದರೆ ಗುಳೇ ಬಂದವರ ಗುಡ್ಡ"[೩] (ವಲಸೆಗಾರರ ಗುಡ್ಡ) ಎಂದು ಸ್ಥಳೀಯವಾಗಿ ಹೇಳಲಾಗುತ್ತದೆ. ವಿಜಾಪುರ ಎರಡನೇ ಇಬ್ರಾಹಿಂ ಆದಿಲ್ ಷಾಹಿಯ ಅಧಿಕಾರಿಯಾಗಿದ್ದ ನಿಂಗಪ್ಪನಾಯಕ ದೇಸಾಯಿಯು ೧೫೮೦ರಲಿ ಇಲ್ಲಿ ಕೋಟೆಯನ್ನು ನಿರ್ಮಿಸಿದನೆಂಬ ಪ್ರತೀತಿಯಿದೆ. ಸ್ಥಳೀಯ ಹೇಳಿಕೆಯಂತೆ ಯಾವುದೋ ಕಾಲದಲ್ಲಿ ಒಣಗಿ ಹೋದ ಸೋರವರದ ಪಾತ್ರದಲ್ಲಿ

---

೩. ಪ್ರವೀಣರಾಜು ಸೊನ್ನದ, *ಗ್ಲಾಸ್‌ಪೇಂಟಿಂಗ್ ಕಂಟಿನ್ಯೂಟು ಅಟ್ರ್ಯಾಕ್ಟ್ ವಿಸಟರ್ಸ್ ಟು ಗುಳೇದಗುಡ್ಡ*, ಲೇಖನ. ೨೦೦೪, ಡೆಕ್ಕನಹೆರಾಲ್ಡ್.

ಕ್ರಿ.ಶ. ೧೬೦೫ರಲ್ಲಿ ಈ ಪಟ್ಟಣವನ್ನು ನಿರ್ಮಿಸಲಾಯಿತೆಂದು ತಿಳಿದುಬರುತ್ತೆ. ಗುಳೇದಗುಡ್ಡದ ನಗರ ಸಭೆಯು ೧೮೮೫ರಲ್ಲಿ ಸ್ಥಾಪಿತಗೊಂಡು ಜಿಲ್ಲೆಯಲ್ಲಿಯೆ ಅತ್ಯಂತ ಪುರಾತನ ನಗರ ಸಭೆಗಳಲ್ಲಿ ಒಂದೆಂದು ಜನಪ್ರೀಯವಾಯಿತು.

ಈ ಊರಿನ ಸಮೀಪದಲ್ಲಿ ಹಿರೇದಿಡುಗು ಎಂಬ ಸ್ಥಳದಲ್ಲಿ ಒಂದು ಸಣ್ಣ ಪ್ರಮಾಣದ ಅಣೆಕಟ್ಟನ್ನು ನಿರ್ಮಿಸಿ ಅದರ ಮೂಲಕ ನಗರಕ್ಕೆ ಕುಡಿಯುವ ನೀರನ್ನು ಸರಬರಾಜು ಮಾಡಲಾಗುತ್ತಿತ್ತು. ಗುಳೇದಗುಡ್ಡವು ನೇಕಾರಿಕೆಗೆ ಜನಪ್ರಿಯವಾಗಿದ್ದು ಚೋರಿ ಖಣಗಳಿಗೆ ಹಾಗೂ ಜಮಖಾನೆಗಳಿಗೆ ಪ್ರಸಿದ್ಧವಾಗಿದೆ. ಈ ನಗರದ ಸಮೀಪವಿರುವ ಕೋಟೆಕಲ್ಲು ಒಂದು ಜಾಗ್ರತ ಸ್ಥಳವಾಗಿದ್ದು ವೀರಶೈವ ಸಂಪ್ರದಾಯದ ಹುಚ್ಚೇಶ್ವರ ಮಠವಿದೆ. ಮಠವು ಪ್ರಶಾಂತ ಸ್ಥಳದಲ್ಲಿದ್ದು ಪವಾಡ ಪುರುಷರೆನಿಸಿದ್ದ ಹುಚ್ಚೇಶ್ವರ ಜಾತ್ರೆ ನಡೆದಾಗ ಅದೇ ಸಂದರ್ಭದಲ್ಲಿ ರಥೋತ್ಸವವು ಜರುಗುತ್ತದೆ. ವಿವಿಧ ಭಾಗಗಳಿಂದ ಬರುವ ಭಕ್ತರು ಅನೇಕ ಧಾರ್ಮಿಕ ಚಟುವಟಿಕೆಯಲ್ಲಿ ನಿರತರಾಗಿ, ಭಕ್ತಿ ಪರವಶತೆಗೆ ಒಳಗಾಗಿ ಅಗ್ನಿ ಹೊಂಡವನ್ನು ಬರಿಯಕಾಲಿನಿಂದ ಹಾಯುವ ಸಂಪ್ರದಾಯವು ಇಂದಿಗೂ ರೂಢಿಯಲ್ಲಿದೆ. ಈ ಮಠಾಧಿಪತಿ ಗಳಿಂದ ಪ್ರಸಿದ್ಧ ಸಂಗೀತ ಪಾಠಶಾಲೆಯೊಂದು ಕಾರ್ಯನಿರ್ವಹಿಸುತ್ತಿದೆ.

ಈ ನಗರದಿಂದ ಎಂಟು ಕಿ.ಮೀ. ದೂರದಲ್ಲಿರುವ ಕರೆನಹಳ್ಳಿ (ಕಿಟಕಿನಹಳ್ಳಿ) ಎಂಬಲ್ಲಿ ೧೮೬೩ರಲ್ಲಿ ಒಂದು ಕ್ರೈಸ್ತ ಮತೀಯರ ಉಪಠಾಣ್ಯವು ಪ್ರಾರಂಭವಾಯಿತೆಂದು ಪ್ರತೀತಿಯಿದೆ. ನಂತರ ಕ್ರೈಸ್ತ ಮತದ ಚಟುವಟಿಕೆಗಳು ಪ್ರಬಲಗೊಂಡು ೧೮೬೩ರಲ್ಲಿ ಗುಳೇದಗುಡ್ಡ, ಮುಟ್ಟಿಗೇರಿಗಳಲ್ಲಿ ಜನಪ್ರಿಯ ಗೊಂಡಿತು. ಊರಿನಲ್ಲಿ ಸೈಯದಖಾನನ ದರ್ಗಾ ಇಧೆ. ಊರಿನಲ್ಲಿ ಈಶ್ವರ ಹಾಗೂ ಪಾರ್ವತಿ ದೇವಾಲಯಗಳೂ ಇವೆ. ಪ್ರಸ್ತುತ ಗುಳೇದಗುಡ್ಡದಲ್ಲಿಯೂ ಸಂಗೀತ ಪಾಠಶಾಲೆಯಿದೆ. ಗುಳೇದಗುಡ್ಡದ ಸಮೀಪ (೨ ಕಿ.ಮೀ.) ಸುಮಡ್ಡಿ ಎಂಬ ಸ್ಥಳದಲ್ಲಿ ಕ್ರೈಸ್ತ ಮಿಶನರಿಯಾಗಿದ್ದ ರೆವರೆಂಡ್ ಜಿ. ಕೀಜ್ ೧೮೪೪ರ ಜುಲೈ ೨೨ರಿಂದ ಆಗಸ್ಟ್ ೧೮೪೪ರವರೆಗೆ ವಾಸವಾಗಿದ್ದು ಕ್ರೈಸ್ತ ಮಿಶನರಿಯೊಂದನ್ನು ಸ್ಥಾಪಿಸಿದನೆಂದು ಪ್ರತೀತಿಯಿದೆ. ಈ ಪಾದ್ರಿಯು ಬೈಬಲ್‌ನಲ್ಲಿ ಉಲ್ಲೇಖವಿರುವ ಸುವಾರ್ತೆ ಎಂಬ ಸ್ಥಳದಿಂದ ಬಂದವನೆಂದು ಹೇಳಲಾಗುತ್ತದೆ. ಈ ನಗರದ ಸಮೀಪವಿರುವ ತೋಗುಣಸಿ ಎಂಬ ಗ್ರಾಮದ ಬಳಿಯಿರುವ ಕೆಲವಡಿ ಗ್ರಾಮದಲ್ಲಿ ರಂಗನಾಥ ಸ್ವಾಮಿಯ ದೇವಾಲಯವಿದ್ದು ಪ್ರಾಚೀನವೆಂದು ಪರಿಗಣಿಸಲ್ಪಟ್ಟಿದೆ. ಈ ದೇವಾಲಯದಲ್ಲಿರುವ ಕಲ್ಯಾಣ ಚಾಳುಕ್ಯ ರಾಜ ಮೊದಲನೇ ಸೋಮೇಶ್ವರನ ಕ್ರಿ.ಶ. ೧೦೫೩ರ ಶಾಸನವಿದ್ದು. ಕೆಳವಡಿಯ ಕೆರೆಗಾಗಿ ಸುಪ್ಪರಸನೆಂಬ ಅಧಿಕಾರಿಯು ನೀಡಿದ ಭೂ ದಾನದ ಬಗೆಗೆ ಉಲ್ಲೇಖಿಸುತ್ತದೆ. ಈ ದೇವಾಲಯದಲ್ಲಿರುವ ಶಾಸನವು ಕೆಳವಡಿಯ ಸಿಂಧುನಾಯಕನ

ಆಳ್ವಿಕೆಯವಧಿಯಲ್ಲಿ (ಕ್ರೀ.ಶ. ೧೨೧೦-೧೨೮೦) ಕೆಳವಡಿ-೨೦೦ವು ಒಂದು ಪ್ರಮುಖ ಆಡಳಿತ ಕೇಂದ್ರ ಸ್ಥಾನವಾಗಿತ್ತೆಂದು ಉಲ್ಲೇಖಿಸುತ್ತದೆ.

ಬಾಗಲಕೋಟೆ ಜಿಲ್ಲೆಯಲ್ಲಿ ಇತಿಹಾಸ ಪೂರ್ವದಿಂದ ಹಿಡಿದು ಇಂದಿನವರೆಗೂ ಚಿತ್ರಕಲೆಯ ಪ್ರವಾಹ ಹರಿದು ಬಂದಿರುವುದನ್ನು ನಿರಂತರವಾಗಿ ಗುರುತಿಸಬಹುದು. ರಾಷ್ಟ್ರಕೂಟರ ಕಾಲದಲ್ಲಿ ವಾಸ್ತುಶಿಲ್ಪಗಳ ರಚನೆ ಅಧಿಕವಾಯಿತಾದರೂ ಅಂದಿನ ಕಾವ್ಯಗಳಲ್ಲಿ ಚಿತ್ರಕಲೆಯ ಬಗ್ಗೆಯೂ ವಿಪುಲವಾದ ಮಾಹಿತಿಗಳು ದೊರೆಯುತ್ತವೆ. ಆದಿ ಮಾನವನ ನೆಲೆ ಇದ್ದ ಬಾದಾಮಿ ಹಾಗೂ ಜಮಖಂಡಿಗಳಲ್ಲಿ ಇತಿಹಾಸ ಪೂರ್ವ ಚಿತ್ರಗಳನ್ನು ಶೋಧಿಸಲಾಗಿದೆ. ಮುಂದಿನ ಚಾಲುಕ್ಯರ ಕಾಲದ ಬಾದಾಮಿಯ ಗುಹಾಚಿತ್ರ, ಕರ್ನಾಟಕದ ಸಾಂಪ್ರದಾಯಿಕ ಶೈಲಿಯ ಏಕೈಕ ಉದಾಹರಣೆಯಾಗಿದೆ. ನಂತರ ಕಾಲದಲ್ಲಿ ಮರಾಠರಿಂದ ಪ್ರಭಾವಿತವಾದ ಭಿತ್ತಿ ಚಿತ್ರ ಪರಂಪರೆ ಜಿಲ್ಲೆಯಾದ್ಯಂತ ಕಾಣಿಸಿಕೊಂಡಿದ್ದು, ಗುಳೇದಗುಡ್ಡ ಇತ್ಯಾದಿ ವಾಡೆಗಳಲ್ಲಿ ಭಿತ್ತಿ ಚಿತ್ರಗಳು ರಚನೆಯಾಗುವಂತಾಯಿತು. ಇಂದು ಬಾಗಲಕೋಟೆಗಳಲ್ಲಿ ಸ್ನಾತಕ ಮಟ್ಟದ ಚಿತ್ರಕಲೆಯನ್ನು ಕಲಿಸುವಂತಹ ಕಲಾ ಶಾಲೆಗಳು ಹಲವಾರು ಇವೆಯಲ್ಲದೆ ಜಿಲ್ಲೆಯಲ್ಲಿ ರಾಷ್ಟ್ರ ಮಟ್ಟದ ಕಲಾವಿದರು ಕ್ರೀಯಾಶೀಲರಾಗಿದ್ದಾರೆ.

ಗಾಜಿನ ಚಿತ್ರಗಳ ಸಂರಕ್ಷಣೆ

ಈಗಾಗಲೇ ಚೌಕಟ್ಟುಗಳು ಕಿತ್ತುಹೋಗಿರುವ ಗಾಜಿನ ಚಿತ್ರಗಳಿಗೆ ಸಾಂಪ್ರದಾಯಿಕ ಶೈಲಿಯ ಚೌಕಟ್ಟುಗಳನ್ನು ಮತ್ತೆ ಹಾಕಿಸುವುದರ ಮೂಲಕ ಅವುಗಳನ್ನು ರಕ್ಷಿಸಬಹುದಾಗಿದೆ. ಅವುಗಳನ್ನು ವೈಜ್ಞಾನಿಕವಾಗಿ ರಕ್ಷಿಸಲು ಸರಕಾರವು ಕೂಡಾ ಸಹಕಾರ ನೀಡಿದ್ದೇ ಆದರೆ ಅಳಿದು ಹೋಗುತ್ತಿರುವ ಪರಂಪರೆಯೊಂದು ಉಳಿಯುತ್ತದೆ. ಗುಳೇದಗುಡ್ಡದಲ್ಲಿ ಈ ಗಾಜಿನ ಚಿತ್ರಗಳನ್ನು ಕಲಾಸಕ್ತರಿಂದ ಸಂಗ್ರಹಿಸಿ ಪ್ರತ್ಯೇಕ ಗ್ಯಾಲರಿಯೊಂದನ್ನು ಸ್ಥಾಪಿಸಿದರೆ ಒಂದೇ ಸೂರಿನಡಿ ಊರಿನ ಎಲ್ಲ ಕಲಾಕೃತಿಗಳನ್ನು ನೋಡುವ ಭಾಗ್ಯ ಕಲಾಸಕ್ತರಿಗೆ ಒದಗುತ್ತದೆ.

ಗಾಜಿನ ಮೇಲಿನ ಚಿತ್ರಗಳ ರಚನಾ ವಿಧಾನ ಮತ್ತು ಪರಿಕರಗಳು

ರಚನಾ ವಿಧಾನ ತಂತ್ರಗಳು: ಗುಳೇದಗುಡ್ಡದ ಗಾಜಿನ ಚಿತ್ರಗಳು ಇತರ ಚಿತ್ರಗಳ ರಚನಾ ತಂತ್ರಕ್ಕಿಂತ ವಿಶಿಷ್ಟ ನೆಲೆಯಲ್ಲಿ ರಚನೆಗೊಂಡಿವೆ. ಕಾಗದ ಅಥವಾ ಭಿತ್ತಿಯ ಮೇಲೆ ಯಥಾವತ್ ರಚನಾ ತಂತ್ರ ಬಳಸಿದರೆ ಇಲ್ಲಿ ಅದು ತದ್ವಿರುದ್ಧ ಗಾಜಿನ ಹಿನ್ನೆಲೆಯಲ್ಲಿ "ಹಿಂದಕ್ಕೆ ಪ್ರವಹಿಸುವ ಬಗೆಯಲ್ಲಿ" (Retluert Form) ಚಿತ್ರಿಸಿ ಮುನ್ನೆಲೆಯಲ್ಲಿ ಚಿತ್ರದ "ಪ್ರತಿಬಿಂಬಕದ ಪ್ರತಿಫಲಿತ"

(Introspective Form)ವನ್ನು ಮೂಡಿಸುವಂತಹ ರಚನಾ ತಂತ್ರಗಾರಿಕೆ ಹೊಂದಿದ ಈ ಗಾಜಿನ ಚಿತ್ರಗಳು ಕಲಾವಿದ ಸಹನೆಯನ್ನು ಪರೀಕ್ಷಿಸುವ ಒಂದು ಪ್ರಬಲ ಮಾಧ್ಯಮವೆಂದೇ ಗುರುತಿಸಬಹುದು. ಗಾಜಿನ ಚಿತ್ರಗಳ ಇಂದಿಗೂ ಪ್ರಚಲಿತದಲ್ಲಿವೆ. ಬಹುತೇಕವಾಗಿ ಹವ್ಯಾಸಿ ನೆಲೆಯಲ್ಲಿ ಮತ್ತು ವಾಣಿಜ್ಯದ ನೆಲೆಯಲ್ಲಿ ಅದು ತನ್ನ ಅಸ್ತಿತ್ವವವನ್ನು ಕಂಡುಕೊಂಡಿವೆ. ಹವ್ಯಾಸಿ ನೆಲೆಯಲ್ಲಿ ವಿಶೇಷವಾಗಿ ಗೃಹಿಣಿಯರು ಮತ್ತು ಸ್ತ್ರೀಯರು ಕುತೂಹಲಕ್ಕಾಗಿ ರಚಿಸುವುದನ್ನು ಕಂಡರೆ, ವಾಣಿಜ್ಯದ ನೆಲೆಯಲ್ಲಿ ಅಂಗಡಿಗಳ ಸೌಂದರ್ಯವನ್ನು ಹೆಚ್ಚಿಸಲು ಗಾಜಿನ ಚಿತ್ರಗಳನ್ನು ಬಳಸುತ್ತಲಿದ್ದಾರೆ. ಇತ್ತೀಚೆಗೆ ಗಾಜಿನಲ್ಲಿ ಎಚ್ಚಿಂಗ್ ವಿಧಾನವನ್ನು ಅನುಸರಿಸಿ ವಿಶೇಷವಾದ ತಂತ್ರಗಳನ್ನು ದುಡಿಸಿಕೊಂಡು ಚಿತ್ರರಚಿಸುವ ತಂತ್ರಗಾರಿಕೆ ಅತ್ಯಂತ ಪ್ರಚಲಿತದಲ್ಲಿದೆ. ಗುಳೇದಗುಡ್ಡದ ಗಾಜಿನ ಚಿತ್ರಗಳು ಸಾಂಪ್ರದಾಯಿಕ ನೆಲೆಯಲ್ಲಿ ಚಿತ್ರಿತಗೊಂಡ ಬಗೆಯನ್ನು ಈ ಕೆಳಗೆ ಸವಿವರವಾಗಿ ವಿವರಿಸಲಾಗಿದೆ. ಒಂದು ವಸ್ತುವನ್ನು ಆಧಾರ ವಾನ್ನಾಗಿಸಿಕೊಂಡು ಚಿತ್ರಿಸಬೇಕಾದರೆ ಅವನಿಗೆ ತಾಳ್ಮೆ ಹಾಗೂ ಕಠಿಣಶ್ರಮ ಅತ್ಯಗತ್ಯ. ಅಂದಾಗಲೇ ಆ ವ್ಯಕ್ತಿ ಸಾಧಿಸುವ ಕೆಲಸ ಅಥವಾ ಚಿತ್ರಕಲೆಯಿಂದ ತಾನು ಚಿತ್ರಿಸುವ ರೂಪಕ್ಕೆ ಜೀವ ತುಂಬಲು ಸಾಧ್ಯ.

ಹೀಗಾಗಿ ಆ ಕಲಾಕೃತಿಯು ಒಂದು ಸುಂದರವಾದ ಸ್ವರೂಪವನ್ನು ತಾಳುತ್ತದೆ. ನೋಡುಗರ ಮನಸ್ಸನ್ನು ಆಕರ್ಷಿಸುತ್ತದೆ. ಮಾಧ್ಯಮ ಯಾವುದಾದರೂ ಸರಿಯೇ ಕಲಾವಿದನ ಆಶಯಕ್ಕೆ ತಕ್ಕಂತೆ ಕಲಾಕೃತಿ ರೂಪುಗೊಳ್ಳುತ್ತದೆ. ತಾವು ಕಾಗದದ ಮೇಲೆ ಚಿತ್ರಿಸಬೇಕಾದರೆ ಲೇಖನಿಯಿಂದ ಮೊದಲು ನಮಗೆ ಬೇಕಾದ ಕಲಾಕೃತಿಗಳನ್ನು ಆ ಕಾಗದದ ಮೇಲೆ ವ್ಯಕ್ತ ಪಡಿಸುತ್ತೇವೆ. ನಂತರ ನೋಡುಗರ ಮನವನ್ನು ರಂಜಿಸುವಂತೆ ಅದನ್ನು ವಿವಿಧ ವರ್ಣಗಳಿಂದ ಅಲಂಕಾರಗೊಳಿಸುತ್ತೇವೆ. ಗಾಜಿನಲ್ಲಿ ವಿವಿಧ ಬಗೆಗಳುಂಟು. ಗಾತ್ರ ಹಾಗೂ ಪಾರದರ್ಶಕತೆಯ ಅಂಶದಿಂದ ಕೆಲವು ಗಾಜುಗಳು ಕಲಾಕೃತಿಯ ರಚನೆಗೆ ಉಪಯುಕ್ತವಾಗುತ್ತವೆ. ಹೀಗಾಗಿ ಗಾಜಿನ ಮೇಲೆ ಚಿತ್ರಿಸಬೇಕಾದರೆ ಮೊದಲು ಸೂಕ್ತವಾದ ಗಾಜನ್ನು ಆಯ್ಕೆಮಾಡಿಕೊಳ್ಳುವುದು ಮುಖ್ಯ ನಮಗೆ ಬೇಕಾದ ಅಳತೆಯುಳ್ಳ ಗಾಜನ್ನು ಗ್ಲಾಸ್ ಕಟ್ಟರ್‌ನ ಸಹಾಯದಿಂದ ತುಂಡರಿಸತಬೇಕು. ತುಂಡರಿಸಿದ ನಂತರ ಗಾಜನ್ನು ಶುಚಿಯಾದ ಬಟ್ಟೆಯಿಂದ ಸ್ವಚ್ಛ ಗೊಳಿಸಬೇಕು. ನಂತರ ಗ್ಲಾಸ್ ಪೌಡರನ್ನು ಗಾಜಿನ ಮೇಲೆ ಹರಡಿ ಬಟ್ಟೆಯ ಸಹಾಯದಿಂದ ಚೆನ್ನಾಗಿ ಶುಚಿಗೊಳಿಸಬೇಕು. ಗಾಜಿನ ಮೇಲೆ ಚಿತ್ರಿಸಬೇಕಾದರೆ ಅದರದೇ ಆದಂತಹ ಒಂದು ವಿಧಾನವಿದೆ.

ಹೀಗೆ ಚಿತ್ರಿಸಬೇಕಾದ ಕರಡು ಪ್ರತಿಯೊಂದನ್ನು ಪಾರದರ್ಶಕ ಕಾಗದದ ಮೇಲೆ ಮೊದಲು ಚಿತ್ರಿಸಿಕೊಳ್ಳಬೇಕು. ಆ ಚಿತ್ರವನ್ನು ಕೆಳಮುಖವಾಗಿರಿಸಿಟ್ಟು ಅದರ ಮೇಲೆ ನಾವು ಚಿತ್ರಿಸುವ ಗಾಜನ್ನು

ಕೆಳಮುಖವಾಗಿರಿಸಿಕೊಂಡು ಗಾಜಿನ ಹಿಂಬದಿಯಲ್ಲಿ ಲೇಖನಿಯಿಂದ ರೇಖೆಗಳ ನಕಲು ಮಾಡಬೇಕು. ಗಾಜಿನ ಚಿತ್ರ ಮುಮ್ಮುಖವಾಗಿ ಪ್ರದರ್ಶಿಸಲ್ಪಟ್ಟಾಗ ಎಂಬ ಸಂಖ್ಯೆಯ ಕಾಣುತ್ತದೆ. ಇದೇ ಸಂಖ್ಯೆಯನ್ನು ಗಾಜಿನ ಹಿಂದೆ ಎಂಬ ಬಗೆಯಲ್ಲಿ ಚಿತ್ರಿಸುವ ರಚನಾ ತಂತ್ರಗಾರಿಕೆಯನ್ನು ಈ ಗಾಜಿನ ಚಿತ್ರಗಳು ಹೊಂದಿರುತ್ತವೆ. ನಂತರದಲ್ಲಿ ಚಿತ್ರಕ್ಕೆ ಬಂಗಾರದ ಆಭರಣಗಳನ್ನು ಚಿತ್ರಿಸುವಾಗ ಆಭರಣಗಳ ವಿನ್ಯಾಸಕ್ಕೆ ತಕ್ಕಂತೆ ಬಂಗಾರದ ಕಾಗದವನ್ನು ಕತ್ತರಿಸಿಕೊಂಡು ಗಾಜಿನ ಮೇಲೆ ಅಂಟಿಸಬೇಕು. ಇದರ ಮೆಲೆ ಪ್ರತಿಮೆಗೆ ಬಾಹ್ಯ ರೇಖೆಗಳು ಬೇಕಾಗಿದ್ದರೆ ಕುಂಚದಿಂದ ವರ್ಣರೇಖೆಗಳಿಂದ ಪೂರ್ವಗೊಳಿಸಬೇಕು. ರೇಖೆಗಳು ಒಣಗಿದ ನಂತರ ಪ್ರತಿಮೆಯ ದೇಹಾಂಗಕ್ಕೆ ಬೇಕಾದ ವರ್ಣಗಳನ್ನು ಲೇಪಿಸಿ ಮಿಶ್ರಮಾಡಿ ತ್ರಿಮಾನ ಕಲ್ಪನೆಯನ್ನು ಚಿತ್ರಕ್ಕೆ ನೀಡಬಹುದಾಗಿದೆ. ಪ್ರತಿಮೆಗಳ ಹಿಂದೆ ಪರಿಸರ. ಕಟ್ಟಡಗಳು ಅಥವಾ ರಾಜ ವೈಭೋಗವನ್ನು ಸೂಚಿಸುವಂತಹ ಕಮಾನುಗಳನ್ನು ನಂತರದಲ್ಲಿ ಚಿತ್ರಿಸಬೇಕು.

ಈ ಕಲೆಯ ತಂತ್ರದ ಒಂದೇ ಒಂದು ವೈಶಿಷ್ಟ್ಯತೆಯೆಂದರೆ ಮುಂಭಾಗದಲ್ಲಿ ಕಾಣಬೇಕಾದ ಆಕೃತಿಗಳನ್ನು ಮೊದಲು ಚಿತ್ರಿಸುತ್ತ ಹಿಂಭಾಗದಲ್ಲಿ ಕಾಣಬೇಕಾದ ಆ ಕೃತಿಗಳನ್ನು ನಂತರದಲ್ಲಿ ಚಿತ್ರಿಸುವು ದರಿಂದ ಈ ಗಾಜಿನ ಚಿತ್ರವನ್ನು ಪೂರ್ಣಗೊಳಿಸಬಹುದು. ಕೊನೆಯಲ್ಲಿ ಚಿತ್ರ ರಚನೆ ಪೂರ್ಣಗೊಳಿಸಿದ ನಂತರ ಕಪ್ಪು ವರ್ಣವನ್ನು ಏಕಪ್ರಕಾರವಾಗಿ ಲೇಪಿಸುವುದರಿಂದ ಚಿತ್ರಕ್ಕೆ ಯಾವುದೇ ಬಗೆಯ ಹಾನಿ ಯಾಗುವುದಿಲ್ಲ.

ಪರಿಕರಗಳು

ಗಾಜಿನ ಚಿತ್ರಗಳನ್ನು ರಚಿಸಲು ಉತ್ತಮ ಗುಣಮಟ್ಟದ ಪರಿಕರಗಳನ್ನು ಬಳಸಬೇಕಾಗುತ್ತದೆ.

೧. ಉತ್ತಮ ಗುಣಮಟ್ಟದ ಗಾಜು

೨. ತೈಲ ವರ್ಣಗಳು

೩. ಬಂಗಾರ ಬೆಳ್ಳಿಯ ಕಾಗದಗಳು

೪. ಪಾರದರ್ಶಕ ಕಾಗದ

೫. ಪಾರದರ್ಶಕ ಅಂಟು

೬. ಸಾಂಪ್ರದಾಯಿಕ ವಿನ್ಯಾಸ ಚೌಕಟ್ಟುಗಳು

೭. ಮೃದು ತುಪ್ಪಳದ ಕುಂಚಗಳು

೮. ಬಗೆ ಬಗೆಯ ಲೇಖನಿಗಳು ಇಂತಹ ಪರಿಕರಗಳನ್ನು ಜೋಡಿಸಿಕೊಳ್ಳುವುದರ ಮೂಲಕ ಗಾಜಿನ ಚಿತ್ರಗಳನ್ನು ರಚಿಸಬಹುದಾಗಿದೆ.

ಗಾಜಿನ ಮೇಲಿನ ಚಿತ್ರಗಳ ವಸ್ತು ವಿಷಯ

ಗುಳೇದಗುಡ್ಡದ ಗಾಜಿನ ಮೇಲೆ ಚಿತ್ರ ಕಲಾಕೃತಿಗಳು ಇಂದಿನ ಜನಾಂಗಕ್ಕೆ ಸಂತೋಷವನ್ನುಂಟು ಮಾಡುವುದು ಸಹಜ. ಇಂತಹ ಕಲಾಕೃತಿಗಳು ಮೈಸೂರಿನ ಅರಸರ ಪ್ರೋತ್ಸಾಹದಿಂದೆಲ್ಲ ಬೆಳೆದು ಬಂದಿರುವುದಾಗಿ ತಿಳಿದುಬರುತ್ತದೆ. ಈ ಕಲಾಕೃತಿಗಳು ಮೈಸೂರು ತಂಜಾವೂರು ಮರಾಠರ ಶೈಲಿಯನ್ನು ಒಳಗೊಂಡಿವೆ. ಈ ಶೈಲಿಯು ಮೈಸೂರಿನ ಅರಸರ ಪ್ರೋತ್ಸಾಹದಿಂದ ಒಂದೇ ಅಲ್ಲದೇ ತಂಜಾವೂರು ಮರಾಠ ಅರಸರ ಪ್ರೋತ್ಸಾಹದಿಂದಲೂ ಸಹ ಅರಳಿದವು ಎನ್ನಬಹುದು. ಗಾಜಿನ ಮೇಲೆ ಚಿತ್ರಿಸಿದ ಕಲಾಕೃತಿಗಳು ಧಾರ್ಮಿಕ ಭಾವ ಪೂರ್ಣವಾಗಿವೆ. ಈ ಕಲಾಕೃತಿಗಳು ಪ್ರೇಮಿಗಳು. ನವ ದಂಪತಿಗಳು ಮತ್ತು ದೇವತೆಗಳು ಬಗ್ಗೆ ತಿಳಿಸುತ್ತವೆ. ಗಾಜಿನ ಮೇಲಿನ ಕಲಾಕೃತಿಗಳನ್ನು ಪ್ರಮಾಣಬದ್ಧವಾಗಿ ಮತ್ತು ಸುಂದರವಾಗಿ ಚಿತ್ರಿಸಲಾಗಿದ್ದು ಈ ಎಲ್ಲಾ ಕಲಾಕೃತಿಗಳ ಸಂರಕ್ಷಣೆಗಾಗಿ ತಗಡಿನ ಪಟ್ಟಿಯನ್ನು ಬಳಸಿದ್ದಾರೆ. ಉಳಿದಂತೆ ಎಲ್ಲ ಕಲಾಕೃತಿಗಳಿಗೂ ಚೌಕಟ್ಟಿನ ಕಟ್ಟು ಹಾಕಿದ್ದಾರೆ. ಇವು ಇಂದಿಗೂ ತಮ್ಮ ನೈಜತೆಯನ್ನು ಕಾಪಾಡಿಕೊಂಡು ಬಂದಿವೆ. ಗುಳೇದಗುಡ್ಡದ ಕೆಲವು ಶ್ರೀಮಂತ ಮನೆತನದವರು ಕಾಪಾಡಿಕೊಂಡು ಬಂದಿದ್ದು ಅದು ಅವರ ಕಲಾಸಕ್ತಿಯನ್ನು ಬಿಂಬಿಸುತ್ತದೆ. ಈ ಕಲಾಕೃತಿಗಳನ್ನು ಪ್ರಸ್ತುತ ಅಧ್ಯಯನದ ದೃಷ್ಟಿಯಿಂದ ಚಿತ್ರಗಳ ಸಂದರ್ಭಾನುಸಾರ ಅವುಗಳನ್ನು ಈ ಕೆಳಗಿನಂತೆ ವರ್ಗೀಕರಿಸಲಾಗಿದೆ.

೧. ಗಂಧರ್ವರ ಚಿತ್ರಗಳು ೨. ಧಾರ್ಮಿಕ ಚಿತ್ರಗಳು ೩. ಸಾಮಾಜಿಕ ಚಿತ್ರಗಳು

೧. ಗಂಧರ್ವ ಚಿತ್ರಗಳು

೧. ಗಂಧರ್ವ ದಂಪತಿಗಳು

ಈ ಚಿತ್ರ ಕಲಾಕೃತಿಯೂ ಇಬ್ಬರು ಪ್ರೇಮಿಗಳಿದ್ದು, ಎಡಗಡೆಯಲ್ಲಿ ಪ್ರಿಯತಮನ ಶಿರದ ಕೆಂಪುಬಣ್ಣದ ಟೊಪ್ಪಿಗೆಯಿದ್ದು, ಪಾರ್ಶ್ವಮುಖ, ಕಪ್ಪು ಬಣ್ಣದ ಕೋರೆ ಮೀಸೆ, ಕಿವಿಯಲ್ಲಿ ಬಂಗಾರದ ಉದ್ದನೆಯ ಓಲೆ, ಕಪ್ಪಾದ ಕೋಟನ್ನು ಧರಿಸಿ ಕಪ್ಪನೆಯ ಕೋಟಿನ ಒಳಗಡೆ ಬಂಗಾರ ಬಣ್ಮದ ಇನ್ನೊಂದು ವಸ್ತ್ರವನ್ನು ಧರಿಸಿ ಸೊಂಟಕ್ಕೆ ಕೆಂಪಾದ ನಡುಪಟ್ಟಿ ಕಟ್ಟಿಕೊಂಡು ತನ್ನ ಬಲಗೈಯನ್ನು ಪ್ರೇಯಸಿಯ ಎಡಭುಜದ ಮೇಲಿಟ್ಟು ಸೊಂಟಕ್ಕೆ ಸಿಗಿಸಿಕೊಂಡಿರುವ ಉದ್ದವಾದ ಖಡ್ಗದ ಮೇಲೆ ಎಡಗೈಯನಿಟ್ಟು ತನ್ನ ಪೌರುಷವನ್ನು ಪ್ರೇಯಸಿಯ ಮುಂದೆ ನೋಡುವಂತಿದೆ. ಬಲಗಡೆಯಿದ್ದ ಪ್ರಿಯತಮೆಯ ತಲೆಯ ಮೇಲೆ ದುಂಡಾಕಾರದ ಕೆಂಪು ಬಂಗಾರದ ಟೊಪ್ಪಿಗೆ ಅಣೆಯ ಮೇಲೆ ಕಪ್ಪು ಟಿಕಳಿ ಇದ್ದು, ಆಶ್ಚರ್ಯ ಚಕಿತಗೊಂಡ ನೇತ್ರಗಳು, ಕಿವಿಯಲ್ಲಿ ಬಂಗಾರದ ಓಲೆಗಳು, ಕೊರಳಲ್ಲಿ

ಬಂಗಾರದ ಆಭರಣಗಳು, ಧರಿಸಿರುವ ಬಂಗಾರದ ಬಣ್ಣದ ಉಡುಪು, ಶ್ವೇತವರ್ಣದ ಲಂಗ ಬಂಗಾರ ಬಣ್ಣದ ಮೇಲು ವಸ್ತ್ರವನ್ನು ಧರಿಸಿರುವ ಪ್ರೇಯಸಿಯ ಹಿಂದೆ ಒಂದೇ ರೆಕ್ಕೆ ಕಂಡುಬರುವುದು. ಈ ಪ್ರೇಯಸಿಯು ಪ್ರಿಯತಮನ ಪೌರುಷತನದ ಬಗ್ಗೆ ಕೇಳಿ ಆಶ್ಚರ್ಯಚಕಿತಗೊಂಡು ಮುಗುಳ್ನಗೆ ಸೂಚಿಸುತ್ತದೆ. ಕೇಳುವ ದೃಶ್ಯ ಮನಸೆಳೆಯುವಂತಿದೆ. ಪ್ರೇಮಿಗಳ ಕಾಲಿನ ಕೆಳಗೆ ಒಂದು ಕೆಂಪುಪಟ್ಟಿ ಇದ್ದು ಹಿನ್ನಲೆ ತಿಳಿ ನೀಲಿ ಆಕಾರ ಬಣ್ಣ ಮೇಲ್ಗಡೆ ಕೆಂಪು ಪರದೆಗಳು ಈ ಚಿತ್ರಕ್ಕೆ ಶೋಭೆಯನ್ನುಂಟು ಮಾಡಿವೆ. ಈ ಕಲಾಕೃತಿಯ ಸುತ್ತಲೂ ಬಂಗಾರ ವರ್ಣದ ಕಟ್ಟಿಗೆಯ ಚೌಕಟ್ಟನ್ನು ಹಾಕಲಾಗಿದೆ.

ಗಂಧರ್ವ ದಂಪತಿಗಳು

ಈ ಚಿತ್ರದಲ್ಲಿ ಪ್ರಿಯತಮನು ತನ್ನ ಎಡಗೈಯನ್ನು ಪ್ರಿಯತಮೆಯ ಬಲಭುಜದ ಮೇಲಿಟ್ಟು ತನ್ನ ಬಲಗೈಯಿಂದ ಹೂವನ್ನು ಕೊಡುವ ದೃಶ್ಯವಂತೂ ಕಣ್ಣನ್ನು ಕಟ್ಟಿಹಾಕುತ್ತದೆ. ಈ ಪ್ರೇಮಿಗಳ ಕೆಳಗಡೆ ಹಳದಿ ಪಟ್ಟಿ ಇದ್ದು ಆದರ ಮೇಲೆ ಕೆಂಪು ಹೂವನ್ನು ಚೆಲ್ಲಿದ ಹಾಗೆ ಕಂಡುಬರುತ್ತದೆ. ಮೇಲುಗಡೆ ಅಲಂಕಾರವಾದ ಕೆಂಪು ಪರದೆಗಳ ಸುತ್ತಲೂ ನೀಲಿವರ್ಣವನ್ನು ತುಂಬಿದೆ ಅದಕ್ಕೆ ಚೌಕಾಕಾರದ ಬಂಗಾರದ ವರ್ಣದಿಂದ ಪ್ರೇಮ್ ಹಾಕಿ ಶೃಂಗಾರಗೊಳಿಸಲಾಗಿದೆ. ಈ ಚಿತ್ರದಲ್ಲಿ ಇನ್ನೊಂದು ವಿಶೇಷತೆಯೆಂದರೆ ಪ್ರಿಯತಮೆಯ ಹಿಂದುಗಡೆ ಪಕ್ಷಿಯ ರೆಕ್ಕೆಯನ್ನು ತೊಡಿಸಿ ಕಲಾಕೃತಿಯನ್ನು ರಚಿಸಿ ಕಲಾವಿದನು ವಿಫಲನಾಗಿದ್ದಾನೆ. ಬಲಗಡೆಯಲ್ಲಿರುವ ಪ್ರಿಯತಮನ ವೇಷ-ಭೂಷಣಗಳು ಆಧುನಿಕ ವೇಷ ಭೂಷಣಗಳೆನಿಸುತ್ತವೆ. ಪ್ರಿಯತಮನ ತಲೆಯ ಮೇಲೆ ಕೆಂಪು ಬಣ್ಣದ ಚೂಪಾದ ಟೊಪ್ಪಿಗೆ ಅರ್ಧಾಂಶವುಳ್ಳ ದೇಹ ಮುಖದ ಮೇಲೆ ಪ್ರೀತಿಯಿಂದ ನೋಡುವ ಕಣ್ಣು, ಆನೆ ಕೋರೆ ಆಕಾರದ ಕಪ್ಪು ಮೀಸೆ, ಕಿವಿಯಲ್ಲಿ ಬಂಗಾರದ ಓಲೆ, ಕೊರಳಲ್ಲಿ ಬಂಗಾರದ ಆಭರಣಗಳು ಕಪ್ಪುವರ್ಣದ ಕೋಟು ಮಧ್ಯದಲ್ಲಿ ಬಂಗಾರದ ನಕ್ಷೆಯ ಪಟ್ಟಿ ಸೊಂಟದಲ್ಲಿ ಬಿಗಿಯಾಗಿ ಕಟ್ಟಿಕೊಂಡ ಕೆಂಪಾದ ಪಟ್ಟಿ ಕಠಾರಿ ಕೆಳಗಡೆ ಕೆಂಪು ಪ್ಯಾಂಟು, ಮಧ್ಯದಲ್ಲಿ ಉದ್ದಾದ ಬಂಗಾರದ ಪಟ್ಟಿ, ಕಾಲುಗಳಲ್ಲಿ ಕಪ್ಪಾದ ಬೂಟುಗಳಿದ್ದು ಪ್ರಿಯತಮನ ಮೈಬಣ್ಣ ತಿಳಿಯಾದ ಗುಲಾಬಿ ವರ್ಣದಿಂದ ಚಿತ್ರಿಸಲಾಗಿದೆ. ಹಾಗೆಯೇ ಪಕ್ಕದಲ್ಲಿ ಎಡಬದಿಯಲ್ಲಿ ನಿಂತ ಸುಂದರವಾದ ಪ್ರೇಯಸಿಯ ಶಿರದ ಮೇಲೆ ಬಂಗಾರದ ಬಣ್ಣದ ಟೋಪಿಗೆ ಅರ್ಧಂಶವುಳ್ಳ ದೇಹ ಮುಖದ ಮೇಲೆ ಪ್ರೀತಿಯಿಂದ ನೋಡುವ ಕಣ್ಣು, ಆನೆ ಕೋರೆ ಆಕಾರದ ಕಪ್ಪು ಮೀಸೆ, ಕಿವಿಯಲ್ಲಿ ಬಂಗಾರದ ಓಲೆ ಕೊರಳಲ್ಲಿ ಬಂಗಾರದ ಆಭರಣಗಳು, ಕಪ್ಪುವರ್ಣದ ಕೋಟು, ಕೋಟಿನ ಮಧ್ಯದಲ್ಲಿ ಬಂಗಾರದ ನಕ್ಷೆಯ ಪಟ್ಟಿ, ಸೊಂಟದಲ್ಲಿ ಬಿಗಿಯಾಗಿ ಕಟ್ಟಿಕೊಂಡ ಕೆಂಪಾದ ಪಟ್ಟಿ ಕಠಾರಿ ಕೆಳಗಡೆ ಕೆಂಪು ಪ್ಯಾಂಟು. ಮಧ್ಯದಲ್ಲಿ ಉದ್ದಾದ ಬಂಗಾರದ

ಪಟ್ಟಿ ಕಾಲುಗಳಲ್ಲಿ ಕಪ್ಪಾದ ಬೂಟುಗಳಿದ್ದು ಪ್ರಿಯತಮನ ಮೈಬಣ್ಣ ತಿಳಿಯದಾ ಗುಲಾಬಿ ವರ್ಣದಿಂದ ಚಿತ್ರಿಸಲಾಗಿದೆ. ಹಾಗೆಯೇ ಪಕ್ಕದಲ್ಲಿ ಎಡಬದಿಯಲ್ಲಿ ನಿಂತ ಸುಂದರವಾದ ಪ್ರೇಯಸಿಯ ಶಿರದ ಮೇಲೆ ಬಂಗಾರದ ಬಣ್ಣದ ಟೊಪ್ಪಿಗೆ ಕಪ್ಪನೆಯ ಕೂದಲು ಈಕೆ ಪ್ರಿಯತಮನನ್ನು ನೋಡಿ ನಾಚುತ್ತ ನಿಂತಿರುವ ಹಾಗೆ ಕಲಾವಿದನಿಲ್ಲಿ ಚಿತ್ರಿಸಿದ್ದಾನೆ. ಮೂಗುತಿ, ಕೆಂಪಾದ ತುಟಿಗಳು ಈಕೆಯ ಮೈಬಣ್ಣವೂ ಸಹ ತಿಳಿಯಾಗಿದ್ದು ಮೈಮೇಲೆ ಧರಿಸಿಕೊಂಡ ಉಡುಪು ಬಂಗಾರದ ಬಣ್ಣದಿಂದ ಒಳಗಡೆ ಕೆಂಪು ಚುಕ್ಕಿಗಳು ಕೆಳಗಡೆ ತಿಳಿ ನೀಲಿ ಆಕಾರದ ಲಂಗ. ಕೆಳಗಡೆಯ ಗಡುಸಾದ ನೀಲಿ ಆಕಾರದ ಪ್ಯಾಂಪು. ಈಗ ಅದರ ಬಣ್ಣವೂ ಸಹ ಕೊಂಚ ನಶಿಸಿ ಹೋಗಿವೆ. ಪ್ರಿಯತಮೆಯ ಕಾಲಲ್ಲಿ ಕಾಲುಚೀಲಗಳನ್ನು ಧರಿಸಿದ್ದಾಳೆ.

ಗಂಧರ್ವ ಕನ್ಯೆಯರು

ಚಿತ್ರದಲ್ಲಿ ಯಾವುದೋ ಒಂದು ಶುಭ ಸಂದರ್ಭದಲ್ಲಿ ಸಂಗೀತ ಗಾಯನ ಸ್ಪರ್ಧೆಗೆ ಭಾಗವಹಿಸಿದ ಸಂಗೀತ ಕಲಾವಿದರಿರಬಹುದು ಎಂಬ ಭಾಸವಾಗುತ್ತದೆ. ಬಲಗಡೆ ಇದ್ದ ವ್ಯಕ್ತಿಯ ವೇಷಭೂಷಣಗಳನ್ನು ಕಲಾವಿದನು ವಿಭಿನ್ನವಾಗಿ ರಚಿಸಿದ್ದಾನೆ. ಕಲಾಕೃತಿಯಲ್ಲಿ ಸಂಗೀತ ಕಲಾವಿದನ ಬೆನ್ನು ಹಿಂದುಗಡೆ ಬಂಗಾರ ವರ್ಣದ ರೆಕ್ಕೆ ಶಿರದ ಮೇಲೆ ಕೆಂಪು ಮತ್ತು ಹಳದಿ ವರ್ಣದಿಂದ ರಚಿಸಿದ ಟೋಪ್ಪಿಗೆ ಇದ್ದು ಕಿವಿಯತಲ್ಲಿ ಓಲೆಗಳಿವೆ. ಕೊರಳಲ್ಲಿ ಸೂಕ್ಷ್ಮ ರೇಖೆಯ ಬಂಗಾರದ ಸರಗಳು ಕೆಂಪು ಹಳದಿ ನೀಲಿ ವರ್ಣದ ಗುಲಾಬಿ ಹೂವುಗಳ ಅವನ ಕೊರಳಿನಲ್ಲಿ ಕಂಡುಬರುತ್ತವೆ. ಕಡು ಕಪ್ಪಾದ ವಸ್ತುಧರಿಸಿದ್ದು ಅದರ ಮೇಲೆ ಬಿಳಿ ಚುಕ್ಕೆಗಳನ್ನು ನೋಡಬಹುದು. ಸೊಂಟದಲ್ಲಿ ಸೊಂಟಪಟ್ಟಿ ಕೆಳಗಡೆಯ ವಸ್ತುವು ಕೆಂಪು ಮತ್ತು ಬಿಳಿ ವರ್ಣದಿಂದ ಕೂಡಿವೆ. ಕಾಲಲ್ಲಿ ಬಿಗಿಯಾದ ಹಸಿರು ಪ್ಯಾಂಟು. ಪಾದಗಳಲ್ಲಿ ಬಂಗಾರ ವರ್ಣದ ಪಾದರಕ್ಷೆಯನ್ನು ಚಿತ್ರಿಸಿದ್ದಾನೆ. ಎಡಭಾಗದಲ್ಲಿ ನಿಂತ ಸಂಗೀತ ಕಲಾವಿದಯನ್ನು ನೋಡಿದರೆ ಸ್ವರ್ಗದ ಅಪ್ಸರೆಯನ್ನು ನೋಡಿದಂತಾಗುತ್ತದೆ. ಆಕೆಯ ಶಿರದ ಸಂಗೀತ ಕಲಾವಿದೆಯನ್ನು ನೋಡಿದರೆ ಸ್ವರ್ಗದ ಅಪ್ಸರಯನ್ನು ನೋಡಿದಂತಾಗುತ್ತದೆ. ಆಕೆಯ ಶಿಕೆಯ ಶಿರದ ಮೆಲೆ ಬಂಗಾರವರ್ಣದ ತುರಾಯಿ ಕಿವಿಯಲ್ಲಿ ಬಂಗಾರದ ಬೆಂಡಾಲಿ ಕೊರಳಿನಲ್ಲಿ ಬಂಗಾರದ ಆಭರಣಗಳು ಎಡಗೈಯಲ್ಲಿ ಚಿಕ್ಕ ವೀಣೆಯನ್ನು ಹಿಡಿದುಮಿಟುತ್ತ ಸಂಗೀತ ಗಾಯನ ಸ್ಪರ್ಧೆಗೆ ಶೋಭೆಯನ್ನು ತಂದುಕೊಟ್ಟಿರುವ ಹಾಗೆ ಈ ಕಲಾ ಕೃತಿಯನ್ನು ತಿಳಿಯಬಹುದು.

ಗಂಧರ್ವ ಪಂದತಿಗಳು

ಚಿತ್ರಕಲಾವಿದನು ನವದಂಪತಿಗಳ ಪ್ರೇಮ ಸಲ್ಲಾಪವನ್ನು ವ್ಯಕ್ತಪಡಿಸಿದ್ದಾನೆ. ಈ ಕಲಾ ಕೃತಿಯೂ ಸಹ ಎಲ್ಲ ಕಲಾಕೃತಿಗಳ ಹಾಗೆಯ ಸಂಯೋಜನೆ ಹೊಂದಿದೆ. ಈ ಚಿತ್ರದ ಬಲಭಾಗದಲ್ಲಿ ಕಂಡುಬರುವ

ಪುರುಷನ ಶಿರದ ಮೇಲೆ ಒಂದೆ ತರಹದ ಕೆಂಪು ಬಣ್ಣದ ಟೊಪ್ಪಿಗೆ ಇದ್ದು ಬಿಲ್ಲಿನಂತಹ ಹುಬ್ಬು, ಕೋರೆಯಂತಹ ಮೀಸೆ, ಕೆಂಪಾದ ತುಟಿಗಳು ಈ ವ್ಯಕ್ತಿಯ ಚಿತ್ರಕ್ಕೆ ಶೋಭೆಯನ್ನುಂಟು ಮಾಡಿದೆ. ಹಾಗೆಯೇ ಈ ವ್ಯಕ್ತಿಗೂ ಸಹ ಕಡು ಕಪ್ಪಾದ ವಸ್ತ್ರವಿದ್ದು, ಅದರ ಮೇಲೆ ಬಿಳಿ ಚುಕ್ಕೆಗಳ ವಿನ್ಯಾಸವು ಕಂಡುಬರುತ್ತದೆ. ಕೊರಳಲ್ಲಿ ಒಂದು ಬಂಗಾರದ ಪಟ್ಟಿ, ಸೊಂಟದಲ್ಲಿ ಕೆಂಪು ವರ್ಣದ ಸೊಂಟಪಟ್ಟಿ ಕೆಂಪಾದ ಪ್ಯಾಂಟು. ಅದರ ಮಧ್ಯದಲ್ಲಿ ಬಂಗಾರ ವರ್ಣದಿಂದ ವಿನ್ಯಾಸ ಹೊಂದಿದ ಬಂಗಾರದ ಪಟ್ಟಿ ಕಪ್ಪನೆಯ ಪಾದರಕ್ಷೆಯಂತೂ ಈ ಕಲಾಕೃತಿಯನ್ನು ಬಿಂಬಿಸಿವೆ. ಪುರುಷನು ಎಡಗೈಯನ್ನು ತನ್ನ ಅರ್ಧಾಂಗಿನಿಯ ಹಿಂಬದಿಯಲ್ಲಿಟ್ಟು ಬಲಗೈಯನ್ನು ಪ್ರೀತಿಯಿಂದ ಸುಂದರಿಯ ಗದ್ದವನ್ನು ಹಿಡಿಯು ವಂತಹ ದೃಶ್ಯವು ಮನಮೋಹಕವುಳ್ಳದಾಗಿದೆ. ಎಡಗಡೆಯಿದ್ದ ಸುಂದರಿಯ ಮುಖದಲ್ಲಿ ಕಂಡುಬರುವ ಆ ಮುಗ್ಧಮುಳ್ನಗೆಯ ಕೆಂದುಟಿಯನ್ನು ನೋಡಿದರೆ ಮನೋಲ್ಲಾಸವಾಗುತ್ತದೆ. ಆ ಸುಂದರಿಯ ಶಿರದ ಮೇಲೆ ಬಂಗಾರದ ವಿನ್ಯಾಸವುಳ್ಳ ಪಟ್ಟಿ ಇದ್ದು ಕಿವಿತುಂಬ ಬಂಗಾರದ ಓಲೆಗಳನ್ನು ಹಾಕಿ ಕೊಂಡಿರು ದೃಶ್ಯವು ಸೊಗಸಾಗಿ ಮೂಡಿಬಂದಿದೆ. ಕೊರಳಿನಲ್ಲಿ ಬಂಗಾರದ ಆಭರಣ, ತಿಳಿ ಹಸಿರು ಕುಪ್ಪುಸ, ಕೆಂಪು ವರ್ಣದ ಮೇಲ್ವಸ್ತ್ರ, ಸೊಂಟದಲ್ಲಿ ಸೊಂಟಪಟ್ಟಿ, ಬೆನ್ನಹಿಂದ ಬಂಗಾರದ ವರ್ಣದ ಪಕ್ಷಿಯ ರೆಕ್ಕೆಗಳು, ಎರಡರಲ್ಲಿ ಬಂಗಾರದ ಬಳೆಗಳನ್ನು ಹಾಕಿ ಕೈಕಟ್ಟಿಕೊಂಡು ನಿಂತಿರುವ ದೃಶ್ಯವು ಸುಂದರವಾಗಿದೆ. ಈ ಚಿತ್ರದಲ್ಲಿ ಇನ್ನೊಂದು ಹಳದಿ ವರ್ಣದ ವಿನ್ಯಾಸವುಳ್ಳ ಹಾಸಿಗೆಯನ್ನು ರಚಿಸಿದ್ದಾನೆ. ಇವೆರಡು ಕಲಾಕೃತಿಯ ಹಿಂದುಗಡೆ ತಿಳಿ ನೀಲಿವರ್ಣವನ್ನು ತುಂಬಿ ಕಾಲಿನ ಕೆಳಗಡೆ ಹಳದಿ ಎಲ್ಲ ಚಿತ್ರಗಳಲ್ಲಿಯೂ ವೀಕ್ಷಿಸುವಂತೆಯೇ ಈ ಕಲಾಕೃತಿಗೂ ಸಹ ಸುತ್ತಲೂ ಬಂಗಾರ ವರ್ಣದ ವಿನ್ಯಾಸವುಳ್ಳದ್ದಾಗಿದೆ.

ಗಂಧರ್ವಕನ್ಯೆಯೊಂದಿಗೆ ರಾಣಿ

ಈ ಕಲಾಕೃತಿಯು ಎಲ್ಲ ಕಲಾಕೃತಿಗಳಿಗಿಂತ ವಿಭಿನ್ನವಾಗಿದೆ. ಈ ಕಲಾಕೃತಿಯ ಹೊಸ ರೂಪ ವೇನೆಂದರೆ ಆಕಾಶದಲ್ಲಿ ಅಪ್ಸರೆ ಮತ್ತು ಸ್ನೇಹಿತೆ ಆನಂದದಿಂದ ಪಕ್ಷಿಯಂತೆ ಆಕಾರದಲ್ಲಿ ಹಾರಾಡುವ ದೃಶ್ಯವಂತೂ ಮನಮುಟ್ಟುವಂತೆ ಕಲಾವಿದನು ರಚಿಸಿದ್ದಾನೆ. ಅಪ್ಸರೆಯ ಹಿಂಭಾಗದಲ್ಲಿ ಎರಡು ರೆಕ್ಕೆಗಳಿವೆ. ಆಕೆಯನ್ನು ಬಲಗೈಯಿಂದ ತಬ್ಬಿಕೊಂಡ ಸ್ನೇಹಿತೆಯನ್ನು ಶಿರದ ಮೇಲೆ ಕಿರೀಟ, ಉದ್ದನೆಯ ಕೇಶ, ಕೆಂಪಾದ ಕುಪ್ಪಸ, ಹಸಿರಾದ ಸ್ತ್ರೀ ಉಡುಪನ್ನು ಧರಿಸಿದ ಆಕೆ ಅಪ್ಸರೆಯ ಕಡೆಯಿಂದ ಏನನ್ನೋ ತಿಳಿದುಕೊಳ್ಳುವ ಹಂಬಲ ಆಕೆಯ ಮುಖದಲ್ಲಿ ಕಾಣಿಸುತ್ತದೆ. ಆಗ ಅಪ್ಸರೆಯನ್ನು ಸೂಕ್ಷ್ಮವಾಗಿ ಗಮನಿಸಿದಾಗ ಅಪ್ಸರೆಯ ಶಿರದ ಮೇಲೆ ದುಂಡಾಕಾರದಲ್ಲಿ ತೀಕ್ಷ್ಣವುಳ್ಳ ರೇಖೆಯು ಕಂಡು ಬರುತ್ತದೆ. ಅಪ್ಸರೆಯ ಕೊರಳಿನಲ್ಲಿ ಬಂಗಾರದ ಆಭರಣ, ತಿಳಿ ಹಸಿರಾದ ಕುಪ್ಪಸ, ಮುಂಗೈಯಲ್ಲಿ ಬಳೆಗಳು,

ಸೊಂಟದಲ್ಲಿ ಸೊಂಟಪಟ್ಟಿ, ಕೆಂಪಾದ ಸೀರೆಯನ್ನುಟ್ಟು ಕಾಲಲ್ಲಿ ಬಂಗಾರದ ಕಾಲ್ಗೆಜ್ಜೆ ತೊಟ್ಟ ಅಪ್ಸರೆಯು ತನ್ನ ಸ್ನೇಹಿತೆಯು ಕೇಳಿದ ಪ್ರಶ್ನೆಗೆ ಎಡಹಸ್ತದ ಬಂದು ಬೆರಳನ್ನು ಮುಂದೆ ಮಾಡಿ ಉತ್ತರಿಸುವ ದೃಶ್ಯವನ್ನು ಅತ್ಯಂತ ಸೊಗಸಾಗಿ ಕಲಾವಿದನು ಚಿತ್ರಿಸಿದ್ದಾರೆ. ಅಪ್ಸರೆ ಮತ್ತು ಸ್ನೇಹಿತೆಯ ಹಿಂಬದಿಯಲ್ಲಿ ತಿಳಿ ನೀಲಿವರ್ಣದ ಆಕಾಶವಿದೆ.

ಗಂಧರ್ವ ದಂಪತಿಗಳು

ಶ್ರೀ ವೀರಸಂಗಪ್ಪ ನಿವಾಸದಲ್ಲಿರುವ ಈ ಚಿತ್ರದಲ್ಲಿ ಕಂಡುಬರುವ ಜೋಡಿ ನವದಂಪತಿಗಳ ಸರಸ ಸಲ್ಲಾಪ ನೋಡುಗರ ಮನರಂಜಿಸುವಂತಿದೆ. ಪತಿಯು ಕೆಂಪುಬಣ್ಣದ ಆಸನದಲ್ಲಿ ಕುಳಿತುಕೊಂಡು ತನ್ನ ಪತಿಯನ್ನು ಪ್ರೀತಿಯಿಂದ ತಬ್ಬಿಕೊಂಡ ದೃಶ್ಯ ಕಂಡುಬರುತ್ತದೆ. ಈ ದೃಶ್ಯದಲ್ಲಿ ಪತಿಯ ಶಿರದ ಮೇಲೆ ಕೆಂಪಾದ ಪೆಟ್ಟಿಗೆ ಇದ್ದು ಮೇಲುಗಡೆ ಬಂಗಾರ ವರ್ಣದ ತುರಾಯಿ ಕಂಡು ಬರುತ್ತದೆ. ಮತ್ತು ಅವನ ಬಿಲ್ಲಿನಂತಹ ಹುಬ್ಬು, ಕೋರೆಯಂತಹ ಮೀಸೆ, ಮುಗುಳ್ನಗೆಯನ್ನು ಹೊಂದಿದ ತುಟಿ ಮನಸ್ಸನ್ನು ಬೆರಗುಗೊಳಿಸುತ್ತದೆ. ಅವನು ಧರಿಸಿದ ಕಪ್ಪುಕೋಟು, ಕಪ್ಪು, ಪ್ಯಾಂಟು, ಕಾಲಿನಲ್ಲಿ ಕೆಂಪಾದ ಪಾದರಕ್ಷೆ ಇವುಗಳು ಆ ಸುಂದರಿಯ ಪತಿಗೆ ಶೋಭೆಯನ್ನು ತಂದುಕೊಟ್ಟಿವೆ. ಸುಂದರಿಯು ತನ್ನ ಪತಿಯ ಪ್ರೀತಿ ಹೆಚ್ಚಾಗಿದ್ದು ಕಂಡು ಮರಳಿ ತನ್ನ ಪ್ರೀತಿಯನ್ನು ವ್ಯಕ್ತಪಡಿಸುವ ದೃಶ್ಯ ಕಂಡು ಬರುತ್ತದೆ. ಪತಿಯು ತನ್ನ ಸುಂದರ ಪತ್ನಿಯನ್ನು ಎಡಭುಜವನ್ನು ಹಿಡಿದಿರುವ ದೃಶ್ಯ ಮನಸೆಳೆಯುವಂತೆ ಕಲಾವಿದನು ರಚಿಸಿದ್ದಾನೆ. ಸುಂದರಿಯಲ್ಲಿ ಇನ್ನೊಂದು ಹೊಸತನ ಕಾಣುವುದೇನೆಂದರೆ ಆಕೆಯ ಬೆನ್ನು ಹಿಂದೆ ಪಕ್ಷಿಯ ರೆಕ್ಕೆಇರುವುದು ಇದು ಕಲಾವಿದನ ಭಾವನೆಯಲ್ಲಿ ಹೆಣ್ಣು ಒಂದು ಮೃದು ಪಕ್ಷಿಯ ಭಾವನೆಯದ್ದಾಗಿದೆ. ಎಂದು ತಿಳಿಯಬಹುದು. ಸುಂದರಿಯ ಶಿರದ ಮೇಲೆ ಬಂಗಾರದ ಟೋಪ್ಪಿಗೆ ಇದ್ದು ಕಿವಿಯಲ್ಲಿ ದುಂಡನೆಯ ಓಲೆ, ಹೊಳಪುಳ್ಳ ಕಣ್ಣು ಮುಗುಳ್ನಗೆ ಹೊಂದಿದ ಕೆಂದುಟಿಯನ್ನು ಕಾಣಬಹುದು. ಕೊರಳಿನಲ್ಲಿ ಬಿಳಿ ಬಣ್ಣದ ಸರಗಳು, ತಿಳಿ ಹಸಿರು ಕುಪ್ಪುಸ ಕೆಂಪು ಮತ್ತು ಹಳದಿ ಬಣ್ಣ ಮಿಶ್ರಿತ ಸೀರೆ, ಕೈಯಲ್ಲಿ ಬಂಗಾರದ ಬಳೆಗಳು ಕಾಲಲ್ಲಿ ಹಸಿರು ಬಣ್ಣದ ಪಾದರಕ್ಷೆಗಳನ್ನು ರಚಿಸಿದ್ದಾನೆ.

ರಾಜನೊಂದಿಗೆ ಗಂಧರ್ವ ಕನ್ಯೆ

ಈ ಚಿತ್ರದಲ್ಲಿ ಮೂಡಿಬಂದ ಚಿತ್ರ ರಾಜನ ಶಿರದ ಮೇಲೆ ಕೆಂಪು ವರ್ಣದ ಮರಾಠಾ ಟೊಪ್ಪಿಗೆ, ಅದರಲ್ಲಿ ಶ್ವೇತ ವರ್ಣದ ತುರಾಯಿ, ಕಪ್ಪು ಬಟ್ಟೆಯನ್ನು ಧರಿಸಿ ಅದರಲ್ಲಿಯೇ ಬಿಳಿ ಚುಕ್ಕೆಗಳ ವಿನ್ಯಾಸ ಕಂಡುಬರುತ್ತದೆ. ರಾಜನ ಮುಖವನ್ನು ವೀಕ್ಷಿಸಿದರೆ ಗಾಢವಾದ ವಿಚಾರದಲ್ಲಿ ಕುಳಿತಿರುವನೋ

ಎಂದೆನಿಸುತ್ತದೆ. ರಾಜನ ಕೊರಳಿನಲ್ಲಿ ಚೌಕಾಕಾರ ವಿನ್ಯಾಸವುಳ್ಳ ಸರದಪಟ್ಟಿಯಿದ್ದು, ಕೆಂಪು ವರ್ಣದ ಪ್ಯಾಂಟುನ್ನು ಹಾಕಿಕೊಂಡು ಎಡಗಾಲಿನ ಮೇಲೆ ಬಲಗಾಲನ್ನು ಹಾಕಿಕೊಂಡು ತನ್ನ ವಿಚಾರವನ್ನು ಮುಂದುವರೆಸುವ ದೃಶ್ಯವಂತೂ ಕಣ್ಣುಕಟ್ಟಿ ಹಾಕುವಂತೆ ಮೂಡಿ ಬಂದಿದೆ. ಹಾಗೆಯೆ ಎಡಬದಿಯಲ್ಲಿದ್ದ ಗಂಧರ್ವಕನ್ನೆಯನ್ನು ವೀಕ್ಷಿಸಿದರೆ ಆಕೆಯ ಶಿರದ ಮೇಲೆಯೂ ಕೂಡ ಮರಾಠಾ ಟೊಪ್ಪಿಗೆ ಇದ್ದು, ಕೊರಳಲ್ಲಿ ಚೌಕಾಕಾರದ ಬಿಳಿಯ ಸರ, ಹಳದಿ ನೀಲಿ ವರ್ಣದ ಹೂವು ಮಾಲೆಯಿದ್ದು ಕೆಂಪು ವಸ್ತ್ರದ ತುಂಬೆಲ್ಲಾ ಚುಕ್ಕೆಗಳ ವಿನ್ಯಾಸ, ಕನ್ನೆಯ ಹಿಂದೆ ಎರಡು ಸ್ವರ್ಣವರ್ಣದ ರೆಕ್ಕೆಗಳಿವೆ. ಹಸಿರು ಪ್ಯಾಂಟು ಈ ಸಂದರ್ಭವನ್ನು ನೋಡಿದರೆ ಜನ ಚಿಂತೆಯಲ್ಲಿ ಭಾಗಿಯಾಗಲು ಬಂದಂತೆನಿಸುತ್ತದೆ. ಈ ಕಲಾಕೃತಿಯನ್ನು ಚಿತ್ರಕ್ಕೆ ತಕ್ಕಂತೆಯೇ ಸಂಯೋಜನೆ ಮಾಡಿ ಕಲಾಕೃತಿಯ ಹಿನ್ನೆಲೆಯಲ್ಲಿ ಕಪ್ಪು ಹಸಿರು ವರ್ಣವನ್ನು ತುಂಬಿ, ಕಲಾವಿದನು ಕಲಾಕೃತಿಯನ್ನು ಯಶಸ್ವಿಗೊಳಿಸಿದ್ದಾನೆ.

ರಾಜನೊಂದಿಗೆ ಗಂಧರ್ವ ಕನ್ನೆ

ಚಿತ್ರದಲ್ಲಿ ಕಂಡು ಬರುವ ಜೋಡಿ ದಂಪತಿಗಳು, ಸರಸ ಸಲ್ಲಾಪವಾಡಲು ಗೌಪ್ಯ ಸ್ಥಳಕ್ಕೆ ಹೊರಡುತ್ತಿದ್ದಾರೇನೋ ಎಂಬಂತೆ ಗೋಚರಿಸುತ್ತದೆ. ಮುಂಭಾಗದಲ್ಲಿರುವ ಪತಿಯು ಶಿರದ ಮೇಲೆ ಕೆಂಪು ವರ್ಣದ ಟೊಪ್ಪಿಗೆ, ಕೊರಳಲ್ಲಿ ಸ್ವರ್ಣವರ್ಣದ ಸರಗಳು, ಸೊಂಟಕ್ಕೆ ಸೊಂಟಪಟ್ಟಿ, ಕೆಂಪು ವರ್ಣದ ಪ್ಯಾಂಟ್‌ನ್ನು, ಕಪ್ಪು ಕೋಟನ್ನು ಧರಿಸಿ ತನ್ನ ಎರಡು ಹಸ್ತವನ್ನು ಸೊಂಟದ ಮೇಲಿಟ್ಟು ಗಾಂಭೀರ್ಯದಿಂದ ಸಾಗುತ್ತಿರುವ ದೃಶ್ಯವು ಸೊಗಸಾಗಿ ಮೂಡಿಬಂದಿದೆ. ಪತಿಯ ಹಿನ್ನೆಲೆಯಲ್ಲಿ ಸೀತೆಯ ಹಾಗೆ ಹೊರಡುತ್ತಿರುವ ಈ ಗಂಧರ್ವ ಕನ್ನೆಯನ್ನು ನೋಡಿದರೆ ಆಕೆಯ ಶಿರದ ಮೇಲೆ ಕೆಂಪು ಬಣ್ಣದ, ಕಿವಿಯಲ್ಲಿ ಓಲೆಗಳು ಕೆಂದುಟಿಯಿಂದ ಮೂಡಿ ಬಂದ ಮುಗಳ್ನಗೆ ಕೊರಳಲ್ಲಿ ವಿನ್ಯಾಸವುಳ್ಳ ಬಿಳಿದಾದ ದೊಡ್ಡ ಗಾತ್ರದ ಮಾಲೆ, ಕೆಂಪು ವಸ್ತ್ರ ಅದರಲ್ಲಿಯೇ ಬಂಗಾರ ವರ್ಣದಿಂದ ಮೂಡಿ ಬಂದ ಚುಕ್ಕೆಗಳು ಸುಂದರವಾಗಿ ಮೂಡಿಬಂದಿವೆ.

೧. ಸಾಮಾಜಿಕ ಚಿತ್ರಗಳು. ೨. ಸ್ತ್ರೀ ಚಿತ್ರಗಳು ೩. ಸಂಗೀತ ಧರಿತ್ರಿ

ಚಿತ್ರ ಕೃತಿಯನ್ನು ಕಲಾವಿದನು ಶ್ವೇತವರ್ಣದಿಂದ ರಚಿಸಿದ್ದಾನೆ. ಈ ಚಿತ್ರಕಲಾಕೃತಿಯಲ್ಲಿ ವಸ್ತ್ರಾಭರಣಗಳಿಂದ ಅಲಂಕೃತ ಗೊಂಡಿಲ್ಲ. ಇಲ್ಲಿ ದಟ್ಟ ವರ್ಣದ ದಡಿ ಇದೆ. ಕಂಠಾಭರಣ, ಕಿವಿ ಕೈಗಳಲ್ಲಿ ಆಭರಣಗಳು ತಕ್ಕಮಟ್ಟಿಗೆ ಇವೆ. ಇವಳ ಬಲಗೈ ಬೆರಳಿನಿಂದ ವೀಣೆಯ ಕಿವಿಯನ್ನು ಹದಗೊಳಿಸುತ್ತಿದ್ದಾಳೆ. ಸಂಗೀತದ ಮೀಟುತ್ತ ಎಡಗೈಯಿಯ ಬೆರಳಿನಿಂದ ವೀಣೆಯ ಕಿವಿಯನ್ನು ಹದ ಗೊಳಿಸುತ್ತಿದ್ದಾಳೆ. ಸಂಗೀತದ ಸಾಧನೆಗೊಳಗಾಗಿ ತನ್ನ ತುಂಬು ಸ್ತನಗಳ ಅರಿವೇ ಇಲ್ಲದ ಹಾಗೆ

ಸಂಗೀತದಲ್ಲಿ ಮಗ್ನಳಾಗಿದ್ದಾಳೆ. ಈ ಕಲಾಕೃತಿಯ ಸುತ್ತಲೂ ಸುಂದರಿಯ ಕೂದಲು ಬಣ್ಣಕಾಣದ ಹಾಗೆ ಹಿನ್ನೆಲೆಯಲ್ಲಿ ಕಡು ನೀಲಿ ಬಣ್ಣವನ್ನು ತುಂಬಲಾಗಿದೆ. ಮೇಲ್ಗಡೆ ಕೇಸರಿಯ ಅರ್ಧವೃತ್ತದ ಪರದೆ, ಇದೆ. ಸುಂದರಿಯ ಎಡಭುಜದ ಹಿಂದೆ ಅರ್ಧವೃತ್ತಾಕಾರದ ಕೆಂಪನೆಯ ವಸ್ತು ಕಂಡುಬಂದಿದೆ. ಸುಂದರಿಯು ನುಡಿಸುವ ವೀಣೆಯಂತೂ ಸೊಗಸಾಗಿದೆ. ಕಲಾವಿದನ ಮನಸ್ಸಿನಲ್ಲಿ ಮೂಡಿಬಂದ ಕಲಾಕೃತಿಯನ್ನು ತನ್ನ ಕುಂಚದಿಂದ ರಚಿಸಿ ನೋಡುಗರ ಮನಸ್ಸನ್ನು ಮಂತ್ರಮುಗ್ಧಗೊಳಿಸಿದ್ದಾನೆ. ಸಂಗೀತವಾಣಿಯ ಹಿನ್ನೆಲೆಯಲ್ಲಿ ಅರ್ಧವೃತ್ತಾಕಾರದ ಪರದೆಯಲ್ಲಿ ಕೇಸರಿ, ದಟ್ಟ ಹಸಿರು ನಕ್ಷೆಯ ಮೂಡಿ ಬಂದಿದೆ.

ಮಹಾರಾಣಿ

ಈ ಕಲಾಕೃತಿಯಲ್ಲಿ ಹಿಂದಿನ ಪುಟದಲ್ಲಿರುವ ಕಲಾಕೃತಿಗಳಿಗಿಂತಲೂ ಹೆಚ್ಚಾಗಿ ವಿಶೇಷವಾಗಿದೆ. ಎಂದು ಹೇಳಬಹುದು. ಈ ಭವ್ಯವಾದ ಕಲಾಕೃತಿಯನ್ನು ನೋಡಿದಾಗ ಈ ಅಪ್ಸರೆಯ ವೇಷ ಭೂಷಗಳು ಸುಂದರಿಗೆ ಒಪ್ಪುವ ಹಾಗೆ ಕಲಾವಿದನು ಚಿತ್ರಿಸಿದ್ದಾನೆ. ಹಣೆಯ ಮೇಲೆ ಕಂಡು ಬರುವ ದುಂಡನೆಯ ಕೆಂಪು ಸಿಂಧೂರ, ಕೆಳಗಡೆ, ಕಪ್ಪು ಚುಕ್ಕೆ ಕಿವಿಯಲ್ಲಿ ಆಭರಣಗಳು ಅಪ್ಸರೆಯು ಹುಬ್ಬೇರಿಸುತ್ತ ತನ್ನ ಚೆಲುವುತನದ ಬಗ್ಗೆ ಮುಗುಳ್ನಗೆ ಸೂಚಿಸುತ್ತದೆ. ಹೇಳುವ ದೃಶ್ಯವಂತೂ ಮನಬೆರಗಾಗುವಂತೆ ಕಂಡುಬರುತ್ತದೆ. ಅಪ್ಸರೆಯ ಕೊರಳಲ್ಲಿ ಬಂಗಾರದ ಆಭರಣವಿದ್ದು ಎರಡು ಕೈಯಲ್ಲಿ ಹಚ್ಚು ಹಸಿರಿನ ಬಳೆಗಳು ವಿಶೇಷವೆನಿಸಿದೆ. ಅಪ್ಸರೆಯು ಧರಿಸಿದ ಉಡುಪು ಬಂಗಾರದ ಬಣ್ಣದ್ದಾಗಿದೆ. ಅದರಲ್ಲಿ ಕೆಂಪು ಚುಕ್ಕೆಗಳು ಕಂಡುಬರುತ್ತದೆ. ಮೆತ್ತನೆಯ ಹಚ್ಚು ಹಸಿರಾದ ಕುರ್ಚಿಯ ಮೇಲೆ ಬಲಗಾಲನ್ನು ಎಡಗಾಲಿನ ಮೇಲೆ ಹಾಕಿ ಆಸೀನನಾಗಿದ್ದಾಳೆ. ಆಕೆಯ ಸೌಂದರ್ಯದ ಸಂದರ್ಶನವನ್ನು ತಿಳಿದುಕೊಳ್ಳುವ ಹಾಗೆ ಕಲಾವಿದನು ಚಿತ್ರಿಸುವದರಲ್ಲಿ ಯಶಸ್ವಿಯಾಗಿದ್ದಾನೆ. ಗಿಳಿಯ ಆಕೆಯ ಹೆಮ್ಮೆಯಿಂದ ಅದಕ್ಕಾಗಿ ಹಳದಿ ವರ್ಣದ ಒಂದು ಹಣ್ಣನ್ನು ಎಡಗೈಯಿಂದ ಅದಕ್ಕಾಗಿ ಹಳದಿ ವರ್ಣದ ಒಂದು ಹಣ್ಣನ್ನು ಎಡಗೈಯಿಂದ ಕೊಡುತ್ತಿರುವ ದೃಶ್ಯ ಅದ್ಭುತವೆನಿಸುತ್ತದೆ. ಹಿನ್ನೆಲೆಗೆ ಕಪ್ಪು ನೀಲಿ ಬಣ್ಣ ಬಳಸಿ ಆಕಾಶದ ಪರಿಣಾಮವನ್ನು ದಟ್ಟ ಕಪ್ಪು ಬಳಸಿ ಮನೆಯೊಳಗಡೆ ಎಂಬ ಭಾವನೆಯನ್ನು ವ್ಯಕ್ತಪಡಿಸಿದದಾರೆ. ಈ ಹಿನ್ನೆಲೆಯಲ್ಲಿ ಬಟ್ಟೆಗಳು, ಸಿಂಹಾಸನ, ಸಂಯೋಜನೆಗೆ ಸಹಕಾರಿಯಾಗಿದೆ.

ರಾಜಕುವರಿ

ಈ ಕಲಾಕೃತಿಯಲ್ಲಿ ಕಂಡುಬರುವ ಸನ್ನಿವೇಶವೇನೆಂದರೆ ಒಬ್ಬ ಸುಂದರಿಯು ತನ್ನ ಚೆಲುವುತನಕ್ಕೆ ಬೇಕಾದ, ಅಂದರೆ ಮುಕುಟಾಭರಣ, ಕಿವಿಯಲ್ಲಿ ಆಭರಣಗಳು, ಮೂಗಿನ ಮಧ್ಯದಲ್ಲಿ ನೇತಾಡುವ

ಮೂಗುತಿ, ಬಿಲ್ಲಿನಂತಹ ಹುಬ್ಬು, ಹಣೆಯ ಮೇಲೆ ಕೆಂಪು ಚುಕ್ಕಿ, ಕೊರಳಿನಲ್ಲಿ ಆಭರಣಗಳು, ಮುಂಗೈಯಲ್ಲಿ ಬಂಗಾರದ ಬಳೆಗಳು, ಲಂಗ, ರವಿಕೆ, ಮೇಲ್ವಸ್ತ್ರ, ಬಂಗಾರದ ವರ್ಣ ಹೊಂದಿದ್ದು ಅದರ ಮೇಲೆ ಹೂವಿನ ಚುಕ್ಕಿಗಳಿದ್ದು ಕಾಲಿನಲ್ಲಿ ಬಂಗಾರದ ಕಾಲ್ಗೆಜ್ಜೆ ಸುಂದರಿ ತನ್ನ ಮೈಬಣ್ಣಕ್ಕೆ ತಕ್ಕಂತೆ ಶೃಂಗರಿಸಿಕೊಂಡಿದ್ದಾಳೆ. ಈ ಚೆಲುವೆಯು ನಿಂತ ಶೈಲಿಯನ್ನು ನೋಡಿದರೆ ಮೆತ್ತನೆಯ ಹಾಸಿಗೆಯ ಮೇಲೆ ನಿಂತು ತನ್ನ ಸೌಂದರ್ಯವನ್ನು ಕನ್ನಡಿಯ ಮೂಲಕ ನೋಡಿಕೊಂಡು ಅಲಂಕಾರವನ್ನು ಹೆಮ್ಮೆ ಪಡುವಂತೆ ಈ ಚಿತ್ರ ಗೋಚರಿಸುತ್ತದೆ. ಸುಂದರಿಯು ತನ್ನ ಬಲಗೈಯನ್ನು ಚಿಕ್ಕ ಗಾತ್ರದ ದೀಪದ ಕಂಬದ ಮೇಲಿಟ್ಟುಕೊಂಡು ಎಡಗೈಯನ್ನು ಸೊಂಟಕ್ಕೆ ಹಚ್ಚಿಕೊಂಡು ಮುಗುಳ್ನಗೆ ಬೀರುವುದು ಈ ಚಿತ್ರದ ವಿಶೇಷತೆಯಾಗಿದೆ. ಈ ಸುಂದರಿ ಹಿನ್ನೆಲೆಯಲ್ಲಿ ಮಂಟಕ್ಕೆ ಕೆಂಪು ಬಣ್ಣದ ಪರದೆಗಳನ್ನು ಹಾಕಿ ಹಿಂದುಗಡೆ ತಿಳಿ ನೀಲಿ ಬಣ್ಣದಿಂದ ರೂಪಿಸಲಾಗಿದೆ.

ರಾಜಕುವರಿ

ಚಿತ್ರದಲ್ಲಿ ಅಪ್ಸರೆಯು ತನ್ನ ಸುಂದರವಾದ ಮೈಕಟ್ಟು ಮತ್ತು ಆಕೆಯ ಸುಂದರ ರೂಪವನ್ನು ಧರಿಸಿದ ವಸ್ತ್ರಾಭರಣಗಳನ್ನು ವೀಕ್ಷಕರಿಗೆ ತೋರಿಸುವಂತೆ ಕಾಣುತ್ತದೆ. ಈ ಕಲಾಕೃತಿಯನ್ನು ಕಲಾವಿದನು ಈ ಚಿತ್ರದಲ್ಲಿ ಮೈಬಣ್ಣವನ್ನು ಶ್ವೇತ ವರ್ಣದಿಂದ ತುಂಬಿದ್ದಾನೆ. ಅಪ್ಸರೆಯ ಕೇಶವು ಕಪ್ಪಾಗಿದ್ದು, ಕಿವಿಯಲ್ಲಿ ಓಲೆಗಳು, ಸಂತೋಷದಿಂದ ತುಂಬಿದ ಕಣ್ಣುಗಳು, ಮುಗುಳ್ನಗೆಯ ಕೆಂದುಟಿ, ಕೊರಳಲ್ಲಿ ಸ್ವರ್ಣ ವರ್ಣದಿಂದ ಆಭರಣಗಳು ಹಸಿರು ಕುಪ್ಪಸ, ಕೆಂಪಾದ ತನ್ನ ಸೊಂಟಕ್ಕಿಟ್ಟುಕೊಂಡು ತನ್ನ ಚೆಲುವುತನವನ್ನು ಪ್ರತಿಬಿಂಬಿಸುತ್ತಿದ್ದಾಳೆ. ಕಲಾವಿದನು ಈ ಕಲಾಕೃತಿಯ ಹಿನ್ನಲೆಯ ಪರಿಸರವನ್ನು ತಿಳಿ ನೀಲಿ ವರ್ಣದಿಂದ ಚಿತ್ರಿಸಿದ್ದಾನೆ.

ನಾಟ್ಯರಾಣಿ

ಈ ಚಿತ್ರದಲ್ಲಿ ನಾಟ್ಯ ಸುಂದರಿಯು ನಾಟ್ಯವಾಡಿ ಬೇಸತ್ತು ನಾಟ್ಯವಾಡುವ ಶೈಲಿಯಲ್ಲಿ ನಿಂತದ್ದಂತೂ ಕಣ್ಣಿಗೆ ಹಬ್ಬವನ್ನುಂಟು ಮಾಡುತ್ತದೆ. ನಾಟ್ಯ ಸುಂದರಿಯ ವಸ್ತ್ರವನ್ನು ಒಂದೇ ವರ್ಣದಿಂದ ಚಿತ್ರಿಸಿ ಅವುಗಳನ್ನು ಶ್ವೇತ ವರ್ಣದ ವಿನ್ಯಾಸಗಳನ್ನು ತುಂಬಿ ನಾಟ್ಯ ಸುಂದರಿಯ ಮೈಬಣ್ಣವನ್ನು ಶ್ವೇತ ವರ್ಣದಿಂದ ರಚಿಸಿ ಕಲಾಕೃತಿಯನ್ನು ಬಿಂಬಿಸಿದ್ದಾನೆ. ಈ ಕಲಾಕೃತಿಗೂ ಸಹ ಅರ್ಧವೃತ್ತಾಕಾರದ ಬಿಳಿಪರದೆ ಸುತ್ತಲೂ ಚಿಕ್ಕ ಚಿಕ್ಕ ಅಡ್ಡವಾದ ರೇಖೆಯು ನಾಟ್ಯ ಸುಂದರಿಯ ಹಿನ್ನಲೆಯ ಪರಿಸರವನ್ನು ಕಪ್ಪಾಗಿ ಚಿತ್ರಿಸಿ, ಅದರ ಮುಂಭಾಗದಲ್ಲಿ ಹೂದಾಯನ್ನಿಟ್ಟಿದ್ದು ಈ ಕಲಾಕೃತಿಗೆ ಶೋಭೆಯನ್ನುಂಟು ಮಾಡುತ್ತದೆ.

ಮಹಾರಾಣಿ

ಈ ಕಲಾಕೃತಿಯನ್ನು ನೋಡಿದರೆ ಚಿತ್ರ ನಾಲ್ಕರಲ್ಲಿ ನಿಂತ ಅಪ್ಸರೆಯ ಹಾಗೆ ಗೋಚರಿಸುತ್ತದೆ. ಇವೆರಡು ಕಲಾಕೃತಿಗಳನ್ನು ಹೋಲಿಸಿದಾಗ ಇವರಿಬ್ಬರೂ ಸಹೋದರಿಯರಿರಬೇಕು ಎಂಬಂತೆ ಗೋಚರಿಸುತ್ತದೆ. ಈ ಚಿತ್ರದಲ್ಲಿರುವ ಸುಂದರಿಯೂ ಸಹ ಅವಳು ನಿಂತ ಶೈಲಿಯಲ್ಲಿಯೇ ನಿಂತಿದ್ದಾಳೆ ಸುಂದರಿಯು ಅಲಂಕಾರಗೊಂಡು ತನ್ನ ಚೆಲುವುತನವನ್ನು ವೀಕ್ಷಕರಿಗೆ ತೋರಿಸುವಂತೆ ಬಿಂಬಿಸುತ್ತದೆ. ಈ ಸುಂದರಿಯ ಮುಖವನ್ನು ನೋಡಿದರೆ ಅಬ್ಬರದಿಂದ ಅಲಂಕೃತಕೊಂಡು ನಿಂತಿದ್ದಾಳೆಂದೆನಿಸುತ್ತದೆ. ಧರಿಸಿದ ಮೇಲ್ವಸ್ತ್ರ ಕೆಂಪಾಗಿದ್ದು, ಕುಪ್ಪಸವು ಶ್ವೇತವರ್ಣದ್ದಾಗಿದೆ. ಇವಳೂ ಸಹ ತನ್ನ ಎಡ ಹಸ್ತವನ್ನು ಸೊಂಟದ ಮೇಲಿಟ್ಟು, ಬಲ ಮೊಣಕೈಯನ್ನು ಕುರ್ಚಿಯ ಮೇಲಿಟ್ಟು ತನ್ನ ಚೆಲುವುತನವನ್ನು ಪ್ರತಿಬಿಂಬಿಸುವ ದೃಶ್ಯವಂತೂ ಮನಸೆಳೆಯುವಂತಿದೆ.

ಮಹಾರಾಣಿ

ಚಿತ್ರದಲ್ಲಿ ಕಂಡುಬರುವ ದೃಶ್ಯ ಅಪ್ಸರೆಯ ಮೈಬಣ್ಣವು ಶ್ವೇತವರ್ಣದ್ದಾಗಿದೆ. ಅಪ್ಸರೆಯ ಕೇಶದಲ್ಲಿ ಎರಡು ಪುಷ್ಪಗಳು ಕಂಡುಬರುತ್ತದೆ. ಮೈತುಂಬಾ ಧರಿಸಿದ ಸೀರೆಯು ಬಂಗಾರದ ವರ್ಣದ್ದಾಗಿದೆ. ಅದರಲ್ಲಿ ನೇರವಾದ ರೇಖೆಗಳ ವಿನ್ಯಾಸಗಳಿವೆ. ಕೊರಳಿನಲ್ಲಿ ಸ್ವರ್ಣದ ಸರವಿದ್ದು ಸೊಂಟಕ್ಕೆ ಸೊಂಟಪಟ್ಟಿಯನ್ನು ಕಟ್ಟಿಕೊಂಡು ಕುಳಿತು ತನ್ನ ಬಲಗೈ ಹಸ್ತವನ್ನು ಮುಂದೆ ಮಾಡಿ ಪಾರಿವಾಳನ್ನು ಅದರಲ್ಲಿ ಕೂರಿಸಿಕೊಂಡು ತನ್ನ ಪ್ರೇಮ ಸಂದೇಶವನ್ನು ತಿಳಿದುಕೊಳ್ಳಬೇಕೆಂದು ಹಂಬಲಿಸುವಂತಿದೆ. ಹಿನ್ನೆಲೆ ಪರಿಸರವನ್ನು ಆಕಾಶ ನೀಲಿಬಣ್ಣದಿಂದ ಚಿತ್ರಿಸಿ ಹಿನ್ನಲೆ ಕೆಂಪು ಬಣ್ಣದ ಅರ್ಧವೃತ್ತಾಕಾರದ ಪರದೆಯನ್ನು ರಚಿಸಿದ್ದಾರೆ.

ಹಂಸ ರಾಣಿ

ಚಿತ್ರದಲ್ಲಿ ಕಂಡುಬರುವ ಕಲಾಕೃತಿಯಲ್ಲಿ ಒಬ್ಬ ಗೃಹಿಣಿ ಎಂದೆನಿಸುತ್ತದೆ. ಕಲಾವಿದನು ಇದನ್ನು ಸಹ ಕಲಾಕೃತಿಯ ಹಾಗೆಯೇ ವಸ್ತ್ರವನ್ನು ಅಲಂಕರಿಸಿದ್ದಾನೆ. ಗೃಹಿಣಿಯ ಆ ಬಟ್ಟಲು ಕಣ್ಣುಗಳು ಮುದ್ದಾದ ಮುಗುಳ್ನಗೆ, ಕೊರಳಿನಲ್ಲಿ ಕಪ್ಪು ವರ್ಣದ ಸರವು ಈ ಕಲಾಕೃತಿಯನ್ನು ಬೆಂಬಲಿಸುತ್ತದೆ. ತನ್ನ ಎರಡೂ ಹಸ್ತಗಳಿಂದ ಹಂಸವನ್ನು ಹಿಡಿದು ಅದರ ಸೌಂದರ್ಯದ ಬಗ್ಗೆ ವರ್ಣಿಸುತ್ತಾರೆ. ಕುಳಿತಿರುವ ಚಿತ್ರವು ಅತ್ಯಂತ ಸುಂದರವಾಗಿ ಮೂಡಿಬಂದಿದೆ. ಹಿನ್ನೆಲೆಯ ಪರಿಸರವನ್ನು ಆಕಾಶ ವರ್ಣದಿಂದ ಚಿತ್ರಿಸಿದ್ದಾನೆ.

ಉಯ್ಯಾಲೆ ರಾಣಿ

ಈ ಕಲಾಕೃತಿಯಲ್ಲಿ ಉಯ್ಯಾಲೆಯಲ್ಲಿ ಕುಳಿತಿರುವ ರಾಣಿಯ ಚಿತ್ರವನ್ನು ಕಾಣಬಹುದು. ಈ ಕಲಾಕೃತಿಯಲ್ಲಿ ಒಬ್ಬ ಸುಂದರಿಯ ತಲೆಯ ಮೇಲೆ ದುಂಡಾದ ಟೊಪ್ಪಿಗೆ ಇದ್ದು ಕಿವಿಯಲ್ಲಿ ಬಂಗಾರದ ಓಲೆಗಳು, ಹೊಳಪುಳ್ಳ ಕಣ್ಣುಗಳು, ಕೆಂದುಟಿಯಲ್ಲಿ ಅರಳಿದ ಮುಗುಳ್ನಗೆಯನ್ನು ಕಲಾವಿದನು ತುಂಬಾ ಸೊಗಸಾಗಿ ಚಿತ್ರಿಸಿದ್ದಾನೆ. ಕೊರಳಿನಲ್ಲಿ ಬಂಗಾರದ ಮುತ್ತುಗಳು, ಸೊಂಟದಲ್ಲಿ ಸೊಂಟಪಟ್ಟಿ ಮುಂಗೈಯಲ್ಲಿ ಬಂಗಾರದ ಬಳೆಗಳು ಮೈತುಂಬಾ ಕೇಸರಿ ವರ್ಣದಿಂದ ಕೂಡಿದ ಸೀರೆಯನ್ನು ಧರಿಸಿ ಎರಡು ಕಾಲುಗಳಲ್ಲಿ ಬಂಗಾರದ ಕಾಲ್ಗೆಜ್ಜೆಯನ್ನು ಹಾಕಿಕೊಂಡು ಮುಂಗಾಲುಗಳು ಹೆಬ್ಬರಳುಗಳಲ್ಲಿ ಕಾಲುಂಗುರವನ್ನು ಹಾಕಿಕೊಂಡು ಅಬ್ಬರದಿಂದ ಉಯ್ಯಾಲೆ ಆಡುತ್ತಿರುವುದು. ಈ ಕಲಾಕೃತಿಯ ಹಿಂಬದಿಯಲ್ಲಿ ಅರ್ಧ ವೃತ್ತಾಕಾರದ ಪರದೆಗಳಿದ್ದು, ಅದರ ಹಿಂದೆ ಪ್ರೇಮದ ಸಂದೇಶವನ್ನು ತಿಳಿಸಲು ಆತುರದಿಂದ ಹೋಗುತ್ತಿರುವ ಶ್ವೇತ ವರ್ಣದ ಪಾರಿವಾಳವನ್ನು ವೀಕ್ಷಿಸಬಹುದು. ಪಕ್ಷಿಯ ಹಿನ್ನಲೆಯ ಆಕಾಶವನ್ನು ತಿಳಿ ನೀಲಿ ವರ್ಣದಿಂದ ಕಲಾಕೃತಿಯನ್ನು ಕಲಾವಿದನು ರಚಿಸಿದ್ದಾನೆ.

ಹಂಸದೊಂದಿಗೆ ಮಾತು

ಚಿತ್ರದಲ್ಲಿನ ಈ ಗೃಹಿಣಿಯ ಬಲಹಸ್ತದಲ್ಲಿಯೂ ಸಹ ಹಂಸವೊಂದು ಮಾತನಾಡುತ್ತಿರುವಂತಾಗಿದೆ. ಈ ಗೃಹಿಣಿಯ ಬಲಹಸ್ತದಲ್ಲಿಯೂ ಸಹ ಹಂಸವೊಂದು ಮಾತನಾಡುತ್ತಿರುವಂತಾಗಿದೆ. ಗೃಹಿಣಿಯ ಹಿನ್ನಲೆಯ ಪರಿಸರವನ್ನು ಕಪ್ಪು ನೀಲಿವರ್ಣದಿಂದ, ಅರ್ಧ ವೃತ್ತಾಕಾರ ಕೆಂಪು ಪರದೆಗಳನ್ನು ರಚಿಸಿ ಕಲಾಕೃತಿಯನ್ನು ಸುಂದರವಾಗಿ ಚಿತ್ರಿಸಿದ್ದಾನೆ.

ವೀಣೆ ನುಡಿಸುತ್ತಿರುವ ರಾಣಿ

ಈ ಕಲಾಕೃತಿಯನ್ನು ನೋಡಿದರೆ ಸಂಗೀತ ಪ್ರಿಯಳಾದ ವೀಣೆಯನ್ನು ನುಡಿಸುತ್ತ ಮೈಮರೆತು ಕುಳಿತಿರುವ ಹಾಗೆ ಕಂಡು ಬರುತ್ತದೆ. ಸಂಗೀತ ಸ್ತ್ರೀಯು ಆಸೀನವಾದ ಶೈಲಿಯಂತೂ ಸೊಗಸಾಗಿ ಮೂಡಿಬಂದಿದೆ. ಸಂಗೀತ ಪ್ರಿಯಳದ ಶಿರದಲ್ಲಿ ಹೂವಿನ ವಿನ್ಯಾಸವಿದೆ. ಕೊರಳಲ್ಲಿ ಸ್ವರ್ಣ ವರ್ಣದ ಸರಗಳು, ಕಪ್ಪಾದ ಕುಪ್ಪಸ, ಮೈ ತುಂಬಾ ಕೆಂಪು ಸೀರೆಯನ್ನುಟ್ಟು ಅಪ್ಪಟ ಭಾರತೀಯರಂತೆ ಈ ಕಲಾಕೃತಿಯು ಗೋಚರವಾಗುತ್ತದೆ.

ತಂಬೂರಿ ನುಡಿಸುತ್ತಿರುವ ರಾಣಿ

ಚಿತ್ರದಲ್ಲಿರುವ ಈಕೆಯ ಕಪ್ಪು ಕೂದಲಿನ ಮೇಲೆ ಹೂವಿನ ಗೊಂಚಲು, ಸಿಂಧೂರ, ಕಾಮನ ಬಿಲ್ಲಿನಂತಹ ಹುಬ್ಬು ಹೊಳಪುಳ್ಳ ಕಣ್ಣಗಳು, ಕೊರಳನಲ್ಲಿ, ಹಾಕಿಕೊಂಡಿರುವ ಆಭರಣಗಳು ಕೆಂಪು

ಬಣ್ಣದ ಸೀರೆ, ನೀಲಿಬಣ್ಣದ ಕುಪ್ಪಸ, ಸುತ್ತಲೂ ಕಂಡುಬರುವ ಬಂಗಾರ ಎರಡು ಮುಂಗೈಯಲ್ಲಿ ಹಾಕಿಕೊಂಡ ಬಂಗಾರದ ಬಳೆಗಳು ವೀಣೆಯ ಮುಂಭಾಗದ ಸುತ್ತಲೂ ಮುತ್ತಿನಂತಹ ಬಿಳಿ ಆಕಾರದ ದುಂಡಾದ ಗುಂಡುಗಳು ಮಧ್ಯದಲ್ಲಿ ಕಪ್ಪು ಕಟ್ಟೆಯನ್ನು ತುದಿಯಲ್ಲಿ ತುದಿಯಲ್ಲಿ ಬಿಳಿ ಬಣ್ಣದ ಮುತ್ತನ್ನು ಹೊಂದಿರುವ ವೀಣೆಯನ್ನು ಎಡಗೈಯಿಂದ ಅದರ ಹಿಂಭಾಗವನ್ನು ಹಿಡಿದು, ಬಲಗೈಯಿಂದ ವೀಣೆಯನ್ನು ಮೀಟುವ ದೃಶ್ಯ. ಹಾಗೂ ವೀಣಾ ವಾಹಿನಿಯ ಬಲಭುಜದ ಮೇಲೆ ಕುಳಿತ ಗಿಳಿಯು ಆಕೆ ನುಡಿಸುವ ಸಂಗೀತಕ್ಕೆ ತಲೆದೂಗುವಂತೆ ಬಿಂಬಿಸುತ್ತದೆ. ವೀಣಾವಾಹಿನಿಯು ಕುಳಿತ ಸ್ಥಳದ ಹಿಂದೆ ಬಲ ಮತ್ತು ಎಡಭಾಗದಲ್ಲಿ ಬಂಗಾರದ ಹೂವಿನ ಕುಂಡಗಳು, ಅಲಂಕಾರಿಕ ಕಂಬಗಳು, ಜೋತಾಡುವ ಬೆಳಕಿನ ಕಂದೀಲುಗಳು, ರಾಜ ಭವನದ ವೈಭವವನ್ನು ಎತ್ತಿತೋರಿಸುತ್ತದೆ.

೧. ರಾಜರ ಚಿತ್ರಗಳು

೨. ಗಂಭೀರವದನ ರಾಜ

ಈ ಕಲಾಕೃತಿ ನೋಡಿದಾಗ ಕಂಡುಬರುವ ರಾಜನ ತಲೆಯ ಮೇಲೆ ಕೆಂಪು ವರ್ಣದ ಕಿರೀಟ. ಕಿರೀಟದಲ್ಲಿಯೇ ಅಲಂಕೃತಗೊಂಡಿರುವ ತಿಳಿ ಹಸಿರಿನ ಬಣ್ಣದ ಮುತ್ತುಗಳು, ಅಕ್ಕಪಕ್ಕದಲ್ಲಿರುವ ಬಿಳಿ ವರ್ಣದ ಮುತ್ತಿಗೆ ಗೊಂಚಲು, ಕಪ್ಪನೆಯ ಕೂದಲು, ಮುಖದಲ್ಲಿ ಬಿಲ್ಲಿನಂತಹ ಹುಬ್ಬು, ಬಿಲ್ಲಿನಂತಹ ಮೀಸೆ, ಹಾಗೂ ಕಿವಿಗಳಲ್ಲಿ ಓಲೆಯನ್ನು ಹಾಕಿಕೊಂಡು ಗಾಂಭಿರ್ಯದಿಂದ ನೋಡುವ ರಾಜನ ಮುಖದ ಲಕ್ಷಣವನ್ನು ಕಾಣಬಹುದು. ಮತ್ತು ರಾಜನು ಧರಿಸಿದ ವಸ್ತ್ರ ಕೆಂಪು ಬಣ್ಣದಾಗಿದ್ದು ಈ ವಸ್ತ್ರದ ಬಲ ಮತ್ತು ಎಡ ಭಾಗಗಳಲ್ಲಿದ್ದ ಭುಜದ ಮೇಲೆ ಹೊಸ ತರಹದ ಆಕಾರವು ಕಂಡುಬರುತ್ತದೆ. ರಾಜನ ಕುತ್ತಿಗೆಯನ್ನು ಬಿಗಿಯಾಗಿ ಸುತ್ತಿದ್ದ ಪಟ್ಟಿಪಟ್ಟಿಯ ಸುತ್ತಲಿರುವ ತಿಳಿಹಸಿರು ವರ್ಣದ ಚುಕ್ಕಿಗಳು, ಕೊರಳಿನಲ್ಲಿ ಬಿಳಿ ಆಕಾರದ ಮುತ್ತಿನ ಸರ, ಬಲ ಮತ್ತು ಎಡ ಬದಿಯಲ್ಲಿ ಎರಡು ತಿಳಿ ಹಸಿರಿನ ಬಣ್ಣದ ಪಟ್ಟಿ ಮಧ್ಯದಲ್ಲಿ ಹಾದು ಹೋದ ಇನ್ನೊಂದು ನಕ್ಷಾಚಿತ್ರವುಳ್ಳ ಪಟ್ಟಿ ಅದರಕೆಳಗೆ ಎಡಬದಿಯಲ್ಲಿ ಕಂಡುಬರುವ ಬಿಳಿ ಹೂವಿನ ಆಕಾರ ಚಿತ್ರಣವನ್ನು ಈ ಗಾಂಭಿರ್ಯ ಮುಖದ ರಾಜನಲ್ಲಿ ವೀಕ್ಷಿಸಬಹುದು. ರಾಜನ ಸುತ್ತಲೂ ತಿಳಿ ನೀಲಿ ಬಣ್ಣವನ್ನು ಸುತ್ತಲೂ ಚೌಕಟ್ಟಾದ ಕಟ್ಟು, ಕಟ್ಟಿನೊಳಗೆ ಸುತ್ತಲೂ ಹೂವು ಬಳ್ಳಿಗಳಿಂದ ಕೂಡಿದ ನಕ್ಷಾ ಚಿತ್ರಗಳು ತುಂಬಿವೆ.

ಪ್ರೇಮ ಬಯಸುವ ರಾಜ

ತಲೆಯ ಮೇಲೆ ಹಾಕಿಕೊಂಡ ಕಿರೀಟದಂತಹ ಶಿರೋಭೂಷಣ. ಇದನ್ನು ಕೆಂಪು, ಹಸಿರು ಬಣ್ಣ ದಿಂದ ಪಟ್ಟಿ ಪಟ್ಟಿಯಾಗಿದ್ದು ಅದರ ಮೇಲೆ ಬೆಲೆಬಾಳುವ ಮುತ್ತಿನ ಸರವು ಇದೆ. ಅಗಲವಾದ

ಮುಖ ಎರಡು ಕಿವಿಗಳಲ್ಲಿ ಬಂಗಾರದ ಓಲೆಗಳು ಕಪ್ಪಾದ ಕೇಶಗಳು ಹಣೆಯ ಮೇಲೆ ದುಂಡಾಕಾರದ ಕುಂಕುಮ ಅದರ ಕೆಳಗಡೆ ಕಾಮನ ಬಿಲ್ಲಿನಂತಹ ಹುಬ್ಬುಗಳು, ಬಟ್ಟಲ ಕಣ್ಣುಗಳು ಕಪ್ಪಾದ ಮೀಸೆಗಳು ಕೆಂದುಟಿಗಳು, ಮುಖದ ಬಣ್ಣದಿಂದ ಕಲಾವಿದನು ಚಿತ್ರಿಸಿದ್ದಾನೆ. ರಾಜನು ಧರಿಸಿದ ಕೆಂಪು ಉಡುಪು ಕುತ್ತಿಗೆ ಸುತ್ತಲಿರುವ ಬಂಗಾರದ ಪಟ್ಟಿ ಅದರೊಳಗಿರುವ ಕೆಂಪು ಚುಕ್ಕೆಗಳು, ಬಲಗೈಯಲ್ಲಿ ಹಾಕಿಕೊಂಡ ಆಭರಣಗಳು ಸೊಗಸಾಗಿ ಕಾಣುತ್ತವೆ.

ಗ್ರಂಥ ಪಠಣ ರಾಜ

ಈ ಚಿತ್ರದಲ್ಲಿ ಕಂಡುಬರುವ ವಿಶೇಷತೆಯೇನೆಂದರೆ ಪೂರ್ಣವಾಗಿ ಚಿತ್ರಿಸಿದ ಪುರುಷನ ಆಕೃತಿ ಈ ಕಲಾಕೃತಿಯನ್ನು ನೋಡಿದರೆ ಪುರುಷನು ಗ್ರಂಥವನ್ನು ಓದುವಾಗ ಯಾರೋ ಅವನನ್ನು ಕೂಗಿದ ಸಂದರ್ಭವನ್ನಿಸುತ್ತದೆ. ಪುರುಷನ ಶಿರದ ಮೇಲೆ ಮರಾಠ ಟೊಪ್ಪಿಗೆ ಈ ಟೊಪ್ಪಿಗೆ ಮೇಲೆ ಚೌಕಾಕಾರದ ಬೇರೆ ಬೇರೆ ಬಣ್ಣದ ನಕ್ಷೆಗಳಿಂದ ಅಲಂಕೃತಗೊಂಡಿದೆ. ಪುರುಷನ ಮೈಬಣ್ಣ ತಿಳಿ ಗುಲಾಬಿ ಬಣ್ಣದಾಗಿದ್ದು ಅದರಲ್ಲಿಯ ಬೆಳಕು ಕಂಡುಬರುತ್ತದೆ. ಕಪ್ಪು ಬಣ್ಣದ ಕೋಟನ್ನು ಬಿಗಿಯಾದ ಸಲವಾರವನ್ನು ತೊಟ್ಟು ತನ್ನ ಎಡಗಾಲನ್ನು ತನ್ನ ಬಲಗಾಲಿನ ಮೇಲೆ ಹಾಕಿಕೊಂಡು ಸಿಂಹಾಸನದ ಮೇಲೆ ಕುಳಿತು ಗ್ರಂಥವನ್ನು ಹಿಡಿದು ಬೇರೆ ಕಡೆ ಮುಖ ಮಾಡಿಕುಳಿತಂತಿದೆ.

ರಾಜ ದಂಪತಿ

ಈ ಚಿತ್ರದಲ್ಲಿ ಇಬ್ಬರು ನವದಂಪತಿಗಳ ಮುಖವು ಒಂದೇ ತೆರನಾಗಿಯೇ ಕಂಡು ಬರುತ್ತದೆ. ಪತಿಯು ಆಸನದ ಮೇಲೆ ಕುಳಿತುಕೊಂಡು ಎಡಹಸ್ತದಲ್ಲಿ ತನ್ನ ಪತ್ನಿಗೆ ಪ್ರೀತಿಯಿಂದ ಕೊಡಬೇಕೆಂದು ತಂದಿರುವ ಗುಲಾಬಿ ವರ್ಣದ ಪುಷ್ಪವಿದೆ. ತೀಕ್ಷ್ಣವಾಗಿ ಗಮನಿಸದರೆ ಬಲಹಸ್ತದ ಮೂರು ಬೆರಳಿನಲ್ಲಿ ಮಾತ್ರ ಬಂಗಾರದ ಉಂಗುರಗಳಿವೆ. ವ್ಯಕ್ತಿಯು ಧರಿಸಿ ವಸ್ತ್ರವು ಕಡು ಕಪ್ಪಾಗಿದೆ. ಆ ವ್ಯಕ್ತಿಯು ಕುಳಿತಿರುವುದು ನೋಡಿದರೆ ತನ್ನ ಅರ್ಧಾಂಗಿ ಅವನನ್ನು ಒಲೈಸಿದಂತೆ ಕಂಡುಬರುತ್ತದೆ. ಅವನು ತನ್ನ ಎಡಗಾಲನ್ನು ಬಲಗಾವಿನ ಮೇಲೆ ಹಾಕಿಕೊಂಡು ಕುಳಿತುಕೊಂಡಿರುವ ದೃಶ್ಯವನ್ನು ಈ ಚಿತ್ರದಲ್ಲಿ ಕಾಣಬಹುದು.

ರಾಜಗಾಂಭಿರ್ಯದ ಮಹಾರಾಜ

ಇದು ಕೂಡಾ ಗ್ರಂಥವನ್ನು ಓದುವ ಪುರುಷನ ಹಾಗೆ ಸಂಯೋಜನೆ ಒಂದೇ ಎಂದು ಭಾವಿಸಬಹುದು. ಕೆಲವೊಂದಿಷ್ಟು ಮಾತ್ರ ವ್ಯತ್ಯಾಸಗೊಂಡಿದೆ. ಈ ಎರಡು ಕಲಾಕೃತಿಗಳನ್ನು ರಚಿಸಿದ

ಕಲಾವಿದನು ಒಬ್ಬನೇ ಇರಬಹುದೆಂದು ಊಹಿಸಬಹುದು. ಏಕೆಂದರೆ ಪುರುಷನ ಮುಖದ ಲಕ್ಷಣ ವಸ್ತ್ರಾಭರಣಗಳನ್ನು ರಚಿಸಿದ ಶೈಲಿಯ ಒಂದೇ ಎನ್ನಿಸುತ್ತದೆ. ಪುರುಷನಲ್ಲಿಯ ವ್ಯತ್ಯಾಸವೇನೆಂದರೆ ಶಿರದ ಮೇಲೆ ಕೆಂಪು ಟೊಪ್ಪಿಗೆ ಟೊಪ್ಪಿಗೆಯ ಸುತ್ತಲೂ ಬಿಳಿಯ ವರ್ಣದ ಚುಕ್ಕೆಗಳು ಮೇಲೆ ಉದ್ದನೆಯ ತುರಾಯಿ ನಡಕ್ಕೆ ಕಟ್ಟಿದ ಕೆಂಪು ಬಣ್ಣದ ನಡಪಟ್ಟಿ ಕಟ್ಟಿಕೊಂಡು ಕೆಂಪಾದ ಮೆತ್ತನೆಯ ಕುರ್ಚಿಯ ಮೇಲೆ ತನ್ನ ಬಲಗೈಯನ್ನು ಕುರ್ಚಿಯ ಕೈ ಮೇಲೆ ಮಡಚಿಕೊಂಡು ಎಡಗೈಯನ್ನು ತನ್ನ ಮೊಣಕಾಲಿಗೆ ಹಚ್ಚಿಕೊಂಡು ರಾಜನ ಅಭಿನಯವನ್ನು ತೋರಿಸುತ್ತಿದ್ದಾನೆಂದು ಊಹಿಸಬಹುದು.

ಪ್ರೀತಿಯ ಮಹಾರಾಜ

ಈ ಚಿತ್ರದಲ್ಲಿ ಕಂಡುಬರುವ ವ್ಯತ್ಯಾಸವೇನೆಂದರೆ ಶಿರದ ಮೇಲೆ ಬಂಗಾರದ ಕಿರೀಟವಿದ್ದು ಅದರೊಳಗೆ ಹಸಿರು ಮತ್ತು ಕೆಂಪು ವರ್ಣದ ವಿನ್ಯಾಸವು ಕಂಡುಬರುತ್ತದೆ. ಕಿರೀಟದ ಎಡಭಾಗದಲ್ಲಿ ಜೋತಾಡುವ ಬೆಲೆಭಾಳುವ ಮುತ್ತುಗಳು, ಹಣೆಯ ಮೇಲೆ ದೊಡ್ಡ ಗಾತ್ರದ ಚಿಕ್ಕ ಗಾತ್ರದ ತಿಲಕ, ಕಪ್ಪನೆಯ ಹುಬ್ಬು, ಬಟ್ಟಲ ಕಣ್ಣು, ಕೋರೆಯಂತಹ ದಪ್ಪನೆಯ ಮೀಸೆ, ಗುಲಾಬಿ ಬಣ್ಣದ ತುಟಿಗಳು ಕಿವಿಯಲ್ಲಿ ಎರಡು ಬಂಗಾರದ ಓಲೆಗಳು ಈ ಅಗಲ ಮುಖದ ರಾಜನಲ್ಲಿ ವೀಕ್ಷಿಸಬಹುದು. ಈ ರಾಜನ ಕೊರಳ ಆಭರಣಗಳಲ್ಲಿ ಮುತ್ತಿನ ಸರವೊಂದನ್ನು ಕಾಣಬಹುದು. ರಾಜನು ಧರಿಸಿದ ಉಡುಪ ಕೆಂಪು ಬಣ್ಣದಾಗಿತ್ತು. ಆದರೆ ಇಲ್ಲಿಧರಿಸಿರುವ ವಸ್ತ್ರ ಹಚ್ಚ ಹಸಿರಾಗಿದ್ದು ಎರಡು ಭುಜಗಳ ಮೇಲೆ ಕೆಂಪು ಪಟ್ಟಿ ಇದ್ದು, ಮಧ್ಯದಲ್ಲಿ ಬಂಗಾರದ ಪಟ್ಟಿ ಹಾದುಹೋಗಿದೆ.

ಮಹಾರಾಜ

ಈ ಚಿತ್ರವು ಮಹಾರಾಜನಿಗೆ ಸಂಬಂಧಪಟ್ಟ ಕಲಾಕೃತಿಯಾಗಿದೆ. ಕಲಾವಿದನು ಈ ಕಲಾಕೃತಿಯ ವಸ್ತು ವಿನ್ಯಾಸವನ್ನು ಸುಂದರವಾಗಿ ವ್ಯಕ್ತಪಡಿಸಿದ್ದಾನೆ. ಕಲಾವಿದನು ಈ ಚಿತ್ರವನ್ನು ಬಿಡಿಸುವಾಗ ರಾಜನು ಕಲಾವಿದನ ಮುಂದೆ ಕುಳಿತು ತನ್ನ ಭಾವಚಿತ್ರವನ್ನು ತೆಗೆಯಿಸಿಕೊಳ್ಳುತ್ತಿದ್ದಾನೇನೋ ಎಂಬ ಸಂಶಯಬರುತ್ತದೆ. ರಾಜನ ಶಿರದ ಮೇಲೆ ಸ್ವಣವರ್ಣದ ಟೊಪ್ಪಿಗೆ ಇದ್ದು ಕೊರಳಲ್ಲಿ ಆಭರಣಗಳು ಸೊಂಟಕ್ಕೆ ಸೊಂಟ ಪಟ್ಟಿಯನ್ನು ಕಟ್ಟಿಕೊಂಡು ಸಿಂಹಾಸನದ ಮೇಲೆ ಆಸೀನನಾಗಿ ತನ್ನ ಭಾವಚಿತ್ರವನ್ನು ತೆಗೆಸಿಕೊಳ್ಳುವಂತಹ ದೃಶ್ಯವನ್ನು ಈ ಕಲಾಕೃತಿಯಲ್ಲಿ ಕಾಣಬಹುದು. ರಾಜನು ಧರಿಸಿರುವ ವಸ್ತ್ರವು ಕಪ್ಪುಬಣ್ಣದ್ದಾಗಿದೆ. ಬಲಗಡೆಯಲ್ಲಿ ಹೂವಿನ ಕುಂಡಲಿ ಈ ಕಲಾಕೃತಿಗೆ ಪುರುಷನಲ್ಲಿಯ ವ್ಯತ್ಯಾಸ ವೆನೆಂದರೆ ಶಿರದ ಮೇಲೆ ಕೆಂಪು ಟೊಪ್ಪಿಗೆ ಟೊಪ್ಪಿಗೆಯ ಸುತ್ತಲು ಬಿಳಿಯ ವರ್ಣದ ಚುಕ್ಕೆಗಳು ಮೇಲೆ ಉದ್ದನೆಯ ತುರಾಯಿ. ನಡಕ್ಕೆ ಕಟ್ಟಿದ ಕೆಂಪು ಬಣ್ಣದ ನಡುಪಟ್ಟಿ ಕಟ್ಟಿಕೊಂಡು ಕೆಂಪಾದ

ಮೆತ್ತನೆಯ ಕುರ್ಚಿಯ ಮೇಲೆ ತನ್ನ ಬಲಗೈಯನ್ನು ಕುರ್ಚಿಯ ಕೈ ಮೇಲೆ ಮಡಚಿಕೊಂಡು ಎಡಗೈಯನ್ನು ತನ್ನ ಮೊಣಕಾಲಿಗೆ ಹಚ್ಚಿಕೊಂಡು ರಾಜನ ಅಭಿನಯವನ್ನು ತೋರಿಸುತ್ತಿದ್ದಾನೆಂದು ಊಹಿಸಬಹುದು.

ಪ್ರೀತಿಯ ಮಹಾರಾಜ

ಈ ಚಿತ್ರದಲ್ಲಿ ಕಂಡು ಬರುವ ವ್ಯತ್ಯಾಸವೇನೆಂದರೆ ಶಿರದ ಮೇಲೆ ಬಂಗಾರದ ಕಿರೀಟವಿದ್ದು ಅದರೊಳಗೆ ಹಸಿರು ಮತ್ತು ಕೆಂಪು ವರ್ಣದ ವಿನ್ಯಾಸವು ಕಂಡುಬರುತ್ತದೆ. ಕಿರೀಟದ ಎಡಭಾಗದಲ್ಲಿ ಜೋತಾಡುವ ಬೆಲೆಬಾಳುವ ಮುತ್ತುಗಳು, ಹಣೆಯ ಮೇಲೆ ದೊಡ್ಡ ಗಾತ್ರದ ಚಿಕ್ಕ ಗಾತ್ರದ ತಿಲಕ, ಕಪ್ಪನೆಯ ಹುಬ್ಬು, ಬಟ್ಟಲ ಕಣ್ಣು, ಕೋರೆಯಂತಹ ದಪ್ಪನೆಯ ಮೀಸೆ, ಗುಲಾಬಿ ಬಣ್ಣದ ತುಟಿಗಳು ಕಿವಿಯಲ್ಲಿ ಎರಡು ಬಂಗಾರದ ಓಲೆಗಳು ಈ ಅಗಲ ಮುಖದ ರಾಜನಲ್ಲಿ ವೀಕ್ಷಿಸಬಹುದು. ಈ ರಾಜನ ಕೊರಳ ಆಭರಣಗಳಲ್ಲಿ ಬೆಂಬಲವಾಗಿದೆ. ಕಲಾವಿದನ ಹಿನ್ನೆಲೆ ಪರಿಸರವನ್ನು ಕಲಾವಿದನ್ನು ಕಲಾವಿದನು ಬೂದಿ ಬಣ್ಣದಿಂದ ರಚಿಸಿ, ಕಲಾಕೃತಿಯನ್ನು ಸುಂದರಗೊಳಿಸಿದ್ದಾನೆ.

೧. ಶೃಂಗಾರ ಚಿತಗಳು ೨. ಶೃಂಗಾರಕ್ಕೆ ಆಹ್ವಾನ

ಕಲಾವಿದನು ತಾನು ಅನುಭವಿಸಿದ ಪ್ರೇಮ ಸಲ್ಲಾಪವನ್ನು ಈ ಕಲಾಕೃತಿಯಲ್ಲಿ ವ್ಯಕ್ತಪಡಿಸಿರಬಹುದು. ಈ ಚಿತ್ರದಲ್ಲಿ ಪ್ರಿಯತಮನು ಪ್ರೇಯಸಿಯ ಎಡ ಭುಜದ ಮೇಲೆ ಬಲ ಹಸ್ತವನ್ನಿಟ್ಟು, ಎಡಹಸ್ತವನ್ನು ಪ್ರೇಯಸಿಯ ಬಲ ಮುಂಗೈಯನ್ನು ಹಿಡಿದು ತನ್ನ ಪ್ರೇಯಸಿಯ ಶೃಂಗಾರವನ್ನು ಬೆಂಬಲಿಸುವ ದೃಶ್ಯ ಅತ್ಯಂತ ಮಧುರವಾಗಿ ಮೂಡಿ ಬಂದಿದೆ. ಪ್ರೇಯಸಿಯು ತನ್ನ ಮಧುರವಾದ ಎಡ ಹಸ್ತವನ್ನು ಪ್ರೇಕ್ಷಕರಿಗೆ ತೋರಿಸಿದ್ದಾಳೆ.

ಶೃಂಗಾರದಲ್ಲಿ ಮೈಮರೆತ ಪ್ರೇಮಿಗಳು

ಈ ಚಿತ್ರದಲ್ಲಿ ಇಬ್ಬರು ಪ್ರೇಮಿಗಳ ಜೋಡಿಯನ್ನು ಕಲಾವಿದನು ಸುಂದರವಾಗಿ ಅರಳಿಸಿದ್ದಾನೆಂದು ಹೇಳಬಹುದು. ಈ ಕಲಾಕೃತಿಯ ವಿಶೇಷತೆ ಏನೆಂದರೆ ಪ್ರಿಯತಮನು ಕೊರಳಿಗೆ ಕೆಂಪಾದ ಕಾಲನ್ನು ಕಡುಕಪ್ಪಾದ ವಸ್ತ್ರವನ್ನು ಧರಿಸಿ ತಿಳಿಹಸಿರಾದ ಬಿಗಿಯಾದ ಪ್ಯಾಂಟನ್ನು ಧರಿಸಿ ಏಣಿಯನ್ನೇರಿ ಮೇಲುಪ್ಪರಿಗೆ ಮೇಲಿರುವ ಪ್ರೇಯಸಿಯ ಗದ್ದಕ್ಕೆ ಮುತ್ತಿಡುವ ದೃಶ್ಯವು ಸೊಗಸಾಗಿ ಕಂಡುಬರುತ್ತದೆ. ಪ್ರೇಯಸಿಯೂ ಸಹ ಪ್ರಿಯತಮನಿಗೋಸ್ಕರ ಕಿವಿಯಲ್ಲಿ ಬೆಂಡೋಲೆ ತುರುಬದ ಸುತ್ತಲೂ ಮುತ್ತಿನ ಹಾರ. ಕೊರಳಿನಲ್ಲಿ ಬಂಗಾರದ ಆಭರಣಗಳು ತಿಳಿ ಹಸಿರಿನ ಕುಪ್ಪಸ, ಸೊಂಟದಲ್ಲಿ ಸೊಂಟಪಟ್ಟಿ

ಕೆಂಪು ಸೀರೆಯನ್ನುಟ್ಟು ಶೃಂಗಾರವಾಗಿ ಪ್ರಿಯತಮನ ಮನಬೆರಗುಗೊಳಿಸುವ ದೃಶ್ಯವನ್ನು ಈ ಕಲಾಕೃತಿಯಲ್ಲಿ ಕಾಣಬಹುದು

ಪ್ರೇಮಿಗಳು

ಈ ಚಿತ್ರ ನವದಂಪತಿಗಳ ಸರಸ ಸಲ್ಲಾಪವನ್ನೆಸುತ್ತದೆ. ಇವರಿಬ್ಬರ ಮೈಬಣ್ಣವನ್ನು ತಿಳಿ ಕೇಸರಿ ಬಣ್ಣದಿಂದ ಚಿತ್ರಿಸಲಾಗಿದೆ. ಈ ಕಲಾಕೃತಿಗಳಲ್ಲಿ ರಾಜನು ಹಾಕಿರುವ ಪುರುಷನ ಶಿರದ ಮೇಲೆ ದುಂಡಾಕಾರದ ಟೊಪ್ಪಿಗೆ ಅದರ ಸುತ್ತಲೂ ಬಿಳಿಯ ಚೌಕಾಕಾರದ ಚುಕ್ಕಿಗಳು, ಹಣೆಯ ಮೇಲೆ ಕಪ್ಪುದಾಗಿರುವ ದೊಡ್ಡಗಾತ್ರದ ಚಿಕ್ಕಗಾತ್ರದ್ದಾಗಿದೆ. ಕಿವಿಯಲ್ಲಿ ದುಂಡಗಿನ ಬಂಗಾರದ ಓಲೆಗಳಿವೆ. ಕೋರೆ ಮೀರೆ ಮೀಸೆ, ಕೆಂದುಟಿಯನ್ನು ಹೊಂದಿ ಮುಗಳ್ನಗೆ ನಗುತ್ತಿರುವ ಪುರುಷ ಕುತ್ತಿಗೆಯ ಮೇಲೆ ಬಂಗಾರದ ಆಭರಣಗಳು, ಕಪ್ಪು ಹಸಿರಿನ ಕೋಟನ್ನು ಧರಿಸಿ ಮಧ್ಯಭಾಗದಲ್ಲಿ ಬಂಗಾರದ ಪಟ್ಟಿಯಿದೆ. ಸೊಂಟಕ್ಕೆ ಕೆಂಪಾದ ಪಟ್ಟಿಯನ್ನು ಕಟ್ಟಿಕೊಂಡು ಅದರ ಕೆಳಗಡೆ ಹರಿತಾದ ಖಡ್ಗವನ್ನಿರಿಸಿ ಕೊಂಡು ರಾಣಿಯನ್ನು ಅಪ್ಪಿಕೊಂಡಿರುವ ದೃಶ್ಯ ಕಂಡುಬರುತ್ತದೆ.

ಯುವರಾಜ ಪ್ರೇಮಿಗಳು

ಈ ಕಲಾಕೃತಿಯಲ್ಲಿ ಕಂಡು ಬರತಕ್ಕಂತೆ ಪ್ರೇಮಿಗಳ ಸರಸ ಸಲ್ಲಾಸವೇ ವಿಶಿಷ್ಟದಾಗಿದೆ. ಇದರಲ್ಲಿ ಕಂಡು ಬರುವಂತ ಪ್ರೇಮಿಗಳ ಮೈಕಟ್ಟನ್ನು ದಷ್ಟ ಪುಷ್ಟಾಗಿ, ಕುಬ್ಜವನ್ನಾಗಿ ಚಿತ್ರಿಸಿದ್ದಾನೆ. ಈ ಕಲಾಕೃತಿಯಲ್ಲಿ ಚಿತ್ರಿತಗೊಂಡ ಪ್ರೇಮ ಸಲ್ಲಾಪ ವಿಭಿನ್ನ ರೀತಿಯದ್ದಾಗಿದೆ. ಬಲಗಡೆಯಲ್ಲಿದ್ದ ಪ್ರಿಯತಮನ ಕೇಶದ ಮೇಲೆ ಹೂವಿನ ನಕ್ಷೆಗಳಿವೆ. ದಪ್ಪನೆಯ ಮುಖ ಕಿವಿಯಲ್ಲಿ ಬಂಗಾರದ ಓಲೆ, ಕೊರಳಿನಲ್ಲಿ ಬಂಗಾರದ ಆಭರಣವನ್ನು ಧರಿಸಿ, ಕಾಲಲ್ಲಿ ಕಾಲ್ಗೆಜ್ಜೆಯನ್ನು ತೊಟ್ಟು ಪ್ರಿಯತಮೆಯನ್ನು ಬಲವಂತವಾಗಿ ಸರಸವಾಡಲು ಕರೆದುಕೊಂಡು ಹೋಗುವಂತ ದೃಶ್ಯವು ಈ ಕಲಾಕೃತಿ ಸುಂದರವಾಗಿ ಅರಳಿದೆ.

ಶೃಂಗಾರಕ್ಕೆ ಆಹ್ವಾನ

ಈ ಕಲಾಕೃತಿಯನ್ನು ಚಿತ್ತದಿಂದ ವೀಕ್ಷಿಸಿದರೆ ಜೋಡಿ ಪ್ರೇಮಿಗಳ ಸಂತೋಷ ಸಲ್ಲಾಪವನ್ನು ಅವರ ಅರಳಿದ ಮುಖಗಳಲ್ಲಿ ವೀಕ್ಷಿಸಬಹುದು. ಕಲಾವಿದನು ಈ ಕಲಾಕೃತಿಯನ್ನು ರಚಿಸಿ ನೋಡುಗರಿಗೆ ಮೋಡಿಮಾಡಿದ್ದಾನೆ. ಎಂದು ಹೇಳುವುದರಲ್ಲಿ ಸಂದೇಹವೇ ಇಲ್ಲ. ಈ ಕಲಾಕೃತಿಯನ್ನು ನೋಡಿದರೆ ಪ್ರಿಯತಮನು ತನ್ನ ಪ್ರೇಯಸಿಯ ಭುಜದ ಹಿಂದೆ ತನ್ನ ಬಲಗೈಯನ್ನಿಟ್ಟು ಎಡ ಹಸ್ತ ಬೆರಳುಗಳಲ್ಲಿ

ಗುಲಾಬಿ ವರ್ಣವನ್ನು ಹೊಂದಿದ ಪುಷ್ಪವನ್ನು ಹಿಡಿದು 'ನನ್ನ ಪ್ರೇಯಸಿಗೆ ಪುಷ್ಪವನ್ನು ಕೊಡುವೆನು ನೋಡಿ' ಎಂದು ಎದುರಿಗೆ ಇದ್ದ ಕಲಾ ರಸಿಕರಿಗೆ ತಿಳಿಸುವಂತೆ ಕಂಡುಬರುತ್ತದೆ. ಪ್ರಿಯತಮೆಯೂ ಸಹ ತನ್ನ ಪ್ರಿಯತಮನಿಗೆ ಉಕ್ಕಿ ಬಂದ ಅಬ್ಬರವನ್ನು ಕಂಡು ಬಲ ಹಸ್ತ ಬೆರಳುಗಳಿಂದ ವೀಣೆಯ ತಂತಿಯನ್ನು ನುಡಿಸುವಂತಹ ದೃಶ್ಯವಂತೂ ಕಣ್ಣಿಗೆ ಹಬ್ಬವನ್ನುಂಟು ಮಾಡುತ್ತದೆ.

ಶೃಂಗಾರದಲ್ಲಿ ಮೈಮರೆತ ರಾಜ ದಂಪತಿಗಳು

ಕಲಾಕೃತಿಯನ್ನು ಕಲಾವಿದನು ತನ್ನ ಮನೋಭಾವನೆಗಳವನ್ನು ವ್ಯಕ್ತಪಡಿಸಿದ್ದಾನೆ. ಚಿತ್ರದಲ್ಲಿ ಕಂಡು ಬರುವ ಪತಿಯು ತನ್ನ ಪತ್ನಿಯ ಪ್ರೀತಿಯನ್ನು ಅನುಭವಿಸುತ್ತಿದ್ದಾನೆ. ಪತಿಯು ತನ್ನ ಎಡಗೈಯನ್ನು ಪತ್ನಿ ತೋಳಿಗೆ ಹಿಡಿದು. ತನ್ನ ಕೆನ್ನೆಯನ್ನು ಪತ್ನಿಯ ಕೆನ್ನೆಗೆ ಅಂಟಿಸಿದಂತೆ ತೋರಿಬರುತ್ತದೆ. ಪತಿಯು ಧರಿಸಿದ ವಸ್ತ್ರವು ಕಪ್ಪು ವರ್ಣದ್ದಾಗಿದೆ. ಮುಂದೆ ಇರುವ ಪತ್ನಿ ತನ್ನ ಎಡಗೈ ಬೆರಳಿನಲ್ಲಿ ಬಿಳಿ ಪಾರಿವಾಳವನ್ನು ಹಿಡಿದು ಪತಿಯ ಪ್ರೀತಿಯನ್ನು ಅನುಭವಿಸುತ್ತಿರುವ ದೃಶ್ಯವಂತೂ ಕಣ್ಣಿಗೆ ಸಂತೃಪ್ತಿಯನ್ನುಂಟು ಮಾಡುತ್ತದೆ. ಈ ಕಲಾಕೃತಿಗೂ ಸಹ ಕೆಂಪುವರ್ಣದ ಪರದೆಯನ್ನು ಹಾಕಿ ತಿಳಿ ನೀಲಿ ಆಕಾಶ ವರ್ಣದಿಂದ ಚಿತ್ರಿಸಿದ್ದಾನೆ.

೨. ಧಾರ್ಮಿಕ ಚಿತ್ರಗಳು

ಚಿತ್ರ-೧: ಶಿವ-ಪಾರ್ವತಿ ಮತ್ತು ಗಣಪ ಈ ಚಿತ್ರವು ಕಟುಂಬ ಸಮೇತನಾದ ಹಾಗೂ ಚತುರ್ಭುಜ ಧಾರಿಯಾದ ಶಿವನದು. ಶಿವನು ಸರ್ಪಮುಕುಟಧಾರಿಯಾಗಿದ್ದಾನೆ. ಗಣಪನು ಶಿವನ ಬಲಭುಜಕ್ಕೆ ಆಸೀನನಾಗಿದ್ದರೆ. ಪಾರ್ವತಿಯು ಶಿವನ ಎಡಭುಜವನ್ನು ಆಸರೆಯನ್ನಾಗಿಸಿಕೊಂಡಿರುವಂತೆ ಕಲಾವಿದನಲ್ಲಿ ಚಿತ್ರಿಸಿದ್ದಾನೆ. ಶಿವನು ಕೊರಳಿನಲ್ಲಿ ಕಪ್ಪಾದ ರುದ್ರಾಕ್ಷಿಗಳನ್ನೊಳಗೊಂಡ ಆಭರಣಗಳನ್ನು ಧರಿಸಿದ್ದು ಶಿವನು ತನ್ನ ಮೊದಲೆರಡು ಕೈಗಳಲ್ಲಿ ಕ್ರಮವಾಗಿ ತ್ರಿಶೂಲ ಹಾಗೂ ಢಮರುಗವನ್ನು ಹಿಡಿದ್ದರೆ ಇನ್ನೆರಡು ಕೈಗಳನ್ನು ಬಲಬದಿಯಲ್ಲಿ ಗಣಪನನ್ನು ಹಾಗೂ ಎಡ ಬದಿಯಲ್ಲಿ ಪಾರ್ವತಿಯನ್ನು ಬಳಸುವಂತೆ ಹಿಡಿದಿದ್ದಾನೆ. ಮೃಗಚರ್ಮಾಂಬರ ಧಾರಿಯಾದ ಶಿವನು ಹಳದಿ ವರ್ಣದ ಪಂಚೆಯನ್ನುಟ್ಟಿದ್ದರೆ ಪಾರ್ವತಿಯು ಹೆಚ್ಚಿನ ಬಗೆಯ ಅಲಂಕರಣವಿಲ್ಲದಿದ್ದರೂ ಕಿರೀಟಧಾರಿಯಾಗಿ ಶೋಭಿಸುತ್ತಿದ್ದಾಳೆ. ಪಾರ್ವತಿಯ ಮೈಬಣ್ಣವನ್ನು ಇಲ್ಲಿ ಕಲಾವಿದ ಹಸಿರುವರ್ಣದಿಂದ ಚಿತ್ರಿಸಿದ್ದಾನೆ. ಶಿವನು ತನ್ನ ಎಡಗಾಲನ್ನು ನಂದಿಯ ದುಬ್ಬದ ಮೇಲಿಟ್ಟ ದೃಶ್ಯ ಸೊಗಸಾಗಿ ಮೂಡಿಬಂದಿದೆ. ಪಾರ್ವತಿ ತೊಟ್ಟ ಸೀರೆ ಗುಲಾಬಿ ವರ್ಣದ್ದಾಗಿದೆ. ಬಲಗಡೆ ಕುಳಿತಿರುವ ಗಜಮುಖವನ್ನು ಹೊಂದಿರುವ ವಿನಾಯಕನ ಮೈಬಣ್ಣ ಮತ್ತು ಶಿವನ ಮೈಬಣ್ಣ ತುಳಿ. ಗುಲಾಬಿ ಇರುವುದು, ಗಣೇಶನ ಶಿರದ ಮೇಲೆ ಬಂಗಾರ

ವರ್ಣದ ಕಿರೀಟವಿದೆ. ಗಣೇಶನ ಎಡ ಹಸ್ತದಲ್ಲಿ ಕಮಲದಹೂವು ಹಿಡಿದು ಎಡಬದಿಯಲ್ಲಿ ನೋಡುವ ದೃಶ್ಯವನ್ನು ಕಾಣಬಹುದು. ಬಲ ಹಸ್ತದಲ್ಲಿ ದುಂಡಾಕಾರದ ವಸ್ತುವನ್ನು ಹಿಡಿದುಕೊಂಡಿರುವನು ಕೆಳಗಡೆ ನಂದಿಯು ಈ ಮೂವರ ಮಧ್ಯದಲ್ಲಿ ಕುಳಿತುಕೊಂಡಿದೆ. ನಂದಿಯ ಕೊರಳಿನಲ್ಲಿ ಬಂಗಾರದ ಗೆಜ್ಜೆಯ ಪಟ್ಟಿ ದುಬ್ಬದ ಮೇಲೆ ತಿಳಿ ನೀಲಿ ವರ್ಣದ ವಸ್ತ್ರವಿದೆ. ಈ ಚಿತ್ರದ ಹಿಂಭಾಗದಲ್ಲಿ ಎಡ ಮತ್ತು ಬಲಭಾಗದಲ್ಲಿ ಎರಡು ಸಿಂಹದ ಕಲಾಕೃತಿಗಳಿದ್ದು ಅದರ ಕೆಳಗಡೆ ಹೂವಿನ ನಕ್ಷೆ ಇದೆ.

ಚಿತ್ರ-೨. ಸಂಧ್ಯಾ ತಾಂಡವ

ನಾಟ್ಯಶಿವ ಈ ಕಲಾಕೃತಿಯನ್ನು ವೀಕ್ಷಿಸಿದಾಗ ಕಲಾವಿದನು ಚಿತ್ರಿಸುವುದನ್ನು ಶಿವನು ನಾಟ್ಯವಾಡುತ್ತ ಕಲಾವಿದನ ಕಲೆಯನ್ನು ವೀಕ್ಷಿಸುತ್ತಿದ್ದಾನೇನೋ ಎಂಬಂತೆ ಭಾಸವಾಗುತ್ತದೆ. ಈ ಕಲಾಕೃತಿಯ ವಿಶೇಷತೆಯೆಂದರೆ ಶಿವನಿಗೆ ಚತುರ್ಭುಜ ಉಂಟು. ಮತ್ತು ಅವನ ಹಣೆಯ ಪಟ್ಟಿಯು ಬಂಗಾರ ವರ್ಣವಿದ್ದು ಅದರೊಳಗೆ ಸುಂದರವಾದ ವಿನ್ಯಾಸಗಳಿವೆ. ಶಿವನ ಜಟೆಯ ಮೇಲೆ ಸ್ವರ್ಣವರ್ಣದ ಚಿಕ್ಕ ಗಾತ್ರದ ಕುಂಭ. ಮಧ್ಯದಲ್ಲಿ ಮನುಷ್ಯನಾಕಾರದ ವಿನ್ಯಾಸವು. ಶಿವನ ಮೈತುಂಬೆಲ್ಲಾ ಸ್ವರ್ಣವರ್ಣದ ಸರಗಳಿದ್ದು ಮೈಬಣ್ಣವು ತಿಳಿಕೇಸರಿ ಬಣ್ಣದ್ದಾಗಿದೆ. ಶಿವನ ಬಲಗೈಯಲ್ಲಿ ಡಮರು. ಎಡಗೈಯಲ್ಲಿ ಅಗ್ನಿಯ ಕುಂಡಲ ಹಿಡಿದುಕೊಂಡು ತನ್ನ ದೃಶ್ಯವಂತೂ ಮನಬೆರಗುಗೊಳಿಸುತ್ತದೆ. ನಾಟ್ಯಶಿವನ ಬಲಬದಿ ಯಲ್ಲಿ ನಂದಿ ಹಾಗೂ ಪ್ರೋತ್ಸಾಹ ಕೊಡುವಂತಿದ್ದಾರೆ. ಬಲಗಡೆಯಿಂದ ನಂದಿಯು ನಾಟ್ಯಕ್ಕೆ ತಕ್ಕ ಹಾಗೆಯೇ ಢಕ್ಕೆಯನ್ನು ಭಾರಿಸುವುದು ಈ ಚಿತ್ರಕ್ಕೆ ಬೆಂಬಲವಾಗಿದೆ. ನಂದಿಯ ಶಿರದ ಮೇಲೆ ಉದ್ದವಾದ ಸ್ವರ್ಣ ವರ್ಣದ ಕಿರೀಟ. ಅಲಂಕೃತ ವಸ್ತ್ರಧಾರಿಯಾಗಿದ್ದಾರೆ. ಪಾರ್ವತಿಯು ಕುಂಕುಮ ವರ್ಣದ ಸೀರೆಯನ್ನು ಧರಿಸಿ ಸರ್ವಾಲಂಕೃತಧಾರಿಯಾಗಿದ್ದಾಳೆ. ಈ ಕಲಾಕೃತಿಯ ಸುತ್ತಲೂ ಸಂಯೋಜನೆಗೆ ತಕ್ಕ ಹಾಗೆ ವಿಭಿನ್ನ ರೀತಿಯ ವೃತ್ತಾಕಾರದ ಕೆಂಪು ಪರದೆಗಳಿದ್ದು. ಅವುಗಳ ಮೇಲೆ ಸ್ವರ್ಣವರ್ಣದ ವಿನ್ಯಾಸಗಳಿವೆ.

೩. ಯಶೋಧೆ ಕೃಷ್ಣ

ಕಲಾವಿದನು ಈ ಚಿತ್ರದಲ್ಲಿ ಕೃಷ್ಣನ ಬಾಲ ಲೀಲೆಯನ್ನು ಪ್ರತಿಬಿಂಬಿಸಿದ್ದಾನೆ. ಬಾಲ ಕೃಷ್ಣನ ಹಿಂದೆ ತಾಯಿ ಯಶೋಧೆಯು ಕೃಷ್ಣನ ಆಟವನ್ನು ವೀಕ್ಷಿಸುತ್ತ ನಿಂತಿದ್ದಾಳೆ. ಕೃಷ್ಣನು ತನ್ನ ಎಡ ಹಸ್ತದಿಂದ ಆಂಜನೇಯನ ಮೂರ್ತಿಯನ್ನು ಮುಟ್ಟುತ್ತ ಬಲಗೈಯನ್ನು ತಂದೆಯತ್ತ ತೋರಿಸುವ ದೃಶ್ಯವು ರಮಣೀಯವಾಗಿದೆ. ಕೃಷ್ಣನ ಹಿಂದೆ ಯಶೋಧೆಯನ್ನು ಕಲಾವಿದನು ಕಲಾಕೃತಿಗೆ ಸಂಯೋಜಿಸುವಂತೆ ಚಿತ್ರಿಸಿದ್ದಾನೆ. ಯಶೋಧೆಯ ಕಿವಿಗಳಲ್ಲಿ ಓಲೆಗಳು, ಮೂಗಿನಲ್ಲಿ ಮೂಗುತಿ, ಕೈಯಲ್ಲಿ ಸ್ವರ್ಣವರ್ಣದ

ಬಳೆಗಳು, ಸೊಂಟಕ್ಕೆ ಸೊಂಟಪಟ್ಟಿಯನ್ನು ರಚಿಸಿ ಕಲಾಕೃತಿಯನ್ನು ಸುಂದರಗೊಳಿಸಿದ್ದಾನೆ. ಕಲಾವಿದನು ಈ ಚಿತ್ರದ ಪರಿಸರವನ್ನು ಕಪ್ಪಾಗಿ ತೋರಿಸಿ ಮುಂದಿನ ಕಲಾಕೃತಿಗಳನ್ನು ಬೆಂಬಲಿಸಿದ್ದಾನೆ.

ನವನೀತ ಕೃಷ್ಣ

ಕಲಾವಿದನು ಕೃಷ್ಣನ ಬಾಲ್ಯ ತುಂಟಾಟವನ್ನು ನೆನಪಿಸಿಕೊಟ್ಟಿದ್ದಾನೆ. ಈ ಕಲಾಕೃತಿಯನ್ನು ವೀಕ್ಷಿಸಿದಾಗ ಶ್ರೀ ಕೃಷ್ಣನ ಕೇಶವು ಉದ್ದವಿದ್ದು. ಹೊಳಪುಳ್ಳ ಕಣ್ಣುಗಳು, ಕೆಂದುಟಿಯ ಮುಗುಳ್ನಗೆ ಮನಸ್ಸನ್ನು ಬೆರಗುಗೊಳಿಸುತ್ತದೆ. ಕೃಷ್ಣನ ಕೊರಳಿನಲ್ಲಿ ಸ್ವರ್ಣ ವಿನ್ಯಾಸದ ಸರಗಳ ಹೂಮಾಲೆ, ಬಲಗೈಯಲ್ಲಿ ಬೆಣ್ಣೆಯನ್ನು ಹಿಡಿದು, ತನ್ನ ಎಡಗೈಯಲ್ಲಿ ಬೆಣ್ಣೆಯ ಮಡಕೆಯನ್ನು ಗಟ್ಟಿಯಾಗಿ ಹಿಡಿದು ಕೊಂಡಿರುವ ದೃಶ್ಯವು ಕಂಗೊಳಿಸುತ್ತವೆ. ಶ್ರೀ ಕೃಷ್ಣನು ಕುಳಿತಿರುವ ಶೈಲಿ, ಅವನಿಗೆ ಸಂಬಂಧಪಟ್ಟಂತ ಹಿನ್ನೆಲೆಯ ಪರಿಸರವನ್ನು ಕಲಾವಿದನು ಅತ್ಯಂತ ಆಕರ್ಷಕವಾಗಿ ರಚಿಸಿದ್ದಾನೆ. ಶ್ರೀ ಕೃಷ್ಣನ ಮೈಬಣ್ಣವನ್ನು ತಿಳಿಗುಲಾಬಿ ವರ್ಣದಿಂದ ರಚಿಸಿ, ಹಿನ್ನೆಲೆಯ ಪರಿಸರವನ್ನು ಹಚ್ಚು ಹಚ್ಚಾಸಿರು, ಹಾಗೂ ಗುಲಾಬಿ ಹಳದಿವರ್ಣದಿಂದ ಚಿತ್ರಿಸಿ ಕಲಾಕೃತಿಗೆ ಜೀವವನ್ನು ತುಂಬಿದ್ದಾನೆ.

ಕಾಳಿಂಗ ಮರ್ಧನ

ಕೃಷ್ಣನ ಬಾಲ್ಯಜೀವನವನ್ನು ಈ ಚಿಕ್ಕ ಕಲಾಕೃತಿ ನೆನಪಿಸಿ ಕೊಡುತ್ತದೆ. ಶ್ರೀ ಕೃಷ್ಣನ ಬಾಲ್ಯ ಲೀಲೆಯಲ್ಲಿ ಒಂದಾದ ಕಾಳಿಗ ಮರ್ಧನ ಈ ಚಿತ್ರದಲ್ಲಿ ಕಂಡುಬರುವುದು ಬಾಲ ಕೃಷ್ಣನ ತಲೆಯ ಕೇಶಕ್ಕೆ ಸುತ್ತುವರೆದುಕೊಂಡ ಬಂಗಾರದ ಪಟ್ಟಿ. ಎರಡು ಕಿವಿಗಳಲ್ಲಿ ಬಂಗಾರದ ಓಲೆಗಳ ಮುಗುಳ್ನಗೆಯ ಮುದ್ದಾದ ತುಟಿಗಳು, ಕೊರಳಿನಲ್ಲಿ ಬಂಗಾರದ ಆಭರಣಗಳು ಸೊಂಟಕ್ಕೆ ಕಟ್ಟಿಕೊಂಡ ಸೊಂಟಪಟ್ಟಿ ಎಡಗೈಯನ್ನು ಮೇಲೆತ್ತಿ ಎರಡು ಕಾಲುಗಳಲ್ಲಿ ಬಂಗಾರದ ಕಡಗಳನ್ನು ಹಾಕಿಕೊಂಡು ಬಲಗಾಲನ್ನು ಮೂರುಹೆಡೆಯ ಕಾಳಿಂಗನ ತಲೆಯ ಮೇಲಿಟ್ಟು, ಅದರ ಕುತ್ತಿಗೆಯ ಕೆಳಗಡೆ ಇನ್ನೊಂದು ಕಾಲನ್ನಿಟ್ಟು ನೃತ್ಯ ಮಾಡುವ ದೃಶ್ಯವನ್ನು ಈ ಕೆಂಪು ಮತ್ತು ಗುಲಾಬಿ ಮೈಬಣ್ಣ ಹೊಂದಿದ ಬಾಲಕೃಷ್ಣನ ದೃಶ್ಯ ವನ್ನು ಕಾಣಬಹುದು. ಒಬ್ಬ ವ್ಯಕ್ತಿಯು ಮೀಸೆ, ಗಡ್ಡವನ್ನು ಬಿಟ್ಟು ಕೊರಳಲ್ಲಿ ಬಂಗಾರದ ಆಭರಣ ಎರಡು ಕೈಯಲ್ಲಿ ಬಂಗಾರದ ಕಡಗವನ್ನು ಹಾಕಿಕೊಂಡು ತಲೆಯ ಮೇಲೆ ಒಂದು ಉದ್ದನೆಯ ವಸ್ತ್ರವನ್ನು ಧರಿಸಿಕೊಂಡು ಕೈಗಳನ್ನು ಭಕ್ತಿ ಪೂರ್ವಕವಾಗಿ ಶ್ರೀ ಕೃಷ್ಣನಿಗೆ ವಂದಿಸುವ ದೃಶ್ಯವನ್ನು ಕಾಣಬಹುದು ಮತ್ತು ಸರೋವರದ ನೀರನ್ನು ಶ್ಯಾಮವರ್ಣದಿಂದ, ಆಕಾಶವು ತಿಳಿನೀಲಿ ಬಣ್ಣದಿಂದ, ನರ್ತಕನ ಹಿಂದಿನ ವೃಕ್ಷವನ್ನು ಸಂಯೋಜಿಸಿಕೊಂಡು ಅದರಲ್ಲಿ ಬಂಗಾರದ ರೇಖೆಗಳನ್ನು ಬಳಸಿ, ಇದನ್ನು ರಚಿಸಿದ ಕಲಾವಿದರು ಆಕರ್ಷಿಸುವಂತೆ ಮೋಡಿ ಮಾಡಿದ್ದಾರೆ. ಈ ಕಲಾಕೃತಿಯ ಸುತ್ತಲೂ ಚೌಕಾಕಾರದ ಒಂದು ಕಟ್ಟಿಗೆ ಚೌಕಟ್ಟನ್ನು ಹಾಕಿ ಅಲಂಕರಿಸಲಾಗಿದೆ.

ಶ್ರೀರಾಮನ ಪಟ್ಟಾಭಿಷೇಕ

ಈ ಚಿತ್ರವು ರಾಮಾಯಣಕ್ಕೆ ಸಂಬಂಧಿಸಿದೆ. ಕಲಾವಿದನು ಈ ಕಲಾಕೃತಿಯನ್ನು ಅತ್ಯಂತ ಸೂಕ್ಷ್ಮವಾಗಿ ಚಿತ್ರಿಸಿದ್ದಾನೆ. ಈ ಚಿತ್ರದಲ್ಲಿ ಮುಂದೆ ಮೂಡಿಬಂದಂತಹ ಅವನ ಮೈಬಣ್ಣದ ಮೂಲಕ ತಿಳಿಸಿದ್ದಾನೆ. ಶ್ರೀ ರಾಮನ ಮೈಬಣ್ಣವು ಹಸಿರಾಗಿದ್ದು ಶಿರದ ಮೇಲೆ ವಿನ್ಯಾಸವುಳ್ಳ ಸ್ವರ್ಣದ ಕಿರಿಟ, ಸಂತೋಷದಿಂದ ಕೂಡಿಬಂದಂತಹ ಕಣ್ಣುಗಳು, ಈ ಸಂತೋಷವನ್ನು ಅನುಭವಿಸುತ್ತಿರುವ ಮುಗುಳ್ನಗೆಯು ಕೊರಳಲ್ಲಿ ವಿನ್ಯಾಸಗಳುಳ್ಳ ಸ್ವರ್ಣದ ಸರಗಳು ಕಂಡುಬರುತ್ತವೆ. ಮತ್ತು ಶ್ರೀ ರಾಮನು ತನ್ನ ಪಟ್ಟಾಭಿಷೇಕವನ್ನು ಅತ್ಯಂತ ಉತ್ಸಾಹದಿಂದ ತನ್ನ ಭಕ್ತರ ಮೂಲಕ ಸ್ವೀಕರಿಸುತ್ತಿದ್ದಾನೆ. ಈ ಶ್ರೀರಾಮನ ಪಟ್ಟಾಭಿಷೇಕ ದೃಶ್ಯವು ಕಣ್ಣಿಗೆ ಹಬ್ಬವನ್ನುಂಟು ಮಾಡುತ್ತದೆ. ಶ್ರೀರಾಮನ ಎಡ ಹಿಂಬದಿಯಲ್ಲಿ ಶ್ರೀರಾಮನ ತಮ್ಮನಾದ ಲಕ್ಷ್ಮಣನು ತನ್ನ ಸಹೋದರನಾದ ರಾಮನಿಗೆ ಛತ್ರಿಯನ್ನು ಹಿಡಿದಿದ್ದಾನೆ. ಲಕ್ಷ್ಮಣನ ಮುಂದೆ ಆಸೀನಳಾದ ಶ್ರೀರಾಮನ ಧರ್ಮಪತ್ನಿ ಸೀತೆಯು ತನ್ನ ಪತಿಯಾದ ಶ್ರೀರಾಮನಿಗೆ ಭಕ್ತಿಯಿಂದ ಪುಷ್ಪವನ್ನು ಅರ್ಪಿಸುವ ದೃಶ್ಯವೂ ಅತ್ಯಂತ ಸೊಗಸಾಗಿ ಮೂಡಿಬಂದಿದೆ ಹಾಗೂ ರಾಮನ ಬಲಗಡೆ ಇದ್ದ ಭರತನೂ ಸಹ ಶ್ರೀರಾಮನಿಗೆ ಭಕ್ತಿಯಿಂದ ಚಾಮರವನ್ನು ಬೀಸುತ್ತಿದ್ದಾನೆ. ಚಿತ್ರದ ಕೆಳಬಲಭಾಗದಲ್ಲಿ ಭಕ್ತಗಣ ಕೈ ಜೋಡಿಸಿ ನಮಿಸುವ ಭಂಗಿಯಲ್ಲಿ ಚಿತ್ರಿತಗೊಂಡಿದ್ದಾರೆ. ಗಜದ ಮುಖಭಾಗದಲ್ಲಿಯೂ ಕೂಡ ಭಕ್ತಿಯು ತೋರ್ಪಡಿಸುವಂತೆ ಚಿತ್ರಿತಗೊಂಡಿದೆ. ಶ್ರೀರಾಮನ ಪರಮ ಭಕ್ತನಾದ ವೀರ ಆಂಜನೆಯನು ತನ್ನೆರಡೂ ಹಸ್ತಗಳನ್ನು ಶ್ರೀರಾಮನು ಪಾದಕ್ಕೆ ಆಸರೆಯಾಗಿ ಹಿಡಿದು ತನ್ಮೂಲಕ ಶ್ರೀರಾಮನಿಗೆ ಭಕ್ತಿಯ ಸೇವೆಯನ್ನು ಅರ್ಪಿಸುತ್ತಿದ್ದಾನೆ. ಈ ಕಲಾಕೃತಿಯ ವೈಶಿಷ್ಟ್ಯವೇನೆಂದರೆ ಶ್ರೀರಾಮ ಲಕ್ಷ್ಮಣ. ಆಂಜನೆಯ ಹಾಗೂ ಒಬ್ಬ ಭಕ್ತಾದಿಯನ್ನು ಒಂದೇ ವರ್ಣದಿಂದ ಚಿತ್ರಿಸಿದ್ದಾನೆ. ವಿಜೃಂಭಣೆಯಿಂದ ಸಾಗುತ್ತಿರುವ ಪಟ್ಟಾಭಿಷೇಕದ ಹಿನ್ನೆಲೆಯಲ್ಲಿ ಸ್ವರ್ಣ ವರ್ಣದ ಗೋಪುರವು ಈ ಕಲಾಕೃತಿಗೆ ಬೆಂಬಲವಾಗಿದೆ.

ಶ್ರೀ ವೀರಭದ್ರ ದೇವರು

ಈ ಕಲಾಕೃತಿಯು ಶ್ರೀ ವೀರಭದ್ರನು ತಾಂಡವಾಡುವಂತೆ ಬಿಂಬಿಸುತ್ತದೆ. ಕಲಾವಿದನು ಎಲ್ಲ ಕಲಾಕೃತಿಗಳ ಹಾಗೆ ಇದನ್ನು ಸಹ ಸಂಯೋಜಿಸಿದ್ದಾನೆ. ಶ್ರೀ ವೀರಭದ್ರನ ಮೈಬಣ್ಣವನ್ನು ರಕ್ತವರ್ಣದಿಂದ ಚಿತ್ರಿಸಿ ಹಾಗೂ ಶಿರದ ಮೇಲೆ ಸ್ವರ್ಣವರ್ಣದ ಕಿರೀಟ ಷಡ್ಭುಜ ಎಲ್ಲ ಹಸ್ತದಲ್ಲಿಯೂ ಆಯುಧಗಳು. ಮೈ ತುಂಬ ವಿಭೂತಿ ಹಸಿರು ಉತ್ತರೀಯನ್ನು ತೊಟ್ಟು ರಣರಂಗದಲ್ಲಿಳಿದಿರುವಂತೆ ಭಾಸವಾಗುತ್ತದೆ. ಈ ಕಲಾಕೃತಿಯ ಹಿನ್ನಲೆಯ ಪರಿಸರವನ್ನು ನೀಲಿವರ್ಣದಿಂದ ಸಂಯೋಜಿಸಿದ್ದಾನೆ. ಕಲಾಕೃತಿಯ ಚೌಕಟ್ಟಿನ

ಸುತ್ತಲೂ ಪುಷ್ಪದಿಂದ ಅಲಂಕರಿಸಿ ಕಲಾಕೃತಿಯನ್ನು ಯಶಸ್ವಿಗೊಳಸಿದ್ದಾನೆ. ಶ್ರೀ ವೀರಭದ್ರನ ಚಿತ್ರವನ್ನು ಸೂಕ್ಷ್ಮವಾಗಿ ವೀಕ್ಷಿಸಿದರೆ ವೀರಭದ್ರನ ಮುಖದಲ್ಲಿ ಗಾಂಭೀರ್ಯ ಅವನಿಂತ ಮೇಲೆ ನಿಂತ ಶೈಲಿಯನ್ನು ವೀಕ್ಷಿಸಿದರೆ ವೀರಭದ್ರನು ದುಷ್ಕರ್ಮಿಯಾದ ರಾಕ್ಷಸರನ್ನು ಸೀಳಿ ಹಾಕುವಂತೆ ಕಂಡುಬರುತ್ತದೆ. ಇನ್ನೊಂದು ವಿಶೇಷವೇನೆಂದರೆ ಕಲಾವಿದನು ಶ್ರೀ ವೀರಭದ್ರನ ಕಲಾಕೃತಿಯ ಅಕ್ಕಪಕ್ಕದಲ್ಲಿ ಯಾವುದೇ ರೀತಿಯಾದ ಭಕ್ತರ ಚಿತ್ರವನ್ನು ರಾಕ್ಷಸರ ಚಿತ್ರವನ್ನು ಚಿತ್ರಿಸಿಲ್ಲ. ಹಾಗೆ ಈ ಕಲಾಕೃತಿಗೂ ಸಹ ಸುತ್ತಲೂ ಕಟ್ಟಿಗೆಯ ಚೌಕಟ್ಟನ್ನು ಹಾಕಿ ಕಾಯ್ದಿರಿಸಲಾಗಿದೆ.

ಗಾಜಿನ ಮೇಲಿನ ಚಿತ್ರಗಳ ಮೇಲಾದ ಪ್ರಭಾವ ಮತ್ತು ಅನುಸರಿಸಿದ ಶೈಲಿ

ಜಿಲ್ಲೆಯ ಗುಳೇದಗುಡ್ಡದ ಪ್ರತಿಷ್ಠಿತರ ಮನೆಯಲ್ಲಿರುವ ಚಿತ್ರಗಳಲ್ಲಿ ಧಾರ್ಮಿಕತೆ, ಸಾಮಾಜಿಕತೆ ವೈಭವೀಕರಣದ ನೆಲೆಯಲ್ಲಿ ಪ್ರಕಟವಾಗಿವೆ. ಅಲ್ಲಿನ ಚಿತ್ರಗಳಲ್ಲಿ ಬಡತನ ಗೌಣವಾಗಿ ಶ್ರೀಮಂತಿಕೆಯ ವೈಭವೀಕರಣವೇ ಪ್ರಧಾನವಾಗಿದೆ. ಇದಕ್ಕೆ ಕಾರಣಗಳು ಇಲ್ಲವೆಂದಲ್ಲ. ರಾಜಾಶ್ರಿತ ಕಲಾವಿದರು ಅರಮನೆಯ ಸುಖದ ಸುಪತ್ತಿಗೆಯಲ್ಲಿ ತಮ್ಮ ಅಭಿವ್ಯಕ್ತಿಯನ್ನು ಪ್ರಕಟಿಸಿದವರು ಅವರಿಗೆ ಅನ್ಯ ಲೋಕದ ಬದುಕು ಕುರುಡಾಗಿರುವುದು ಒಂದಾದರೆ, ರಾಜ ಮಹಾರಾಜರು ಮತ್ತು ಕಲಾಸ್ತಕರು ವೈಭವೀ ಕರಣದ ಆಶಯಗಳು ಅಭಿವ್ಯಕ್ತಿಯನ್ನು ಬಯಸುವರೇ ಹೊರತು ದೀನ ದಲಿತರ ಬವಣೆಯನ್ನಲ್ಲ.

ಗುಳೇದಗುಡ್ಡದಲ್ಲಿರುವ ಗಾಜಿನ ಕಲಾಕೃತಿಗಳಲ್ಲಿ ಏಕಪ್ರಕಾರವಾದ ಶೈಲಿಯ ಚಿತ್ರಗಳೇ ಸಂಗ್ರಹ ಗೊಂಡಿವೆ. ಅವು ತಂಜಾವೂರು ಶೈಲಿಯ ಕಲಾಕೃತಿಗಳು ಎಂದು ನಿಸ್ಸಂದೇಹವಾಗಿ ಹೇಳಬಹುದು. ಇಂಥಹ ಚಿತ್ರಗಳನ್ನು ಕೇವಲ ಹತ್ತು ರೂಪಾಯಿಗಳನ್ನು ಕೊಟ್ಟು ಖರೀದಿಸಿದ್ದಾರೆ ಎಂದು ಪೂರ್ವಜರ ಕುಟುಂಬವು ಹೇಳುತ್ತದೆ. ಸುಮಾರು ನಾಲ್ಕು ತಲೆಮಾರಿನವುಳಷ್ಟು ಹಳೆಯದಾದ ಗಾಜಿನ ಚಿತ್ರಗಳನ್ನು ಈಗಲೂ ಅವರ ಕುಟುಂಬ ವರ್ಗದವರು ಜೋಪಾನವಾಗಿ ಕಾಯ್ದಿರಿಸಿಕೊಂಡಿದ್ದಾರೆ.

ಪ್ರಭಾವ

ಇಲ್ಲಿನ ಗಾಜಿನ ಚಿತ್ರಗಳಲ್ಲಿ ಧಾರ್ಮಿಕ ಪ್ರಭಾವಗಳು ಹೇರಳವಾಗಿವೆ. ಪಾರ್ವತಿ ಪರಮೇಶ್ವರ ಮತ್ತು ಗಣಪ ಶ್ರೀಕೃಷ್ಣ ಪರಮಾತಿಷ್ಠಿನ್ನೂ ಮುಂತಾದ ಚಿತ್ರಗಳಲ್ಲಿ ಆರೋಗ್ಯವಂತ ವ್ಯಕ್ತಿತ್ವವನ್ನು ಕುಬ್ಜವಾಗಿ ಕಲಾವಿದರು ತೋರ್ಪಡಿಸಿದ್ದಾರೆ. ಅಂದಿನ ಕಲಾವಿದರಿಗೆ ರಾಜ ಮಹಾರಾಜರೆಂದರೆ ಗಂಧರ್ವ ರಿದ್ದಂತೆ ಎಂಬ ಭಾವನೆ ರಾಜನು ಸಾಮಾನ್ಯ ಪೋಷಾಕುವಿನಲ್ಲಿ ಇದ್ದರೂ ರಾಣಿಯನ್ನು ಗಂಧರ್ವ ಕನ್ಯೆಯಂತೆ ಚಿತ್ರಿಸಿ ರಾಜನಿಗೂ ತನ್ನ ಪಟ್ಟದರಾಣಿ ಗಂಧರ್ವಕನ್ಯೆ ಎಂಬಂತಹ ಭಾವಗಳನ್ನು ತುಂಬು ವಷ್ಟರ ಮಟ್ಟಿಗೆ ಕಲಾವಿದರಿಗೆ ಅರಮನೆಯ ಜೀವನ ಪದ್ಧತಿ ಪ್ರಭಾವ ಬೀರಿದೆ. ಶೃಂಗಾರದ ಚಿತ್ರದಲ್ಲಿ

ರತಿವಿಲಾಸೀ ಭಾವವನ್ನು ಶೃಂಗಾರದ ನೆಲೆಯಲ್ಲಿಯೇ ಚಿತ್ರಿಸಿದ್ದಾರೆ. ಗೌಪ್ಯವಾಗಿರುತ್ತಿದ್ದ ಅರಮನೆಯ ಶೃಂಗಾರ ಘಟನೆಗಳನ್ನು ಅತ್ಯಂತ ದಿಟ್ಟತನದಿಂದ ಹೊರಜಗತ್ತಿಗೆ ಚಿತ್ರದ ಮೂಲಕ ಅನಾವರಣ ಗೊಳಿಸಿರುವ ಕಲಾವಿದರು. ಅಲ್ಲಿನ ಪ್ರತಿಮೆಗಳಲ್ಲಿ ಭಾವಪ್ರಚೋದಕ ಗುಣಗಳನ್ನು ತುಂಬಿದ್ದಾರೆ.

ಶೈಲಿ

ಹೆಚ್ಚಾಗಿ ತಂಜಾವೂರು ಮರಾಠ ಮತ್ತು ಮೈಸೂರು ಶೈಲಿಯನ್ನು ಕಾಣಬಹುದಾಗಿದೆ. ಮರಾಠವಾಡಾ ಮೈಸೂರು ಮತ್ತು ತಂಜಾವೂರು ಅರಸರು ಈ ಗಾಜಿನ ಚಿತ್ರಕಲಾ ವಿಧಾನಕ್ಕೆ ಹೆಚ್ಚಿನ ಪ್ರೋತ್ಸಾಹಿಸಿ ಪೋಷಿಸಿರುವ ಕಾರಣದಿಂದಾಗಿ ಇಡೀ ದಕ್ಷಿಣ ಭಾರತದ ತುಂಬ ಈ ಕಲಾಪ್ರಕಾರವು ವ್ಯಪಿಸಿಕೊಂಡು ಅಸಂಖ್ಯ ಕಲಾಕೃತಿಗಳು ಬೆಳಕಿಗೆ ಬಂದವು. ತಂಜಾವೂರು ಮಧುರೆಗಳನ್ನು ಆಳುತ್ತಿದ್ದ ಮರಾಠ ಅರಸರು ದಕ್ಷಿಣ ಚಿತ್ರಕಲಾ ಶೈಲಿಯಿಂದ ಪ್ರೇರಿತರಾಗಿ ಸ್ಥಳೀಯ ವಿಜಯನಗರ ಶೈಲಿಯೊಂದಿಗೆ ಮಿಲನಗೊಳಿಸಿ ತಂಜಾವೂರು ಶೈಲಿಯೆಂದು ಗುರುತಿಸುವ ಹೊಸ ಶೈಲಿಯೊಂದನ್ನು ಬಳಕೆಗೆ ತಂದರು.

ಈ ಚಿತ್ತಾರಗಳಲ್ಲಿ ಧಾರ್ಮಿಕ, ಸರಸಲ್ಲಾಪ, ಸಂಗೀತ ಹಾಗೂ ಸಂಯೋಜನಾತ್ಮಕ ಚಿತ್ರಗಳೆಂದು ವರ್ಗೀಕರಿಸಬಹುದಾಗಿದೆ. ಗುಳೆದಗುಡ್ಡದ ಬಸವ ಪ್ರಭು ಗಂಗಾವತಿಯವರ ನಿವಾಸದಲ್ಲಿ ಈ ಮಾದರಿಯ ಹಾಗೂ ಚಿಕ್ಕಗಾತ್ರದ ಅನೇಕ ಚಿತ್ರಗಳು ನೋಡಲು ಸಿಗುತ್ತವೆ. ಇವರ ನಿವಾಸದಲ್ಲಿ ಒಟ್ಟು ೨೦ ಕಲಾಕೃತಿಗಳಿದ್ದು ೨ ದೊಡ್ಡದಾದ ಚಿತ್ರಗಳು ನೋಡಲು ಸಿಗುತ್ತವೆ. ಹೀಗೆ ರಮಣಿಯ ವರ್ಣ ಮೇಳಗಳಿಂದ ರಚಿಸಿರುವ ಕುಬ್ಜ ಶೈಲಿಯ ಮುದ್ದು ದೇಹಾಂಗದ ಈ ಚಿತ್ರಗಳು ನೋಡುಗರಿಗೆ ಅಪ್ಯಾಯಮಾನವೆನಿಸುತ್ತದೆ.

ಕಲಾಪ್ರೇಮಿ ಶ್ರೀ ಶೀಲವಂತಪ್ಪ ಗರಡಿಯವರು ಶತಮಾನಗಳ ಹಿಂದೆ ಮುಂಬೈನಿಂದ ಮಕ್ಕಳ ಮದುವೆಯ ಹಂದರ ಅಲಂಕಾರಕ್ಕೆ ೯ ಚಿತ್ರಗಳನ್ನು ತರಿಸಿದ್ದರಂತೆ. ಕರಗಡಬು, ಬೆನ್ನಿಸಕ್ಕರೆ ಊರಿಗೆ ಊಟ ಹಾಕಿದ್ದರಂತೆ ಅವರ ಮೊಮ್ಮಕ್ಕಳು ಎಸ್.ಎಸ್.ಗಂಡಿ, ದಿ. ಬಸವರಾಜಪ್ಪ ಗರಡಿ ಮೂರು ತಲೆಮಾರುಗಳವರೆಗೆ ಚಿತ್ರಗಳನ್ನು ಸಂರಕ್ಷಿಸಿಕೊಂಡು ಬಂದಿದ್ದು ಅವರ ಕಲಾಪ್ರಜ್ಞೆ ಎತ್ತಿತೋರಿಸುತ್ತದೆ.

ಅಮೀನಗಡದ ಶ್ರೀ ಶೀಲವಂತಪ್ಪ ಎಸ್. ಗರಡಿ ಅವರ ಮನೆಯಲ್ಲಿರುವ ಗಾಜಿನ ಚಿತ್ರಗಳು

೧. **ಬೆಣ್ಣೆ ಕೃಷ್ಣ** : ಈ ಗಾಜಿನ ಚಿತ್ರದಲ್ಲಿ ಕೃಷ್ಣನ ಆಕಾರ ಹಾಗೂ ಭಂಗಿಗಳು ವಿಶೇಷವಾಗಿದೆ. ಅಂದರೆ ಸಿಂಹಾಸನದ ಮೇಲೆ ಒರೆಯಾಗಿ ಮಲಗಿ ಬೆಣ್ಣೆ ತಿನ್ನುತ್ತಿರುವ ಕೃಷ್ಣನ ಚಿತ್ರ ಅದ್ಭುತವಾಗಿದೆ. ಅಲ್ಲದೇ ಕೃಷ್ಣ ಹಾಗೂ ಹಿಂದಿರುವ ಆಕೃತಿಗಳ ಆಭರಣಗಳು ಬಟ್ಟೆಯ ಅಂಚಿನಲ್ಲಿರುವ ವಿನ್ಯಾಸಗಳು ಬಹಳ ಸುಂದರವಾಗಿದೆ.

೨. ಅಶ್ವಾರೂಢ ರಾಜ : ಈ ಚಿತ್ರದಲ್ಲಿ ಕುದುರೆಯ ಮೇಲೆ ರಾಜನು ತನ್ನ ಪತ್ನಿಯೊಂದಿಗೆ ಸವಾರಿಯಲ್ಲಿದ್ದಾನೆ. ಈ ಚಿತ್ರದಲ್ಲಿ ಕುದುರೆ ಓಡುವ ಭಂಗಿಯಲ್ಲಿದೆ. ಇವರ ಕೆಳಗೆ ಎರಡು ನಾಯಿಗಳು ಓಡುತ್ತಿವೆ. ಈ ಚಿತ್ರದಲ್ಲಿ ಕುದುರೆಯನ್ನು ಅಲಂಕಾರಿಕ ಆಭರಣಗಳಿಂದ ಚಿತ್ರಿಸಲಾಗಿದೆ. ಹೀಗೆ ಆಯುಧ ಧಾರಿಯಾದ ರಾಜನು ರಾಣಿಯೊಂದಿಗೆ ಅಲಂಕಾರಿಕ ಕುದುರೆಯ ಮೇಲೆ ಸವಾರಿ ಮಾಡುತ್ತಿರುವ ದೃಶ್ಯ ಅದ್ಭುತವಾಗಿದೆ.

೩. ಹಂಸದೊಂದಿಗೆ ರಾಣಿ : ರಾಣಿಯು ಅರಮನೆಯ ಕಂಬದ ಮೇಲೆ ಹೂನಗೆ ಬೀರುವ ಭಂಗಿಯಲ್ಲಿ ನಿಂತಿದ್ದಾಳೆ. ಈ ಸುಂದರ ಕಂಬದ ಮೇಲೆ ಹಂಸವೊಂದು ರಾಣಿಯನ್ನು ನೋಡುತ್ತ ನಿಂತಿರುವ ಹಾಗಿದೆ. ಈ ಚಿತ್ರದಲ್ಲಿ ರಾಣಿಯ ಸೀರೆಯನ್ನು ಕೆಸರಿ ಹಾಗೂ ಕೆಂಪು ಮಿಶ್ರಿತ ಬಣ್ಣಗಳಿಂದ ಮಾಡಲಾಗಿದೆ. ಈ ಸೀರೆಯ ಅಂಚನ್ನು ಆಭರಣಗಳಿಗೆ ಹೋಲುವ ರೀತಿ ಮಾಡಲಾಗಿದೆ. ಹೀಗೆ ನಿಂತಿರುವ ರಾಣಿಯು ಕೊರಳ ಸರ, ತೋಳಬಂಧಿ, ನಡಪಟ್ಟಿ, ಬಳೆಗಳನ್ನು ಧರಿಸಿದ್ದಾಳೆ. ಹೀಗೆ ಈ ಚಿತ್ರದಲ್ಲಿ ಸೀರೆಯ ಅಂಚು, ರಾಣಿಯ ಆಭರಣಗಳು ಅರಮನೆಯ ಕಂಬಗಳ ಮೇಲಿರುವ ವಿನ್ಯಾಸಗಳು ಒಂದನ್ನೊಂದು ಹೋಲುವ ರೀತಿಯಲ್ಲಿವೆ.

೪. ಶ್ರೀರಾಮ ಸಭೆ : ಭಾರತೀಯ ಸಂಪ್ರದಾಯದಲ್ಲಿ ರಾಮನನ್ನು ನೀಲಿವರ್ಣದಲ್ಲಿ ಚಿತ್ರಸಲಾಗುತ್ತದೆ. ಆದರೆ ಇಲ್ಲಿ ರಾಮನನ್ನು ಹಸಿರು ವರ್ಣದಲ್ಲಿ ಚಿತ್ರಿಸಲಾಗಿದೆ. ಇಲ್ಲಿ ಮುಖ್ಯ ಪಾತ್ರಗಳಾದ ರಾಮ, ಲಕ್ಷ್ಮಣ ಹಾಗೂ ಮುಂದೆ ಕುಳಿತಿರುವ ಹನಮಂತನನ್ನು ಹಸಿರು ಬಣ್ಣಗಳಿಂದ ಚಿತ್ರಿಸಲಾಗಿದೆ. ಈ ಚಿತ್ರದಲ್ಲಿ ರಾಮ ಲಕ್ಷ್ಮಣರು ವೆಂಕಟೇಶ್ವರನ ನಾಮವನ್ನು ಧರಿಸಿದ್ದಾರೆ. ಅಲ್ಲದೇ ಈ ಚಿತ್ರದಲ್ಲಿ ರಾಮನ ಭಕ್ತರು, ಋಷಿಮುನಿಗಳು ಹಾಗೂ ವಾನರು ರಾಮನನ್ನು ಸುತ್ತುವರಿದಿರುವುದನ್ನು ಕಾಣಬಹುದು.

೫. ಕೃಷ್ಣ ಹಾಗೂ ನರ್ತಕಿ : ಈ ಚಿತ್ರದಲ್ಲಿ ನರ್ತಕಿಯು ಕೃಷ್ಣನ ಬಳಿ ನಿಂತು ನರ್ತಿಸುತ್ತಿದ್ದಾಳೆ. ಅಲ್ಲದೇ ಕೃಷ್ಣನೂ ಸಹ ನರ್ತಿಸಲು ಪ್ರಯತ್ನಿಸುತ್ತಿರುವಂತೆ ಕಾಣುತ್ತದೆ. ಇದರಲ್ಲಿ ನರ್ತಕಿಯು ಒಂದು ಮೊಣಕಾಲನ್ನು ಊರಿ ಎರಡೂ ಕೈಗಳನ್ನು ಮೇಲಕ್ಕೆತ್ತಿದ ಭಂಗಿಯಲ್ಲಿದ್ದಾಳೆ. ಈ ಚಿತ್ರದಲ್ಲಿ ನರ್ತಕಿಯ ಸೀರೆಯನ್ನು ವಿಶೇಷವಾಗಿ ವಿನ್ಯಾಸಗೊಳಿಸಲಾಗಿದೆ. ಕೆಂಪು ಹಾಗೂ ಹಸಿರು ಅಡ್ಡಗೆರೆಗಳಿಂದ ವಿನ್ಯಾಸಗೊಳಿಸಲಾಗಿದೆ.

೬. ಬೆಣ್ಣೆ ಕೃಷ್ಣ : ಈ ಚಿತ್ರದಲ್ಲಿಯೂ ಸಹ ಕೃಷ್ಣ ಸಿಂಹಾಸನದ ಮೇಲೆ ಕುಳಿತು ಓರೆನೋಟ

ಬೀರುತ್ತ ಒಂದು ಕೈಯಲ್ಲಿ ಬೆಣ್ಣೆಯ ಗಡಿಗೆಯನ್ನು ಹಿಡಿದು ಇನ್ನೊಂದು ಕೈಯಿಂದ ತಿನ್ನುತ್ತಿದ್ದಾನೆ. ಅಲ್ಲದೇ ಅರಮನೆಯಲ್ಲಿ ವಿವಿಧ ವಿನ್ಯಾಸದ ರೇಷ್ಮೆ ಬಟ್ಟೆಗಳಿಂದ ನೆರಿಗೆಗಳನ್ನು ಮಾಡಿ ಹಾಕಿರುವ ರೀತಿಯೂ ಸೊಗಸಾಗಿ ಮೂಡಿದೆ. ಅಲ್ಲದೇ ಕೃಷ್ಣನ ಆಭರಣಗಳು ಬೆಣ್ಣೆಗಡಿಗೆಯ ಮೇಲಿರುವ ವಿನ್ಯಾಸ, ಕೃಷ್ಣನ ಆಸನ ಎಲ್ಲವೂ ಸಹ ಸುಂದರವಾಗಿ ಮೂಡಿವೆ.


೭. **ಯಶೋಧೆ ಕೃಷ್ಣ** : ಈ ಚಿತ್ರದಲ್ಲಿ ಯಶೋಧೆಯ ಬಾಲಕೃಷ್ಣನನ್ನು ಲಾಲಿಸುತ್ತಿರುವ ರೀತಿಯಲ್ಲಿದೆ. ಇಲ್ಲಿ ಬಾಲಕೃಷ್ಣನು ಯಶೋಧೆಯ ಕೊರಳನ್ನು ತನ್ನೆರಡೂ ಪುಟ್ಟ ಕೈಗಳಿಂದ ಬಳಸಿದ್ದಾನೆ. ಹಾಗೆಯೆ ತನ್ನ ಒಂದು ಕಾಲನ್ನು ತನ್ನ ಸಾಕು ತಾಯಿ ಯಶೋಧೆಯ ಮೇಲಿಟ್ಟಿದ್ದಾನೆ. ಯಶೋಧೆಯೂ ಸಹ ಬಹಳ ಪ್ರೀತಿಯಿಂದ ತನ್ನ ಕೈಗಳಿಂದ ಕೃಷ್ಣನನ್ನು ತಬ್ಬಿಕೊಂಡಿರುವ ರೀತಿಯಲ್ಲಿದೆ. ಈ ಚಿತ್ರದಲ್ಲಿ ಕೃಷ್ಣನನ್ನು ಅರೆನಗ್ನವಾಗಿ ಚಿತ್ರಿಸಲಾಗಿದೆ.

೮. **ವೆಂಕಟೇಶ್ವರ** : ಈ ಚಿತ್ರದಲ್ಲಿ ವೆಂಕಟೇಶ್ವರನು ನಿಂತ ಭಂಗಿಯಲ್ಲಿದ್ದಾನೆ. ಹೀಗೆ ಮಧ್ಯದಲ್ಲಿ ವೆಂಕಟೇಶ್ವರ ಎರಡೂ ಬದಿಯಲ್ಲಿ ಬಾಲಿಕೆಯರು ಹೂ ಹಿಡಿದು ನಿಂತಿರುವ ಹಾಗಿದೆ. ಒಂದು ಬದಿ ಇರುವ ಬಾಲಿಕೆಯ ಮೇಲೆ ಹೆಚ್ಚು ನೆರಳು ಇರುವಂತೆಯೂ ಇನ್ನೊಂದು ಬದಿಯಲ್ಲಿರುವ ಬಾಲಿಕೆಯ ಮೇಲೆ ಹೆಚ್ಚು ಬೆಳಕಿರುವಂತೆಯೂ ಚಿತ್ರಿಸಲಾಗಿದೆ. ಮಧ್ಯದಲ್ಲಿರುವ ವೆಂಕಟೇಶ್ವರರು ನಾಲ್ಕು ಕೈಗಳನ್ನು ಹೊಂದಿದ್ದು, ಕೆಳಮುಖವಾಗಿ ರಚಿಸಲಾದ ಕಮಲದ ಮೇಲೆ ನಿಂತಿದ್ದಾನೆ. ವೆಂಕಟೇಶ್ವರನ ಮುಖವನ್ನು ಮಾತ್ರ ನೀಲ ವರ್ಣದಿಂದ ರಚಿಸಿ, ದೇಹ, ಕೈಕಾಲುಗಳನ್ನು ಹಳದಿ ಹಾಗೂ ಸ್ವಲ್ಪ ಕೆಂಪು ಬಣ್ಣಗಳಿಂದ ರಚಿಸಿಲಾಗಿದೆ. ಹೀಗೆ ವೆಂಕಟೇಶ್ವರನನ್ನು ಎಲ್ಲಾ ಆಭರಣಗಳಿಂದ ವಿಶೇಷವಾಗಿ ಅಲಂಕರಿಸಿದಂತೆ ಚಿತ್ರಿಸಲಾಗಿದೆ.

೯. **ಶೃಂಗಾರ ರಾಜರಾಣಿ** : ಈ ಚಿತ್ರದಲ್ಲಿ ರಾಜ ರಾಣಿಯರನ್ನು ವಿಶೇಷ ಹಾಗೂ ಅದ್ಭುತವಾಗಿ ರಚಿಸಲಾಗಿದೆ. ರಾಜನು ಕುರ್ಚಿಯ ಮೇಲೆ ಕುಳಿತಿದ್ದಾನೆ. ರಾಣಿಯು ರಾಜನ ತಲೆಯ ಮೇಲೆ ಕೈಯಿಟ್ಟು, ಇನ್ನೊಂದು ಕೈಯನ್ನು ಸೊಂಟದ ಮೇಲಿಟ್ಟುಕೊಂಡು ನಿಂತಿದ್ದಾಳೆ. ಈ ಚಿತ್ರದಲ್ಲಿ ರಾಜ ಹಾಗೂ ರಾಣಿಯ ಉಡುಪುಗಳು ವಿಶೇಷವಾಗಿವೆ. ಅಲ್ಲದೇ ರಾಜನ ಕಿರೀಟವು ಕುರ್ಚಿಯ ಕೆಳಗೆ ಬಿದ್ದಿರುವಂತಿದೆ. ರಾಜ ಹಾಗೂ ರಾಣಿಯ ಉಡುಪು ಹಾಗೂ ಕಿರೀಟಗಳು ಒಂದೇ ವಿನ್ಯಾಸದಲ್ಲಿವೆ. ರಾಜ ಕುಳಿತಿರುವ ಕುರ್ಚಿಯು ವಿಶೇಷ ವಿನ್ಯಾಸದಲ್ಲಿವೆ. ರಾಜರಾಣಿಯರ ಆಭರಣಗಳೂ ಸರಳ ಹಾಗೂ ಸುಂದರವಾಗಿ ಒಟ್ಟಾರೆ ಕಲಾಕೃತಿಯು ಅದ್ಭುತವಾಗಿದೆ.



ಕಾಳೀಂಗ ಮರ್ಧನ
ಕೃಷ್ಣ



ನವನೀತ ಕೃಷ್ಣ



ಶ್ರೀರಾಮ ಪಟ್ಟಾಭಿಷೇಕ



ಶ್ರೀ ವೀರಭದ್ರೇಶ್ವರ



ಸರ್ಪದೊಂದಿಗೆ ಕೃಷ್ಣ



ಗಂಧರ್ವ ದಂಪತಿಗಳು



ಪ್ರೀತಿ ಕನಸಲ್ಲಿ ರಾಜ



ಮಹಾರಾಜ



ರಾಜ ಗಂಭೀರ



ಮಹಾರಾಣಿ



ಮಹಾರಾಣಿ



ಹಂಸದೊಂದಿಗೆ ರಾಣಿ



ರಾಜನೊಂದಿಗೆ ಗಂಧರ್ವ ಕನ್ಯೆ



ಸಂಗೀತ ಧರಿತ್ರಿ



ಅಲಂಕಾರದಲ್ಲಿ ರಾಣಿ






ರಾಜಕುಮಾರಿ



ರಾಜಕುಮಾರಿ



ನಾಟ್ಯ ರಾಣಿ






ರಾಜ ರಾಣಿ



ಪ್ರಣಯದಲ್ಲಿ ರಾಜ ರಾಣಿ




ಶೃಂಗಾರ ರಾಜ ರಾಣಿ



ಉಯ್ಯಾಲೆ ಆಡುತ್ತಿರುವ ರಾಣಿ



ಹಂಸದೊಂದಿಗೆ ರಾಣಿ




ವೀಣೆಯೊಂದಿಗೆ ರಾಣಿ





ರಾಜನೊಂದಿಗೆ ಗಂಧರ್ವ ಕನ್ಯೆ



ರಾಣಿಯೊಂದಿಗೆ ಗಂಧರ್ವ ಕನ್ಯೆ



ಗಂಧರ್ವ ಕನ್ಯೆಯೊಂದಿಗೆ ರಾಜ





ಗಂಧರ್ವ ಕನ್ಯೆಯರು



ಗಂಧರ್ವ ದಂಪತಿಗಳು



ಗಂಧರ್ವ ದಂಪತಿಗಳು



ಶಿವ ಪಾರ್ವತಿ ಮತ್ತು
ಗಣಪತಿ




ಯಶೋಧೆ ಕೃಷ್ಣ



ಸಂಧ್ಯಾ ತಾಂಡವ

ಅಮೀನಗಡದ ಶ್ರೀ ಶೀಲವಂತಪ್ಪ ಎಸ್.ಗರಡಿ
ಅವರ ಮನೆಯಲ್ಲಿನ ಗಾಜಿನ ಚಿತ್ರಗಳು




ಶ್ರೀರಾಮ ಸಭೆ



ಕೃಷ್ಣ ನರ್ತಕಿ




ಬೆಣ್ಣೆ ಕೃಷ್ಣ



ಅಮೀನಗಡದ ಶ್ರೀ ಶೀಲವಂತಪ್ಪ ಎಸ್.ಗರಡಿ
ಅವರ ಮನೆಯಲ್ಲಿನ ಗಾಜಿನ ಚಿತ್ರಗಳು



ಬೆಣ್ಣೆ ಕೃಷ್ಣ




ಅಶ್ವಾರೂಢ ರಾಜ




ಹಂಸದೊಂದಿಗೆ ರಾಣಿ

ಅಮೀನಗಡದ ಶ್ರೀ ಶೀಲವಂತಪ್ಪ ಎಸ್.ಗರಡಿ
ಅವರ ಮನೆಯಲ್ಲಿನ ಗಾಜಿನ ಚಿತ್ರಗಳು



ಯಶೋಧೆ ಕೃಷ್ಣ



ವೆಂಕಟೇಶ್ವರ



ಶೃಂಗಾರ ರಾಜ ರಾಣಿ



ಅಧ್ಯಾಯ - ೮

ಮಠಗಳು, ದೇವಸ್ಥಾನಗಳು ಹಾಗೂ ವಸ್ತುಸಂಗ್ರಹಾಲಯದಲ್ಲಿನ ವರ್ಣಚಿತ್ರಗಳು

* ಬಾಗಲಕೋಟೆಯ ಮುಳುಗಡೆ ಸಾಂಸ್ಕೃತಿಕ ಸಂಗ್ರಹಾಲಯ
* ಒಟ್ಟಾರೆ ಚಿತ್ರಕಲಾ ತಂತ್ರಶೈಲಿ ಪ್ರಭಾವ, ಪ್ರೇರಣೆ ಹಾಗೂ ಪ್ರಮುಖ ಲಕ್ಷಣಗಳು

ಹಿರಿಯ ಕಲಾವಿದರು ಬಾಗಲಕೋಟೆಯ ಚರಂತಿಮಠದ ಪೂಜ್ಯರು ಎದ್ದುನಿಂತ ಲೈಟ್‌ಫೆಸ್ ಪೋಟೋ ಹಾಗೂ ತೀರಾ ಅಪರೂಪವೆನ್ನುವಂತೆ ಕಿರಿಟಧಾರಿ ಬಸವಣ್ಣನವರು ಎದ್ದುನಿಂತ ಚಿತ್ರಗಳು ಗಮನ ಸೆಳೆಯುತ್ತವೆ. ಸಿಂಹಾಸನದಲ್ಲಿ ಕುಳಿತ ಬಸವೇಶ್ವರ ಅಪರೂಪದ ಚಿತ್ರವೂ ಕಲಾಮಹಾವಿದ್ಯಾಲಯದ ಗ್ರಂಥಾಲಯದಲ್ಲಿ ಶೋಭಿತವಾಗಿದೆ. ಇದೇ ರೀತಿ ಶ್ರೀ ಧೋತ್ರೆ ಎಂಬುವವರು ರಚಿಸಿದ ಸಿದ್ದನಕೊಳ್ಳದ ಅಜ್ಜನವರ ಲೈಫ್‌ಸ್ಕೇಲ್ ಭಾವಚಿತ್ರ ಅತ್ಯಂತ ಸೂಕ್ಷ್ಮ ಹಾಗೂ ಪ್ರಮಾಣಬದ್ಧವಾದದ್ದು ಹಾಗೂ ದೇವಿ ಚಿತ್ರಗಳ ಸಿದ್ಧನಕೊಳ್ಳ ಕ್ಷೇತ್ರದಲ್ಲಿ ರಾರಾಜಿಸುತ್ತಿವೆ.

ಇನ್ನು ವರ್ಣಚಿತ್ರಗಳ ಆಗರವೇ ಆಗಿರುವ ಕೂಡಲಸಂಗಮದ ಮಾತೆ ಮಹಾದೇವಿಯವರು ನಿರ್ಮಿಸಿದ ಮಹಾಮನೆಯ ಧ್ಯಾನ ಮಂದಿರ ಸಂಗ್ರಹದಲ್ಲಿ ಬೀದರ ಜಿಲ್ಲೆಯ ಹುಡುಗಿಯ ಬಸವರೆಂಬ ಕಲಾವಿದರು ರಚಿಸಿದ ೧೨ನೇ ಶತಮಾನದ ಶರಣರ ಕಾಯಕ ಆಧಾರಿತ ಕಾಲ್ಪನಿಕ ವರ್ಣಚಿತ್ರಗಳು ಪ್ರದರ್ಶಿತವಾಗಿವೆ. ಇಲ್ಲಿ ಕಲಾವಿದ ಸಹಜವಾಗಿ ೧೨ನೇ ಶತಮಾನದತ್ತ ಕರೆದೊಯ್ಯುತ್ತಿವೆ. ಶರಣರ ಮುಖ ಲಕ್ಷಣಗಳ ಅವರ ಕಾಯಕ ತತ್ವನಿಷ್ಠೆ ಶರಣರೆಂಬುದನ್ನು ಕಲಾವಿದನ ಕಲ್ಪನೆಯಲ್ಲಿ ರಾರಾಜಿಸುತ್ತಿರುವ ನೂರಾರು ವರ್ಣಚಿತ್ರಗಳು ಸಮ್ಮಿಳಿತವಾಗಿ ಭಕ್ತಿಭಾವ ಉಂಟು ಮಾಡುತ್ತವೆ.

ಇನ್ನು ಈ ಶತಮಾನದ ಕಂಡ ಅಪರೂಪದ ಕಲಾವಿದ ಕಲಾಸಾಧಕರಾದ ಹಾಗೂ ಭೂ ದೃಶ್ಯವನ್ನೇ ತಮ್ಮ ಉಸಿರಾಗಿಸಿಕೊಂಡಿರುವ ಶ್ರೀ ಎಂ.ಎಸ್. ಚಂದ್ರಶೇಖರ ಅವರ ಅಪರೂಪದ ಬಾದಾಮಿ ಪರಿಸರದ ಮೂರು ಚಿತ್ರಗಳು ಬಾದಾಮಿಯ ಮಯೂರ ಹೊಟೇಲ್‌ನಲ್ಲಿ ಸುಸಜ್ಜಿತವಾದ ಫ್ರೇಂ ನೊಂದಿಗೆ ಮೂಲಕಲಾ ಕೃತಿಗಳು ಸಂರಕ್ಷಿತಗೊಂಡಿರುವುದು ಅಪರೂಪವೆನಿಸುತ್ತದೆ. ಸುಮಾರು ಮೂರು ನಾಲ್ಕು ಅಡಿ ಉದ್ದಗಲ ಕಲಾಕೃತಿಗಳು ಜಲವರ್ಣದ ಛಾಯೆಯಿಂದ ಇದು ಛಾಯಾಚಿತ್ರವೇನೊ ಎನ್ನುವಷ್ಟು ನೈಜವಾಗಿ ಸೃಷ್ಟಿಯಾಗಿ ಕಂಗೊಳಿಸುತ್ತಿವೆ. ಜಿಲ್ಲೆಯ ಇನ್ನು ಅನೇಕ ಮಠಗಳಾದ ಶ್ರೀ ಮರುಘರಾಜೇಂದ್ರ ಮಠ ಜಮಖಂಡಿ ಓಲೆಮಠ ತೇರದಾಳದ ಅಲ್ಲಮಪ್ರಭು ದೇವಾಲಯ ಮೊದಲಾದ ಕಡೆಯಲ್ಲಿ ಆಯಾ ಪ್ರದೇಶದ ದೃಶ್ಯಕಲಾವಿದರು ಸೃಷ್ಟಿಸಿದ ದೈವಪ್ರಜ್ಞಾ ಭಾವಚಿತ್ರಗಳು ಇಂದಿಗೂ ಸಂಗ್ರಹಗೊಂಡು ಜಿಲ್ಲೆಯ ವರ್ಣಚಿತ್ರ ಪರಂಪರೆಯನ್ನು ಉಳಿಸಿಕೊಂಡು ಕಿರಿಯ ಕಲಾವಿದರಿಗೆ ದಾರಿದೀಪವಾಗಿ ನಿಂತಿವೆ.

ಜಿಲ್ಲೆಯ ಎಲ್ಲ ಮೂಲ ತಾಣಗಳಿಂದ ಹರಿದುಬಂದು ಒಂದೆಡೆ ಸಂಗ್ರಹವಾಗಿರುವ ಜನಪದ ವಸ್ತುಸಂಗ್ರಹಾಲಯದ ಒಂದು ಸ್ಥೂಲ ಪರಿಚಯದ ಅಗತ್ಯೆ ಇರುವದೆನಿಸುವುದರಿಂದ ಸಂಗ್ರಹಾಲಯದ ಒಳನೋಟವನ್ನು ಇಲ್ಲಿ ವಿವರಿಸಲಾಗಿದೆ.

ಬಾಗಲಕೋಟೆಯ ಮುಳುಗಡೆ ಸಾಂಸ್ಕೃತಿಕ ಸಂಗ್ರಹಾಲಯ

ಬಾಗಲಕೋಟೆ ಜಿಲ್ಲೆ ಆಲಮಟ್ಟಿಹಿನ್ನೀರಿನಲ್ಲಿ ಮುಳುಗಡೆಯಾದಾಗ, ಅಲ್ಲಿಸರಕಾರಿ ಅಧಿಕಾರಿ ಗಳಿಗೆ ಅದರಲ್ಲಿ ಡಾ. ಶಿವಾನಂದ ಜಾಮದರ ಆಯುಕ್ತರು ತುಂಬಾ ಆಸಕ್ತಿವಹಿಸಿ ನೂರಾರು ಜನ ತಜ್ಞರನ್ನು ರಾಜ್ಯದ್ಯಾಂತ ವಿದ್ವಾಂಸ ಇತಿಹಾಸಕಾರರು ಕಲಾವಿದರು ಛಾಯಾಗ್ರಾಹಕರನ್ನು ಕರೆಸಿ ಎರಡು ನೂರು ಹಳ್ಳಿಗಳನ್ನು ಸಂದರ್ಶನ ನೀಡಿ ಸಂಗ್ರಹಿಸಿದ ಗ್ರಾಮೀಣ ಬದುಕಿನ ಮಡಿಕೆ, ಕುಡಿಕೆ, ಮೊರ, ಕಂಬ, ಒಕ್ಕಲುತನ ಸಾಮಗ್ರಿ ಅಡಿಗೆ ಮನೆ ಪ್ರಾಚೀನತೆ ಎಲ್ಲಾ ಸಕಾರಗೊಂಡು ವಸ್ತು ಸಂಗ್ರಹಾಲಯವಾಗಿ ನಿಂತುದ್ದು ನವನಗರದ ಜನಪದ ವಸ್ತು ಸಂಗ್ರಹಾಲಯ.

ಬಾಗಲಕೋಟೆ ಜನಪದ ವಸ್ತು ಸಂಗ್ರಹಾಲಯದಲ್ಲಿ ನಾವು ಹಬ್ಬ ಹರಿದಿನ, ಆಚರಣೆ, ನಂಬಿಕೆಗಳು, ಇವುಗಳನ್ನು ನೋಡಬಹುದು. ಇವುಗಳನ್ನು ನೋಡಿದರೆ ನಮ್ಮ ಕಾಲದಲ್ಲಿ ಆಚರಿಸುತ್ತಿದ್ದ ಸಂಸ್ಕೃತಿ ಸಂಪ್ರದಾಯಗಳನ್ನು ಒರೆಗೆ ಹಚ್ಚಿದರೆ ನಾವು ಇಂದಿನ ಆಧುನಿಕ ಯುಗದಲ್ಲಿ ಒರಗೆ ಹಚ್ಚಿದರೆ ಇಂದಿನ ಜನರಿಗೆ ಎಳ್ಳಷ್ಟು ಆಸಕ್ತಿಯಿಲ್ಲವೆಂಬುದು ಇಗೀನ ಮಟ್ಟಿಗೆ ತಿಳಿದು ಬರುತ್ತದೆ.

ಪುಟ್ಟುದೊಂದು ಗ್ರಾಮ ಭಾರತವನ್ನು ಬಾಗಲಕೋಟೆಯಲ್ಲಿ ಸೃಷ್ಟಿ ಮಾಡಿರುವ ಸೊಲಬಕ್ಕನವರು ಜಾಗತೀಕರಣದ ಭರಾಟೆಯಲ್ಲಿ ಮುಳುಗಿ ಹೋಗುತ್ತಿರುವ ಗ್ರಾಮವನ್ನು ಜನ ಸಂಸ್ಕೃತಿಯನ್ನು ಒಂದೆಡೆ ಕಾಣಲು ಅವಕಾಶ ಮಾಡಿಕೊಟ್ಟಿದ್ದಾರೆ. ಹೊರಾಂಗಣ ಮತ್ತು ಬಯಲು ಮ್ಯೂಜಿಯಂನ ಸಾಕಾರಗೊಳ್ಳಲು ಡಾ. ಶಿವಾನಂದ ಜಾಮದಾರರು ಅನುವು ಮಾಡಿಕೊಟ್ಟಿದ್ದನ್ನು ಸೊಲಬಕ್ಕನವರು ಪ್ರೀತಿಯಿಂದ ನೆನೆಯುತ್ತಾರೆ.

ಹಲವು ಬುಡಕಟ್ಟಿನ ಕುಲಕಸುಬುಗಳಾದ ಚಮ್ಮಾರ, ಕಮ್ಮಾರ, ಗೌಡ ಮತ್ತು ಆಳು, ಮಡಿಕೆ ಮಾಡುತ್ತಿರುವವರು, ಬಳೆತೊಡಿಸುವವಳು, ಗಾದಿಯನ್ನು ಮಾಡುತ್ತಿರುವ ದಂಪತಿ, ನೇಯ್ಗೆಯನ್ನು ಮಾಡುತ್ತಿರುವವರು, ಚಪ್ಪಲಿಯನ್ನು ತಯಾರಿಸುವವರು, ಬುಟ್ಟಿಯನ್ನು ಹೆಣೆಯುತ್ತಿವವರು, ಚೌರವನ್ನು ಮಾಡುತ್ತಿರುವ, ಗಾಣದಲ್ಲಿ ಕೆಲಸವನ್ನು ಮಾಡುತ್ತಿರುವವರು, ಸಂಗ್ರಹಾಲಯದಲ್ಲಿ ನೋಡಬಹುದು. ಇಂದಿನ ಸಂದರ್ಭಗಳಲ್ಲಿ ಹಳ್ಳಿಗಳಲ್ಲಿ ಕುಲಕಸುಬುಗಳು ಮರೆಯಾಗುತ್ತಿವೆ. ಇದಕ್ಕೆ ಜನರು ಹೊಸ ಹೊಸ ವೈಜ್ಞಾನಿಕ ಸಾಮುಗ್ರಿಗಳನ್ನು ಮೊರೆ ಹೋಗುತ್ತಿರುವುದೆ ಆಗಿದೆ.

ಕಲಾವಿದರನ್ನು ಕರೆಯಿಸಿ ಅವರಿಂದ ಕಾರ್ಯಕ್ರಮುಗಳನ್ನು ಮೂಡಿಸುವದು. ಸುತ್ತಮುತ್ತಲು ಯಾವುದಾದರು ಕಾರ್ಯಕ್ರಮವಿದ್ದರೆ ಇಲ್ಲಿಯ ಕಲಾವಿದರನ್ನು ಅಲ್ಲಿಗೆ ಕರೆದು ಕೊಂಡುಹೋಗಿ ಅವರಿಂದ ಕಾರ್ಯಕ್ರಮವನ್ನು ಮಾಡಿಸಿ ಅವರಿಗೆ ಸಾಕಷ್ಟು ಅವಕಾಶವನ್ನು ನೀಡಿ ಮರೆಯಾಗಿ ಹೋಗುತ್ತಿರುವ ಕಲಾವಿದರನ್ನು ಬೆಳಕಿಗೆ ತರುವ ಕೆಲಸವನ್ನು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಮಾಡುತ್ತಿದೆ. ಜಾನಪದ

ಕಲಾತಂಡಗಳು ಅಳಿದು ಹೋಗದಂತೆ ಇವುಗಳು ಮರೆಯಾಗದ ರೀತಿಲ್ಲಿ ಇವರನ್ನು ಎಂದೆಂದಿಗೂ ನಮ್ಮ ಕಣ್ಣ ಮುಂದೆ ಅಜರಾಮರವಾಗಿ ಇರಲು ಅವುಗಳನ್ನು ಕಾಪಾಡುವುದು ನಮ್ಮ ಕರ್ತವ್ಯವಾಗಿದೆ. ಅವುಗಲು ನಮ್ಮ ಜೀವನದ ಅವಿಭಾಜ್ಯ ಅಂಗವಾಗಿವೆ. ಅವು ತಲೆ ತಲೆಮಾರಿಗೆ ಮುಂದುವರಿಕೆಯ ಎಂಬುದು ನಮ್ಮ ಕೆಲಸವಾಗಿದೆ. ಬೆಳಕಿಗೆ ತರುವ ಸಲುವಾಗಿ ಈ ಇಲಾಖೆ ಇನ್ನಷ್ಟು ಹೆಚ್ಚಿನ ರೀತಿಯಲ್ಲಿ ಕಾರ್ಯ ಕ್ರಮಗಳನ್ನು ಏರ್ಪಡಿಸಲಿ. ಜನಪದವು ಇಂದಿನ ಜನರಿಗೆ ತಿಳಿಯುವಂತಾಗಲಿ. ಆದ್ದರಿಂದ ಇಲ್ಲಿ ನಾನು ಸ್ವಲ್ಪ ಮಟ್ಟಿಗೆ ಇದರ ಪರಿಚಯವನ್ನು ಮಾಡಿಕೊಡುತ್ತಿದ್ದೇನೆ. ಇದರ ಮಗ್ಗುಲಲ್ಲಿ ಇರುವುದೆ ಕನ್ನಡ ಸಾಹಿತ್ಯ ಪರಿಷತ್ತು. ಇದು ಪ್ರಾರಂಭವಾಗಿ ಎರಡು ವರ್ಷಗಳಾಗಿವೆ. ಇಲ್ಲಿ ಕನ್ನಡ ಸಾಹಿತ್ಯ ಸಭಾವನವನ್ನು ಕಾಣಬಹುದು. ಬಾಗಲಕೋಟೆಯಲ್ಲಿ ಅನೇಕ ಕವಿಗಳಿದ್ದಾರೆ. ಆದರೆ ಈಗಿನ ಸಂದರ್ಭದಲ್ಲಿ ಅನೇಕ ಕವಿಗಳು ಹುಟ್ಟುತ್ತಿದ್ದಾರೆ. ಇದರ ಬಲಗಡೆಗೆ ಇರುವುದೇ ಜಿಲ್ಲಾ ಕೇಂದ್ರ ಗ್ರಂಥಾಲಯ. ಈ ಗ್ರಂಥಾಲಯ ದಲ್ಲಿ ಕಲೆ, ಸಾಹಿತ್ಯ, ಶಿಲ್ಪ, ಸಾಮಾಜಿಕ, ಧಾರ್ಮಿಕ, ರಾಜಕೀಯ, ಪ್ರಾಚೀನ ಗ್ರಂಥಗಳ ಪುಸ್ತಕಗಳನ್ನು ನಾವು ಇಲ್ಲಿ ನೋಡಬಹುದು. ಇಲ್ಲಿ ಬರುವ ವಿದ್ಯಾರ್ಥಿಗಳಿಗೆ ಅನುಕೂಲ ಆಗಲಿ ಎಂದು ಸುಸಜ್ಜಿತ ವ್ಯವಸ್ಥೆಯನ್ನು ಮಾಡಿದ್ದಾರೆ. ಒಟ್ಟಾರೆ ಬಾಗಲಕೋಟೆ ವಸ್ತುಸಂಗ್ರಹಾಲಯವು ಕರ್ನಾಟಕದಲ್ಲಿಯೆ ವಿಶಿಷ್ಟ ವಾಗಿದೆ. ಈ ವಸ್ತುಸಂಗ್ರಹಾಲಯದ ಸುತ್ತಮುತ್ತಲು ಇರುವ ಕಟ್ಟಡಗಳನ್ನು ಅಧ್ಯಯನದ ದಾಖಲೀಕರಣದ ದೃಷ್ಟಿಯಿಂದ ಬಳಸಿಕೊಳ್ಳಲಾಗಿದೆ.

ವಸ್ತು ಸಂಗ್ರಹಾಲಯವನ್ನು ಪ್ರವೇಶಿಸಿದರೆ ನಾವು ಮೊದಲು ನೋಡುವುದು ಭಿತ್ತಿ ಚಿತ್ರಗಳನ್ನು ಇವುಗಳಲ್ಲಿ ೧೫ಚಿತ್ರಗಳನ್ನು ಇಲ್ಲಿ ಮಾಡಿದ್ದಾರೆ. ಭಿತ್ತಿ ಎಂದರೆ ಗೋಡೆ ಎಂದು ಹೇಳಬಹುದು. ಇದನ್ನು ನಾವು ಗೋಡೆಯ ಮೇಲೆ ಮಾಡುತ್ತೇವೆ. ಬೇಕಾದ ಚಿತ್ರಣವನ್ನು ನಿಗದಿ ಪಡಿಸಿಕೊಂಡ ಅಳತೆಯಲ್ಲಿ ನಾವು ೧೫ ಮಾಧ್ಯಮಗಳಲ್ಲಿ ರಚಿಸಿದಂತಹ ಭಿತ್ತಿಚಿತ್ರಗಳನ್ನು ನಾವು ನೋಡಬಹುದು. ಇವುಗಳು ಹಾನಿಯಾಗದಂತೆ ಇವುಗಳಿಗೆ ದೊಡ್ಡದಾದ ಕಟ್ಟಿಗೆಯ ಚೌಕಟ್ಟನ್ನು ಮಾಡಿದ್ದಾರೆ. ಇವುಗಳನ್ನು ಯಾರೂ ಮುಟ್ಟದ ರೀತಿಯಲ್ಲಿ ಇವುಗಳ ಮುಂದೆ ಕಬ್ಬಿಣದ ಸಲಾಕೆಗಳನ್ನು ಅಲ್ಲಿರುವ ೧೫ ನಿಸರ್ಗದಲ್ಲಿ ದೊರೆಯುವಂತಹ ವಸ್ತುಗಳಿಂದಾದ ಕಲಾಕೃತಿಗಳಾಗಿರುವುದನ್ನು ಇಲ್ಲಿ ಕಾಣಬಹುದು. ಇಲ್ಲಿ ನಾವು ಮೂರು ಶಿಲ್ಪಗಳ ಗ್ಯಾಲರಿಗಳನ್ನು ಕಾಣಬಹುದು. ನಾವು ಇಲ್ಲಿ ಕುಲಕಸುಬುದಾರರ ಶಿಲ್ಪಗಳನ್ನು ಕಾಣಬಹುದು. ಇವುಗಳ ಉದ್ದೇಶವೆಂದರೆ ನಮ್ಮಲ್ಲಿ ಕಲೆಗಳು, ಆಚರಣೆಗಳು, ನಂಬಿಕೆಗಳು, ಹಬ್ಬಗಳು, ನಮ್ಮ ಮುಂದೆ ನಶಿಸಿ ಹೋಗುತ್ತಿವೆ. ಆದ್ದರಿಂದ ಅವುಗಳನ್ನು ಬೆಳಕಿಗೆ ತರುವ ಉದ್ದೇಶವನ್ನು ಹೊಂದಲಾಗಿದೆ. ಹಳ್ಳಿಗಳಲ್ಲಿ ಆಚರಿಸುತ್ತಿದ್ದ ಹಬ್ಬಗಳು ಇಂದು ನಮ್ಮ ಕಣ್ಣಮುಂದೆಯೆ ನಶಿಸಿ ಹೋಗುತಿವೆ. ಇವುಗಳನ್ನು ಇಲ್ಲಿ ನೈಜ

ರೀತಿಯಲ್ಲಿ ನಾವು ಕಾಣಬಹುದು. ಇಲ್ಲಿಯ ಚಿತ್ರಗಳನ್ನು ನೋಡಿದರೆ ಇವುಗಳಲ್ಲಿ ಜೀವಂತಿಕೆಯನ್ನು ಕಾಣಬಹುದು. ಇಲ್ಲಿ ರಚನೆಗೊಂಡಿರುವ ಕಲಾಕೃತಿಗಳು ಗ್ರಾಮೀಣ ಜನ ಜೀವನದ ಪ್ರತೀಕಗಳಾಗಿವೆ.

ಸುಣ್ಣವನ್ನು ಲೇಪಿಸಿ ಇನ್ನೂ ಹಸಿಯಾಗಿರುವಾಗಲೇ ಚಿತ್ರವು ಪೂರ್ಣವಾಗಿ ಚಿತ್ರಿತವಾಗುವಂತೆ ಚಿತ್ರಿಸುವದು ಫ್ರೆಸ್ಕೊ ಪದ್ಧತಿಯ ವೈಶಿಷ್ಟವಾಗಿದೆ. ಸುಣ್ಣವು ಒಣಗಿದ ನಂತರ ಅದರೊಂದಿಗೆ ಚಿತ್ರವೂ ಗಟ್ಟಿಗೊಂಡು ಶಾಶ್ವತವಾಗಿ ಉಳಿಯುತ್ತದೆ. ಪುನರುತ್ಥಾನ ಕಾಲದಲ್ಲಿ ಗೋಡೆಗಳ ಮೇಲೆ ಚಿತ್ರಿಸಲ್ಪಟ್ಟ ಅನೇಕ ಫ್ರೆಸ್ಕೊ ಚಿತ್ರಗಳು ಉತ್ಕೃಷ್ಟ ಕಲಾಕೃತಿಗಳಾಗಿವೆ. ಗೋಡೆಗಳಿಗೆ ಬಣ್ಣವನ್ನು ಹಚ್ಚುವ ವಿಧಾನಗಳೂ ಅನೇಕ ವಿಧಗಳಾಗಿವೆ. ತೈಲವರ್ಣ ಮತ್ತು ಮೇಣ ವರ್ಣಗಳನ್ನು ಸಹ ಬಳಸಬಹುದೆಂಬುದಕ್ಕೆ ವೆನಿಸ್ ಕಡೆಗಳಲ್ಲಿ ಕ್ಯಾನವಾಸನ ಮೇಲೆ ಚಿತ್ರಿಸಿ ನಂತರ ಗೋಡೆ ಇಲ್ಲವೆ ಒಳಮಾಳಿಗೆಯಲ್ಲಿ ಅಂಟಿಸಿರುವದು ಕಂಡು ಬರುತ್ತದೆ. ಸುಣ್ಣವು ಹಸಿಯಾಗಿರುವಾಗಲೇ ಚಿತ್ರಣವೂ ಮುಗಿಯಲೇ ಬೇಕಾಗಿರುವುದರಿಂದ ಈ ಪದ್ಧತಿಯು ಬಹು ಕಠಿಣವಾಗಿದೆ. ಚಿತ್ರಣ ಕಾರ್ಯ ಸಾಧ್ಯವಾಗುವ ಮಟ್ಟಿಗೆ ಗೋಡೆಯ ಭಾಗದ ಮೇಲೆ ಸುಣ್ಣವನ್ನು ಹಸಿಯಾಗಿರಿಸರಬೇಕಾದುದು ಅಗತ್ಯವಾಗಿದೆ. ಒಂದು ಬಾರಿ ವರ್ಣವನ್ನು ಬಳಿದ ನಂತರ ತಿದ್ದುಪಡಿ ಮಾಡಲು ಸಾಧ್ಯವಾಗಲಾರದು. ಅಲ್ಲದೆ ಬಣ್ಣವು ಒಣಗಿದ ಬಳಿಕ ಬಣ್ಣದ ರೂಪ ಬದಲಾವಣೆ ಗೊಳ್ಳುವುದರಿಂದ ಸರಿಯಾದ ಬಣ್ಣವನ್ನು ತಯಾರಿಸಿಕೊಳ್ಳಲು ಕಲಾವಿದನಿಗೆ ಅಸಾಮಾನ್ಯ ಜಾಣ್ಮೆ ಇರಬೇಕಾದುದು ಅತ್ಯವಶ್ಯಕವಾಗಿದೆ.

ನೇರವಾಗಿ ಗೋಡೆಯ ಮೇಲೆ ಚಿತ್ರದ ಬಾಹ್ಯರೇಖೆಗಳನ್ನು ಎಳೆಯಲು ಸಾಧ್ಯವಿಲ್ಲದಿರುವುದರಿಂದ ಇಟಾಲಿಯನ್ ಫ್ರೆಸ್ಕೊ ಕಲಾವಿದರು ಇಡೀ ಗೋಡೆಯ ಮೇಲೆ ಚಿತ್ರಿಸಲಿರುವ ಸಂಪೂರ್ಣ ಚಿತ್ರದ ಬಾಹ್ಯರೇಖೆಗಳನ್ನು ದೊಡ್ಡದಾದ ಕಾಗದದ ಮೇಲೆ ಚಿತ್ರಿಸಿ ನಂತರ ಬಾಹ್ಯರೇಖೆಯಗುಂಟ ಪೆನ್ ಇಲ್ಲವೆ ಮೊನಚಾದ ಮೊಳೆಯಿಂದ ಸಣ್ಣ ಸಣ್ಣ ತೂತುಗಳನ್ನು ಮಾಡಿಕೊಂಡು ಇಲ್ಲವೆ ಗೆರೆಗಳನ್ನು ಎಳೆದುಕೊಂಡು ಕಾಗದವನ್ನು ಗೋಡೆ ಕಡೆ ಅಂಟಿಸಿ ಚಿತ್ರದ ಬಾಹ್ಯರೇಖೆಗಳನ್ನು ಹಸಿಸುಣ್ಣದ ಲೇಪದ ಮೇಲೆ ಚಿತ್ರಿಸಿಕೊಳ್ಳುವದರಿಂದ ಇದಕ್ಕೆ ಎಂದು ಕರೆಯಲಾಗುತ್ತದೆ. ಸುಣ್ಣವು ಒಣಗಿದ ನಂತರ ಟೆಂಪರಾ ವಿಧಾನದಿಂದ ಚಿತ್ರಕ್ಕೆ ಮುಕ್ತಾಯ ಸ್ಪರ್ಶಗಳನ್ನು ಕೊಡುತ್ತಿದ್ದರು. ಆದರೆ ದೈತ್ಯ ಫ್ರೆಸ್ಕೊ ಕಲಾವಿದರು ಟೆಂಪರಾ ವಿಧಾನದಿಂದ ಚಿತ್ರಣವನ್ನು ಮುಕ್ತಾಯಗೊಳಿಸಿದ್ದಲ್ಲದೆ ನೈಜ ಫ್ರೆಸ್ಕೊ ವಿಧಾನದಂತೆ ಚಿತ್ರವು ಶಾಶ್ವತವಾಗಿರಲೆಂದು ಸಾಧ್ಯವಾದ ಮಟ್ಟಿಗೆ ಫ್ರೆಸ್ಕೊ ವಿಧಾನದಲ್ಲಿಯೆ ಚಿತ್ರಗಳಿಗೆ ಮುಕ್ತಾಯ ಸ್ಪರ್ಶಗಳನ್ನು ಕೊಡುತ್ತಿದ್ದರು. ಟೆಂಪರಾ ಮತ್ತು ಫ್ರೆಸ್ಕೊ ವಿಧಾನಗಳೆರಡರಲ್ಲಿಯೂ ಸರಿ ಮತ್ತು ತಪ್ಪುಗಳು ಸರಿಸಮಾನವಾಗಿವೆ. ಎರಡು ವಿಧಾನಗಳಲ್ಲಿಯೂ ತೆಳುವರ್ಣ ಛಾಯೆ, ದಟ್ಟ ಮುಸುಕಿನ ಪರಿಣಾಮಗಳ ಚಿತ್ರಣ ಕಷ್ಟಸಾಧ್ಯವಾಗಿದೆ. ಫ್ಲೋರಾಟಿಯನ್ ಪಂಥವು ಟೆಂಪರಾ ವಿಧಾನದಲ್ಲಿ ಅತ್ಯದ್ಭುತವಾದ

ಬೆಳವಣಿಗೆಯನ್ನು ತೀರಿಸಿದಂತೆ ಪ್ರೆಸ್ಕೊ ವಿಧಾನದಲ್ಲಿಯೂ ಅದ್ಭುತವಾದ ಸಾಧನೆಯನ್ನು ತೋರಿಸಿದೆ. ವೇನಿಷಿಯನ್ ಪಂಥವು ತೈಲವರ್ಣ ವಿಧಾನವನ್ನು ಧಾರಾಳವಾಗಿ ಬಳಸಿದಂತೆ ಟೆಂಪರಾ ಇಲ್ಲವೆ ಪ್ರೆಸ್ಕೊ ಪದ್ಧತಿಯನ್ನು ಬಳಸಲು ಉತ್ಸುಕವಾಗಿರಲಿಲ್ಲ. ಉತ್ತರ ಯುರೋಪಿನಂಥ ತಂಪು ಮತ್ತು ಆರ್ದ್ರ ವಾತಾವರಣದ ದೇಶಗಳಲ್ಲಿ ಪ್ರೆಸ್ಕೊ ಪದ್ಧತಿಯನ್ನು ಹೆಚ್ಚಾಗಿ ಬಳಸಲಿಲ್ಲ. ಭಾರತದಲ್ಲಿ ಪ್ರೆಸ್ಕೊ ವಿಧಾನವೂ ಕ್ರಿ. ಪೂ. ೧ನೇಯ ಶತಮಾನದಿಂದಲೂ ಬಳಕೆಯಲ್ಲಿತ್ತು. ಎಂಬುದಕ್ಕೆ ಅಜಂತಾ, ಎಲ್ಲೋರಾ, ನಾಸಿಕ್, ಬಾಗ್, ಸಿಗೀರಿಯ, ಮುಂತಾದ ಕಡೆಗಳಲ್ಲಿರುವ ಭಿತ್ತಿಚಿತ್ರಗಳು ಪ್ರತ್ಯೇಕ್ಷ ಉದಾಹರಣೆಯಾಗಿವೆ. ಇಲ್ಲಿ ಹದಿನಾಲ್ಕು ಭಿತ್ತಿಚಿತ್ರಗಳನ್ನು ಅಭ್ಯಾಸಕ್ಕೆ ಒಳಪಡಿಸಲಾಗಿದೆ.

ಬಸವಣ್ಣ ಹುಟ್ಟುಹಬ್ಬ

ಈ ಹಬ್ಬವು ವೈಶಾಖ ಮಾಸದ ತೃತೀಯದಂದು ಬರುತ್ತದೆ. ಇದು ಹನ್ನೆರಡನೆಯ ಶತಮಾನದ ಭಕ್ತಿ ಭಂಡಾರಿ ಬಸವ ಜಯಂತಿ ಬಗ್ಗೆ ತಿಳಿಸಿಕೊಡುತ್ತದೆ. ಇವರು ಕ್ರಾಂತಿದರ್ಶಿ, ಸಮತಾವಾದಿ, ಸಮಾಜ ಸುಧಾರಕ. ನಾವು ಇಲ್ಲಿ ಆಧುನಿಕ ಕಾಲದ ಕಲಾಕೃತಿಗಳನ್ನು ಕಾಣಬಹುದು. ಚಿತ್ರದಲ್ಲಿ ಮುನ್ನೆಲೆಯಲ್ಲಿ ಬಂಡಿಯ ಮೇಲೆ ಬಸವಣ್ಣನವರ ಭಾವಚಿತ್ರವನ್ನು ಇಟ್ಟುಕೊಂಡು ಮೆರವಣಿಗೆಯ ದೃಶ್ಯವನ್ನು ನೋಡ ಬಹುದು. ಇದನ್ನು ಮಣ್ಣಿನಿಂದ ಮಾಡಿರುವದನ್ನು ಕಾಣಬಹುದು. ಇಲ್ಲಿ ಜನರು ಜೋಡೆತ್ತಿನ ಬಂಡಿಯ ಮೇಲೆ ಇರುವದನ್ನು ನೋಡಬಹುದು. ಇಲ್ಲಿ ಜೋಡು ಎತ್ತಿನ ಮೇಲೆ ಬಸವಣ್ಣನವರ ಚಿತ್ರವಿರುವುದನ್ನು ಕಾಣಬಹುದು. ಎತ್ತುಗಳ ಮುಖದ ಮೇಲೆ ಅಲಂಕಾರವನ್ನು ಮಾಡಿರುವಂತಹುದನ್ನು ಕೊರಳಲ್ಲಿ ಗಂಟೆಗಳನ್ನು ಹಾಕಿರುವದನ್ನು, ಇದರ ಹಿಂದೆ ಜೋಡಿ ಎತ್ತುಗಳು ಮೆರವಣಿಗೆಯಲ್ಲಿ ಹೋಗುತ್ತಿರುವದನ್ನು ಕಾಣಬಹುದು. ಕಾಲುಗಳಲ್ಲಿ ಅಲಂಕಾರವನ್ನು ಮಾಡಿರುವದನ್ನು ನಾವು ಕಾಣಬಹುದು. ಹಿನ್ನೆಲೆಯಲ್ಲಿ ಮನೆಗಳನ್ನು ಕಾಣಬಹುದು. ಮನೆಗಳನ್ನು ಹಳ್ಳಿಗಳಲ್ಲಿ ಇರುವಂತೆ ಮಾಡಿರುವದನ್ನು ನಾವು ಕಾಣಬಹುದು. ಹಿನ್ನೆಲೆಯಲ್ಲಿ ಮನೆಗಳನ್ನು ಕಾಣಬಹುದು. ಮನೆಗಳನ್ನು ಹಳ್ಳಿಗಳಲ್ಲಿ ಇರುವಂತೆ ಮಾಡಿರುವದನ್ನು ಕಾಣಬಹುದು. ಮನೆಗಳ ಮುಂದೆ ಮೆರವಣಿಗೆ ಹೋಗಿರುವದನ್ನು ಕಾಣುತ್ತೇವೆ. ಮನೆಗಳ ಮಧ್ಯದಲ್ಲಿ ಆಲದ ಮರವನ್ನು ಕಾಣಬಹುದು. ಇಲ್ಲಿ ಜನರು ನಿಂತುಕೊಂಡು ಮೆರವಣಿಗೆಯನ್ನು ನೋಡುತ್ತಿರುವದನ್ನು ಹೆಣ್ಣುಮಕ್ಕಳು, ಚಿಕ್ಕಮಕ್ಕಳು, ಹರೆಯದ ಹುಡುಗರು ಕಟ್ಟೆಯ ಮೇಲೆ ನಿಂತಿರುವುದನ್ನು ನೋಡಬಹುದು.

ಕರಿಹರಿಯುವ ದೃಶ್ಯ

ಇದು ಜೇಷ್ಠ ಮಾಸದಲ್ಲಿ ಬರುವ ಕಾರಹುಣ್ಣಿಮ್ಮೆಯಾಗಿದೆ. ಮಧಿತಾರ್ಥ ಉತ್ತರ ಕರ್ನಾಟದಲ್ಲಿ ಇದು ಮಳೆಗಾಲದ ಮುನ್ಸೂಚನೆ, ಋತುಮಾನದ ಬದಲಾವಣೆ. ಅಂದು ಮಣ್ಣೆತ್ತಿನ ಪೂಜೆ, ಎತ್ತುಗಳ ಮೆರವಣಿಗೆ ಮಾಡುತ್ತಾರೆ. ಈ ಚಿತ್ರವು ಆಧುನಿಕ ಶೈಲಿಯ ಕಲಾಕೃತಿಯಾಗಿದೆ.ಇದು ಟೋನಲ್ ಗ್ರೆಡೇಶನ್‌ಗೆ

ಅನುಗುಣವಾಗಿ ಲಭ್ಯವಾಗುವ ಮಾಧ್ಯಮಗಳನ್ನು ಬಳಸಿಕೊಂಡು ರಚಿಸಿದ್ದಾರೆ. ಈ ಕಲಾಕೃತಿಯು ಕಾರಹುಣ್ಣಿಮೆಯನ್ನು ಪ್ರತಿಬಿಂಬಿಸುತ್ತದೆ. ಕಾರಹುಣ್ಣಿಮೆಯಲ್ಲಿ ಕರಿ ಹರಿಯುವುದು ಉತ್ತರ ಕರ್ನಾಟದಲ್ಲಿ ಪ್ರಚಲಿತದಲ್ಲಿದೆ. ಈ ಚಿತ್ರಣದಲ್ಲಿ ಮುನ್ನೆಲೆಯಲ್ಲಿ ಎತ್ತು ಓಡುತ್ತಿರುವುದನ್ನು, ಅದರ ಕೋಡುಗಳಿಗೆ ಅಲಂಕಾರ ಮಾಡಿರುವದನ್ನು ಕಾಣುತ್ತೇವೆ. ಅದರ ಕೊರಳಲ್ಲಿ ಗೆಜ್ಜೆಗಳನ್ನು ಹಾಕಿದ್ದಾರೆ. ಇದರ ಬೆನ್ನ ಮೇಲೆ ಜೂಲಾ ಹಾಕಿರುವದನ್ನು ಕಾಣಬಹುದು. ಇದರ ಹಿಂದೆ ಜನರು ಇದ್ದಾರೆ. ಜನರು ಈ ಎತ್ತುಗಳನ್ನು ಕೇಕೆ ಹೊಡೆಯುತ್ತ ಹುರುದುಂಬಿಸುತ್ತಿದ್ದಾರೆ. ಮೊದಲ ಎತ್ತಿನ ಮುಂದೆ ಒಬ್ಬನು ಇದರ ಕಡೆಗೆ ಕೈಮಾಡಿದ್ದಾನೆ. ಇವನ ಮಗ್ಗುಲಲ್ಲಿ ಇನ್ನೊಬ್ಬನು ಲಗಾಮಿನಿಂದ ಎತ್ತನ್ನು ಹುರಿದುಂಬಿಸುತ್ತಿದ್ದಾನೆ. ಇವನ ಮಗ್ಗುಲಲ್ಲಿ ಹಿರಿಯ ವ್ಯಕ್ತಿಯನ್ನು ಕಾಣಬಹುದು.

ಗುಳ್ಳವ್ವನನ್ನು ಕೂಡ್ರಿಸುವದು

ಆಷಾಡ ಮಾಸದಲ್ಲಿ ಹೆಣ್ಣುಮಕ್ಕಳು ಮಣ್ಣಿನಿಂದ ಗುಳ್ಳವ್ವನನ್ನು ಮಾಡಿ ಪೂಜಿಸಿ ಹಾಡಿ, ಆಡಿ, ಕುಣಿದು ಕುಪ್ಪಳಿಸುತ್ತಾರೆ. ಆಕೆಯ ಸಾವಿನಿಂದ ಅತ್ತು ಕರೆಯುತ್ತಾರೆ. ಮನೆಯ ಮುಂದೆ ಇರುವ ಕಟ್ಟೆಯ ಮೇಲೆ ಕುಳಿತಿರುವದನ್ನು ನೋಡಬಹುದು. ಈ ಕಲಾಕೃತಿಯ ಮುನ್ನೆಲೆಯಲ್ಲಿ ಗುಳ್ಳವ್ವನನ್ನು ಪೂಜಿಸುತ್ತಿರುವುದನ್ನು ಕಾಣಬಹುದು. ಇಲ್ಲಿ ಮಕ್ಕಳು ಪ್ರಧಾನ ಪಾತ್ರ ವಹಿಸುತ್ತಾರೆ. ಈ ಹಬ್ಬವನ್ನು ಹತ್ತರಿಂದ ಹನ್ನೆರಡು ವರ್ಷದ ಹೆಣ್ಣುಮಕ್ಕಳು ಆಚರಿಸುತ್ತಾರೆ. ಮನೆಯ ಮುಂದೆ ಕುಳಿತಿರುವ ಹೆಣ್ಣುಮಕ್ಕಳು ಜೊತೆಗೆ ತಾಯಿಯು ಕುಳಿತಿರುವುದನ್ನು ಕಾಣುತ್ತೇವೆ. ಪೂಜೆಮಾಡುತ್ತಿರುವದನ್ನು ಇಲ್ಲಿ ಮಧ್ಯದಲ್ಲಿ ಗುಳ್ಳವ್ವನನ್ನು ಕಾಣುತ್ತೇವೆ. ಇದರ ಮುಂದೆ ಹಣ್ಣು ಹಂಪಲವನ್ನು ಇಟ್ಟಿದ್ದನ್ನು ಕಾಣಬಹುದು. ಇದರ ಎಡಗಡೆಗೆ ಇಬ್ಬರು ಬಾಲೆಯರು ಹೂಗಳನ್ನು ಏರಿಸುತ್ತಿರುವದನ್ನು ಕಾಣಬಹುದು. ಕೆಳಗಡೆಗೆ ಮಕ್ಕಳು ಪೂಜೆಯನ್ನು ಮುಗಿಸಿಕೊಂಡು ಹೋಗುತ್ತಿರುವವರನ್ನು, ಬರುತ್ತಿರುವವರನ್ನು ಈ ಕಾಲಕೃತಿಯಲ್ಲಿ ಇವರ ಮಗ್ಗಲಲ್ಲಿ ಒಬ್ಬ ಹುಡುಗನು ನಿಂತಿರುವುದು, ಇವನ ಮಗ್ಗುಲಲ್ಲಿ ಒಬ್ಬ ಹುಡುಗಿಯನ್ನು ಕಾಣಬಹುದು.

ಪೂಜೆ ಮುಗಿಸಿಕೊಂಡು ಮನೆಗೆ ಹೊರಟಿರುವದು ಮತ್ತು ಪಕ್ಕದಲ್ಲಿ ಪೂಜೆಗೆ ಬರುತ್ತಿರುವದನ್ನು ಕಾಣಬಹುದು. ಎಡಗಡೆಯಲ್ಲಿ ಒಬ್ಬ ಮಹಿಳೆಯು ಮಗುವಿನೊಂದಿಗೆ ಮನೆಗೆ ಹೊರಟಿರುವುದನ್ನು ನೋಡಬಹುದು. ಇದರ ಹಿನ್ನೆಲೆಯಲ್ಲಿ ಮನೆಯನ್ನು ನೋಡಬಹುದು. ಮನೆಯ ಬಾಗಿಲನ್ನು ತಳಿರು ತೋರಣಗಳಿಂದ ಅಲಂಕರಿಸಿರುವದನ್ನು, ಮನೆಗೆ ಸುಣ್ಣ ಬಣ್ಣಗಳನ್ನು ಬಳಿದಿರುವದನ್ನು ಕಾಣಬಹುದು. ಹಳ್ಳಿಗಳಲ್ಲಿ ಇರುವ ಮನೆಗಳಿಗೆ, ಅಲ್ಲಿ ಆಚರಿಸುವಂತಹ ಹಬ್ಬಗಳಿಗೆ, ಅಲ್ಲಿ ಎಲ್ಲರೂ ಕೂಡಿಕೊಂಡಿರುವುದು ಈ ಕಲಾಕೃತಿಯಲ್ಲಿ ಗೋಚರವಾಗುತ್ತದೆ. ಇದನ್ನು ಬಳೆಗಳ ಸಣ್ಣ ಸಣ್ಣ ಚೂರುಗಳಿಂದ ಮಾಡಿದ್ದಾರೆ.

ಶ್ರಾವಣ ಮಾಸ

ಶ್ರಾವಣ ಎಂದರೆ ಪುರಾಣ ಕಥೆಗಳನ್ನು ಕೇಳುವ ತಿಂಗಳು. ಅಂತೆಯೇ ಎಲ್ಲೆಡೆ ಈ ಕಾರ್ಯಕ್ರಮಗಳು ನಡೆಯುತ್ತಲೆ ಇರುತ್ತವೆ. ಚಿತ್ರದಲ್ಲಿ ಪುರಾಣವನ್ನು ಹೇಳುತ್ತಿರುವದನ್ನು ಕಾಣಬಹುದು. ಇವರ ಮಗ್ಗುಲಲ್ಲಿ ಕೊಳಲು, ತಬಲ ಹಾರ್ಮೋನಿಯಮನ್ನು ಬಾರಿಸುತ್ತಿರುವವರನ್ನು ಕಾಣಬಹುದು. ಇವರು ತಮ್ಮ ಮಠದಲ್ಲಿ ಇಂತಹ ಕಾರ್ಯಕ್ರಮಗಳನ್ನು ನಡೆಸುತ್ತಾರೆ. ಇಲ್ಲಿ ಪುರಾಣವನ್ನು ಕೇಳಲು ಹೊಲಗಳಲ್ಲಿ ದಣಿದು ಬಂದತಂಹ ಜೀವಗಳಿಗೆ ತಮ್ಮ ಆಯಾಸವನ್ನು ಸಮಯವನ್ನು ಈ ತಿಂಗಳು ಇಂತಹ ಕಾರ್ಯಕ್ರಮಗಳು ಕಂಡು ಬರುತ್ತವೆ. ಮನೆಯಲ್ಲಿ ಶಾಂತಿ ದೊರೆಯದೆ ಇರುವವರು ತಮ್ಮ ಸಮಯವನ್ನು ಈ ತಿಂಗಳು ಇಂತಹ ಕಾರ್ಯಕ್ರಮಗಳಲ್ಲಿ ತೊಡಗಿಸಿಕೊಳ್ಳುತ್ತಾರೆ. ಈ ಕಲಾಕೃತಿಯಲ್ಲಿ ಹಿಂದು, ಮುಸ್ಲಿಮರೆನ್ನದೆ ಎಲ್ಲ ಧರ್ಮದ ಜನರು ಪುರಾಣದಲ್ಲಿ ಭಾಗಿಯಾಗಿರುವದನ್ನು ಕಾಣಬಹುದು. ಮಹಿಳೆಯರು, ಗಂಡಸರು, ಹಿರಿಯರು ಕೂಡಿಕೊಂಡು ಮಕ್ಕಳನ್ನು ಇಲ್ಲಿ ಕಾಣಬಹುದು. ಪುರಾಣವನ್ನು ಕೇಳುವದರಲ್ಲಿ ಎಲ್ಲರೂ ಮಗ್ನರಾಗಿದ್ದಾರೆ. ಚಾರ್ಕೊಲ್ ಮಾಧ್ಯಮದಿಂದ ಈ ಕಲಾಕೃತಿಯನ್ನು ಪೂರ್ಣಗೊಳಿಸಿದ್ದಾಪರೆ.

ಕೃಷ್ಣಾಸ್ಟಮಿ

ಟೋನಲ್ ಗ್ರಡೇಶನ್‌ಗೆ ಅನುಗುಣವಾಗಿ ಲಭ್ಯವಾಗುವ ಮಾಧ್ಯಮಗಳನ್ನು ಬಳಸಿಕೊಂಡು ಈ ಕಲಾಕೃತಿಯು ಗೋಕುಲಾಷ್ಟಮಿ ಸಂದರ್ಭವನ್ನು ನೆನೆಪಿಸುತ್ತದೆ. ಇದು ಶ್ರಾವಣ ಮಾಸದಲ್ಲಿ ಬರುವ ಹಬ್ಬ, ಶ್ರೀ ಕೃಷ್ಣ ಜಯಂತಿ, ಇದನ್ನು ಒಂದೊಂದು ಕಡೆಯಲ್ಲಿ ಒಂದೊಂದು ರೀತಿಯಲ್ಲಿ ಆಚರಿಸುತ್ತಾರೆ. ಯುವಕರು ಒಬ್ಬರ ಮೇಲೆ ಮೇಲೊಬ್ಬರು ನಿಂತು ಎತ್ತರದಲ್ಲಿ ಮೊಸರು ಗಡಿಗೆಯನ್ನು ಒಡೆಯುವುದು, ಗೋಪಾಳ, ಕಾವಲಿ, ಈ ಹಬ್ಬದ ವೈಶಿಷ್ಟ್ಯ ಮುನ್ನೆಲೆಯಲ್ಲಿ ತೊಟ್ಟಿಲಲ್ಲಿ ಕುಳಿತಿರುವ ಕೃಷ್ಣ ಬಲರಾಮರನ್ನು ಕಾಣಬಹುದು. ಇವರ ಮುಂದೆ ಮೂವರು ಮಹಿಳೆಯರು ಇವರನ್ನು ಓಲೈಸುತ್ತಿದ್ದಾರೆ. ಇವರು ನಿಂತಿರುವ ಕೆಳಗಡೆ ದೊಡ್ಡದಾದ ಹೂ ಇದೆ. ಇವರ ಮುಂದೆ ಒಬ್ಬ ಮಹಿಳೆಯನ್ನು ಕಾಣಬಹುದು. ಇವರ ಬಲಗಡೆಯ ಮಹಿಳೆ ಮಗ್ಗಲಲ್ಲಿ ಹೊರಳಿರುವದನ್ನು ನೋಡಬಹುದು. ಅಲ್ಲಿ ಮಹಿಳೆಯು ಮಗುವನ್ನು ಎತ್ತಿಕೊಳ್ಳುವುದನ್ನು ಆ ಮಹಿಳೆಯು ಆಲಿಸುತ್ತಿದ್ದಾಳೆ ಮುಂದೆ ಇನ್ನೊಬ್ಬ ಮಹಿಳೆಯ ಕೈಯಲ್ಲಿ ಹಣ್ಣು ಹಂಪಲಗಳನ್ನು ತರುತ್ತಿದ್ದಾಳೆ. ಕೆಳಗಡೆಗೆ ಮಗು ಆಟವಾಡುತ್ತಿರುವದನ್ನು ಕಾಣಬಹುದು. ಬಲಗಡೆಯಲ್ಲಿ ಹಿನ್ನೆಲೆಯಲ್ಲಿ ಮಹಿಳೆಯರು ಮಾತನಾಡುತ್ತ ಕುಳಿತಿರುವುದತನ್ನು ಕಾಣುತ್ತೇವೆ. ಅವರ ಹಿಂದೆ ಮಕ್ಕಳು ಆಟವಾಡುತ್ತಿದ್ದಾರೆ. ಮುಂದೆ ಇಬ್ಬರು ಬಾಲೆಯರನ್ನು ಕೈಮಾಡಿಕೊಂಡಿರುವದನ್ನು ಈ ಕಲಾಕೃತಿಯಲ್ಲಿ ನೋಡುತ್ತೇವೆ. ಇಲ್ಲಿ ಬ್ರಾಹ್ಮಣ ಕುಟುಂಬದವರು ಎಂದು ಗುರುತಿಸಲು ಇವರು ಧರಿಸಿರುವ ಉಡುಗೆ ತೊಡುಗೆಗಳು

ಸಹಾಯಕವಾಗುತ್ತದೆ. ಇದು ಶಾನುಭೋಗರ ಮನೆ ಎಂದು ಹೇಳಬಹುದು. ಇಲ್ಲಿ ಮನೆಯ ಆವರಣವಿದೆ. ಇದನ್ನು ಪ್ಲಾಸ್ಟಿಕ್ ಮುತ್ತುಗಳಿಂದ ಮಾಡಿದ್ದಾರೆ. ಮಹಾರಾಷ್ಟ್ರದ ಮಾದರಿಯಲ್ಲಿ ಸೀರೆ ಮೂಗಲ್ಲಿ ನತ್ತು ಕಿವಿಯಲ್ಲಿ ಓಲೆಗಳನ್ನು ಕಾಣಬಹುದು.

ಪಂಚಮಿ ಹಬ್ಬ

ನಾಗರ ಪಂಚಮಿ ಶ್ರಾವಣ ಮಾಸದಲ್ಲಿ ಬರುವ ಹಬ್ಬ. ಅದು ಬೆಳೆ ಹಾಳು ಮಾಡುವ ಇಲಿಗಳನ್ನು ತಿಂದು ಹಾಕುವ ನಾನ ಪೂಜೆ. ಅಂದು ಆಡುವ ಜೋಕಾಲಿಯು ಏರಿಳಿತ ಜೀವನದ ಏಳು ಬೀಳುಗಳ ದರ್ಶಕ ಈ ಕಲಾಕೃತಿಯಲ್ಲಿ ಊರಿನ ಮಧ್ಯದಲ್ಲಿರುವ ಗಿಡದ ಕೆಳಗೆ ನಾಗನ ಪೂಜೆಯನ್ನು ಮಾಡುತ್ತಿರುವದನ್ನು ಕಾಣಬಹುದು. ಇಲ್ಲಿ ನೂಲಿನ ದಾರವನ್ನು ಹಾಕುತ್ತಿರುವ ಮಹಿಳೆಯರನ್ನು ನೋಡುತ್ತೇವೆ. ಇವಳ ಮುಂದೆ ಮಹಿಳೆಯನ್ನು ಕಾಣುತ್ತೇವೆ. ಇವರ ಬಲಗಡೆಯಲ್ಲಿ ಮಹಿಳೆಯು ಕರವಸ್ತ್ರದಲ್ಲಿ ಎಡೆಯನ್ನು ತರುತ್ತಿರುವದನ್ನು ಕಾಣುತ್ತೇವೆ. ಈ ಮಹಿಳೆಯು ಮಗುವಿನ ಕೈಯನ್ನು ಹಿಡಿದುಕೊಂಡಿರುವದನ್ನು ಕಾಣಿಸುತ್ತದೆ. ಈ ಮಗುವಿನ ಹಿಂದೆ ಬಾಲೆ ನಿಂತಿದ್ದಾಳೆ. ನಾಗನ ಪೂಜೆ ಮಡುತ್ತಿರುವಲ್ಲಿ ಕೆಳಗಡೆಗೆ ಮಗುವು ಆಟವಾಡುತ್ತಿದೆ. ಎಡಗಡೆಗೆ ಮಹಿಳೆಯು ಎಡೆಯನ್ನು ತರುತ್ತಿದ್ದಾಳೆ. ಇವಳ ಹಿಂದೆ ಒಬ್ಬ ಅಜ್ಜಿಯು ಹೊರಟಿದ್ದಾಳೆ. ಇವಳ ಮುಂದೆ ಹುಡುಗನು ಬೋಲಬಗರಿಯನ್ನು ಆಡುತ್ತಿದ್ದಾನೆ. ಇವನ ಮುಂದೆ ಇಬ್ಬರು ಹುಡುಗರನ್ನು ಕಾಣುತ್ತೇವೆ.

ಗಣೇಶೋತ್ಸವ

ಮಣ್ಣಿನ ಮಗ ಈತ ಜ್ಞಾನ ದೇವ, ಗಣಾಧಿಪತಿ. ಭಾದ್ರಪದ ಚೌತಿಯೆಂದು ಇವನ ಪೂಜೆ. ಲೋಕಮಾನ್ಯ ತಿಲಕರಿಂದ ಗಣೇಶ ಚತುರ್ಥಿಯನ್ನು ರಾಷ್ಟ್ರೀಯ ಹಬ್ಬವೆಂದು ಆಚರಿಸಲಾಗುತ್ತದೆ. ಈ ಕಲಾಕೃತಿಯಲ್ಲಿ ಗಣೇಶನನ್ನು ತರುತ್ತಿರುವದನ್ನು ಕಾಣುತ್ತೇವೆ. ಚಿತ್ರದಲ್ಲಿ ಗಣಪತಿಯನ್ನು ಒಯ್ಯುತ್ತರುವವರನ್ನು ಕಾಣುತ್ತೇವೆ. ಇಲ್ಲಿ ಸಿಡ್ಡಿಮದ್ದುಗಳನ್ನು ಹಾರಿಸಿಕೊಂಡು ಮಕ್ಕಳು ಹೋಗುತ್ತಿರುವದನ್ನು ಕಾಣುತ್ತೇವೆ. ಮಧ್ಯದಲ್ಲಿ ದೊಡ್ಡ ಗಣೇಶನನ್ನು ಹೊತ್ತುಕೊಂಡು ಹೋಗುತ್ತಿದ್ದಾರೆ. ಇದರ ಹಿಂದೆ ಸಣ್ಣ ಸಣ್ಣ ಗಣಪತಿಗಳನ್ನು ನಾವು ಕಾಣಬಹುದು. ಇಲ್ಲಿ ಮಕ್ಕಳು, ಹಿರಿಯರು ವಾದ್ಯಗಳೊಂದಿಗೆ ಹೊರಟ್ಟಿದ್ದಾರೆ. ಹಂದೆ ಸಾಕಷ್ಟು ಜನರು ಬರುತ್ತಿದ್ದಾರೆ. ಗಣೇಶನನ್ನು ಒಯ್ಯುತ್ತಿರುವದನ್ನು ನೋಡಲು ಮಹಿಳೆಯರು ನಿಂತಿದ್ದಾರೆ. ಇವರ ಮಗ್ಗುಲಲ್ಲಿ ಹೆಣ್ಣುಮಕ್ಕಳನ್ನು ಕಾಣಬಹುದು. ಹಿನ್ನೆಲೆಯಲ್ಲಿ ಗಿಡದ ನೆರಳಿನಲ್ಲಿ ಕಟ್ಟೆಯ ಮೇಲೆ ಹಿರಿಯರು ಕುಳಿತಿರುವರು. ಇವರ ಹಿಂದೆ ಹಳ್ಳಿಯ ಮನೆಗಳನ್ನು ಕಾಣುತ್ತೇವೆ. ಇಲ್ಲಿ ಆಕೃತಿಗಳಿಗೆ ಮಹತ್ವವನ್ನು ಕೊಡಲಾಗಿದೆ. ಈ ಕಲಾಕೃತಿಯನ್ನು ಪ್ಲಾಸ್ಟರ್ ಆಫ್ ಪ್ಯಾರಿನಿಂದ ಮಾಡಿದ್ದಾರೆ.

ಜೋಕುಮಾರನಹಬ್ಬ

ಇವನ ಶಿವನ ಮಗ ಮಳೆಯ ದೇವರು. ರೈತನ ಆರಾಧ್ಯದೇವನಾದ ಈತ ಭಾದ್ರಪದ ಮಾಸದ ಅಷ್ಟಮಿಯಂದು ಹುಟ್ಟಿ ಹುಣ್ಣಿಮೆಯೆಂದು ಸಾಯುತ್ತಾನೆ. ಈ ಕಲಾಕೃತಿಯಲ್ಲಿ ಮಧ್ಯದಲ್ಲಿ ಬುಟ್ಟಿಯನ್ನು ಇಟ್ಟುಕೊಂಡು ಕುಳಿತ್ತಿದ್ದಾರೆ. ಈ ಬುಟ್ಟಿಯಲ್ಲಿ ಜೋಕುಮಾರನನ್ನು ಕಾಣಬಹುದು. ಜನರು ಮನೆಯ ಮುಂದೆ ಕಟ್ಟೆಯ ಮೇಲೆ ಕುಳಿತ್ತಿದ್ದಾರೆ. ಇಲ್ಲಿ ಮೂವರು ಮಹಿಳೆಯರು ಜೋಕುಮಾರ ಬಂದಿದ್ದಾನೆ, ಜೋಳವನ್ನು ತನ್ನಿ ಎಂದು ಮನೆಯ ಯಜಮಾನತಿಯರನ್ನು ಕರೆಯುತ್ತಿದ್ದಾರೆ. ಮಧ್ಯದಲ್ಲಿ ಇರುವ ಮಹಿಳೆಯು ಮಾತನಾಡುತ್ತಿದ್ದಾಳೆ. ಅವಳ ಎಡಗಡೆ ಇರುವ ಮಹಿಳೆ ಮನೆಯವರನ್ನು ಕರೆಯುತ್ತಿದ್ದಾಳೆ. ಇವಳ ಹಿಂದೆ ಬಾಲೆಯಿದ್ದಾಳೆ. ಬಲಗಡೆ ಮಹಿಳೆಯು ಇವಳ ಹಿಂದೆ ಮಹಿಳೆಯು ಮರದಲ್ಲಿ ಜೋಳವನ್ನು ಹಾಕುತ್ತಿದ್ದಾಳೆ. ಹಿಂದೆ ಹೆಂಗಸನ್ನು ಕಾಣುತ್ತೇವೆ. ಹುಡುಗಿಯಿದ್ದಾಳೆ. ಇವಳ ಹತ್ತಿರ ಅಜ್ಜಿಯನ್ನು ಕೆಳಗಡೆ ಹುಡುಗಿಯನ್ನು, ಇವಳ ಹಿಂದೆ ಕೆಳಗೆ ಅವಳ ತಮ್ಮನನ್ನು ಕಾಣುತ್ತೇವೆ. ಹಿನ್ನೆಲೆಯಲ್ಲಿ ಮನೆಯನ್ನು ಕಾಣಬಹುದು. ಮನೆಯ ಆವರಣವಿದೆ. ಇಲ್ಲಿ ನೈಜತೆಯನ್ನು ಕಾಣುತ್ತೇವೆ. ಇವರು ಹಾಕಿಕೊಂಡಿರುವ ಆಭರಣಗಳು ನಿಜವಾಗಿ ಎಂದು ಭಾಸವಾಗುತ್ತದೆ. ಮನೆಯ ಮುಂದೆ ನಾಯಿ ಇರುವುದು. ಮನೆಯ ಹಿಂದೆ ಹಿಂದಿನ ಮನೆಯ ಮುಂದೆ ಮನೆಯ ಹಿರಿಯ ಕಟ್ಟೆಯ ಮೇಲೆ ಕುಳಿತಿರುವನು. ಓಣಿಯ ಮುಂದೆ ಎತ್ತಿನ ಗಾಡಿ ಹೊರಟಿರುವದು. ಇದನ್ನು ಬಟ್ಟೆಗಳಿಂದ ಮಾಡಿರುವದನ್ನು ರಚಿಸಿದ್ದಾರೆ.

ಮಹಾನವಮಿಹಬ್ಬ

ಪ್ರೇಮ ವೈರವನ್ನು ಗೆಲ್ಲುತ್ತದೆ. ಬಂಗಾರ ಎಲ್ಲರಿಗೂ ಪ್ರಿಯವಾದದು. ಅಂತಯೆ ಅಶ್ವೀನಿ ಮಾಸದಲ್ಲಿ ಬರುವ ವಿಜಯ ದಶಮಿಯೆಂದು ಬನ್ನಿಯ ಬಂಗಾರವನ್ನು ಪರಸ್ಪರರು ಹಂಚಿಕೊಂಡು ಎಲ್ಲರಿಗೂ ಪ್ರೀತಿ ಪಾತ್ರರಾಗುತ್ತಾರೆ. ವೈರಮರೆಯುತ್ತಾರೆ. ಕನ್ನಡಿಗರಿಗೆ ಇದು ನಾಡಹಬ್ಬ ಕಲಾಕೃತಿಯಲ್ಲಿ ಮನೆಯನ್ನು ಕಾಣಬಹುದು. ಮನೆಯ ಮುಂದೆ ಹಿರಿಯರಿಗೆ ಬನ್ನಿಯನ್ನು ಕೊಟ್ಟು ನಮಸ್ಕಾರ ಮಾಡುತ್ತಿರುವದನ್ನು ಕಾಣಬಹುದು. ಮನೆಯ ಒಳಗಡೆಗೆ ಬನ್ನಿಕೊಟ್ಟು ನಮಸ್ಕಾರ ಮಾಡುತ್ತಿರುವರು. ಮನೆಯ ಕಟ್ಟೆಯ ಮೇಲೆ ಮಹಿಳೆಯರಿಗೆ ಬನ್ನಿಯನ್ನು ಕೊಟ್ಟು ನಸ್ಕಾರ ಮಾಡುತ್ತಿದ್ದಾರೆ. ಕೆಳಗಡೆಗೆ ಹಿರಿಯರಿಗೆ ಬನ್ನಿಯನ್ನು ಕೊಟ್ಟು ಮಹಿಳೆಯು ನಮಸ್ಕಾರವನ್ನು ಮಾಡುತ್ತಿದ್ದಾಳೆ. ಮನೆಯ ಮುಂದೆ ಬನ್ನಿಯನ್ನು ಹಂಚುತ್ತಿರುವರು. ಮನೆಯ ಮುಂದೆ ಚಿಕ್ಕ ಮಕ್ಕಳು, ಬಲಗಡೆಗೆ ಮಹಿಳೆಯರು ಬನ್ನಿಯನ್ನು ಹಂಚುಕೊಳ್ಳುತ್ತಿರುವರು. ಇವರ ಮಗ್ಗುಲಲ್ಲಿ ಹಿರಿಯರಿಗೆ ಬನ್ನಿಯನ್ನು ಕೊಟ್ಟು ನಮಸ್ಕಾರವನ್ನು ಮಾಡುತ್ತಿದ್ದಾರೆ. ಇವರ ಮುಂದೆ ಬಾಲೆಯು ನಮಸ್ಕಾರವನ್ನು ಮಾಡುತ್ತಿರುವುದು ಕಾಣುವದು. ಮನೆಯ ಮಗ್ಗುಲಲ್ಲಿ ಎಡಗಡೆಗೆ ಗಿಡದ

ಕೆಳಗಡೆ ದೇವರ ಹಳೆಯ ಕಾಲದ ಮನೆಗಳು ಈ ಚಿತ್ರದಲ್ಲಿವೆ. ಅಳಿದು ಹೋಗುತ್ತಿರುವ ಚಿತ್ರಣವನ್ನು ಉಳಿಸುವ ಕೆಲಸವನ್ನು ಈ ಕಲಾಕೃತಿಯಲ್ಲಿ ಮಾಡಿದ್ದಾರೆ. ಈ ಕಲಾಕೃತಿಯನ್ನು ಎಂಬ್ರಾಯಿಡರಿ ಮಾಸನ್ ಮಹನ್ ನಂತಹ ಮಾಧ್ಯಮದಲ್ಲಿ ರಚಿಸಿದ್ದಾರೆ. ಇದು ಆಧುನಿಕ ಕಲಾಕೃತಿಯಾಗಿದೆ.

ಚರಗ ಚಲ್ಲುವದು

ಕೃತಜ್ಞತೆ ಮನನದಲ್ಲಿರಬೇಕಾದುದು ಬಹುಮುಖ್ಯವಾದ ಗುಣಗಳಲ್ಲಿ ಒಂದು. ಕೊಟ್ಟ ಭೂ ದೇವಿಗೆ ಮರಳಿ ಕೊಡುವುದೆ ಕೃತಜ್ಞತಾಸಮರ್ಪಣೆ ಚರಗ ಇದು ಅಶ್ವೀನ ಮಾಸದ ಶೀಗೆ ಹುಣ್ಣಿಮೆ. ಮಾರ್ಗಶಿರದ ಎಳ್ಳ ಅಮವಾಸ್ಯೆಯಂದು ನಡೆಯುತ್ತದೆ. ಇಲ್ಲಿ ನಾವು ಕಲಾಕೃತಿಯ ಮಧ್ಯದಲ್ಲಿ ಮರದ ಕೆಳಗೆ ಕುಟುಂಬವು ಕುಳಿತಿರುವದನ್ನು ಕಾಣಬಹುದು. ಮಧ್ಯದಲ್ಲಿ ಐದು ಕಲ್ಲುಗಳ ಭೂತಾಯಿಯೆಂದು ಇವುಗಳನ್ನು ಪೂಜೆಮಾಡಿದ್ದಾರೆ. ಇದರ ಮುಂದೆ ಇಬ್ಬರು ಮಹಿಳೆಯರು ಕುಳಿತ್ತಿದ್ದಾರೆ. ಇವರ ಮಗ್ಗಲಲ್ಲಿ ಬುಟ್ಟಿಯಿದೆ. ಇವರ ಕಡೆ ಮಕ್ಕಳು ನಿಂತಿದ್ದಾರೆ. ಇವರ ಹಿಂದೆ ಅಜ್ಜಿಯು ತನ್ನ ಮಕ್ಕಳಿಗೆ ಬಡಿಸುತ್ತಿದ್ದಾಳೆ. ಇವರು ಊಟವನ್ನು ಮಾಡುತ್ತಿದ್ದಾರೆ. ಇದರಲ್ಲಿ ಊಟವನ್ನು ಮಾಡುತ್ತ ತನ್ನ ಹೆಂಡತಿಯನ್ನು ಕರೆಯುತ್ತಿದ್ದಾನೆ. ಅವಳು ಬರುತ್ತೇನೆಂದು ಕೈಮಾಡಿ ತಟ್ಟೆಯನ್ನು ತೆಗೆದುಕೊಂಡು ಹೊರಟ್ಟಿದ್ದಾಳೆ. ಇವಳ ಹಿಂದೆ ಊಟವನ್ನು ಮಾಡುತ್ತಿರುವ ಮಗುವನ್ನು ನೋಡಬಹುದು. ಬಂಡಿಯನ್ನು ಸ್ವಚ್ಛಗೊಳಿಸುತ್ತಿರುವದು. ಹಿಂದೆ ಎತ್ತುಗಳು ಮಲಗಿವೆ. ಗಿಡದ ಹಿಂದೆ ಮೂಮ್ಮಗನು ಅಡಗಿಕೊಂಡಿದ್ದಾನೆ. ಇವನ ಮಗ್ಗುಲಲ್ಲಿ ಗೋಲಿಯನ್ನು ಆಡುತ್ತಿರುವ ಇವನ ತಮ್ಮಂದಿರಿದ್ದಾರೆ. ಇವರ ಪಕ್ಕದಲ್ಲಿ ಹೊಲದಲ್ಲಿ ಸೊಸೆಯು ಅತ್ತೆಯೊಂದಿಗೆ ಮಾತನಾಡುತ್ತಿದ್ದಾಳೆ. ಇವಳ ಪಕ್ಕದಲ್ಲಿ ಮಕ್ಕಳಿದ್ದಾರೆ. ಇವರ ಹಿನ್ನೆಲೆಯಲ್ಲಿ ಬಂಡಿಯ ಮುಂದೆ ಎತ್ತುಗಳು ವಿಶ್ರಾಂತಿ ಪಡೆದುಕೊಳ್ಳುತ್ತಿವೆ. ಇದರ ಹಿಂದೆ ಹೊಲದಲ್ಲಿ ದಂಪತಿಗಳು ನಿಂತಿರುವರು. ಇದನ್ನು ಪೆನ್ಸಿಲ್‌ನಿಂದ ಮಾಡಿದ್ದಾರೆ. ಈ ಕಲಾಕೃತಿ ಆಧುನಿಕ ಕಾಲದ ಕಲಾಕೃತಿ ಎಂದು ಹೇಳಬಹುದು. ಆದರೆ ಇಂದಿನ ಸಂದರ್ಭದಲ್ಲಿ ಹೊಲಗಳಿಗೆ ಹೋಗಿ ಚರಗ ಚಲ್ಲುವುದು ಕಡಿಮೆಯಾಗುತ್ತಿದೆ. ನಗರಗಳು ಬೆಳೆದಂತೆ ಇಂತಹ ಪದ್ಧತಿಗಳು ಮರೆಯಾಗುತ್ತಿವೆ. 'ಹುಲ್ಲುಲಗೊಚಲಾಮ್ರುಗೊ' ಎಂದು ಹೇಳುತ್ತ ಮನೆಯಿಂದ ತಂದ ಐದು ತರಹದ ಧಾನ್ಯಗಳನ್ನು ಹೊಲದ ತುಂಬಾ ಚಲ್ಲುತ್ತಾರೆ. ಆದರೆ ಯುವಕರು ಮರೆಯುತ್ತಿದ್ದಾರೆ.



ದಸರಾ ಬನ್ನಿ ಕೊಡುವುದು (ಕಸೂತಿ ಮಾಧ್ಯಮ)




ಕರಿ ಹರಿಯುತ್ತಿರುವ ಕಾರು ಹುಣ್ಣಿಮೆ ಸನ್ನಿವೇಶ (ಉಸುಕಿನ ಮಾಧ್ಯಮ)




ಜೋಕುಮಾರನ ಹಬ್ಬ (ಬಟ್ಟೆ ಮಾಧ್ಯಮ)



ಹೋಳಿ ಹಬ್ಬದಲ್ಲಿ ಬಣ್ಣ ಎರಚುವ ಸನ್ನಿವೇಶ (ಪುಡಿಗಾಜಿನ ಮಾಧ್ಯಮ)



ಕಾರ್ತಿಕೋತ್ಸವ ದೇವಸ್ಥಾನದಲ್ಲಿ ದೀಪ ಬೆಳಗಿಸುವ ಸನ್ನಿವೇಶ (ಸ್ಟಿಕರ್ಸ್ ಮಾಧ್ಯಮ)



ಸೀಗಿ ಹುಣ್ಣಿಮೆ ಹೊಲದಲ್ಲಿ ಚರಗ ಚಲ್ಲುತ್ತಿರುವ ಸನ್ನಿವೇಶ (ಪೆನ್ಸಿಲ್ ಮಾಧ್ಯಮ)





ಗುಳ್ಳವ್ವನನ್ನು ಕೂಡ್ರಿಸುವುದು (ಗಾಜಿನ ಮಾಧ್ಯಮ)



ಸ್ವಾಮಿಗಳು ಶ್ರಾವಣದಲ್ಲಿ ಪುರಾಣ ಹೇಳುತ್ತಿರುವ ಸನ್ನಿವೇಶ (ಪೆಸ್ಟಲ್ ಮಾಧ್ಯಮ)




ಬಸವಜಯಂತಿ ಎತ್ತುಗಳ ಹುಟ್ಟು ಹಬ್ಬ (ಮಣ್ಣಿನ ಮಾಧ್ಯಮ)



ಬಾಗಲಕೋಟೆಯ ಚರಂತಿಮಠದಲ್ಲಿನ
ವರ್ಣಚಿತ್ರಗಳು







ಕೂಡಲಸಂಗಮದಲ್ಲಿನ ಮಾತೇಮಹಾದೇವಿಯವರ ಧ್ಯಾನಮಂದಿರದಲ್ಲಿ ಶರಣರ ವರ್ಣಚಿತ್ರ



ಅಲ್ಲಮ ಪ್ರಭುದೇವರಿಂದ
ಸಿದ್ಧರಾಮೇಶ್ವರರಿಗೆ ಬೋಧನೆ



ತತ್ವ ನಿಷ್ಠ ಅಮುಗಿದೇವಯ್ಯ
ದಂಪತಿಗಳು



ಶಿವಯೋಗಿ
ಸಿದ್ಧ ಶಿವದಾಸಿಮಯ್ಯ



ಕೂಡಲಸಂಗಮದಲ್ಲಿನ ಮಾತೇಮಹಾದೇವಿಯವರ ಧ್ಯಾನಮಂದಿರದಲ್ಲಿ ಶರಣರ ವರ್ಣಚಿತ್ರ




ಹುತಾತ್ಮರಾದ ಹರಳಯ್ಯ-ಮಧುವಯ್ಯ ಶೀಲವತರು



ಮಹಾನುಭಾವ
ಮಾದಾರ ಚನ್ನಯ್ಯ



ಶಿವಯೋಗಿನಿ ಅಕ್ಕಮಹಾದೇವಿ



ಇಲಕಲ್ಲ ಶ್ರೀ ವಿಜಯಮಹಾಂತೇಶಮಠದಲ್ಲಿ ವರ್ಣಚಿತ್ರಗಳು










ಖ್ಯಾತ ಭೂದೃಶ್ಯಕಲಾವಿದ ಎಮ್.ಎಸ್. ಚಂದ್ರಶೇಖರ ಅವರು
ರಚಿಸಿದ ಬಾದಾಮಿ ಪ್ರದೇಶದ ಮೂರು ಅಪರೂಪದ ಮೂಲ ಕಲಾಕೃತಿಗಳು





ಕರ್ನಾಟಕ ಪ್ರವಾಸೋದ್ಯಮ ಇಲಾಖೆಯ
ಬಾದಾಮಿಯ ಹೊಟೆಲ್ ಮಯೂರದಲ್ಲಿ





ಒಟ್ಟು ಅಧ್ಯಯದಲ್ಲಿನ ಚಿತ್ರಕಲಾ ತಂತ್ರಶೈಲಿ ಪ್ರಭಾವ, ಪ್ರೇರಣೆ ಹಾಗೂ ಪ್ರಮುಖ ಲಕ್ಷಣಗಳು

ಆದಿಮಾನವನಿಂದ ಇಂದಿನವರೆಗೆ ಬಾಗಲಕೋಟೆ ಜಿಲ್ಲೆ ಚಿತ್ರಕಲೆಯು ಹಲವಾರು ಮಜಲುಗಳನ್ನು ಕಂಡು ಮುಂದಿನ ಪೀಳಿಗೆಗೆ ಚಿತ್ರಕಲಾ ಜಗತ್ತಿನ ಮಾಧ್ಯಮಗಳು ಬಳಕೆಯಾದ ಕ್ಷೇತ್ರ. ಪರಿಣಾಮ ಉಪಯೋಗ ಹೀಗಿಲ್ಲ ಒಂದೇ ಸ್ಥಾನಗುರಿತಿಸಿಕೊಳ್ಳದೇ ತನ್ನ ಛಾಪುಮೂಡಿಸುತ್ತ ಬಂದೆ.

ಗುಹಾಚಿತ್ರಕ್ಕೆ ಪ್ರಾಗೈತಿಸಿಕ ನೆಲೆಗಳು ಭಾರತದ ಇತಿಹಾಸದಲ್ಲಿ ಬಹು ಪ್ರಾಚೀನ ನೆಲೆಗಳು ಅಲ್ಲಲ್ಲಿ ಕಂಡುಬಂದರೂ ತಾಜಾ ಉದಾಹರಣಗಳೆಂದರೆ ಜಿಲ್ಲೆ ಬಾದಾಮಿ ಪರಿಸರದ ಚಿತ್ರಗಳು ಕೆಂಪುಕಲ್ಲಿನ ಮೇಲೆ ಬಿಳಿ ಹಾಗೂ ಸ್ವಲ್ಪ ಹಳದಿಮಿಶ್ರಿತದಲ್ಲಿನ ಮೇಲೆ ಕೆಂಪುಬಣ್ಣದಿಂದ ಬರೆದ ಪ್ರಾಣಿ-ಪಕ್ಷಿ ಮಾನವಾಕೃತಿಗಳು ಇಂದಿಗೂ ಸ್ಪಷ್ಟವಾದ ಚಿತ್ರ ಇತಿಹಾಸಕ್ಕೆ ಸಾಕ್ಷಿಯಾಗಿವೆ ಜಿಲ್ಲೆಯ ಬಾದಾಮಿ ಗುಹಾಂತರ ಚಿತ್ರಗಳಿಗೆ ಮುಂದೆ ಚಾಲುಕ್ಯರು ಅರ್ಥನೀಡಿ ಜಗತ್ಪಸಿದ್ಧಿಗೊಳಿಸಿದರೂ ಗುಹೆಗಳಲ್ಲೂ ಭಿತ್ತಿಚಿತ್ರಗಳು ನಿರ್ಮಾಣಗೊಂಡು ಇಂದು ಅವೆಲ್ಲ ಅಸ್ಪಷ್ಟ ಅಗೋಚರವೆಂದೇ ಹೇಳಬಹುದು. ಅವಕ್ಕಿಂತ ಸಾವಿರಾರುವರ್ಷ ಹಳೆಯವಾದ ಪ್ರಾಗೈತಿಹಾಸಿಕ ಚಿತ್ರಗಳು ಇಂದಿಗೂ ಸ್ಪಷ್ಟವಾಗಿವೆ. ಕುಟ್ಟಿದ ಕೊರೆದ ಹಾಗೂ ಕುಂಚ ನಿರ್ಮಿಸಿಕೊಂಡು ಬರೆದ ಚಿತ್ರಗಳು ರೇಖಾಪ್ರಧಾನ ಚಿತ್ರಗಳಾಗಿವೆ. ಬಾದಾಮಿ ಸಮೀಪದ ಕುಟಕನಕೇರಿ ಹಾಗೂ ಮಹಾಕೂಟದಾರಿಗಳಲ್ಲಿ ಈ ಚಿತ್ರಗಳು ಕಂಡುಬಂದಿದ್ದು ಹಿಂದೆ ನಡೆದ ಸಂಶೋಧನೆಗಳಿಂದ ತಿಳಿದುಬಂದರೂ ಇಂದಿಗೂ ವಿದ್ವಾಂಸರು ಸಂಶೋಧನಾ ವಿದ್ಯಾರ್ಥಿಗಳು ಅವುಗಳ ಕುರಿತು ಸಂಶೋಧನಾತ್ಮಕ ವಾಗಿ ಕಲಾತ್ಮಕವಾಗಿ ಅರ್ಥೈಸಿಕೊಳ್ಳಲು ಇನ್ನು ಒಳಹೊಕ್ಕು ಸೂಕ್ಷ್ಮತೆಗಳನ್ನು ಅರಿಯಲು ಚಿಂತನೆ, ಶ್ರಮ ಹಾಕುತ್ತಿರುವುದು ಶ್ಲಾಘನೀಯ ನಿರಂತರ ಅಧ್ಯಯನಗಳಿಂದ ಮಾನವನ ಹಿಂದಿನ ಬದುಕಿನ ಭೌತಿಕ ಮಾತ್ರವಲ್ಲದೇ ಆಂತರಿಕ ಮನೋವಿಕಾಸ ಬುದ್ಧಿಮತ್ತೆಯನ್ನು ಅರಿಯಲು ಇಂಥ ಸಂಶೋಧನೆಗಳು ಪುಷ್ಠಿ ನೀಡಬಲ್ಲವಾಗಿವೆ.

ಇದೇ ರೀತಿಯಲ್ಲಿ ಜಿಲ್ಲೆಯ ಜಮಖಂಡಿ ತಾಲೂಕಿನ ಕಲ್ಲಳ್ಳಿಯ ಗೊಂಬಿಗುಡ್ಡದಲ್ಲಿ ಆದಿಮಾನವನ ಕುಟ್ಟಿದ ರೇಖೆಗಳು ಕರಿಯಕಲ್ಲಿನ ಮೇಲೆ ಬೆಳ್ಳನೆಯ ರೇಖೆಗಳು ಸಂಶೋಧಕರನ್ನು ಕಲಾವಿದರನ್ನು ಲೇಖಕರನ್ನು ಸೆಳೆದಿವೆ. ಅ. ಸುಂದರ ಅವರು ಅವುಗಳ ಕುರಿತು ನೀಡಿದ ಹೇಳಿಕೆಗಳು ನಂತರ ಸಂಶೋಧಕರಾರೂ ಅವುಗಳ ಬಗ್ಗೆ ತಲೆಕೆಡಿಸಿಕೊಂಡಿಲ್ಲ. ಡಾ. ಯಾದಪ್ಪ ಪರದೇಶಿಯವರು ಉತ್ತರ ಕರ್ನಾಟಕ ಭಿತ್ತಿಚಿತ್ರಗಳು ಎಂಬ ಪಿಎಚ್.ಡಿ ಮಹಾಪ್ರಬಂಧದಲ್ಲಿ ಉಲ್ಲೇಖವಾದ ಈ ರೇಖಾಚಿತ್ರಗಳು ಈಗ ಸರಕಾರದ ಹಾಗೂ ಸಾರ್ವಜನಿಕ ವಿದ್ವಾಂಸರ ಸಂಶೋಧಕರ ಇಲಾಖೆಗಳವರ ಯಾವುದೇ ಕಾಳಜಿ ಇಲ್ಲದೆ ದನಕಾಯುವ ಹುಡುಗರು ಅವುಗಳ ರೂಪ ಹಾಗೂ ಮೂಲ ಸೌಕರ್ಯವನ್ನು ವಿರೂಪ

ಗೊಳಿಸುತ್ತಿದ್ದಾರೆ. ಇವುಗಳಿಗೆ ಸೂಕ್ತ ರಕ್ಷಣೆ ಒದಗಿಸಲು ಜಮಖಂಡಿಯ ಹೃದಯವನ್ನು ಡಾ. ಎಚ್.ಜಿ. ದಡ್ಡಿ ಅವರು ಶತಪ್ರಯತ್ನ ಪಡುತ್ತಿದ್ದಾರೆ. ಪತ್ರಿಕೆಗಳಲ್ಲಿ ಲೇಖನಗಳನ್ನು ಬರೆದು ಸುತ್ತಲಿನ ಜನಕ್ಕೆ ಚಿತ್ರಗಳ ಅರಿವು ಮೂಡಿಸಿ ನಮ್ಮ ಪೂರ್ವಜರ ಆಸ್ತಿಎಂಬುದನ್ನು ಬಿಂಬಿಸಿದ್ದಾರೆ.

ಜೊತೆಯಲ್ಲಿ ಇಂದಿಗೂ ಸರಕಾರಕ್ಕೆ ಅಂದರೆ ಪ್ರಾಚ್ಯವಸ್ತು ಸಂರಕ್ಷಣಾ ಇಲಾಖೆಗೆ ಸಿಡಿಮೂಲಕ ಅವುಗಳ ಮಹತ್ಮ ತಿಳಿಸಿ ರಕ್ಷಣೆಗೆ ಮುಂದಾಗಿದ್ದಾರೆ. ಎತ್ತಣಮಾಮರ ಎತ್ತಣ ಕೋಗಿಲೆ ನೆಲ್ಲಿಕಾಯಿಗೂ ಸಮುದ್ರದ ಉಪ್ಪಿಗೂ ಇರುವ ರುಚಿತ್ವದಂತೆ ಹೃದಯ ತಜ್ಞವೈದ್ಯರಿಗೂ ಗುಡ್ಡದಲ್ಲಿರುವ ಆದಿಮಾನವ ಗೀಚಿದ ರೇಖಾ ಚಿತ್ರಗಳು ಏನು ಸಂಬಂಧ ಎನ್ನುವಂತಾದರೆ, ಕವಿ ಕಲಾವಿದ ಸಂಶೋಧಕರು ಲೇಖಕರು ಉಲ್ಲಣ ಒಂದೆಡೆ ಚಿಂತನೆಡೆಸಿ ಕಡೇ ಪಕ್ಷ ಅವಕೊಂದು ಬೇಲಿಹಾಕಿ ಸಮೀಪಕ್ಕೆ ಯಾರೂ ಹೋಗದಂತೆ ವಿಕೃತಗೊಳಿಸಿದಂತೆ ನೋಡಿಕೊಳ್ಳುವುದು ಇಂದಿನ ತೀರಾ ಅವಶ್ಯಕ ಸಂಗತಿಯಾಗಿದೆ. ಗೋಚರಿಸಿದ ಪ್ರಾಚ್ಯ ಆಸ್ತಿಯನ್ನು ಕಾಪಾಡಿಕೊಂಡು ಹೋಗುವುದು ನಮ್ಮ ಕರ್ತವ್ಯವಾಗಿದೆ. ಸಮಗ್ರ ಚಿತ್ರಗಳಿಗೂ ಒಂದೊಂದು ಮಹತ್ವದ ಸಂದೇಶ ನೀಡುವ ಸಾಮರ್ಥ್ಯವಿದೆ. ಹೀಗಾಗಿ ಡಾ. ದಡ್ಡಿ ಅಂಥವರನ್ನು ಅವುಸೆಳೆದಿರಬಹುದು.

ಇನ್ನು ಭಿತ್ತಿಚಿತ್ರಗಳಲ್ಲಂತೂ ಬಾದಾಮಿ ಪ್ರಾಚೀನ ಕಾಲದ ರೇಖೆಯಿಂದ ಪರಿವರ್ತಿತವಾಗಿ ಅದೇ ಗುಹೆಗಳಲ್ಲಿ ಸುಂದರ ವರ್ಣ ಚಿತ್ರರಚನೆಗೆ ಮುಂದಾದ ಚಾಲುಕ್ಯರು ರಾಜರಾಣಿ ದರ್ಬಾರು ಮಾನವನ ಶರೀರಶಾಸ್ತ್ರದ ಅಂಗಸೌಷ್ಟವಗಳಿಗೆ ಮಹತ್ವ ನೀಡಿ ಸಂಯೋಜನಾ ಬದ್ಧವಾದ ರೇಖಾ ಪ್ರಾಧಾನ್ಯ ವರ್ಣಮಯ ಚಿತ್ರಗಳನ್ನು ರಚಿಸಿದರು ಅವು ಇಂದು ಅಲ್ಪಸ್ವಲ್ಪ ಕಾಣಸಿಗುತ್ತವೆ. ಸುಮಾರು ವರ್ಷಗಳ ಹಿಂದೆ ದೆಹಲಿಯ ಕೇಂದ್ರ ಅಕಾಡಮೆಯ ಸಂಶೋಧನಾತ್ಮಕ ದಾಖಲೆ ಚಿತ್ರ ಪುಸ್ತಕವೊಂದನ್ನು ಮುದ್ರಿಸಿದ್ದು ಬಾದಾಮಿಯ ಪ್ರಾಚ್ಯವಸ್ತು ಸಂಗ್ರಾಲಯದಲ್ಲಿ ಪ್ರದರ್ಶನಕ್ಕಿರುವ ಉದ್ದನೆಯ ಪ್ರತಿಕೃತಿಯನ್ನು ನಿರ್ಮಿಸಿದ ಎಂ.ಎನ್. ಚಂದ್ರಶೇಖರ ಪ್ರತಹ ಕಲಾವಿದರೆಂದು ನೇಮಕಗೊಂಡು ಗುಹೆಗಳಲ್ಲಿನ ಚಿತ್ರಗಳನ್ನು ಸೈಜ್ ಟು ಸೈಜ್ ಮಾಲಿಕೆಯಲ್ಲಿ ವರ್ಣಚಿತ್ರಗಳನ್ನು ಪ್ರತಿಕೃತಿ ಮಾಡಿದ್ದರು ಅದಲ್ಲದೆ ನಾಡಿನ ಹಿರಿಯಕಲಾವಿದ ಎಂ.ವಿ.ಮಿಣಜಗಿ ಅವರೂ ಕೂಡಾ ನಾಲ್ಕು ಕೃತಿಗಳನ್ನು ಪ್ರತಿಕೃತಿಮಾಡಿ ಐತಿಹಾಸಿಕ ದಾಖಲೆ ಉಳಿಸಿದ್ದಾರೆ. ಧಾರವಾಡ ಕರ್ನಾಟಕ ವಿಶ್ವವಿದ್ಯಾಲಯ ಇತಿಹಾಸ ವಿಭಾಗದ ಸಂಗ್ರಹಿತವಾದ ಚಿತ್ರಗಳು ಇಂದಿಗೂ ಚಾಲುಕ್ಯರ ಚಿತ್ರ ಪ್ರೀತಿಯ ಪ್ರಾತೀಕವಾಗಿ ನಿಂತಿವೆ. ಹೀಗೆ ಮೂಲ ಕೃತಿಗಳು ಇದ್ದರೂ ಮಾಡಿ ದಾಖಲೆ ಉಳಿಸಿರುವ ಕಲಾವಿದರಿಗೆ ಕೃತಜ್ಞತೆಗಳನ್ನು ಸಲ್ಲಿಸಲೇಬೇಕು. ಅಲ್ಪಸ್ವಲ್ಪ ಮೂಡಿದ ಉಳಿದ ಚಿತ್ರಗಳ ಛಾಯಾಚಿತ್ರ ತೆಗೆಯಲೂ ಪಿರಣಾಮಕಾರಿಯಾದ ಬೆಳಕು ಸಾಧ್ಯವಾಗದೇ ಚಿತ್ರಗಳ ಪರಿಪೂರ್ಣತೆ ಸಿಗುತ್ತಿಲ್ಲ. ಗುಹೆಯಲ್ಲಿ ಸೇರುವ ನೀರಿನಿಂದ ಭಾವಲಿಗಳ ಕಾಟದಿಂದ ಚಿತ್ರಗಳು ನಸಿಸಿಹೋಗುತ್ತಿವೆ. ಸೂಕ್ತ ರಕ್ಷಣೆ

ಇಂದಿಗೂ ಅಗತ್ಯವಾಗಿದೆ. ಚಿತ್ರಕಲೆಯ ಐತಿಹಾಸಿಕ ಆಸಕ್ತಿ ಪ್ರೀತಿ ಪ್ರಚುರಪಡಿಸುವ ರೀತಿ, ತಂತ್ರಗಳು ಧನಾತ್ಮಕ ರೇಖೆಗಳು ಶರೀರಶಾಸ್ತ್ರ ಅಧ್ಯಯನ ಆಕಾಲದಲ್ಲೇ ಹೇಗಿತ್ತು ಎಂಬುದಲ್ಲವನ್ನು ಬಿಂಬಿಸುವ ಸೌಂದರ್ಯದಿಂದ ತುಂಬಿದ ಬಾದಾಮಿ ಗುಹಾವರ್ಣಚಿತ್ರಗಳು ಒಂದೆಡೆಯಾದರೆ ಮಹಾಲಿಂಗಪುರದ ಶ್ರೀ ಮಹಾಲಿಂಗಶ್ವರ ಮಠದಲ್ಲಿ ಕೆಂಪು ಹಿಂಬದಿಯ ಪ್ರಖರವರ್ಣ ಚಿತ್ರಗಳು ಜಿಲ್ಲೆಯ ಇತಿಹಾಸದಲ್ಲಿ ಗಮನ ಸೆಳೆಯುವ ಚಿತ್ರಗಳಾಗಿವೆ. ಶ್ರೀ ಮಹಾಲಿಂಗೇಶ್ವರರೆಂಬ ನಾಮಧೇಯರು ತಮ್ಮ ಪವಾಡ ಹಾಗೂ ಲೀಲೆಗಳಿಂದ ಪೂಜನೀಯರಾದ ಸನ್ನಿವೇಶಗಳನ್ನು ಶ್ರೀಮಠವು ಇಂದಿಗೂ ಉಳಿಸಿಕೊಂಡು ಬಂದಿರುವ ಸ್ವಾಗತಾರ್ಹ ಬಹಳಷ್ಟು ಮಠಮಾನ್ಯಗಳು ಗುಡಿಗುಂಡಾರಗಳಲ್ಲಿ ಹೀಗೆ ಇರುವ ಚಿತ್ರಗಳಲ್ಲಿ ಕೆತ್ತಿ ಅಳುಕಿಸಿ ಸಿಮೆಂಟು ಮಾಡಿ ನವ್ಯತೆಕೊಟ್ಟು ಹಾಳುಮಾಡಿದ ಉದಾಹರಣೆಗಳು ಬೇಕಾದಷ್ಟಿವೆ ಅವುಗಳಿಗೆ ಭಿನ್ನವಾದ ಮಹಾಲಿಂಗೇಶ್ವರ ಮಠದಲ್ಲಿ ಇಂದಿಗೂ ಸ್ಪಷ್ಟವಾದವರ್ಣ ಭಿತ್ತಿಚಿತ್ರಗಳು ಗೋಚರಿಸುತ್ತವೆ.

ಇದೇ ರೀತಿ ಜಿಲ್ಲೆಯ ಜಮಖಂಡಿ ಸಂಸ್ಥಾನ ಅರಸ ರಾಮಚಂದ್ರ ರಾಜೇ ಪಿ. ಪಟವರ್ಧನ ಜಮಖಂಡಿ ಸಂಸ್ಥಾನ ಅರಮನೆಯ ವಿಶೇಷತೆಯೇ ಬೇರೆ ಇಲ್ಲಿಯೂ ಕೂಡಾ ಕಡು ನೀಲಿ ಲೇಮನ್ ಹಳದಿ ಮೊದಲಾದ ಪ್ರಖರ ವರ್ಣಗಳು ಗೋಡೆಗಳ ಮೇಲೆ ಗಣಪತಿ ಲಕ್ಷ್ಮಿ ಹಾಗೂ ಅನೇಕ ನಕ್ಷೆಗಳು ಶತಮಾನದ ನಂತರ ಇಂದಿಗೂ ಗೋಚರಿಸುತ್ತಿವೆ. ಸಂಗಮರಿ ಕಲ್ಲುಗಳ ವಿನ್ಯಾಸ ಕಟ್ಟಿಗೆ, ಕಬ್ಬಿಣಗಳಲ್ಲಿ ಅಂದ ಚೆಂದು ಇಂಗ್ಲೆಂಡಿನಲ್ಲಿ ಸಿದ್ಧಗೊಂಡ ಫ್ಯಾನ ಮತ್ತು ಬಾತ್ ಟಬ್‌ಗಳ ವಿನ್ಯಾಸಗಳಲ್ಲಿ ಎಂದವರನ್ನು ಮೂಕ ವಿಸ್ಮಿತರನ್ನಾಗಿಸುತ್ತವೆ ಈಗಲೂ ಇದಲ್ಲಕ್ಕೆ ರಕ್ಷಣೆ ಸಾಕಾಗುತ್ತಿಲ್ಲ. ಸರಿಯಾದ ಸಂರಕ್ಷಣೆ ಅತ್ಯಗತ್ಯತೆ ಎದ್ದು ಕಾಣುತ್ತದೆ. ಚಿತ್ರಗಳಿಗೆ ಬಿಸಿಲು ಗಾಳಿಯಿಂದ ಮಂಕಾಗುವಸಾಧ್ಯತೆ ಇದ್ದು ಮೂಲ ವಿನ್ಯಾಸವನ್ನು ಉಳಿಸುವವ್ಯಸ್ಥೆ ಇಂದಿನ ಪೀಳಿಗೆಯ ಜವಾಬ್ದಾರಿಯಾಗಿದೆ.

ಇನ್ನು ಹಸ್ತಪ್ರತಿಗೆ ಇರುವ ಐತಿಹಾಸಿಕ ಹಿನ್ನೆಲೆ ಜಿಲ್ಲೆಗೆ ಪ್ರಮುಖವಾಗಿ ಶಿವಯೋಗಮಂದಿರದ ವಾಚನಾಲಕ್ಕೆ ಸಲ್ಲುತ್ತದೆ ಹಾನಗಲ್ಲಕುಮಾರ ಸ್ವಾಮಿಗಳ ಸಮಾಧಿಯೊಂದಿಗೆ ಯೋಗ, ವಿಭೂತಿ ತಯಾರಿಕೆ ಪುಸ್ತಕಗಳ ಪ್ರಕಾರಣೆ ನಾಡಿನ ಎಲ್ಲ ಮಠಗಳಿಗೆ ಮರಿದೇವರನ್ನು ನೀಡುವ ಶ್ಯಾಲೆಯ ಶಿವಯೋಗಮಂದಿರ ಅಪ್ರತಿಮವಾದ ಶಿವಪುರಾಣಗಳ ಹಸ್ತ ಪ್ರತಿಗಳು ವರ್ಣ ಚಿತ್ರಗಳ ಮುಖಪುಟಗಳನ್ನು ಹೊಂದಿದೆ. ತಾಳೆಗರಿಗಳ ಒಳ ವಿನ್ಯಾಸದಲ್ಲಿ ಸಾವಿರಾರು ರೇಖಾಚಿತ್ರಗಳನ್ನು ನೀಡಿದ ಪುರಾತನರ ರೇಖಾ ವಿನ್ಯಾಸದ ಸೂಕ್ಷ್ಮತೆ ತಾಳೆ ಹಾಗೂ ಪ್ರಮಾಣಬದ್ಧತೆ ತಂತ್ರಗಾರಿಕೆಗಳನ್ನು ಇಲ್ಲಿ ಉದಾಹರಣೆ ಸಮೇತ ರೇಖಾಚಿತ್ರಗಳನ್ನು ಪ್ರಸ್ತುತಪಡಿಸಲಾಗಿದೆ. ರೇಖಾಚಿತ್ರಗಳು ಹೆಚ್ಚಾಗಿ ಚಕ್ರಗಳೊಂದಿಗೆ ವಿವರಿತವಾಗಿದ್ದು

ಹೆಸರಿಸಲಾಗದ ಪ್ರಾಣಿ ಆಕಾರಗಳನ್ನು ಹೊಂದಿವೆ. ಚೌಕಾನೆಗಳು 'ಭವಿಷ್ಯ'ವಾಣಿಗೆ ಸಂಬಂಧಿಸಿದ ಚಿತ್ರಗಳ ಜ್ಯೋತಿಷ್ಯ ಶಾಸ್ತ್ರಕ್ಕೆ ಸಂಬಂಧಿಸಿದ ಚಿತ್ರಗಳು ಹೇರಳವಾಗಿವೆ.

ಜಾನಪದ ಚಿತ್ತರದಲ್ಲಂತೂ ಇಳಕಲ್ಲ ಸೀರೆ ಮೇಲೆ ದಾರದ ಚಿತ್ತಾರಗಳು, ಬಹುತೇಕ ಕೊನೆಯ ಸೀರೆಯನ್ನು ಛಾಯಾಚಿತ್ರ ತೆಗೆದುಕೊಂಡು ಬಳಸಲಾಗಿದೆ ಈಗ ಯಾರು ಆ ಕಾರ್ಯ ಮಾಡುತ್ತಿಲ್ಲ. ಇಳಕಲ್ಲನಲ್ಲಿ ತೀರಹೋದ ಅಜ್ಜಿಯಚರು, ಗುಳೇದ ಗುಡ್ಡದಲ್ಲಿ ಕೆಲವು ಮನೆತನದವು ಈ ಸೀರೆ ಮೇಲೆ ಚಿತ್ತಾರ ರಚನೆ ಮಾಡುತ್ತಿದ್ದರು.

ಆಧುನಿಕ ಮಹಿಳೆಯರು ದಾರ ಸೂಜಿಯಿಂದ ಕಾರ್ಯ ಕಸೂತಿಮಾಡದೆ ಯಂತ್ರಗಳ ಮೊರೆ ಹೊಕ್ಕಿದ್ದು ವಿಪರ್ಯಾಸ. ಈಗ ಇಳಕಲ್ ಸೀರೆಗಳು ಸಾಂಪ್ರದಾಯಿಕತೆಯನ್ನು ಹೊರತುಪಡಿಸಿ ಚೂಡಿದಾರದ ಸೆಟ್ ಆಗುತ್ತಿರುವುದು ಆಧುನಿಕತೆಗೆ ಸಾಕ್ಷಿಯಾಗಿದೆ.

ಹೆಣಿಕೆ ಸಾಮಗ್ರಿಗಳು ಹಚ್ಚೆಗೂ ಇಂದು ಅಂತಿಮ ದಿನಗಳು ಇಂಜೆಕ್ಷನ್‌ಗೆ ಹೆದರುವ ಹೆಂಗೆಳೆಯರು ಏಳುಪದರು ದಾಟಿ ಹೋಗುವ ಸೂಜಿಯನ್ನೆಂತು ಚುಚ್ಚಿಸಿಕೊಂಡಾರು ಅದು ಸಾವಿರಾರು ಬಾರಿ, ಹೀಗೆ ಹಚ್ಚೆ ಹಾಕುವವರು ಬೇರೆ ಬೇರೆ ಉದ್ಯೋಗ ಮಾಡುತ್ತ ಚುಚ್ಚಿಸಿಕೊಳ್ಳುವರಿಲ್ಲದೆ ಸಂಪೂರ್ಣ ಕೈಬಿಟ್ಟಿದ್ದಾರೆ ಎನ್ನಬಹುದು. ಗುಳೆದಗುಡ್ಡದ ವಾಡೆ ಚಿತ್ರಗಳು ಕೇವಲ ಎರಡು ಲಭ್ಯವಾಗಿದ್ದು ಭಾರತ ಗೆಜಿಟೆರ್‌ನಲ್ಲಿ ಎರಡು ಹೊಸಮನಿ ಎಂಬುವವರ ಮನೆಯಲ್ಲಿ ಶತಮಾನಗಳಷ್ಟು ಹಳೆಯದಾದ ಚಿತ್ರವಿರುವ ಗೊಡೆಯನ್ನು ಕೆಡಹಿ ಸಿಮೆಂಟಮಾಡಿ ಆಧುನಿಕತೆ ಮೆರೆದಿದ್ದಾರೆ. ಇಂಥ ಎಷ್ಟೆ ಕೃತಿಗಳಿಗೆ ಸೂಕ್ತ ರಕ್ಷಣೆ ಕಲಾತ್ಮಕ ಗುಣಗಳಿಲ್ಲದೆ ಸಾಂಸ್ಕೃತಿಕ ಪ್ರಜ್ಞೆ ಇಲ್ಲದೆ ಹಾಳಾಗುತ್ತಿವೆ.

ಜಿಲ್ಲೆಯ ಗುಡಿಗುಂಡಾರ ಮಠಮಾನ್ಯಗಳು ಹಾಗೂ ಇನ್ನು ಅನೇಕ ಕಲಾಭಿಮಾನಿಗಳ ಮನೆ ಮನೆಗಳಲ್ಲಿ ಅಪರೂಪದ ವರ್ಣಚಿತ್ರಗಳ ಸಂಗ್ರಹವಿದ್ದು ಅಂಥವುಗಳ ಕುರಿತು ಪ್ರತ್ಯೇಕ ಅಧ್ಯಯನವೇ ನಡೆಯುವಷ್ಟು ಚಿತ್ರಭಂಡಾರ ಇರುವುದು ಬಾಗಲಕೋಟೆಯ ಭಾಗ್ಯವೆನ್ನಬಹುದು.

ಅಧ್ಯಾಯ – ೬

ಸಮಾರೋಪ

ಸಮಾರೋಪ

ಪ್ರಾಚೀನ ಜಗತ್ತಿನ ಹಾಗೂ ಭಾರತದ ಇತಿಹಾಸದಲ್ಲಿ ಪ್ರಮುಖ ಸ್ಥಾನ ಪಡೆದ ಬಾದಾಮಿ ಕಲ್ಲು ಬಂಡೆಗಳ ಮೇಲೆ ಆದಿಮಾನವ ಬರೆದ ಕೊರೆದ, ಕುಟ್ಟಿದ ಚಿತ್ರಗಳಿಂದ ಆಧುನಿಕ ಪರಂಪರೆಯ ಶಿಲ್ಪಚಿತ್ರಗಳ ಶಾಸ್ತ್ರೀಯ ಅಧ್ಯಯನಕ್ಕಾಗಿ ರೂಪುಗೊಂಡ ಕನ್ನಡ ವಿಶ್ವವಿದ್ಯಾಲಯದ ಶಿಲ್ಪ ಮತ್ತು ವರ್ಣಚಿತ್ರ ವಿಭಾಗ ಬನಶಂಕರಿ ಬಾದಾಮಿವರೆಗೆ ಹಾಗೂ ಈ ನಡುವೆ ಜಿಲ್ಲೆಯಲ್ಲಿ ರೂಪಗೊಂಡ ಜಮಖಂಡಿ ತಾಲೂಕಿನ ಕುಲ್ಲೋಳ್ಳಿಯ ಆದಿಮಾನವನ ರೇಖಾಚಿತ್ರಗಳು ಬಾದಾಮಿ, ಗುಳೇದಗುಡ್ಡ, ಜಮಖಂಡಿ ಅರಮನೆಗಳಲ್ಲಿನ ಭಿತ್ತಿಚಿತ್ರಗಳು ಶತಮಾನಗಳಷ್ಟು ಹಳೆಯ ಗಾಜಿನ ಚಿತ್ರಗಳು ನೂರಾರು ವರ್ಷಗಳ ಹಿಂದಿನ ಶಿವಯೋಗ ಮಂದಿರ ಸಂಗ್ರಹದಲ್ಲಿನ ಅಪರೂಪದ ಹಸ್ತಪ್ರತಿಗಳ ಮೇಲಿನ ವರ್ಣಚಿತ್ರಗಳು ಹಾಗೂ ರೇಖಾಚಿತ್ರಗಳು ಇದಲ್ಲದೆ, ರಾಜಾಶ್ರಯ ಪಡೆದ ಚಿತ್ರಕಲಾವಿದರು ಸಮಕಾಲೀನ ಕಲಾವಿದರು ಕಲಾಶಾಲೆಗಳು ಹುಟ್ಟಿ ಜಿಲ್ಲೆಯ ಚಿತ್ರಕಲಾವೈಭವವನ್ನು ಜಾಗತೀಕರಣಕ್ಕೇರಿಸಿವೆ.

ಇದುವರೆಗೂ ಅಖಂಡ ಕರ್ನಾಟಕ, ಉತ್ತರ ಕರ್ನಾಟಕ, ಅಖಂಡ ವಿಜಾಪುರ ಜಿಲ್ಲೆ ಎಂದು ವಿಂಗಡಿಸಿ ಜಿಲ್ಲೆಯ ಕೆಲವು ವಿಷಯಗಳು ಅಧ್ಯಯನವಕ್ಕೊಳಪಟ್ಟರೂ ನೂತನವಾಗಿ ಕರ್ನಾಟಕ ಸರ್ಕಾರ ಬಾಗಲಕೋಟೆಯನ್ನು ಒಂದು ಜಿಲ್ಲೆ ಎಂದು ಪರಿಗಣಿಸಿ ಆದೇಶ ಹೊರಡಿಸಿದಾಗಿನಿಂದ ಬಾಗಲಕೋಟೆಗೆ ಇನ್ನಷ್ಟು ಮಹತ್ವ ಬಂದಿದೆ. ಕೃಷ್ಣಾತೀರದ ಹಳ್ಳಿಗಳು ಮುಳುಗಡೆಯಾದ ಹಿನ್ನೆಲೆಯಲ್ಲಿ ೨೦೦ ಹಳ್ಳಿಗಳ ಸಾಂಸ್ಕೃತಿಕ ನೆಲೆಗಳನ್ನು ಕಲಾತ್ಮಾಕ ಅಂಶಗಳನ್ನು ಜನಪದ ವಸ್ತುಗಳನ್ನು ಸೇರಿಸಿ ಅಪರೂಪದ ಗ್ಯಾಲರಿಯೊಂದು ಬಾಗಲಕೋಟೆಯಲ್ಲಿ ನಿರ್ಮಾಣ ಗೊಂಡಿರುವುದು ಜಿಲ್ಲೆಯ ಚಿತ್ರಕಲೆಯ ಸಂರಕ್ಷಣೆ ಹಾಗೂ ಪ್ರಾಚೀನತೆಯಿಂದ ಆಧುನಿಕತೆಯವರೆಗಿನ ಎಲ್ಲ ಅಂಶಗಳನ್ನು ಹಿಡಿದಿಡುವ ಪ್ರಯತ್ನ ಮಾಡುತ್ತಿರುವುದು ಒಂದು ಅಪರೂಪದ ಸಾಧನೆ ಎನ್ನಬಹುದು. ಬಾದಾಮಿ, ಐಹೊಳೆ, ಪಟ್ಟದಕಲ್ಲು, ಕೂಡಲಸಂಗಮ, ಮೊದಲಾದ

ಐತಿಹಾಸಿಕ ಸ್ಥಳಗಳು ಪ್ರಾಚ್ಯವಸ್ತುಗಳ ಸರ್ವೇಕ್ಷಣಾ ಇಲಾಖೆಯಿಂದ ರಕ್ಷಿಸಲ್ಪಟ್ಟು ಚಾಲುಕ್ಯರ ಕಲಾ ಪ್ರಜ್ಞೆಯನ್ನು ಜಗತ್ತಿಗೆ ಪ್ರದರ್ಶಿತವಾಗುತ್ತಿವೆ. ಅಲ್ಲಿಯ ವಸ್ತುಸಂಗ್ರಹಾಲಯಗಳು ಇದ್ದು. ಪ್ರತನಿತ್ಯ ಸಾವಿರಾರರು ಜನರಿಗೆ ಕಲಾಪ್ರಜ್ಞೆಯನ್ನು ನೀಡಲು ಸಾಕಾರಗೊಂಡಿವೆ.

ಪ್ರಸ್ತುತ ಅಧ್ಯಯನವು ಹಲವಾರು ವಿದ್ವಾಂಸರ ಸಂಶೋಧನೆಗಳಲ್ಲಿ ಪ್ರಕಟಗೊಂಡಿರುವ ಜಿಲ್ಲೆಗೆ ಸಂಬಂಧಿಸಿದ ಅಂಶಗಳನ್ನು ಒರೆಗೆ ಹಚ್ಚಿ ಹಿಂದಿನ ಕಾಲದಲ್ಲಿಲ್ಲದ ಬಣ್ಣದ ಚಿತ್ರಗಳನ್ನು ಕ್ಲಿಕಿಸಿ, ಡಿಜಿಟಲ್ ತಂತ್ರಜ್ಞಾನಕ್ಕೆ ಅಳವಡಿಸಿ, ಕಂಪ್ಯೂಟರ್ ಸಹಾಯದಿಂದ ಸ್ಪಷ್ಟವಾದ ಬಣ್ಣದ ಚಿತ್ರಗಳನ್ನು ಪರಿಷ್ಕರಿಸಿಗೊಂಡು ಜಿಲ್ಲೆಯ ಚಿತ್ರಕಲೆಯ ಇತಿಹಾಸವನ್ನು ಹಿಂದಾರೂ ನೀಡದಷ್ಟು ಸುಂದರವಾಗಿ ನೀಡಲು ಪ್ರಯತ್ನಿಸಲಾಗಿದೆ.

ಹಾಗೆಯೇ ಹಿಂದಿನ ಅಧ್ಯಯನಗಳನಂತರ ದಿನಗಳಲ್ಲಿ ದೊರಕಿದ ಗಾಜಿನ ಚಿತ್ರಗಳು, ಭಿತ್ತಿ ಹಾಗೂ ಹಸ್ತಪ್ರತಿಗಳು ದೊರಕಿದ್ದು, ವರ್ಣಚಿತ್ರಗಳು ರೇಖಾಚಿತ್ರಗಳು ಅಪರೂಪದ ದಾಖಲೆಯಾಗಿ ಲಭ್ಯವಾಗಿವೆ.

ಬಾಗಲಕೋಟೆ ಜಿಲ್ಲೆಯ ಒಟ್ಟಂದವನ್ನು ಹೆಚ್ಚಿಸಲು ದಾಖಲಿಸಲು ಈ ಅಧ್ಯಯನ ಒಂದು ಅಪರೂಪದ ಸಂಗ್ರಹ ಹಾಗೂ ಚೂರು ಚೂರಾಗಿ ದಾಖಲೆಗೊಂಡ ಜಿಲ್ಲೆಯ ಚಿತ್ರಕಲೆ ಇತಿಹಾಸ ಪ್ರಾಗೈತಿಹಾಸಿಕತೆಯಿಂದ ಇಂದಿನ ಜನಪದ ಚಿತ್ತಾರಗಳವರೆಗೆ ವಿನೂತನ ಶೈಲಿಯಲ್ಲಿ ಒಂದೆಂಡೆ ದೊರಕುವಂತೆ ಮಾಡುವುದೇ ಪ್ರಸ್ತುತ ಅಧ್ಯಯನದ ಮೂಲ ಉದ್ದೇಶವಾಗಿದೆ.

ಈ ಅಧ್ಯಯನದ ಒಟ್ಟು ಫಲಿತಗಳು

➤ ಅಧ್ಯಯನದ ಉದ್ದೇಶ ಸ್ವರೂಪ ವ್ಯಾಪ್ತಿ ಮತ್ತು ವೈಧಾನಿಕತೆಗಳಲ್ಲಿ ಜಿಲ್ಲೆಯ ಸಾಂಸ್ಕೃತಿಕ ಹಾಗೂ ಚಿತ್ರಗಳ ನೆಲೆಗಳನ್ನು ಪ್ರಮುಖವಾಗಿ ಹಬ್ಬಹರಿದಿನ ಚಿತ್ರಗಳು ದೈವಪ್ರಜ್ಞಾ ಚಿತ್ರಗಳ ಕಲಾ ಶಾಲೆಗಳ ಕಲಾವಿದರು ಐಹೊಳೆ ಪಟ್ಟದಕಲ್ಲುಗಳ ಶಿಲ್ಪ ಕಲಾ ವೈಭವ ನೆನಪಿಸುವುದರ ಜೊತೆಗೆ ಐತಿಹಾಸಿಕ ಸಂಬಂಧಗಳನ್ನು ಕ್ರೂಢಿಕರಿಸಿದೆ. ಜಿಲ್ಲೆಯ ಆಖಂಡ ವಿಜಾಪುರ ಜಿಲ್ಲೆಯಿಂದ ಬೇರ್ಪಟ್ಟ ಬಗ್ಗೆ ಬಾಗಲಕೋಟೆ ಜಿಲ್ಲೆಯ ಐತಿಹಾಸಿಕ ನೆಲೆ ಹಿನ್ನೆಲೆಗಳನ್ನು ಐತಿಹಾಸಿಕ ದಾಖಲೆಗಳಿಂದ ಜಿಲ್ಲೆಗೆ ಸಂಬಂಧಿಸಿದನ್ನು ಮಾತ್ರ ಆಯ್ದು ಅಧ್ಯಯನ ನಡೆಸಲಾಗಿದೆ. ಬಾಗಲಕೋಟೆಯ ಹೆಸರು ಬಂದಿದ್ದು ಹಾಗೂ ಇತ್ತೀಚೆಗೆ ಮುಳುಗಡೆ ಹೊಂದಿ ಪ್ರವಾಹ ಪೀಡಿತವಾಗಿ ಸಾಂಸ್ಕೃತಿಕ ನೆಲೆಗಳನ್ನು ಕಳೆದು ಕೊಂಡಿದ್ದು. ಕೆಲವಾದರೂ ಉಳಿದು ಒಂದು ಸಂಗ್ರಹಾಲಯವಾದುದೆಂದು ವಿವರಿಸಿದೆ.

➤ ಆದಿಮಾನವ ಪ್ರಾಗೈತಿಹಾಸಿಕ ರೇಖಾಚಿತ್ರ ವರ್ಣಚಿತ್ರಗಳು ಜಿಲ್ಲೆಯನ್ನು ಹೇರಳವಾಗಿ ಲಭ್ಯವಾದರೂ ಅಲ್ಲಲ್ಲಿ ಇತಿಹಾಸಕಾಕರರು ಭಾಷೆ ಹಾಗೂ ಅಕ್ಷರಗಳಲ್ಲಿ ಹಿಡಿದಿಟ್ಟ ದಾಖಲೆಗಳೇ ಹೆಚ್ಚಾಗಿರು ವುದರಿಂದ ಪ್ರಾಚ್ಯವಸ್ತು ಇಲಾಖೆ ಹಾಗೂ ಇತಿಹಾಸಕಾರರು, ಗೆಜಿಟೇರ್ ಮೊದಲಾದ ಮಾಧ್ಯಮ

ಗಳಿಗಿಂತ ಭಿನ್ನವಾದ ಬಣ್ಣದ ಛಾಯಾಚಿತ್ರ ಕ್ಲೋಸಪ್‌ಗಳನ್ನು ಅಳವಡಿಸಿ ಅಧ್ಯಯನಕ್ಕೆ ಅಂದ ಹೆಚ್ಚಿಸಿದೆ. ಕ್ಯಾಮರಾ ಬಳಕೆ ಕಾಲಕ್ಕಿಂತ ಸಾವಿರಾರು ವರ್ಷದ ಹಿಂದೆ ಸೃಷ್ಟಿಯಾದ ಚಿತ್ರಗಳನ್ನು ಸಂಸ್ಕರಿಸಿ ಒಟ್ಟು ಅಂದವನ್ನು ಹೆಚ್ಚಿಸಿ ಅಧ್ಯಯನಕ್ಕೆ ಅಳವಡಿಸಲಾಗಿದೆ.

- ಮಾನವ ಬದುಕಿನ ಅವಿಭಾಜ್ಯ ಅಂಗವಾದ ಜನಪದ ಕಲೆ ರಾಜ್ಯದ ಎಲ್ಲ ಮೂಲೆ ಮೂಲೆಯಲ್ಲಿ ಅಧ್ಯಯನ ನಡೆದಿದೆಯಾದರೂ ಬಾಗಲಕೋಟೆ ಜಿಲ್ಲೆಯು ಜನಪದ ಚಿತ್ರಗಳ ಎಲ್ಲಾ ಮಜಲುಗಳನ್ನು ಕಂಡಿವೆ. ಕೌದಿಗಾಗಿ ಕೋಡಿಹಾಳ, ಇಳಕಲ್ಲ ಸೀರೆ, ಹಳ್ಳಿಗಳಲ್ಲಿನ ಕಸೂತಿ ಇಳಕಲ್ಲಿನ ರಂಗ ಪರದೆ ಕಾಕನೂರಿನ ತೊಗಲುಗೊಂಬೆ, ಮದರಂಗಿ, ಹಚ್ಚೆ, ಗುಳೆದಗುಡ್ಡದ ಕುಬಸದ ಖಣ, ಸೀರೆಯ ನೆಯ್ದ ಅತಿ ಕಠಿಣ ಗಾಂಧಿಚಿತ್ರ, ವಿಭಿನ್ನ ರಂಗೋಲಿ ಹೀಗೆ ಜನಪದ ಎಲ್ಲಾ ಮಾಧ್ಯಮಗಳನ್ನು ತನ್ನ ತೆಕ್ಕೆಗೆ ತೆಗೆದುಕೊಂಡು ಬೆಳೆದ ಬಾಗಲಕೋಟೆ ಜಿಲ್ಲೆ ಇತರ ಜಿಲ್ಲೆಗಳಲ್ಲಿರುವ ಒಂದೊ ಎರಡೊ ಮಾಧ್ಯಮಗಳಿಗಿಂತ ತೀರಾ ಭಿನ್ನವಾಗಿ ನಿಲ್ಲುತ್ತದೆ. ಹೀಗೆ ಎಲ್ಲಾ ಜನಪದ ಕಲೆಗಳನ್ನು ಒಂದೆಡೆ ಸೇರಿಸಿ ಅಧ್ಯಯನ ನಡೆಸಿದ್ದು ಐತಿಹಾಸಿಕ ದಾಖಲೆ ಎನ್ನಬಹುದು.

- ಪ್ರಮುಖ ತಾಣಗಳಾದ ಬಾದಾಮಿ ಗುಹೆಗಳು ಹಾಗೂ ಗುಳೇದಗುಡ್ಡದ ಹೊಸಮನಿ ಎಂಬವರ ಮನೆ ಹಾಗೂ ಜಮಖಂಡಿಯ ಸಂಸ್ಥಾನ ಅರಸರ ಅರಮನೆ ಭಿತ್ತಿಚಿತ್ರಗಳು ಹಾಗೂ ಮಹಾಲಿಂಗಪೂರದ ಮಠದಲ್ಲಿನ ಚಿತ್ರಗಳು ನಾಲ್ಕು ತಾಣಗಳಲ್ಲಿ ದೊರೆತ ಅತೀ ಪ್ರಮುಖ ಮತ್ತು ಅಷ್ಟೊಂದು ಹಾಳಾಗದ ಚಿತ್ರಗಳನ್ನು ಸಂಗ್ರಹಿಸಿ ದಾಖಲಿಸಲಾಗಿದೆ. ಬಾದಾಮಿಯ ಹಾಗೂ ಗುಳೆದಗುಡ್ಡದ ಚಿತ್ರಗಳ್ಯಾವೂ ಈಗ ಸ್ಪಷ್ಟವಾಗಿ ಉಳಿದಿಲ್ಲ. ಪ್ರತಿಕೃತಿ ರಚಿಸಿದ ಇಲಾಖೆಯ ಸಂಗ್ರಹಗಳಿಂದ ಅಪರೂಪದ ಚಿತ್ರಗಳನ್ನು ಒಂದೆಡೆ ಸಂಗ್ರಹಿಸಿ ಮಾಹಿತಿಗಳನ್ನು ನೀಡಲಾಗಿದೆ.

- ಜಿಲ್ಲೆಯ ಹಸ್ತಪ್ರತಿಗಳಲ್ಲಿರುವ ವರ್ಣ ಚಿತ್ರ ಹಾಗೂ ರೇಖಾಚಿತ್ರಗಳ ಕುರಿತು ಸ್ಥೂಲವಾಗಿ ಮಾಹಿತಿ ಸಂಗ್ರಹಿಸಿದ ದಾಖಲಿಸಲಾಗಿದೆ. ಸನ್ ೧೯೭೨ರಲ್ಲಿ ಡಾ. ಬಿ.ಕೆ. ಹಿರೇಮಠರು ಕರ್ನಾಟಕ ವಿಶ್ವ ವಿದ್ಯಾಲಯಕ್ಕೆ ಮಂಡಿಸಿದ ಕರ್ನಾಟಕ ಹಸ್ತಪ್ರತಿಗಳು ಒಂದು ಅಧ್ಯಯನ ಮಹಾಪ್ರಬಂಧದಲ್ಲಿ ಜಿಲ್ಲೆಯ ಶಿವಯೋಗ ಮಂದಿರದಲ್ಲಿರುವ ವೀರಶೈವ ಹಸ್ತಪ್ರತಿಗಳಲ್ಲಿರುವ ಕೆಲವು ಚಿತ್ರಗಳು ಮಾತ್ರ ಪ್ರಕಟಗೊಳಿಸಿದ್ದು. ನಂತರ ದಿನಗಳಲ್ಲಿ ದೊರಕಿದ ಮುಧೋಳ ತಾಲೂಕಿನ ಮಾಚಕನೂರಿನಲ್ಲಿ ದೊರಕಿದ ಹಸ್ತಪ್ರತಿಗಳು ಇಂದು ಬಾಗಲಕೋಟೆಯ ಪ್ರತಿಷ್ಠಿತ ವಿದ್ಯಾಸಂಸ್ಥೆ ಬಸವೇಶ್ವರ ಕಲಾ ಮಹಾವಿದ್ಯಾಲಯದಲ್ಲಿ ಸಂಗ್ರಹವಿರುವ ಐದು ಪಟ್ಟಿಕೆಗಳ ಮೇಲಿನ ಚಿತ್ರಗಳು ತುಂಬಾ ಅದ್ಭುತವಾದ ವರ್ಣವಿನ್ಯಾಸ ಹೊಂದಿವೆ. ಇದಕ್ಕೂ ಭಿನ್ನವಾಗಿ ಜಿಲ್ಲೆಯ ಶಿವಯೋಗ ಮಂದಿರದಲ್ಲಿ ಸಂಗ್ರಹಿತ

ವಾಗಿರುವ ಹಸ್ತಪ್ರತಿಗಳಲ್ಲಿರುವ ಜಾತಕ ಹಾಗೂ ಭವಿಷ್ಯದ ರೇಖಾಚಿತ್ರಗಳು ಕಾಮಧೇನು ಹಾಗೂ ತ್ರಿಜ್ಯದಿಂದ ರಚಿಸಿದ ರೇಖಾಚಿತ್ರಗಳು ತುಂಬಾ ಸೂಕ್ಷ್ಮವಾದ ಪರಿಕಲ್ಪನೆಗಳನ್ನು ಹೊಂದಿದೆ. ಇಂಥ ಅದ್ಭುತ ಚಿತ್ರರಾಶಿಯನ್ನು ಬೆಳಕಿಗೆ ತಂದಿರುವುದು ಈ ಅಧ್ಯಾಯದ ಪ್ರಮುಖ ಅಂಶ.

- ಜಿಲ್ಲೆಯ ಗುಳೇದಗುಡ್ಡ ಹಾಗೂ ಅಮೀನಗಡದಲ್ಲಿ ದೊರಕಿದ ಅಪರೂಪದ ಗಾಜಿನ ಮೇಲಿನ ಚಿತ್ರಗಳ ತಂತ್ರಜ್ಞಾನ ತಿರುವುಮುರುವಾಗಿ ರಚಿಸುವ ವಿಧಾನ ಚಿತ್ರದ ಅಂದ ಚೆಂದದ ಜೊತೆಗೆ ಕಲಾವಿದನ ಜಾಣತನ ಮಿಂಚುವ ಗಾಜಿನ ಮೇಲಿನ ತಂತ್ರವನ್ನು ಇತರರಿಗೆ ತಿಳಿಯಪಡಿಸುವುದು. ಚಿತ್ರಕಲಾ ಕ್ಷೇತ್ರದಲ್ಲಿ ಗಾಜಿನ ಚಿತ್ರಗಳು ಮಹತ್ವದ ಸ್ಥಾನಪಡೆದಿವೆ. ಅದು ಒಂದುಸಾರೆ ಒಡೆದರೆ ಏನೂ ಮಾಡಲು ಬರುವುದಿಲ್ಲ. ಸಂಗ್ರಹಿಸಿಟ್ಟ ಯಜಮಾನರುಗಳು ಶತಮಾನಗಳ ಕಾಲ ಅತ್ಯಂತ ಕಾಳಜಿಯಿಂದ ಕಲಾಕೃತಿಗಳನ್ನು ರಕ್ಷಿಸುವ ಪ್ರಜ್ಞೆಯನ್ನು ಹೊಂದಿರುತ್ತಾರೆ. ಅಲ್ಲದೆ ತಮ್ಮ ಮಕ್ಕಳು ಮೊಮ್ಮಕ್ಕಳಿಗೆ ಅವುಗಳ ಮಹತ್ವ, ಬೆಲೆ, ಇತ್ಯಾದಿಗಳ ಅರಿವು ನೀಡುತ್ತಾ ಬಂದಿರುವುದು ವಿಶೇಷ ವಾಗಿದೆ.

- ಜಿಲ್ಲೆಯ ಮುಳುಗಡೆ ವಸ್ತುಸಂಗ್ರಹಾಲಯದಲ್ಲಿನ ವಿವಿಧ ಮಾಧ್ಯಮಗಳಲ್ಲಿನ ಚಿತ್ರಗಳು. ಇಳಕಲ್ಲಿನ ಶ್ರೀ ಮಠದಲ್ಲಿದಲ್ಲಿ ವರ್ಣಚಿತ್ರಗಳು ಹಾಗೂ ಕೂಡಲಸಂಗಮದ ಮಾತೆಮಹಾದೇವಿಯರ ಮಹಾ ಮನೆಯ ಧ್ಯಾನ ಮಂದಿರದಲ್ಲಿ ಬೀದರನ ಶ್ರೀ ಬಸವ ಹುಡುಗಿ ಅವರು ರಚಿಸಿದ ಶರಣರ ಭಾವ ಚಿತ್ರಗಳು. ಬಾಗಲಕೋಟೆಯ ಚರಂತಿಮಠದಲ್ಲಿನ ಶ್ರೀ ವಿ.ಸಿ. ನಾವಲಗಿ ಅವರು ರಚಿಸಿದ ಪೂಜ್ಯರ, ಬಸವಣ್ಣನವರ ಭಾವಚಿತ್ರಗಳು ತೈಲ ಮಾಧ್ಯಮದಲ್ಲಿವೆ. ಸಿದ್ದನಕೊಳ್ಳದ ಮಠದಲ್ಲಿ ಅಜ್ಜನವರ ಅಪರೂಪದ ಲೈಪ್ ಚಿತ್ರಣ. ಹೀಗೆ ಒಂದೊಂದು ಕ್ಷೇತ್ರಗಳಲ್ಲಿ ಅಲ್ಲಿಗೆ ಹೋದವರಿಗೆ ಮಾತ್ರ ನೋಡಲು ಸಾಧ್ಯವಾಗುವ ವರ್ಣಚಿತ್ರಗಳನ್ನು ಛಾಯಾಚಿತ್ರ ಮಾಡಿಕೊಂಡು ಕೊನೆಯ ಅಧ್ಯಾಯದಲ್ಲಿ ಬಳಸಿಕೊಳ್ಳಲಾಗಿದೆ. ಹಲಾವರು ಕಲಾವಿದರ ವಿವಿಧ ಮಾಧ್ಯಮಗಳ ಚಿತ್ರಗಳು ಒಂದೆಡೆ ನೋಡಲು ಸಿಗುವಂತೆ ಮಾಡುವುದೇ ಈ ಅಧ್ಯಯನದ ಉದ್ದೇಶವಾಗಿದೆ.

- ಪ್ರತಿ ಅಧ್ಯಾಯನಗಳ ಫಲಿತಗಳು ಒಂದೆಡೆಯಾದರೆ ಸಮಗ್ರ ಅಧ್ಯಯನ ಇದುವರೆಗೆ ಆಗಿರುವ ಪ್ರತ್ಯೇಕ ಪುಸ್ತಕಗಳು ಲೇಖನಗಳು ಪತ್ರಿಕಾ ಬರಹಗಳು ಇವೆಲ್ಲವನ್ನು ಕ್ರೂಢೀಕರಿಸಿ ಸಂಸ್ಕರಿಸಿ ಒಂದೆಡೆ ವಿಶಿಷ್ಟವಾಗಿ ವಿಭಿನ್ನವಾಗಿ ನೀಡಲಾಗಿದೆ. ಶತಮಾನಗಳಷ್ಟು ಹಳೆಯ ಕಾಲದ ಸಂಶೋಧಕರ ಮಾಹಿತಿಗಳನ್ನು ಚಿತ್ರದ ಕುರಿತು ಲೇಖನಗಳು ಬಣ್ಣಗಳ ತಂತ್ರಗಾರಿಕೆಗಳನ್ನು ಒರೆಗೆ ಹಚ್ಚಿ ಇಂದಿನ ಕಂಪ್ಯೂಟರ್ ಮಾಧ್ಯಮಕ್ಕೆ ಅಳವಡಿಸಿ ಸತ್ಯಾಸತ್ಯತೆಗಳನ್ನು ಪರಿಗಣಿಸಿ ದಾಖಲೆ ಮಾಡಲಾಗಿದೆ.

- ಬಾಗಲಕೋಟೆ ಜಿಲ್ಲೆ ಎಲ್ಲಾ ಮಾಧ್ಯಮದ ಚಿತ್ರಕಲೆಗಳಲ್ಲಿ ತನ್ನ ವಿಶಿಷ್ಟ ಸ್ಥಾನ ಸಂಪಾದಿಸಿದೆ. ಇಲ್ಲಿನ ಕಲಾವಿದರು ನವ್ಯತೆಯ ಸೊಗಡಿನಲ್ಲಿ ಸಾಂಪ್ರದಾಯಿಕತೆಯನ್ನು ಉಳಿಸಿಕೊಂಡು ಬಂದವರು. ಹಿರಿಯ ತಲೆಮಾರಿನ ಕಲಾವಿದರಾದ ಶ್ರೀ ಸೋಮಶೇಖರ ಸಾಲಿ ಅವರು ಅಕ್ಕಮಹಾದೇವಿ ಹಾಗೂ ಶಿವನ ಚಿತ್ರಗಳನ್ನು ರಚಿಸಿದ್ದಾರೆ. ಕರ್ನಾಟಕ ಲಲಿತಕಲಾ ಅಕಾಡೆಮಿಯ ಅಧ್ಯಕ್ಷರಾಗಿ ಕಾರ್ಯ ನಿರ್ವಹಿಸಿದ್ದಾರೆ. ಡಾ. ಬಿ.ಕೆ. ಹಿರೇಮಠ ಇನ್ನೋರ್ವ ಹಿರಿಯ ಕಲಾವಿದ ಅವರು ಕೂಡಾ ಲಿಂಗಪ್ರಜ್ಞೆ ಹಾಗೂ ಸಾಂಪ್ರದಾಯಿಕ ಚಿತ್ರಗಳನ್ನೇ ರಚಿಸಿದ್ದಾರೆ. ಸಾಹಿತಿಗಳೂ ಆದ ಡಾ. ಬಿ.ಕೆ. ಹಿರೇಮಠರವರು ಕರ್ನಾಟಕದ ಹಸ್ತಪ್ರತಿಗಳು ಒಂದು ಅಧ್ಯಯನ ಎಂಬ ವಿಷಯದಲ್ಲಿ ಪಿಎಚ್.ಡಿ. ಪದವಿಯನ್ನು ಪಡೆದವರು. ಹಾಗೇ ಇನ್ನೋರ್ವ ಹಿರಿಯ ಕಲಾವಿದ ದಿ. ಆರ್.ಎಂ. ಹಡಪದ ಮೂಲತಃ ಬಾದಾಮಿ ಯವರು ಬೆಂಗಳೂರಿನ ಶೇಷಾದ್ರಿಪುರಂನಲ್ಲಿ ಕೆನ್ ಕಲಾಶಾಲೆ ಕಟ್ಟಿ ನೂರಾರು ಪ್ರತಿಭಾವಂತ ಕಲಾವಿದರನ್ನು ನಾಡಿಗೆ ನೀಡಿದ ಖ್ಯಾತಿ ಇವರದು. ಇವರೂ ಕೂಡಾ ಕರ್ನಾಟಕ ಲಲಿತಕಲಾ ಅಕಾಡೆಮಿ ಅಧ್ಯಕ್ಷರಾಗಿದ್ದರು. ಇವರಂತೆ ಇನ್ನು ವಿಜಯಸಿಂಧೂರ ಜಿಲ್ಲೆಯ ಜಮಖಂಡಿಯವರು ರಾಷ್ಟ್ರಮಟ್ಟದ ಖ್ಯಾತಿಯನ್ನು ಪಡೆದವರು. ಉತ್ತಮ ವರ್ಣ ಸಂಯೋಜಿತ ಕಲಾಕೃತಿಗಳು ದೇಶದ ಮೂಲೆ ಮೂಲೆಯಲ್ಲಿ ಸಂಗ್ರಹಿತವಾಗಿವೆ. ಇವರೂ ಕರ್ನಾಟಕ ಲಲಿತಕಲಾ ಅಕಾಡೆಮಿ ಸದಸ್ಯರಾಗಿದ್ದರು. ಇನ್ನೋರ್ವ ಕಲಾವಿದ ಗುಳೆದಗುಡ್ಡದ ಮಹಾದೇವ ಜಗತಾಪ ಕೂಡಾ ಒಬ್ಬ ಕಲಾ ಬರಹಗಾರ ರಾಗಿದ್ದಾರೆ. ಮಹಾದೇವ ಕವಿಶೆಟ್ಟಿ ಇನ್ನೋರ್ವ ಹಿರಿಯ ಕಲಾವಿದ ಇವರು ಹಿಮಾಲಯದಂತಹ ಪರ್ವತ ಶ್ರೇಣಿಗಳಲ್ಲಿ ಭೂದೃಶ್ಯಗಳನ್ನು ರಚಿಸಿ ರಾಜ್ಯಪಾಲರಿಂದ ರಾಷ್ಟ್ರಪತಿಗಳಿಂದ ಭೇಷ್ ಎನಿಸಿ ಕೊಂಡವರು. ಕರ್ನಾಟಕ ಲಲಿತಕಲಾ ಅಕಾಡೆಮಿಯ ಸದಸ್ಯರಾಗಿದ್ದವರು ಇನ್ನು ಅನೇಕ ಗ್ರಾಮೀಣ ಪ್ರದೇಶದ ಕಲಾವಿದರ ಸಂಪತ್ತನ್ನು ಹೆಸರಿಸಬಹುದು. ಮುಧೋಳದ ಮೋಹನ ಪೇಂಟರ್ ಜಿನಗಾರ ಅವರು ಹಲವಾರು ದೈವಪ್ರಜ್ಞಾ ಚಿತ್ರಗಳನ್ನು ರಚಿಸಿದ್ದಾರೆ. ಹಾಗೆಯೇ ರಾಮಣ್ಣ ಕಡಪಟ್ಟಿಯರು, ಸಾಲಿಮಠ ಅವರು ಜಮಖಂಡಿಯವರು ಶಂಭುಲಿಂಗ ಕರಜಗಿಮಠ ಹಾಗೂ ಸಂಸ್ಥಾನ ರಾಜಮಹಾರಜರ ಭಾವಚಿತ್ರ ರಚಿಸುತ್ತಿದ್ದ ಜಮಖಂಡಿಯ ದಿ. ಎಂ.ಸಿ. ಹರಕಂಗಿ ಅವರು ಖ್ಯಾತ ಛಾಯಾಗ್ರಾಹಕರು ಕೂಡಾ ಆಗಿದ್ದರು. ಇಂದಿಗೂ ಅವರ ಫ್ಯೂಜಿ ವರ್ಣಚಿತ್ರಗಳು ಕಾಣಸಿಗುತ್ತವೆ. ರಬಕವಿಯ ಎಡಹಳ್ಳಿ ಯವರು ಬಾಗಲಕೋಟೆಯ ವರ್ಣಚಿತ್ರ ಕಲಾವಿದ ವಿ.ಸಿ. ನಾವಲಗಿಯವರಂಥವರು ಚಿತ್ರಕಲೆಯಲ್ಲಿ ಉಳಿಸುವ ದಾಖಲೆಗಳನ್ನು ನಿರ್ಮಿಸಿದ್ದಾರೆ.

ಹೀಗೆ ಜಿಲ್ಲೆಯ ಚಿತ್ರಕಲೆಯ ಪ್ರಾಚೀನ ಪರಂಪರೆಯನ್ನು ಅಧ್ಯಯನ ಮಾಡುವ ಹಾಗೂ ಚಿತ್ರಕಲೆಯ ಮಹತ್ವ ಅರಿಯಲು ಜಿಲ್ಲೆಯ ಬಾಗಲಕೋಟೆ, ಇಳಕಲ್, ಬಾದಾಮಿ, ಜಮಖಂಡಿ, ಅಮೀನಗಡದಲ್ಲಿ

ಕಲಾ ಶಾಲೆಗಳು ೧೯೯೨ ರಿಂದ ಆರಂಭವಾದವು. ಇಂದಿನವರೆಗೆ ಕಲಾಭ್ಯಾಸ ನೀಡುತ್ತಾ ಆಧುನಿಕ ಕಲಾವಿದರನ್ನು ಸಿದ್ಧಗೊಳಿಸುತ್ತಲಿವೆ. ಹಾಗೇ ಹಿರಿಯ ಕಲಾ ಶಿಕ್ಷಕರುಗಳಾದ ಹುನಗುಂದದ ಎಸ್.ಎಂ. ಪತ್ತಾರ, ಇಳಕಲ್ಲಿನ ಎಂ.ಎಂ. ಶಿರೂರು, ಬಾಗಲಕೋಟೆಯ ಶ್ರೀ ನಾಯಕ, ಮುಧೋಳದ ಶ್ರೀ ಅಂಗಡಿ, ಬಾದಾಮಿಯ ಶ್ರೀ ಬಾರಾವಲಿ, ಜಮಖಂಡಿಯ ಶ್ರೀ ಪೂಜಾರಿ, ಅಮೀನಗಡ ಶ್ರೀ ತುಂಬಗಿ ಹಿರಿಯ ಕಲಾವಿದರಾದ ಇಳಕಲ್ಲಿನ ಶ್ರೀ ಗಣಾಚಾರಿ ಅವರು ಉತ್ತಮ ಸಂಯೋಜನಾಬದ್ಧ ಭೂದೃಶ್ಯಗಳು, ಭಾವಚಿತ್ರಗಳನ್ನು ಇಂದಿಗೂ ರಚಿಸುತ್ತಾರೆ. ಚಿತ್ರಪರಂಪರೆ ಆದಿಮಾನವನಿಂದ ಇಂದಿನವರೆಗೂ ಎಲ್ಲಾ ಮೂಲಗಳನ್ನು ಚಿತ್ರಗಳ ಬಳಕೆ, ಕಲಾವಿದರು, ಕಲಾಶಾಲೆಗಳು, ಕಲಾ ಶಿಕ್ಷಕರು, ಕಲಾವಿದ್ಯಾರ್ಥಿಗಳು ಹೀಗೆ ಹಲವು ಮಗ್ಗಲುಗಳಲ್ಲಿ ಹೊಸ ಹೊಸ ಶೋಧಗಳು ವರ್ಣಗಳ ನೆರಳುಬೆಳಕಿನಾಟದಲ್ಲಿ ವಿಜೃಂಭಿಸುತ್ತಲೇ ಇದೆ.

ಪ್ರಸ್ತುತ ಸಂಪ್ರಬಂಧವು ಇಲ್ಲಿನ ಎಲ್ಲ ಸಂಬಂಧಗಳನ್ನು ಚಿತ್ರ ಸಮೇತ ಒಂದೆಡೆ ದಾಖಲಿಸುವ ಒಂದು ಪುಟ್ಟ ಪ್ರಯತ್ನವಾಗಿದೆ.

ಅನುಬಂಧಗಳು

* ಗ್ರಂಥಋಣ
* ಚಿತ್ರಋಣ
* ನಕ್ಷೆಗಳು

ಗ್ರಂಥಋಣ

೧. ಅಪರೂಪದ ಅಪೂರ್ವ ಚಿತ್ರ ಕಲಾಕೃತಿಗಳು (ಲೇ) - ಪ್ರವೀಣರಾಜು ಸೊನ್ನದ

೨. ಅಚ್ಚರಿ ಮೂಡಿಸುವ ಗಾಜಿನ ಚಿತ್ತಾರ (ಲೇ) - ಮಹಾದೇವ ಮ. ಜಗತಾಪ
ಸಂಯುಕ್ತ ಕರ್ನಾಟಕ ೨೮.೧೧.೨೦೦೮.

೩. ಆಲೇಖ್ಯ - ಡಾ. ಅ.ಲ. ನರಸಿಂಹನ್
ಸಂಯೋಜಿತ, ಬೆಂಗಳೂರು, ೨೦೦೦

೪. ಇಲಕಲ್ಲ ಸೀರೆ - ಡಾ. ಮಹೇಶ ತಿಪ್ಪಶೆಟ್ಟಿ
ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೦

೫. ಉತ್ತರ ಕರ್ನಾಟಕದ ಭಿತ್ತಿ ಚಿತ್ರಕಲೆ - ಡಾ. ಯಾದಪ್ಪ ಪರದೇಶಿ
ಪಿಎಚ್.ಡಿ. ಮಹಾಪ್ರಬಂಧ, ೨೦೦೧
ಕನ್ನಡ ವಿಶ್ವವಿದ್ಯಾಲಯ, ಹಂಪಿ

೬. ಉತ್ತರ ಕರ್ನಾಟಕದ ಜನಪದ ಕಲೆ ಮತ್ತು ವಿಧಿಕ್ರಿಯೆ - ಎ.ವಿ. ಪಾಟೀಲ
ಅಪ್ರಕಟಿತ ಮಹಾಪ್ರಬಂಧ, ೧೯೮೨
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.

೭. ಐತಿಹಾಸಿಕ ಬಾದಾಮಿ ಪರಿಚಯ - ಆನಂದ ಕೆ. ಪೂಜಾರ
ಶಾಂಭವಿ ಪ್ರಕಾಶನ, ಬಾದಾಮಿ, ೨೦೦೦

೮. ಕರ್ನಾಟಕದ ಜನಪದ ಚಿತ್ರಕಲೆ - ಡಾ. ಎಸ್.ಸಿ. ಪಾಟೀಲ
ವೀರಶೈವ ಅಧ್ಯಯನ ಸಂಸ್ಥೆ, ಗದಗ, ೧೯೯೩

೯. ಕರ್ನಾಟಕ ಚರಿತ್ರೆ ಮಾಲೆ ಸಂಪುಟಗಳು - ಕ.ವಿ.ವಿ. ಹಂಪಿ
ಕನ್ನಡ ವಿಶ್ವವಿದ್ಯಾಲಯ, ಹಂಪಿ, ೧೯೯೭

೧೦. ಕಸೂತಿ - ಮಹಾದೇವ ಜಗತಾಪ
ಕರ್ನಾಟಕ ಲಲಿತಕಲಾ ಅಕಾಡೆಮಿ

೧೧. ಕನಾಟಕ ಜನಪದ ಚಿತ್ತಾರಗಳು ಹಾಗೂ ಶಿಲ್ಪಗಳು - ಮಹಾದೇವ ಜಗತಾಪ
ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, ೨೦೦೪

೧೨. ಕರ್ನಾಟಕದ ಭಿತ್ತಿಚಿತ್ರ ಪರಂಪರೆ - ಡಾ. ಅ.ಲ. ನರಸಿಂಹನ್
ಲಲಿತಕಲಾ ಅಕಾಡೆಮಿ, ಬೆಂಗಳೂರು

೧೩. ಕರ್ನಾಟಕದ ಭಿತ್ತಿಚಿತ್ರಗಳು - ಬಿ.ವಿ.ಕೆ. ಶಾಸ್ತ್ರಿ
ಕರ್ನಾಟಕ ಲಲಿತಕಲಾ ಅಕಾಡೆಮಿ, ಬೆಂಗಳೂರು, ೧೯೮೩

೧೪. ಕರ್ನಾಟಕ ಹಸ್ತಪ್ರತಿಗಳು - ಡಾ. ಬಿ.ಕೆ. ಹಿರೇಮಠ
ವೀರಶೈವ ಅಧ್ಯಯನ ವೇದಿಕೆ, ಜಂಬಗಿ, ೧೯೯೨

೧೫. ಕರ್ನಾಟಕದಲ್ಲಿನ ಚಿತ್ರಕಲೆ - ಶಿವರಾಂ ಕಾರಂತ
ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾಲಯ, ೧೯೭೧

೧೬. ಕರ್ನಾಟಕ ಚಿತ್ರಕಲೆಯಲ್ಲಿ ಬಣ್ಣದ ಬಳಕೆ - ಕೆ.ವಿ. ಕಾಳೆ
ಲಲಿತಕಲಾ ಅಕಾಡೆಮಿ, ೫, ಏಪ್ರಿಲ್, ೧೯೫೫

೧೭. *ಗೊಂಬೆಗುಡ್ಡ ರಕ್ಷಣೆ* - ಡಾ. ಎಚ್.ಜಿ. ದಡ್ಡಿ ವೈದ್ಯರು
ಸಂಯುಕ್ತ ಕರ್ನಾಟಕ

೧೮. 'ಚಿತ್ರಾಕ್ಷಿ' ಜನಪದ ಚಿತ್ರಕಲೆಯ ಪ್ರಾಚೀನತೆ - ಡಾ. ಎಸ್.ಸಿ ಪಾಟೀಲ
ವಜ್ರಮಹೋತ್ಸವ ಸ್ಮರಣ ಸಂಚಿಕೆ, ೧೯೯೫

೧೯. ನಿಜದ ನೆಲೆ , ೨೦೦೩ (ಪ್ರ.ಸಂ.) - ಬಿ.ಆರ್. ಹಿರೇಮಠ
ಪ್ರಾ.ಬಿ.ಕೆ. ಹಿರೇಮಠ ಅಭಿನಂದನ ಗ್ರಂಥ (ಸಂ.) - ಎಸ್.ಸಿ. ಪಾಟೀಲ
ಪ್ರ. ವೈರಾಗ್ಯದ ಮಲ್ಲಣಾರ್ಯ ಪ್ರಕಾಶನ
ಬಸವೇಶ್ವರ ವಿಧ್ಯಾವರ್ಧಕ ಸಂಘ ಬಾಗಲಕೋಟೆ

೨೦. ಬಾದಾಮಿ ಸಾಂಸ್ಕೃತಿಕ ಅಧ್ಯಯನ - ಡಾ. ಶಿಲಾಕಾಂತ ಪತ್ತಾರ
ಕನ್ನಡ ವಿಶ್ವವಿದ್ಯಾಲಯ, ಹಂಪಿ

೨೧. ವರ್ಣಸಂಚಯ - ಡಾ. ಎಸ್.ಸಿ ಪಾಟೀಲ
ವಿಜಯ ಚಿತ್ರಕಲಾ ಮಹಾವಿದ್ಯಾಲಯ, ಇಳಕಲ್, ೨೦೦೧

೨೨. ವಿಶಿಷ್ಟ ವರ್ಣಚಿತ್ರಗಳ ಆಗರ ಬಾದಾಮಿ - ಡಾ. ಅ. ಸುಂದರ
ಚಾಲುಕ್ಯಶ್ರೀ ಬಾದಾಮಿ, ೧೯೮೨

೨೩. ವಿಜಾಪುರ ಜಿಲ್ಲೆಯ ಗ್ಯಾಸಿಯರ್ (ಮು.ಸಂ.) - ಆರ್. ಮುನಿಸ್ವಾಮಿ
ಕರ್ನಾಟಕ ರಾಜ್ಯ ಸರಕಾರ, ೧೯೯೯

೨೪. ಹಸ್ತಪ್ರತಿ ವ್ಯಾಸಂಗ ಸಂ. - ಪ್ರೊ. ಎ.ವಿ. ನಾವಡ, ಎಸ್.ಎಸ್.ಅಂಗಡಿ
ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೨

೨೫. Glass Paintings Continue to aftract (ಲೇ) - ಪ್ರವೀಣರಾಜು ಸೊನ್ನದ
Visitors to Guledgudd

ಚಿತ್ರಋಣ

- ಡಾ. ಶೀಲಕಾಂತ ಪತ್ತರ ಅವರು ತಮ್ಮ ಸಂಗ್ರಹದಲ್ಲಿನ ಕೇಂದ್ರ ಲಲಿತಕಲಾ ಅಕಾಡೆಮಿ ದೆಹಲಿಯವರು ಮುದ್ರಿಸಿದ ಸುಮಾರು ಅರ್ಧಶತಮಾನದಷ್ಟು ಹಳೆಯ ಪುಸ್ತಕ. ಅದರಲ್ಲಿ ಬಾದಾಮಿಯ ಗುಹಾಚಿತ್ರಗಳ ಸ್ಪಷ್ಟವಾದ ಚಿತ್ರಗಳನ್ನು ನೀಡಿದ್ದಾರೆ.

- ಡಾ. ಎಚ್. ಜಿದಡ್ಡಿ ಜಮಖಂಡಿಯ ಖ್ಯಾತ ಹೃದಯತಜ್ಞರು ಅವರ ಐತಿಹಾಸಿಕ ಕಾಳಜಿ. ಕುಲ್ಲಳ್ಳಿ ಗೊಂಬಿಗುಡ್ಡದಲ್ಲಿರುವ ಅಪರೂಪದ ಆದಿಮಾನವನ ರೇಖಾಚಿತ್ರಗಳನ್ನು ಛಾಯಾಚಿತ್ರ ನೀಡಿದ್ದಾರೆ.

- ಶಿವಯೋಗ ಮಂದಿರದ ಆಡಳಿತ ಮಂಡಳಿ, ಗ್ರಂಥಪಾಲಕರು ಕಾರ್ಯ ನಿರ್ವಹಕರು ಅಪರೂಪ ಹಸ್ತಪ್ರತಿ ವರ್ಣಚಿತ್ರಗಳು ಹಾಗೂ ರೇಖಾಚಿತ್ರಗಳನ್ನು ನೀಡಿದ್ದಾರೆ.

- ಬಾಗಲಕೋಟೆ ಬಸವೇಶ್ವರ ವಿದ್ಯಾವರ್ಧಕ ಸಂಘದ ಬಸವೇಶ್ವರ ಕಲಾ ಮಹಾವಿದ್ಯಾಲಯ ಸಂಗ್ರಹದಲ್ಲಿರುವ ಜಿಲ್ಲೆಯ ಮಾಚಕನೂರಿನಲ್ಲಿ ದೊರೆತ ಹಸ್ತಪ್ರತಿ ಮೇಲಿನ ವರ್ಣಚಿತ್ರಗಳನ್ನು ಡಾ. ವಿಜಯಕುಮಾರ ಕಟಗಿನಹಳ್ಳಿಮಠ ಪ್ರಾಚಾರ್ಯರಾದ ಪ್ರೊ. ವಿ.ಕೆ. ಮೊರಬದವರು ಶ್ರೀರಾಮಪುರ, ಹಾಗೂ ಡಾ. ಸಿದ್ಧರಾಮಯ್ಯ ಮಠಪತಿಯವರು ದೊರಕಿಸಿ ಕೊಟ್ಟಿದ್ದಾರೆ.

- ಮಹಾಲಿಂಗಪುರ ಮಹಾಲಿಂಗೇಶ್ವರ ಇಂದಿನ ಪೂಜ್ಯರು ಹಾಗೂ ಟ್ರಸ್ಟ್ ಆಡಳಿತ ಮಂಡಳಿ ಮಹಾಲಿಂಗೇಶ್ವರ ದೇವಸ್ಥಾನ ಸಮಿತಿ.

- ಜಮಖಂಡಿ ಅರಮನೆ ಛಾಯಾಚಿತ್ರಗಳನ್ನು ತಮ್ಮ ಎಂ.ವಿ.ಎ. ಕಿರುಪ್ರಬಂಧದಲ್ಲಿ ಬಳಸಿಕೊಂಡಿದ್ದನ್ನು ನೀಡಿದ ಜಮಖಂಡಿ ಮಹೇಶ ಚಿತ್ರಕಲಾ ವಿದ್ಯಾಲಯದ ಉಪನ್ಯಾಸಕರ ಬಿ.ಎಸ್. ಚೌಧರಿ ಅವರು ಒದಗಿಸಿದ್ದಾರೆ.

- ಇಳಕಲ್ ರಂಗಪರದೆ ಚಿತ್ರಗಳನ್ನು ನೀಡಿದವರು ಶ್ರಿ ಕೆ. ದಿ. ಖೇಮರಾಜ ಕೆಂಧೂಳಿ ಜಗದೀಶ ಪೇಂಟರು, ಶ್ರೀ ಸನ್ನೂರ ಪೇಂಟರ್, ಶ್ರೀ ತುಕಾರಾಂ ಬೋರೆ ಕೆ. ಸಿದ್ಧರಾಮ ಮೊದಲಾದವರು.


- ಸುಬಾನಪ್ಪ ದುರುಗಪ್ಪ ಕಿಳ್ಳೇಕ್ಯಾತರು ಕಾಕಪ್ಪ, ಕಿಳ್ಳೆಕ್ಯಾತರ ಕೇಶಪ್ಪ ಗುರುಪಾದ ಮೊದಲಾದವರು ಕಾಕನೂರಿನ ತೊಗಲು ಗೊಂಬೆ ಚಿತ್ರಗಳನ್ನು ನೀಡಿದ್ದಾರೆ.
- ಶ್ರೀ ಮಹಾದೇವ ಜನತಾಪ ತಮ್ಮ ಅಪರೂಪದ ಸಂಗ್ರಹದಲ್ಲಿನ ಗುಳೇದಗುಡ್ಡದ ಗಾಜಿನ ಚಿತ್ರಗಳು, ಭಿತ್ತಿ ಚಿತ್ರಗಳ ಛಾಯಾಚಿತ್ರಣಗಳನ್ನು ನೀಡಿದ್ದಾರೆ.
- ಶ್ರೀ ಮಲಕಪ್ಪ ಮುಸುರಿ ಸೀರೆಯಲ್ಲಿ ಗಾಂಧೀ ಚಿತ್ರ ನೆಯ್ದಿದ್ದ ನೇಕಾರ
- ಶ್ರೀ ಎಂ.ಎಸ್. ಚಂದ್ರಶೇಖರ ಬಾದಾಮಿಯಲ್ಲಿನ ಮೂಲ ವರ್ಣ ಚಿತ್ರಗಳು
- ಶ್ರೀ ಶೀಲವಂತಪ್ಪ ಉರ್ಫ ಎಸ್.ಎಸ್. ಗರಡಿ ಶಾ ರಾಜುಗರಡಿ ಚೇರಮನ್, ಪ್ರಭುರಾಜೇಂದ್ರ ಕಲಾ ಮಹಾವಿದ್ಯಾಲಯ ಅಮೀನಗಡ ತಮ್ಮ ಮನೆಯಲ್ಲಿ ೯ ಗಾಜಿನ ಚಿತ್ರದ ಛಾಯಾಚಿತ್ರಗಳನ್ನು ನೀಡಿದ್ದಾರೆ.
- ವಿಜಯಚಿತ್ರ ಕಲಾ ಮಹಾವಿದ್ಯಾಲಯ ವಿದ್ಯಾರ್ಥಿನಿ ಕು. ರೇಣುಕಾ ರಾಯನಗೌಡರ ಸಂಗ್ರಹಿಸಿದ ಕಸೂತಿ ಚಿತ್ರಗಳನ್ನು ನೀಡಿದ್ದಾರೆ.
- ಕೇಂದ್ರ ಲಲಿತಕಲಾ ಅಕಾಡೆಮಿಯ ಬಾದಾಮಿ ಗುಹಾಚಿತ್ರಗಳು.

ಕರ್ನಾಟಕ





ಬಾಗಲಕೋಟ ಜಿಲ್ಲೆಯ ವ್ಯಾಪ್ತಿ ನಕ್ಷೆ, ಅಧ್ಯಯನ ಉದ್ದೇಶಿತ ತಾಣಗಳು





೧) ಕುಲ್ಲೊಳ್ಳಿ – ಪ್ರಾಗೈತಿಹಾಸಿಕ ಚಿತ್ರಗಳು
೨) ಜಮಖಂಡಿ – ಅರಮನೆ ಭಿತ್ತಿಚಿತ್ರಗಳು
೩) ಗುಳೇದಗುಡ್ಡ – ಭಿತ್ತಿ ಹಾಗೂ ಗಾಜಿನ ಚಿತ್ರಗಳು
೪) ಅಮೀನಗಡ – ಗಾಜಿನ ಚಿತ್ರಗಳು
೫) ಇಲಕಲ್ಲ – ಸೀರೆ, ಶ್ರೀಮಠದಲ್ಲಿ ವರ್ಣಚಿತ್ರಗಳು
೬) ಬಾಗಲಕೋಟ – ಬ.ವಿ.ವಿ. ಸಂಘದಲ್ಲಿ ಹಸ್ತ ಪ್ರತಿಗಳು ಹಾಗೂ ಮುಳುಗಡೆ ಜನಪದ ವಸ್ತು ಸಂಗ್ರಹಾಲಯ
೭) ಶಿವಯೋಗಮಂದಿರ – ಹಸ್ತಪ್ರತಿಗಳು
೮) ಕಾಕನೂರ – ತೊಗಲುಗೊಂಬೆ
೯) ಬಾದಾಮಿ – ಪ್ರಾಗೈತಿಹಾಸಿಕ ಮತ್ತು ಭಿತ್ತಿಚಿತ್ರಗಳು
೧೦) ಮಹಾಕೂಟ – ಪ್ರಾಗೈತಿಹಾಸಿಕ ಚಿತ್ರಗಳು
೧೧) ಕುಟಕನಕೇರಿ – ಪ್ರಾಗೈತಿಹಾಸಿಕ ಚಿತ್ರಗಳು
೧೨) ಮಹಾಲಿಂಗಪೂರ – ಭಿತ್ತಿಚಿತ್ರಗಳು

